ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ

ಹುಬ್ಬಳ್ಳಿ
ಸೋಮವಾರ, 8 ಜೂನ್ 2026
ಸಂಪುಟ 16, ಸಂಚಿಕೆ 75, ಪುಟಗಳು 12
■ ಹುಬ್ಬಳ್ಳಿ ■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ₹5
RNI No.KARKAN/ 2011/64413
hosadigantha.com
epaper.hosadigantha.com
Hosadigantha Digital



ಇಂದು ದಿಲ್ಲಿಯಲ್ಲಿ ಇಂಡಿ ಕೂಟ ಸಭೆ | ೦೭
ಭಾರತಕ್ಕೆ ಪಾಶ್ಚಾತ್ಯ ಒತ್ತಡ ಫಲಿಸಲ್ಲ: ಪುಟಿನ್ | ೦೭
ನಮೋ ಆಡಳಿತ, ವಿಕಸಿತ ಭಾರತ | ೦೭

ಶುಭ ದಿನ

ಕಲಿಯುಗಾಬ್ದ 5128, ಪರಾಭವ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಅಧಿಕ ಜ್ಯೇಷ್ಠ ಮಾಸ, ಕೃಷ್ಣ ಪಕ್ಷ, ತಿಥಿ: ಅಷ್ಟಮಿ, ನಕ್ಷತ್ರ: ಶತಭಿಷ

ದಿನದ ಮಾತು

ಬದುಕಿನಲ್ಲಿ ಯಶಸ್ಸನ್ನು ಪಡೆಯಬೇಕಾದರೆ ಸ್ವಲ್ಪವಾಗಿ ಮಾತಾಡಿ, ಕೆಲಸದಲ್ಲಿ ಹೆಚ್ಚಾಗಿ ತೊಡಗಿಕೊಳ್ಳಿ.

▲ ಶಿವಾನಂದ

ಮಮತಾ ದೀದಿ ಕೋಟೆ ಈಗ ಛಿದ್ರಛಿದ್ರ

ನೇರ ನೋಟ

• ದು.ಗು. ಲಕ್ಷ್ಮಣ

• ಪುಟ ೬

ಕನಕಪುರದಲ್ಲಿ ಸಿಎಂ ಡಿಕೆಶಿಗೆ ಅಭೂತಪೂರ್ವ ಸ್ವಾಗತ

ನಿಮ್ಮನೆ ಮಗ ನಾನು

• **ರಾಮನಗರ:** ಮುಖ್ಯಮಂತ್ರಿಯಾದ ನಂತರ ಮೊದಲ ಬಾರಿಗೆ ಸ್ವಕ್ಷೇತ್ರ ಕನಕಪುರ ತಾಲ್ಲೂಕಿಗೆ ಭೇಟಿ ನೀಡಿದ ಡಿ.ಕೆ. ಶಿವಕುಮಾರ್ ಅವರಿಗೆ ಅಭಿಮಾನಿಗಳಿಂದ ಅಭೂತಪೂರ್ವ ಸ್ವಾಗತ ದೊರೆಯಿತು. ಅಭಿಮಾನಿಗಳ ಹರ್ಷೋದ್ಗಾರದಲ್ಲಿ ಡಿ.ಕೆ. ಶಿವಕುಮಾರ್ ಮಿಂದೆದ್ದರು. ಡಿಕೆ, ಡಿಕೆ ಎನ್ನುವ ಘೋಷಣೆ ಮುಗಿಲು ಮುಟ್ಟುತ್ತಿದ್ದಂತೆ ಮುಖ್ಯಮಂತ್ರಿಯವರು ಭಾವುಕರಾದರು. ಕನಕಪುರ ರಸ್ತೆಯ ರೇಷ್ಮೆ ಸಂಸ್ಥೆ ಮೆಟ್ರೋ ನಿಲ್ದಾಣದಿಂದಲೇ ರಸ್ತೆಯ ಇಕ್ಕೆಲಗಳಲ್ಲಿ ಕಿಕ್ಕಿರಿದು ನಿಂತಿದ್ದ ಸಾರ್ವಜನಿಕರು ಡಿ.ಕೆ.ಶಿವಕುಮಾರ್ ಅವರಿಗೆ ಜೈಕಾರ ಹಾಕಿದರು. ಪಟಾಕಿ ಸಿಡಿಸಿ ಸಂಭ್ರಮಿಸಿದರು. ದಾರಿಯುದ್ದಕ್ಕೂ ಶುಭಾಶಯ ಕೋರುವ ಬ್ಯಾನರ್‌ಗಳು, ಫ್ಲೆಕ್ಸ್‌ಗಳು ಕಾಂಗ್ರೆಸ್ ಪಕ್ಷದ ಬಾವುಟಗಳು ರಾರಾಜಿಸಿದವು.

ಕನಕಪುರಕ್ಕೆ ಸಿಎಂ ಡಿಕೆಶಿ ಮೊದಲ ಭೇಟಿ

ನಿಮ್ಮ ಪಾಲಿಗೆ ನಾನು ಸಿಎಂ ಅಲ್ಲ, ಸೇವಕ: ಈ ವೇಳೆ ಸಾರ್ವಜನಿಕರನ್ನುದ್ದೇಶಿಸಿ ಮಾತನಾಡಿದ ಶಿವಕುಮಾರ್ ಅವರು, ನಿಮ್ಮ ಪ್ರೀತಿಗೆ ಆಭಾರಿ. ನಿಮ್ಮಿಂದ ನಾನು ವಿಧಾನಸೌಧದ ಮೂರನೇ ಮಹಡಿಯಲ್ಲಿದ್ದೇನೆ. ಈ ರಾಜ್ಯದ ಮುಖ್ಯಮಂತ್ರಿಯಾಗಿದ್ದೇನೆ. ನಿಮಗೆಲ್ಲರಿಗೂ ಕೋಟಿ, ಕೋಟಿ ವಂದನೆಗಳು ಎಂದರು.

➡ ಪುಟ ೪



ನನ್ನ ಶಕ್ತಿ ನೀವೇ

ನನ್ನ ಶಕ್ತಿ ನೀವೇ, ಬದುಕು ನೀವೇ, ಉಸಿರು ನೀವೇ. ಕಷ್ಟ ಕಾಲದಲ್ಲಿ ನೀವು ನನಗೆ ನೆರಳಾಗಿದ್ದೀರಿ. ನಿಮ್ಮ ಸೇವಕನಾಗಿ ಮುಂದುವರಿದು ಋಣ ತೀರಿಸುತ್ತೇನೆ ಎಂದರು. ನಾನು ಚುನಾವಣಾ ಪ್ರಚಾರಕ್ಕೆ ಬರದೇ ಇದ್ದರೂ 1.23 ಲಕ್ಷ ಮತಗಳ ಅಂತರದಿಂದ ನನ್ನನ್ನು ಗೆಲ್ಲಿಸಿದ್ದೀರಿ ಎಂದು ಸ್ಮರಣೆ ಮಾಡಿದರು.

ಟ್ರಾಫಿಕ್ ಸಮಸ್ಯೆ ತಪ್ಪಿಸಲು ಸಿಎಂ ಮೆಟ್ರೋ ಪ್ರಯಾಣ

• **ಬೆಂಗಳೂರು:** ಮುಖ್ಯಮಂತ್ರಿಯಾದ ನಂತರ ಮೊದಲ ಬಾರಿಗೆ ತವರು ಕ್ಷೇತ್ರದ ಜನರ ಭೇಟಿಗೆ ಹೊರಟ ಸಂದರ್ಭದಲ್ಲಿ ಸಿಎಂ ಡಿ.ಕೆ.ಶಿವಕುಮಾರ್ ಅವರು, ವಿಧಾನಸೌಧದಿಂದ ಬಳಿಯಿಂದ ಕನಕಪುರ ರಸ್ತೆವರೆಗೂ ಮೆಟ್ರೋ ಮೂಲಕ ಪ್ರಯಾಣಿಸಿದರು. ಬೆಳಗ್ಗೆ ಡಾ. ಬಿ.ಆರ್.ಅಂಬೇಡ್ಕರ್ ಮೆಟ್ರೋ ನಿಲ್ದಾಣದಲ್ಲಿ ಕೆಲ ಹೊತ್ತು ದಿನಪತ್ರಿಕೆಗಳ ಮೇಲೆ ಕಣ್ಣಾಡಿಸಿದ ಸಿಎಂ ನಂತರ ಮೆಟ್ರೋ ಪ್ರಯಾಣಿಕರಿಗೆ ಹಸ್ತಲಾಘವ ಮಾಡಿದರು.

➡ ಪುಟ ೪



ನನಗೆ ಜಾತಿ, ಧರ್ಮ ಭೇದವಿಲ್ಲ

2028ಕ್ಕೆ ಮತ್ತೆ ಕಾಂಗ್ರೆಸ್ ಪಕ್ಷವನ್ನು ಅಧಿಕಾರಕ್ಕೆ ತರಲು ಕ್ಷೇತ್ರದ ಜನ ಪ್ರಾರ್ಥನೆ ಮಾಡಬೇಕು. ಕರ್ನಾಟಕ ಸರ್ವ ಜನಾಂಗದ ಶಾಂತಿಯ ತೋಟ. ನನಗೆ ಆ ಧರ್ಮ ಈ ಧರ್ಮ, ಆ ಜಾತಿ ಈ ಜಾತಿ ಎನ್ನುವ ಭೇದವಿಲ್ಲ ಎಂದರು. ಮನುಷ್ಯ ಹುಟ್ಟುವಾಗ ನಾಲ್ಕು ಋಣದಲ್ಲಿ ಹುಟ್ಟುತ್ತಾನೆ. ತಂದೆ ತಾಯಿ, ಗುರು, ದೇವರ ಹಾಗೂ ಸಮಾಜ. ನಾನು ನಿಮ್ಮ ಋಣದಲ್ಲಿದ್ದೇನೆ. ನಿಮ್ಮ ಋಣ ತೀರಿಸುವ ಕೆಲಸ ಮಾಡುತ್ತೇನೆ. ನಿಮ್ಮ ತಾಲ್ಲೂಕಿನ ಮಗ, ನಿಮ್ಮ ಸೇವಕ. ಈಗ 136 ಸ್ಥಾನಗಳನ್ನು ಗೆಲ್ಲಿಸಿ 2028ಕ್ಕೆ ಪಕ್ಷವು ಮತ್ತೊಮ್ಮೆ ಅಧಿಕಾರಕ್ಕೆ ಏರುವಂತೆ ಮಾಡುವ ಜವಾಬ್ದಾರಿ ನಿಮ್ಮ ಮೇಲಿದೆ ಎಂದರು.

➡ ಪುಟ ೪

ಮಾತುಕತೆಯೇ ಪರಿಹಾರ: ಶಿಶಿರ್

ನೇಪಾಳ-ಭಾರತ ಗಡಿ ಸಚಿವದ್ವಯರ ಚರ್ಚೆ

• **ಹೊಸದಿಲ್ಲಿ:** ಭಾರತ ಮತ್ತು ನೇಪಾಳ ನಡುವಿನ ದೀರ್ಘಕಾಲದ ಗಡಿ ವಿವಾದಗಳನ್ನು ಈಗಿರುವ ದ್ವಿಪಕ್ಷೀಯ ವ್ಯವಸ್ಥೆಗಳ ಮೂಲಕವೇ ಬಗೆಹರಿಸಬಹುದು ಎಂದು ನೇಪಾಳದ ವಿದೇಶಾಂಗಸಚಿವಶಿಶಿರ್ ಖನಾಲ್ ಹೇಳಿದ್ದಾರೆ. ಮುಕ್ತ ಮನಸ್ಸು, ತಾರ್ಕಿಕ ಚಿಂತನೆ ಹಾಗೂ ಪರಸ್ಪರ ಗೌರವದಿಂದ ಮಾತುಕತೆ ನಡೆಸಿದರೆ ಯಾವುದೇ ಸಮಸ್ಯೆಯೂ ದೊಡ್ಡದಾಗುವುದಿಲ್ಲ ಎಂದು ಅವರು ಅಭಿಪ್ರಾಯಪಟ್ಟರು.

ಭಾರತದವಿದೇಶಾಂಗಸಚಿವ ಎಸ್.ಜೈಶಂಕರ್ ಅವರೊಂದಿಗೆ ನಡೆದ ವ್ಯಾಪಕ ಮಾತುಕತೆ ಬಳಿಕ ಮಾಧ್ಯಮಗಳೊಂದಿಗೆ ಮಾತನಾಡಿದ ಖನಾಲ್, ಭಾರತವನ್ನು ಭೂರಾಜಕೀಯ ದೃಷ್ಟಿಕೋನದ ಅತಿಸೂಕ್ಷ್ಮ ಕಣ್ಣಿನಿಂದ ನೋಡದೆ, ನೇಪಾಳದ ಆರ್ಥಿಕ ಪರಿವರ್ತನೆಗೆ ಸಹಭಾಗಿಯಾಗುವ ನೆರೆ ರಾಷ್ಟ್ರವಾಗಿ ಕಾಣುತ್ತಿದ್ದೇವೆ ಎಂದು ಹೇಳಿದರು.

➡ ಪುಟ ೪

- ಗಡಿ ವಿವಾದಕ್ಕೆ ಮೂರನೇ ಪಕ್ಷ ಬೇಡ: ನೇಪಾಳ ಸಚಿವ ಖನಾಲ್
- ಭೂತಕಾಲದ ಆತಂಕಗಳಲ್ಲ, ಭವಿಷ್ಯದ ಆಶಯಗಳತ್ತ ಗಮನ
- ಗಡಿ ವಿವಾದಕ್ಕೆ ದ್ವಿಪಕ್ಷೀಯ ಮಾರ್ಗವೇ ಪರಿಹಾರ

ನೇಪಾಳ ಸಂಬಂಧಕ್ಕೆ ಮತ್ತಷ್ಟು ಬಲ: ಜೈಶಂಕರ್

ಭಾರತ ಮತ್ತು ನೇಪಾಳದ ನಡುವಿನ ದೀರ್ಘಕಾಲದ ಸ್ನೇಹಪೂರ್ಣ ಸಂಬಂಧವನ್ನು ಹೊಸ ಎತ್ತರಕ್ಕೆ ಕೊಂಡೊಯ್ಯುವ ಅಪೂರ್ವ ಅವಕಾಶ ಈಗ ಲಭ್ಯವಿದೆ ಎಂದು ಭಾರತದ ವಿದೇಶಾಂಗ ಸಚಿವ ಎಸ್. ಜೈಶಂಕರ್ ಹೇಳಿದ್ದಾರೆ. ಹೊಸದಿಲ್ಲಿಯಲ್ಲಿ ನೇಪಾಳದ ವಿದೇಶಾಂಗ ಸಚಿವ ಶಿಶಿರ್ ಖನಾಲ್ ಅವರೊಂದಿಗೆ ನಡೆದ ಮಾತುಕತೆಯಲ್ಲಿ ಜೈಶಂಕರ್ ಮಾತನಾಡಿದರು.

➡ ಪುಟ ೪

ಒಂದೇ ನಾಗರಿಕ ಪರಂಪರೆಯ ಮಕ್ಕಳು

ನಾವು ಕೇವಲ ನಕ್ಷೆಯಲ್ಲಿನ ಗಡಿಗಳಿಂದ ಬೇರ್ಪಟ್ಟ ನೆರೆ ರಾಷ್ಟ್ರಗಳಲ್ಲ, ಒಂದೇ ನದಿಗಳು, ಒಂದೇ ಪರ್ವತಗಳು ಮತ್ತು ಒಂದೇ ನಾಗರಿಕ ಪರಂಪರೆಯ ಮಕ್ಕಳು ಎಂದು ಹೇಳುವ ಮೂಲಕ ಭಾರತ-ನೇಪಾಳ ಬಾಂಧವ್ಯದ ಐತಿಹಾಸಿಕ ಹಿನ್ನೆಲೆಯನ್ನು ಖನಾಲ್ ಅವರು ವಿವರಿಸಿದರು. ಭಾರತವನ್ನು ವೇಗವಾಗಿ ಬೆಳೆಯುತ್ತಿರುವ ತಂತ್ರಜ್ಞಾನ ಮತ್ತು ಆರ್ಥಿಕ ಶಕ್ತಿಯಾಗಿ ಬಣ್ಣಿಸಿದ ಖನಾಲ್, ಆಕಾಂಕ್ಷೆಗಳ ಭಾರತ ಮತ್ತು ಆಕಾಂಕ್ಷೆಗಳ ನೇಪಾಳ ಒಟ್ಟಾಗಿ ಭವಿಷ್ಯ ನಿರ್ಮಿಸಬೇಕು ಎಂದರು.

ಕಿರುಸುದ್ದಿ

ಗೃಹಬಳಕೆ ಎಲ್‌ಪಿಜಿ ಸಿಲಿಂಡರ್ ದರ ಹೆಚ್ಚಳ

• **ಹೊಸದಿಲ್ಲಿ:** ಗೃಹಬಳಕೆಯ 14.2 ಕೆಜಿ ಎಲ್‌ಪಿಜಿ ಸಿಲಿಂಡರ್ ದರವನ್ನು ಕೇಂದ್ರ ಸರ್ಕಾರ 29 ರೂ. ಹೆಚ್ಚಿಸಿದ್ದು, ಜೂ.7ರಿಂದ ದಿಲ್ಲಿಯಲ್ಲಿ ಸಿಲಿಂಡರ್ ಬೆಲೆ 913 ರೂ.ಗಳಿಂದ 942 ರೂ.ಗೆ ಏರಿಕೆಯಾಗಿದೆ. ಪಶ್ಚಿಮ ಏಷ್ಯಾದಲ್ಲಿನ ಸಂಘರ್ಷ ಹಾಗೂ ಜಾಗತಿಕ ಇಂಧನ ಬೆಲೆ ಏರಿಕೆಯ ಹಿನ್ನೆಲೆಯಲ್ಲಿ ಮೂರು ತಿಂಗಳಲ್ಲಿ ಎರಡನೇ ಬಾರಿಗೆ ದರ ಹೆಚ್ಚಳ ಮಾಡಲಾಗಿದೆ. ದರ ಏರಿಕೆ ಸಮರ್ಥಿಸಿಕೊಂಡಿರುವ ಕೇಂದ್ರ ಸರ್ಕಾರ, ಭಾರತದಲ್ಲಿ ವಿಶ್ವದಲ್ಲೇ ಕಡಿಮೆ ದರದಲ್ಲಿ ಅನಿಲ ಪೂರೈಸಲಾಗುತ್ತಿದೆ ಎಂದು ತಿಳಿಸಿದೆ.

• ಪುಟ ೭

ಆನ್‌ಲೈನ್ ಗೇಮಿಂಗ್ ಹುಚ್ಚಾಟ: ತಂದೆ, ಅಕ್ಕನ ಕೊಲೆಗೈದ ಬಾಲಕ

• **ಕೊಪ್ಪಳ:** ಗಂಗಾವತಿ ತಾಲೂಕಿನ ಹೊಸ ಅಯೋಧ್ಯ ಗ್ರಾಮದ ಬಾಲಕನೊಬ್ಬ ತನ್ನ ಪೋಷಕರು ಹಾಗೂ ಸಹೋದರಿಗೆ ಚಾಕು ಇರಿದಿದ್ದು, ತಂದೆ ವೆಂಕಟನಾಯ್ಡು (45) ಹಾಗೂ ಅಕ್ಕ ಪ್ರಗತಿ (19) ಮೃತಪಟ್ಟಿದ್ದಾರೆ. ತಾಯಿ ಸೌಜನ್ಯ ಸ್ಥಿತಿ ಗಂಭೀರವಾಗಿದ್ದು, ಆ ಬಾಲಕ ಕೂಡ ಕೊನೆಯಲ್ಲಿ ತನ್ನ ಕುತ್ತಿಗೆಗೆ ಚಾಕುವಿನಿಂದ ಇರಿದು ಕೊಂಡಿದ್ದಾನೆ. ಇವರಿಬ್ಬರಿಗೂ ಬಳ್ಳಾರಿಯಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ.

• ಪುಟ ೪

ಮೀನು, ಮಾಂಸ ಮಳಿಗೆ ವಾರಾಣಸಿಯಿಂದ ಆಚೆಗೆ

• ಪುಟ ೭

ರಾಷ್ಟ್ರ ಪ್ರಶಸ್ತಿ ಪುರಸ್ಕೃತ ನಟ ಸಲೀಂ ಕುಮಾರ್ ವಿಧಿವಶ

• ಪುಟ ೭



ಅಂಡಮಾನ್ ಸಮುದ್ರದಲ್ಲಿ ಭಾರೀ ಪ್ರಮಾಣದ ನೈಸರ್ಗಿಕ ಅನಿಲ ಪತ್ತೆ

ಇಂಧನ ಭದ್ರತೆಗೆ ಹೊಸ ಭರವಸೆ

• ಪುಟ ೭

ಸುದ್ದಿ ಸಮಗ್ರ

ಎಸ್‌ಐಆರ್: ರಾಜ್ಯಗಳಿಗೆ ಕೇಂದ್ರ ಚು. ಆಯೋಗ ಸೂಚನೆ

ವಿದೇಶಿಯರಿದ್ದರೆ ಮಾಹಿತಿ ನೀಡಿ

• **ಹೊಸದಿಲ್ಲಿ:** ಮತದಾರರ ಪಟ್ಟಿಯ ವಿಶೇಷ ತೀವ್ರ ಪರಿಷ್ಕರಣೆ(ಎಸ್‌ಐಆರ್) ಸಂದರ್ಭದಲ್ಲಿ ಕಂಡುಬರುವ ಶಂಕಿತ ವಿದೇಶಿ ಪ್ರಜೆಗಳ ವಿವರಗಳನ್ನು ಸಂಬಂಧಪಟ್ಟ ಅಧಿಕಾರಿಗಳಿಗೆ ಹಸ್ತಾಂತರಿಸುವಂತೆ ಕೇಂದ್ರ ಚುನಾವಣಾ ಆಯೋಗವು ರಾಜ್ಯ ಚುನಾವಣಾ ಕಚೇರಿಗೆ ನಿರ್ದೇಶನ ನೀಡಿದೆ. ಪೌರತ್ವ ಕಾಯ್ದೆ 1955ರ ಅನ್ವಯ ಈ ಕ್ರಮ ಕೈಗೊಳ್ಳಲು ಚುನಾವಣಾ ನೋಂದಣಿ ಅಧಿಕಾರಿಗಳಿಗೆ ಸೂಚಿಸಲಾಗಿದೆ.



ಕರ್ನಾಟಕ ಸೇರಿದಂತೆ ದೇಶದ 16 ರಾಜ್ಯಗಳು ಮತ್ತು 3 ಕೇಂದ್ರಾಡಳಿತ ಪ್ರದೇಶಗಳಲ್ಲಿ ಮೇ 30ರಿಂದ ಹಂತ-ಹಂತವಾಗಿ 3ನೇ ಹಂತದ ವಿಶೇಷ ತೀವ್ರ ಪರಿಷ್ಕರಣೆ ಆರಂಭವಾಗಿದ್ದು, ಇದು ಒಟ್ಟು 36.73 ಕೋಟಿ ಮತದಾರರನ್ನು ಒಳಗೊಂಡಿದೆ. ಇದಕ್ಕಾಗಿ 3.94 ಲಕ್ಷಕ್ಕೂ ಹೆಚ್ಚು ಬೂತ್ ಮಟ್ಟದ ಅಧಿಕಾರಿಗಳು(ಬಿಎಲ್‌ಒ) ಮನೆ-ಮನೆಗೆ ಭೇಟಿ ನೀಡಲಿದ್ದಾರೆ. ರಾಜಕೀಯ ಪಕ್ಷಗಳು ನೇಮಿಸಿದ 3.42 ಲಕ್ಷ ಬೂತ್ ಮಟ್ಟದ ಏಜೆಂಟರು ಇವರಿಗೆ ಸಹಾಯ ಮಾಡಲಿದ್ದಾರೆ. ಲಭ್ಯವಾಗದ ಮತದಾರರ ಬಗ್ಗೆ ನೆರೆಹೊರೆಯವರಿಂದ ವಿಚಾರಣೆ ನಡೆಸಿ ವಲಸೆ ಹೋಗಿದ್ದಾರೆಯೇ ಅಥವಾ ಮೃತಪಟ್ಟಿದ್ದಾರೆಯೇ ಎಂಬುದನ್ನು ಬಿಎಲ್‌ಒಗಳು ಗುರುತಿಸಲಿದ್ದಾರೆ.

➡ ಪುಟ ೪

ಪ್ರಮುಖಾಂಶಗಳು

- 16 ರಾಜ್ಯಗಳು, 3 ಕೇಂದ್ರಾಡಳಿತ ಪ್ರದೇಶಗಳಲ್ಲಿ ಎಸ್‌ಐಆರ್ ಹಂತ-3 ಜಾರಿ
- ಒಟ್ಟು 36.73 ಕೋಟಿ ಮತದಾರರ ಮನೆಮನೆಗೆ ಭೇಟಿ ನೀಡಿ ಪರಿಶೀಲನೆ
- 3.94 ಲಕ್ಷ ಬಿಎಲ್‌ಒಗಳು, 3.42 ಲಕ್ಷ ರಾಜಕೀಯ ಪಕ್ಷಗಳ ಏಜೆಂಟರು ಪ್ರಕ್ರಿಯೆಯಲ್ಲಿ ಭಾಗಿ
- ಕರ್ನಾಟಕ, ತೆಲಂಗಾಣ, ಪಂಜಾಬ್ ಹಾಗೂ ಜಾರ್ಖಂಡ್ ಸೇರಿದಂತೆ ಹಲವು ರಾಜ್ಯಗಳಲ್ಲಿ ಪರಿಷ್ಕರಣೆ
- ಹಿಮಾಚಲ ಪ್ರದೇಶ, ಜಮ್ಮು-ಕಾಶ್ಮೀರ, ಲಡಾಖ್‌ನಲ್ಲಿ ಹವಾಮಾನ ಪರಿಸ್ಥಿತಿ ಗಮನಿಸಿ ವೇಳಾಪಟ್ಟಿ ಪ್ರಕಟ

ಅರ್ಧ ರಾಜ್ಯ ವ್ಯಾಪಿಸಿದ ಮುಂಗಾರು | ವಾರ ಕಾಲ ವ್ಯಾಪಕ ಮಳೆ

ರಾಜ್ಯದ ಹಲವೆಡೆ ಭಾರೀ ಮಳೆ

• **ಬೆಂಗಳೂರು:** ಕರ್ನಾಟಕದ ಅರ್ಧಕ್ಕಿಂತ ಹೆಚ್ಚು ಭಾಗಕ್ಕೆ ಮುಂಗಾರು ಮಾರುತಗಳು ಆವರಿಸಿದ್ದು, ಮುಂದಿನ ಒಂದು ವಾರ ರಾಜ್ಯದ ವಿವಿಧೆಡೆ ಗುಡುಗು, ಮಿಂಚು ಮತ್ತು ಬಿರುಗಾಳಿಸಹಿತ ಭಾರೀ ಮಳೆಯಾಗುವ ಸಾಧ್ಯತೆಯಿದೆ ಎಂದು ಭಾರತೀಯ ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಉತ್ತರ ಕರ್ನಾಟಕ, ಕಲ್ಯಾಣ ಕರ್ನಾಟಕ ಹಾಗೂ ಕರಾವಳಿ ಜಿಲ್ಲೆಗಳಲ್ಲಿ ವ್ಯಾಪಕ ಮಳೆಯಾಗಿದೆ. ಕಲಬುರಗಿ ಜಿಲ್ಲೆಯಲ್ಲಿ ಮಳೆ ಅಬ್ಬರಕ್ಕೆ ಮರಗಳು ನೆಲಕಚ್ಚಿದ್ದು, ಸೇತುವೆಗಳು ಕುಸಿದಿವೆ. ಕರಾವಳಿ ಜಿಲ್ಲೆಗಳಾದ ಉತ್ತರ ಕನ್ನಡ, ದಕ್ಷಿಣ ಕನ್ನಡ, ಉಡುಪಿ ಜಿಲ್ಲೆಗಳಲ್ಲೂ ಧಾರಾಕಾರ ಮಳೆ ಸುರಿಯುತ್ತಿದೆ.

ಕರಾವಳಿ ಜಿಲ್ಲೆಗಳಾದ ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಜೂ.8 ಮತ್ತು ಉತ್ತರ ಕನ್ನಡವೂ ಸೇರಿದಂತೆ ಕರಾವಳಿಯ ಮೂರು ಜಿಲ್ಲೆಗಳಲ್ಲಿ ಹಾಗೂ ದಕ್ಷಿಣ ಒಳನಾಡಿನ ಶಿವಮೊಗ್ಗ ಮತ್ತು ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಜೂ. 9ರಂದು ಅತಿ ಭಾರೀ ಮಳೆಯಾಗುವ ಮುನ್ಸೂಚನೆಯಿದೆ. ಈ ಹಿನ್ನೆಲೆಯಲ್ಲಿ ರೆಡ್ ಅಲರ್ಟ್ ನೀಡಲಾಗಿದೆ. ಜೂ. 10ರಂದು ಉಡುಪಿ ಮತ್ತು ಉತ್ತರ ಕನ್ನಡ ಜಿಲ್ಲೆಗಳು, ಉತ್ತರ ಒಳನಾಡಿನ ಬೆಳಗಾವಿ, ಧಾರವಾಡ, ಹಾವೇರಿ ಹಾಗೂ ದಕ್ಷಿಣ ಒಳನಾಡಿನ ಶಿವಮೊಗ್ಗ ಮತ್ತು ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಅತಿ ಭಾರೀ ಮಳೆಯಾಗುವ ಮುನ್ಸೂಚನೆಯಿಂದ ರೆಡ್ ಅಲರ್ಟ್ ಘೋಷಿಸಲಾಗಿದೆ.



ಜೂ.13ರವರೆಗೆ ಕರಾವಳಿ ಜಿಲ್ಲೆಗಳಲ್ಲಿ ಬಹುತೇಕ ಕಡೆಗಳಲ್ಲಿ ಭಾರೀ ಮಳೆಯಾಗುವ ಮುನ್ಸೂಚನೆಯಿದ್ದು, ಆರೆಂಜ್ ಅಲರ್ಟ್ ನೀಡಲಾಗಿದೆ. ಉತ್ತರ ಒಳನಾಡಿನ ಬೆಳಗಾವಿ, ಧಾರವಾಡ, ಹಾವೇರಿ, ಗದಗ ಜಿಲ್ಲೆಗಳಲ್ಲಿ ಕೆಲವು ಕಡೆಗಳಲ್ಲಿ ಭಾರೀ ಮಳೆಯಾಗುವ ಮುನ್ಸೂಚನೆಯಿದೆ. ಕೊಪ್ಪಳ ಮತ್ತು ರಾಯಚೂರು ಜಿಲ್ಲೆಗಳಲ್ಲಿ ಕೆಲವು ಕಡೆ ಜೂ. 8 ಮತ್ತು 9ರಂದು ಭಾರೀ ಮಳೆಯಾಗುವ ಸಾಧ್ಯತೆಯಿದೆ. ದಕ್ಷಿಣ ಒಳನಾಡಿನ ಚಿಕ್ಕಮಗಳೂರು, ದಾವಣಗೆರೆ, ಶಿವಮೊಗ್ಗ, ಹಾಸನ, ಕೊಡಗು ಜಿಲ್ಲೆಗಳಲ್ಲಿಯೂ ಹಲವೆಡೆ ಭಾರೀ ಮಳೆ ಸುರಿಯುವ ಮುನ್ಸೂಚನೆಯಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ಚಂದ್ರಗುಪ್ತ ಗುಪ್ತಚರ, ಪ್ರಣಬ್ ಮೊಹಾಂತಿಗೆ ಸಿಐಡಿ ಜವಾಬ್ದಾರಿ

» 6 ಐಎಎಸ್ ಅಧಿಕಾರಿಗಳ ವರ್ಗ

• **ಬೆಂಗಳೂರು:** ಇಬ್ಬರು ಹಿರಿಯ ಐಪಿಎಸ್ ಅಧಿಕಾರಿಗಳನ್ನು ವರ್ಗಾವಣೆ ಮಾಡಿ ರಾಜ್ಯ ಸರ್ಕಾರ ಆದೇಶಿಸಿದ್ದು, ಪ್ರಣಬ್ ಮೊಹಾಂತಿ ಅವರನ್ನು ಸಿಐಡಿಗೆ ನೂತನ ಮುಖ್ಯಸ್ಥರನ್ನಾಗಿ ನೇಮಕ ಮಾಡಿದೆ. ಡಾ.ಚಂದ್ರಗುಪ್ತ ಅವರನ್ನು ನೇರವಾಗಿ ಮುಖ್ಯಮಂತ್ರಿ ವ್ಯಾಪ್ತಿಗೆ ಬರುವ ಗುಪ್ತಚರ ಇಲಾಖೆಯ ಐಜಿಪಿಯನ್ನಾಗಿ ನೇಮಿಸಿ ಸರ್ಕಾರ ಆದೇಶಿಸಿದೆ.

ಈ ಹಿಂದೆ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯಾಗಿದ್ದ, ಹುದ್ದೆ ನಿರೀಕ್ಷೆಯಲ್ಲಿದ್ದ ಹಿರಿಯ ಐಎಎಸ್ ಅಧಿಕಾರಿ ಅಂಜುಂ ಪರ್ವೇಜ್ ಅವರನ್ನು ಅರಣ್ಯ ಹಾಗೂ ಪರಿಸರ, ಜೀವಿಶಾಸ್ತ್ರ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯನ್ನಾಗಿ ವರ್ಗಾಯಿಸಲಾಗಿದೆ.

➡ ಪುಟ ೪

81 ಅಡಿಗಿಳಿದ ಕೆಆರ್‌ಎಸ್ ಮಟ್ಟ

• **ಮಂಡ್ಯ:** ಕೃಷ್ಣರಾಜಸಾಗರ ಜಲಾಶಯದ (ಕೆಆರ್‌ಎಸ್) ನೀರಿನ ಮಟ್ಟ 81 ಅಡಿಗೆ ಕುಸಿದಿದೆ. ಮೂರು ವರ್ಷಗಳ ಹಿಂದೆ ಜೂನ್ ತಿಂಗಳಲ್ಲಿ ಇದೇ ಪ್ರಮಾಣದ ನೀರಿನ ಮಟ್ಟ ದಾಖಲಾಗಿತ್ತು. ಮುಂಗಾರು ವಿಳಂಬವಾದರೆ ಜಲಾಶಯದ ನೀರಿನ ಮಟ್ಟ ಅಪಾಯದ ಮಟ್ಟ ತಲುಪುವ ಆತಂಕ ಎದುರಾಗಿದೆ. ಪ್ರಸ್ತುತ ಜಲಾಶಯದಲ್ಲಿ 81.35 ಅಡಿ ನೀರಿದ್ದು, ಅಣೆಕಟ್ಟೆಗೆ 474 ಕ್ಯುಸೆಕ್ ನೀರು ಹರಿದುಬರುತ್ತಿದೆ. ಜಲಾಶಯದಿಂದ ಹೊರಕ್ಕೆ ನದಿ ಮತ್ತು ನಾಲೆ ಸೇರಿ 436 ಕ್ಯುಸೆಕ್ ನೀರನ್ನು ಹೊರಬಿಡಲಾಗುತ್ತಿದ್ದು, ಅಣೆಕಟ್ಟೆಯಲ್ಲಿ 11.394 ಟಿಎಂಸಿ ಅಡಿ ನೀರು ಸಂಗ್ರಹವಾಗಿದೆ.

• ಪುಟ ೫

ಕಿರುಸುದ್ದಿ

ಸ್ವಚ್ಛತೆ ಕಾಪಾಡಿ



◆ **ಹುಬ್ಬಳ್ಳಿ:** ನಿಸರ್ಗ ಫೌಂಡೇಶನ್ ವತಿಯಿಂದ ವಿಶ್ವ ಪರಿಸರ ದಿನದ ಅಂಗವಾಗಿ ನವಮಹೋತ್ಸವ ಭವಾನಿ ನಗರದ ರಾಘವೇಂದ್ರ ಸ್ವಾಮಿಮಠದಲ್ಲಿ ಕಾರ್ಯಕ್ರಮ ಜರುಗಿತು. ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಅಧ್ಯಕ್ಷ ಮಲ್ಲಿಕಾರ್ಜುನ ಸಾವಕಾರ ಸಸಿ ನೆಡುವ ಮೂಲಕ ಚಾಲನೆ ನೀಡಿದರು. ಬಳಿಕ ಮಾತನಾಡಿದ ಅವರು, ಹಸಿರು ಇದ್ದರೆ ಮಾತ್ರ ನಮ್ಮ ಉಸಿರು ಇರಲು ಸಾಧ್ಯ. ಪರಿಸರವನ್ನು ರಕ್ಷಿಸುವ ಹೊಣೆ ನಮ್ಮೆಲ್ಲರ ಮೇಲಿದೆ. ನಮ್ಮ ಮನೆಯಿಂದ ಪರಿಸರ ಕಾಪಾಡುವ ಕೆಲಸ ಮಾಡಬೇಕು ಎಂದರು. ಪ್ಲಾಸ್ಟಿಕ್ ಬಳಕೆ ಮಾಡುವುದು ಬಿಟ್ಟು ಪರಿಸರ ಉಳಿಸಬೇಕು. ನಮ್ಮ ಮನೆ ಕಸ ಎಲ್ಲೆಂದರಲ್ಲಿ ಚೆಲ್ಲದೆ ನಿಗದಿ ಪಡಿಸಿದ ಸ್ಥಳದಲ್ಲಿ ಹಾಕಬೇಕು. ಮನೆಯ ಸುತ್ತಮುತ್ತ ಸ್ವಚ್ಛತೆ ಕಾಪಾಡಿಕೊಳ್ಳಬೇಕು ಎಂದರು. ಅಧ್ಯಕ್ಷತೆ ನಿಸರ್ಗ ಸಿರಿ ಫೌಂಡೇಶನ್ ಅಧ್ಯಕ್ಷ ಸದಾಶಿವ ಎಸ್. ಚೌಶೆಟ್ಟಿ ವಹಿಸಿದ್ದರು. ಶಂಕರ ಪಾಟೀಲ, ದೀಪಕ ಗುಡ್ಡದಕೇರಿ, ರಾಘವೇಂದ್ರ ಸ್ವಾಮಿಮಠದ ಗುರುರಾಜ ಆಚಾರ್ಯ, ಮಂಜುಳಾ ಹಳ್ಯಾಳ, ರಾಘಶಂಕರ ಮಿಸ್ಕಿನ, ದತ್ತುಸಾ ಕಲಬುರ್ಗಿ ಇದ್ದರು.

ಪರಿಸರ ದಿನಾಚರಣೆ



◆ **ಅಳ್ನಾವರ:** ಇಲ್ಲಿನ ಸಾರಿಗೆ ನಿಲ್ದಾಣದಲ್ಲಿ ನೂತನವಾಗಿ ನಿರ್ಮಿಸಲಾಗಿರುವ ಶೌಚಾಲಯವನ್ನು ಪ.ಪಂ ಮಾಜಿ ಅಧ್ಯಕ್ಷ ಹಾಗೂ ಅಳ್ನಾವರ ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಅಮೋಲ ಗುಂಜೀಕರ ಹಾಗೂ ಸಂತೋಷ ಲಾಡ ಅವರ ಆಪ್ತ ಕಾರ್ಯದರ್ಶಿ ಶ್ರೀಕಾಂತ ಗಾಯಕವಾಡ ಉದ್ಘಾಟಿಸಿ, ನಿಲ್ದಾಣದಲ್ಲಿ ಸಸಿ ನೆಡುವ ಮೂಲಕ ಪರಿಸರ ದಿನಾಚರಣೆಗೆ ಚಾಲನೆ ನೀಡಲಾಯಿತು. ಪ.ಪಂ ಮಾಜಿ ಉಪಾಧ್ಯಕ್ಷ ನದೀಮ ಕಂಟ್ರಾಕ್ಟರ, ಹಳಿಯಾಳ ಸಾರಿಗೆ ಘಟಕದ ವ್ಯವಸ್ಥಾಪಕ ಗಣೇಶ ಜವಳಿ, ಮುಖ್ಯಾಧಿಕಾರಿ ಪ್ರಕಾಶ ಮಗದುಮ್, ಕೆಆರ್‌ಡಿಎಲ್ ಕಾರ್ಯನಿರ್ವಾಹಕ ಅಭಿಯಂತರ ಸುಜಾತಾ ಕಾಳೆ, ಎಇಇ ಅನ್ನಪೂರ್ಣ ಡಿ., ಮೇಲ್ವಿಚಾರಕ ಮಂಜು, ಗ್ಯಾರಂಟಿ ಯೋಜನೆಯ ಅನುಷ್ಠಾನ ಸಮಿತಿ ತಾಲೂಕಾಧ್ಯಕ್ಷ ವಿನಾಯಕ ಕುರುಬರ, ವಲಯ ಅರಣ್ಯಾಧಿಕಾರಿ ಬಿ. ಬಸಲಿಂಗಪ್ಪ, ಯಲ್ಲಾನಾಯ್ಕ ಹಮಾಣಿ, ಸತ್ತಾರ ಬಾತಖಂಡೆ, ಸುರೇಶ ಕಲ್ಲವಡ್ಡರ ಇತರರಿದ್ದರು. ತಾಲೂಕಿನ ಅಭಿವೃದ್ಧಿಗೆ ಸದಾ ಶ್ರಮಿಸುತ್ತಿರುವ ಕ್ಷೇತ್ರದ ಶಾಸಕ ಸಂತೋಷ ಲಾಡ್ ಅವರಿಗೆ ಮುಂದಿನ ದಿನಗಳಲ್ಲಿ ಸಚಿವ ಸ್ಥಾನ ನೀಡುವಂತೆ ಪ.ಪಂ ಮಾಜಿ ಸದಸ್ಯ ತಮೀಮ ತೇರಗಾಂವ ಒತ್ತಾಯಿಸಿ, ಪಕ್ಷದ ಕಾರ್ಯಕರ್ತರು ಮುಖ್ಯಮಂತ್ರಿಗಳಿಗೆ ಭೇಟಿಯಾಗಿ ಸಚಿವ ಸಂಪುಟದ ವಿಸ್ತರಣೆ ಸಮಯದಲ್ಲಿ ಲಾಡ್ ಅವರಿಗೆ ಮಂತ್ರಿ ಸ್ಥಾನ ನೀಡಲು ಆಗ್ರಹಿಸಲಾಗುವುದು ಎಂದರು.

ನಿಧನ ಸುದ್ದಿ

ಶೋಭಾ ಗಾಯಿ



◆ **ಧಾರವಾಡ:** ಇಲ್ಲಿನ ಚನ್ನಬಸವೇಶ್ವರ ನಗರದ ಶೋಭಾ ಪ್ರಮೋದ ಗಾಯಿ(62) ಶುಕ್ರವಾರ ನಿಧನರಾದರು. ಮೃತರಿಗೆ ಕವಿವಿ ವಿಶ್ರಾಂತ ಕುಲಪತಿ ಡಾ. ಪ್ರಮೋದ ಗಾಯಿ ಪತಿ, ಇಬ್ಬರು ಪುತ್ರರು ಹಾಗೂ ಅಪಾರ ಬಳಗವಿದೆ.

ಸಾವಿತ್ರಿ ಬಾಣೆ



◆ **ಧಾರವಾಡ:** ಸ್ಥಳೀಯ ಮೃತ್ಯುಂಜಯ ನಗರದ ಕಾದ್ರೊಳ್ಳಿ ಓಣಿಯ ನಿವಾಸಿ ಸಾವಿತ್ರಿ ತಿಪ್ಪಣ್ಣ ಬಾಣೆ(62) ಶನಿವಾರ ನಿಧನರಾದರು. ಇವರಿಗೆ ಪತಿ, ಓರ್ವ ಪುತ್ರ, ಇಬ್ಬರು ಪುತ್ರಿಯರು ಹಾಗೂ ಅಪಾರ ಬಳಗವಿದೆ.

ರೂಪಾಬಾಯಿ ಕಠಾರೆ



◆ **ಧಾರವಾಡ:** ನಗರದ ಚರಂತಿಮಠ ಗಾರ್ಡನ್ ನಿವಾಸಿ ರೂಪಾಬಾಯಿ ಕಠಾರೆ (64) ಶನಿವಾರ ನಿಧನರಾದರು. ಅವರಿಗೆ ಮೂವರು ಪುತ್ರರು, ಪುತ್ರಿಯರು ಮತ್ತು ಅಪಾರ ಬಳಗವಿದೆ.



ಕಲಘಟಗಿ: ತಾಲೂಕಿನ ಹುಲಗಿನಕೊಪ್ಪ ಗ್ರಾಮದಲ್ಲಿ ಸಾಮಾಜಿಕ ಅರಣ್ಯ ಇಲಾಖೆ ವತಿಯಿಂದ ಹುಲಗಿನಕೊಪ್ಪ ಸರ್ಕಾರಿ ಪ್ರಾಥಮಿಕ ಶಾಲೆಯ ಆವರಣದಲ್ಲಿ ವಿಶ್ವ ಪರಿಸರ ದಿನ ಆಚರಿಸಲಾಯಿತು. ಪ್ರಕೃತಿಯಿಂದ ಪ್ರೇರಿತ, ಹವಾಮಾನಕ್ಕಾಗಿ, ನಮ್ಮ ಭವಿಷ್ಯಕ್ಕಾಗಿ ಎಂಬ ಘೋಷವಾಕ್ಯದಡಿ ಶಾಲಾ ಮಕ್ಕಳಿಗೆ ಪರಿಸರದ ಪ್ರಾಮುಖ್ಯತೆ ತಿಳಿಸಿ ಸಸಿಗಳನ್ನು ನೆಡಲಾಯಿತು. ಸಾಮಾಜಿಕ ವಲಯ ಮುಖ್ಯ ಅರಣ್ಯಾಧಿಕಾರಿ ಎಂ. ಎಂ. ತಲ್ಲೂರು, ಶರಣಪ್ಪ ಕೇರಿ, ಸುರೇಶ ಛತ್ರಮ್ಮನವರ, ಶಾಲಾ ಶಿಕ್ಷಕ ವೃಂದ ಹಾಗೂ ವಿದ್ಯಾರ್ಥಿಗಳು ಇದ್ದರು.

ಅಂತಾರಾಷ್ಟ್ರೀಯ ಸ್ಕಾಲರ್ ಪ್ರೋಗ್ರಾಂ ಅವಾರ್ಡ್‌ಗೆ ಆಯ್ಕೆ

◆ **ಹುಬ್ಬಳ್ಳಿ:** ಅಮೆರಿಕದ ಪ್ರತಿಷ್ಠಿತ ಸೊಸೈಟಿ ಆಫ್ ವ್ಯಾಸ್ಕುಲರ್ ಸರ್ಜರಿ (TXT) ಸಂಸ್ಥೆಯ ಅಂತಾರಾಷ್ಟ್ರೀಯ ಸ್ಕಾಲರ್ ಪ್ರೋಗ್ರಾಂ ಅವಾರ್ಡ್-2026 ಗೆ ಹುಬ್ಬಳ್ಳಿಯ ಸರ್ಜನ್ ಡಾ. ಶಶಾಂಕ್ ಕರಿ ಆಯ್ಕೆಯಾಗಿದ್ದಾರೆ ಎಂದು ಕ್ಲಿನಿಕ್‌ನ ಸಂಸ್ಥಾಪಕ ಡಾ. ಸುನೀಲ ಕರಿ ತಿಳಿಸಿದ್ದಾರೆ. ನಗರದಲ್ಲಿ ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜಗತ್ತಿನಾದ್ಯಂತ ವ್ಯಾಸ್ಕುಲರ್ ಶಸ್ತ್ರಚಿಕಿತ್ಸಾ ಕ್ಷೇತ್ರದಲ್ಲಿ ಸೇವೆ ಸಲ್ಲಿಸುತ್ತಿರುವ ವೈದ್ಯರಲ್ಲಿ ಕೇವಲ ನಾಲ್ವರನ್ನು ಮಾತ್ರ ಈ ಪ್ರತಿಷ್ಠಿತ ಅವಾರ್ಡ್‌ಗೆ ಆಯ್ಕೆ ಮಾಡಲಾಗುತ್ತದೆ. ಅದರಲ್ಲಿ ಡಾ. ಶಂಶಾಕ ಕರಿ ಒಬ್ಬರಾಗಿದ್ದಾರೆ. ಹುಬ್ಬಳ್ಳಿ, ಧಾರವಾಡ ಹಾಗೂ ಉತ್ತರ ಕರ್ನಾಟಕದ ವೈದ್ಯಕೀಯ ಕ್ಷೇತ್ರಕ್ಕೆ ಸಂದ ಹೆಮ್ಮೆಯ ವಿಷಯವಾಗಿದೆ. ಕಳೆದ 28 ವರ್ಷಗಳಿಂದ ಸಕ್ಕರೆ ಕಾಯಿಲೆ ಹಾಗೂ ಕಾಲಿನ ಆರೋಗ್ಯ ರಕ್ಷಣೆಯಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಬೆಂಗಳೂರಿನಲ್ಲಿ ಮೂರು ವರ್ಷ ಹಾಗೂ ಹುಬ್ಬಳ್ಳಿಯಲ್ಲಿ ಎರಡು ವರ್ಷ ಸೇರಿದಂತೆ ಐದು ವರ್ಷಗಳಿಂದ ರಕ್ತನಾಳ ತಜ್ಞರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಹುಬ್ಬಳ್ಳಿ-ಧಾರವಾಡ, ಹಾವೇರಿ, ಗದಗ, ದಾವಣಗೆರೆ ಸೇರಿದಂತೆ ರಾಜ್ಯದ ವಿವಿಧ ಭಾಗಗಳ ಜೊತೆಗೆ ಮಹಾರಾಷ್ಟ್ರ, ಆಂಧ್ರಪ್ರದೇಶ, ತೆಲಂಗಾಣ, ಕೇರಳ ಮತ್ತು ತಮಿಳುನಾಡು ರಾಜ್ಯಗಳ ರೋಗಿಗಳಿಗೂ ಚಿಕಿತ್ಸೆ ನೀಡುವ ಮೂಲಕ ಹೆಸರು ಗಳಿಸಿದ್ದಾರೆ ಎಂದರು. ಎಸ್‌ವಿಎಸ್ ಅಂತಾರಾಷ್ಟ್ರೀಯ ಸ್ಕಾಲರ್ ಪ್ರೋಗ್ರಾಂ ಅಂಗವಾಗಿ ಜೂನ್ 9ರಿಂದ ಸೆಪ್ಟೆಂಬರ್ 30ರವರೆಗೆ ಅಮೆರಿಕದ ಬೋಸ್ಟನ್, ಕ್ಲೀವ್‌ಲ್ಯಾಂಡ್ ಮತ್ತು ನ್ಯೂಯಾರ್ಕ್ ನಗರಗಳಲ್ಲಿ ನಡೆಯಲಿರುವ ವಿವಿಧ ವೈದ್ಯಕೀಯ ಕಾರ್ಯಾಗಾರಗಳು ಹಾಗೂ ತರಬೇತಿ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಅಧ್ಯಯನ ನಡೆಸಲಿದ್ದಾರೆ ಎಂದರು. ಡಾ. ಶಶಾಂಕ್ ಕರಿ ಉಪಸ್ಥಿತರಿದ್ದರು.



ಹುಬ್ಬಳ್ಳಿ: ನಗರದ ಚಿನ್ಮಯ ಪದವಿಪೂರ್ವ ಹಾಗೂ ಪದವಿ ಮಹಾ ವಿದ್ಯಾಲಯದಲ್ಲಿ ವಿಶ್ವ ಪರಿಸರ ದಿನ ಆಚರಿಸಲಾಯಿತು. ಹಿರಿಯ ಉಪನ್ಯಾಸಕಿ ಸಾಜಿದಾ ಶೇಖ, ಪ್ರಾಂಶುಪಾಲರಾದ ಶರ್ಮಿಲಿ ನಾಯ್ಡು, ವಿದ್ಯಾರ್ಥಿಗಳಿಗಳು, ಎನ್. ಎಸ್. ಎಸ್ ಕಾರ್ಯಕ್ರಮ ಅಧಿಕಾರಿಗಳು, ಬೋಧಕ, ಬೋಧಕೇತರ ಸಿಬ್ಬಂದಿ ಇದ್ದರು.

ಫಿಟ್ ಇಂಡಿಯಾ ಸಾಕಾರಕ್ಕೆ ಕೈಜೋಡಿಸಿ

◆ **ಧಾರವಾಡ:** ಕೇಂದ್ರದ ಫಿಟ್ ಇಂಡಿಯಾ ಅಭಿಯಾನದ ಕರೆಯ ಮೇರೆಗೆ ವಿಶ್ವಸೈಕ್ಲಿಂಗ್ ದಿನಾಚರಣೆಯ ಅಂಗವಾಗಿ ಭಾರತೀಯ ಕ್ರೀಡಾ ಪ್ರಾಧಿಕಾರ (ಸಾಯಿ) ವತಿಯಿಂದ ಸಂಡೇಸ್ ಆನ್ ಸೈಕ್ಲಿಂಗ್ ಜಾಥಾ ಭಾನುವಾರ ಯಶಸ್ವಿಯಾಗಿ ಜರುಗಿತು. ಸಾಯಿ ಸ್ಪೋರ್ಟ್ಸ್ ವಸತಿ ನಿಲಯದಿಂದ ಆರಂಭವಾದ ಸೈಕಲ್ ಜಾಥಾವು ಸಾಯಿ ವಸತಿ ನಿಲಯಕ್ಕೆ ಬಂದು ಸಂಪನ್ನಗೊಂಡಿತು.

ಜನತೆಯ ಆರೋಗ್ಯದ ಕುರಿತು ಅರಿವು ಮೂಡಿಸಲು ಭಾನುವಾರ ಸೃಜನಾತ್ಮಕ ಕಾರ್ಯಕ್ರಮ ಆಯೋಜಿಸಿದ್ದ ಭಾರತೀಯ ಕ್ರೀಡಾ ಪ್ರಾಧಿಕಾರದ (ಸಾಯಿ) ಈ ಪ್ರಯತ್ನಕ್ಕೆ ವಿಶೇಷವಾಗಿ ಸಾರ್ವಜನಿಕ ವಲಯದಿಂದ ವ್ಯಾಪಕವಾದ ಶ್ಲಾಘನೆ ವ್ಯಕ್ತವಾಯಿತು.

ಯುವ ಸಬಲೀಕರಣ ಹಾಗೂ ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕ ಸದಾನಂದ ಅಮರಾಪುರ ಮಾತನಾಡಿ, ಇಂದಿನ ಯಾಂತ್ರಿಕ ಜೀವನ ಶೈಲಿಯಲ್ಲಿ ಆರೋಗ್ಯ ರಕ್ಷಣೆ ಪ್ರತಿಯೊಬ್ಬರಿಗೂ ಅತ್ಯಗತ್ಯವಿದೆ. ಹೀಗಾಗಿ ಆರೋಗ್ಯ ಕಾಯ್ದುಕೊಳ್ಳಲು ಹೇಳಿದರು.

ಸೈಕ್ಲಿಂಗ್ ಹವ್ಯಾಸ ಬೆಳೆಸಿಕೊಂಡರೆ ವ್ಯಕ್ತಿಯ ದೈಹಿಕ ಆರೋಗ್ಯ ವೃದ್ಧಿಯ ಜೊತೆ ಪರಿಸರ ಮಾಲಿನ್ಯ ತಡೆಯಬಹುದು. ನಮ್ಮ ಯುವ ಪೀಳಿಗೆ ಮೊಬೈಲ್ ಜಗತ್ತು ಬಿಟ್ಟು, ಕ್ರೀಡಾ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಬೇಕು ಎಂದರು.

ಪತ್ರಕರ್ತರಾದ ಪುಂಡಲಿಕ ಹಡಪದ, ಮಹಾಂತೇಶ ಕಣವಿ, ರೋಟರಿ ಕ್ಲಬ್ ಸದಸ್ಯೆ ನಿರ್ಮಲಾ ಹೊಂಗಲ್, ರಮೇಶ ನಲವಡಿ, ಡಾ.ಅಶ್ವಿನ್ ಆರ್., ಡಾ.ನಮಿತಾ ಸಾರಂಗ, ತರಬೇತಿದಾರರಾದ ರಂಗನಾಥ, ರಾಮ ಬುಡಕಿ, ಶಂಕ್ರಯ್ಯ ಪೂಜಾರಿ, ತಿನಕರಣ, ಸೈನಿಕರು ಸೇರಿ ಸುಮಾರು 150ಕ್ಕೂ ಅಧಿಕ ಜನರು ಪಾಲ್ಗೊಂಡಿದ್ದರು.



> ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಕನಸಿನ ಫಿಟ್ ಇಂಡಿಯಾ ಕಲ್ಪನೆ ಸಾಕಾರಗೊಳ್ಳಬೇಕಾದರೆ ಪ್ರತಿಯೊಬ್ಬರೂ ಆರೋಗ್ಯಕರ ಹವ್ಯಾಸ ಬೆಳೆಸಿಕೊಳ್ಳುವ ಜತೆ ದೇಶವನ್ನೂ ಕೂಡ ಸದೃಢವಾಗಿ ಮಾಡಬೇಕು.
> ■ **ಸದಾನಂದ ಅಮರಾಪುರ,** ಸಹಾಯಕ ನಿರ್ದೇಶಕ, ಯುವ ಸಬಲೀಕರಣ, ಕ್ರೀಡಾ ಇಲಾಖೆ

ಮಹದಾಯಿ ಜಾರಿಗೆ ಸಿದ್ಧತೆ: ಡಾ. ಯತೀಂದ್ರ

◆ **ನವಲಗುಂದ:** ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ ಅವರ ಸಂಪುಟದಲ್ಲಿ ನಗರಾಭಿವೃದ್ಧಿ ಸಚಿವರಾಗಿ ಪ್ರಥಮಬಾರಿಗೆ ನವಲಗುಂದ ನಗರಕ್ಕೆ ಆಗಮಿಸಿದ ಡಾ. ಯತೀಂದ್ರ ಸಿದ್ದರಾಮಯ್ಯ ಅವರಿಗೆ ನವಲಗುಂದ ಶಾಸಕ ಎನ್.ಎಚ್. ಕೋನರಡ್ಡಿ ಅವರ ನೇತೃತ್ವದಲ್ಲಿ ಸನ್ಮಾನಿಸಿ, ಸ್ವಾಗತಿಸಲಾಯಿತು.

ಅವರು ಭಾನುವಾರ ವಿಜಯಪುರಕ್ಕೆ ತೆರಳುವ ಮಾರ್ಗ ಮಧ್ಯದಲ್ಲಿ ಹುಬ್ಬಳ್ಳಿ ತಾಲೂಕಿನ ಕಿರೆಸೂರ ಹಾಗೂ ಹೆಬಸೂರ ನವಲಗುಂದ ತಾಲೂಕಿನ ಕಾಲವಾಡ ಮತ್ತು ಯಮನೂರ ಗ್ರಾಮಗಳಲ್ಲಿ ಸನ್ಮಾನಿಸಲಾಯಿತು. ನಂತರ ಹಿಂದಿನ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಇಂದಿನ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ ನೇತೃತ್ವದಲ್ಲಿ ಈಗಾಗಲೇ 200 ಕೋಟಿ ರೂ. ವೆಚ್ಚದಲ್ಲಿ ನಡೆಯುತ್ತಿರುವ ಬೆಣ್ಣೆಹಳ್ಳದ ಪ್ರವಾಹ ತಡೆಯುವ ಅಗಲೀಕರಣ ಹಾಗೂ ತಡೆಗೋಡೆ ನಿರ್ಮಾಣ ಕಾಮಗಾರಿಯನ್ನು ವೀಕ್ಷಿಸಿ ಬಹುದಿನದ ಬೇಡಿಕೆಗೆ ನಮ್ಮ ಸರ್ಕಾರ ಪರಿಹಾರ ನೀಡಿದೆ ಎಂದರು.

ನವಲಗುಂದ ನಗರದ ಲಿಂಗರಾಜ ಸರ್ಕಲ್‌ನಲ್ಲಿರುವ ನವಲಗುಂದ-ನರಗುಂದ ರೈತ ಬಂಡಾಯದ ರೈತ ವೀರಗಲ್ಲಿಗೆ ಹಾಗೂ ಮಹಾದಾನಿ ಲಿಂಗರಾಜ ದೇಸಾಯಿ ಅವರ ಪ್ರತಿಮೆಗೆ ಮಾಲಾರ್ಪಣೆ ಮಾಡಿ ಮಾತನಾಡಿದ ಅವರು, ಮಹದಾಯಿ ಕಳಸಾ-ಬಂಡೂರಿ ಯೋಜನೆ ಜಾರಿಗಾಗಿ ರಾಜ್ಯ ಸರ್ಕಾರ ಎಲ್ಲ ಸಿದ್ಧತೆಯನ್ನು ಮಾಡಿಕೊಂಡಿದ್ದು ಕೇಂದ್ರ ಸರ್ಕಾರದ ವನ್ಯಜೀವಿ ಮಂಡಳಿಯಿಂದ ಅನುಮೋದನೆ ಪಡೆಯಲು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ ಅವರೊಂದಿಗೆ ಚರ್ಚಿಸಿ ಕೇಂದ್ರ ಸರ್ಕಾರಕ್ಕೆ ಒತ್ತಾಯಿಸಲಾಗುವುದು ಎಂದರು. ನವಲಗುಂದ ಪೈಲ್ವಾನರ ಸಂಘದ ವತಿಯಿಂದ ಸಚಿವರನ್ನು ಸನ್ಮಾನಿಸಿ ಕೋನರಡ್ಡಿ ಅವರನ್ನು ಸಚಿವರನ್ನಾಗಿ ಮಾಡಬೇಕೆಂದು ಆಗ್ರಹಿಸಿದ್ದಕ್ಕೆ ಸ್ಪಂದಿಸಿದ ಅವರು, ಹಿರಿಯ ನಾಯಕರಾಗಿದ್ದು ಅವರಿಗೆ ಸಚಿವ ಸ್ಥಾನ ಸಿಗುವ ಅವಕಾಶ ಬರಬಹುದು ಎಂದು ಭರವಸೆ ನೀಡಿದರು. ನವಲಗುಂದ ಅಂಜುಮನ್ ಅಧ್ಯಕ್ಷ ಅಲ್ಲಾಸಾಬ ಕಲಕುಟ್ರಿ, ಮಾಜಿ ಸಚಿವ ಬಿ.ಝುಡ್ ಜಮೀರ ಅಹ್ಮದ ಖಾನ್ ಹಾಗೂ ಎನ್.ಎಚ್. ಕೋನರಡ್ಡಿ ಅವರನ್ನು ಸಚಿವರನ್ನಾಗಿ ಮಾಡಬೇಕೆಂದು ಒತ್ತಾಯಿಸಿದರು. ಅಣ್ಣಿಗೇರಿ ಪುರಸಭೆಯ ವ್ಯಾಪ್ತಿಯಲ್ಲಿ ಒಳಚರಂಡಿ (ಯುಜಿಡಿ) ಕಾಮಗಾರಿಯನ್ನು ಪ್ರಾರಂಭಿಸಲು ಶಾಸಕ ಎನ್.ಎಚ್. ಕೋನರಡ್ಡಿ ಅವರು ಮನವಿ ಮಾಡಿದಾಗ ಈಗಾಗಲೇ ಆಯವ್ಯಯದಲ್ಲಿ ಘೋಷಣೆಯಾಗಿದ್ದು ಕೂಡಲೇ ಕಾಮಗಾರಿ ಪ್ರಾರಂಭಿಸಲು ಕ್ರಮ ಕೈಗೊಳ್ಳುತ್ತೇನೆ ಎಂದು ಭರವಸೆ ನೀಡಿದರು.

ಕಾಂಗ್ರೆಸ್ ಮುಖಂಡ ವಿನೋದ ಅಸೂಟಿ, ನವಲಗುಂದ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ವರ್ಧಮಾನಗೌಡ ಹಿರೇಗೌಡರ, ಅಣ್ಣಿಗೇರಿ ಬ್ಲಾಕ್ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮಂಜುನಾಥ ಮಾಯಣ್ಣವರ, ಹುಬ್ಬಳ್ಳಿ ಗ್ಯಾರಂಟಿ ಸಮಿತಿ ಅಧ್ಯಕ್ಷ ಶಿವಾನಂದ ಭೂಮಣ್ಣವರ, ನವಲಗುಂದ ವಿಧಾನಸಭಾ ಕ್ಷೇತ್ರದ ಯುವ ಕಾಂಗ್ರೆಸ್ ಅಧ್ಯಕ್ಷ ವಿಕಾಸ ತದ್ದೆವಾಡಿ, ನವಲಗುಂದ ತಾಲೂಕು ಯುವ ಕಾಂಗ್ರೆಸ್ ಅಧ್ಯಕ್ಷ ಅರುಣಕುಮಾರ ಸುಣಗಾರ ಇತರರಿದ್ದರು.



ಎಸ್‌ಐಆರ್ ತರಬೇತಿ

◆ **ಕಲಘಟಗಿ:** ಪಟ್ಟಣದ ಗುಡ್ ನ್ಯೂಸ್ ಮಹಾವಿದ್ಯಾಲಯದಲ್ಲಿ ಕಲಘಟಗಿ ವಿಧಾನಸಭಾ ಮತಕ್ಷೇತ್ರಕ್ಕೆ ಸಂಬಂಧಿಸಿದಂತೆ ಎಸ್‌ಐಆರ್ ಸಂಬಂಧಿತ ತರಬೇತಿ ಆಯೋಜಿಸಲಾಗಿತ್ತು. ಮತಗಟ್ಟೆ ಮಟ್ಟದ ಅಧಿಕಾರಿಗಳು, ಮತಗಟ್ಟೆ ಮೇಲ್ವಿಚಾರಕರು ಹಾಗೂ ಬಿಎಲ್‌ಒಗೆ ಜಂಟಿಯಾಗಿ ತರಬೇತಿಯನ್ನು ನೀಡಲಾಯಿತು.

ರಾಜ್ಯದಲ್ಲಿ ಎಸ್‌ಐಆರ್ ಮ್ಯಾಪಿಂಗ್ ಪ್ರಗತಿಯಲ್ಲಿ ಕಲಘಟಗಿ ವಿಧಾನಸಭಾ ಮತಕ್ಷೇತ್ರ 3ನೇ ಸ್ಥಾನದಲ್ಲಿ ಇದ್ದ ಕಾರಣ ಎಲ್ಲ ಬಿಎಲ್‌ಒಗಳಿಗೆ ಸಿಹಿ ಹಂಚುವ ಮೂಲಕ ಅಭಿನಂದಿಸಿದರು. ತಹಶೀಲ್ದಾರ್ ಬಸವರಾಜ ಹೊಂಕಣ್ಣವರ, ಚಂದ್ರಶೇಖ



ಆಳಗೋಡಿ, ಕುಮಾರ ಕೆ.ಎಫ್., ಮತದಾರರ ನೋಂದಣಾಧಿಕಾರಿಗಳು ಹಾಗೂ ವಿವಿಧ ರಾಜಕೀಯ ಪಕ್ಷದ ಮುಖಂಡರು ಹಾಗೂ ಸಂಬಂಧಿಸಿದ ಚುನಾವಣಾ ಶಿರಸ್ತೆದಾರರು, ಶಿಕ್ಷಕ ವೃಂದ ಇದ್ದರು.

ಕನ್ನಡ ಸಾಹಿತ್ಯದ ವಿಸ್ತಾರತೆ ಅಪಾರ: ಕೆಳಗಿನಮನಿ

◆ **ಧಾರವಾಡ:** ಕನ್ನಡ ಸಾಹಿತ್ಯದಲ್ಲಿ ಇರುವ ಸಾಹಿತ್ಯದ ಪ್ರಕಾರಗಳು ಭಾರತೀಯ ಬೇರ್‍ಯಾವ ಭಾಷೆಯಲ್ಲೂ ಇಲ್ಲ. ಕನ್ನಡ ಸಾಹಿತ್ಯದ ವಿಸ್ತಾರತೆ ಅಪಾರವಿದೆ ಎಂದು ರಾಯಚೂರು ವಾಲ್ಮೀಕಿ ವಿಶ್ವವಿದ್ಯಾಲಯ ಕುಲಪತಿ ಡಾ.ಶಿವಾನಂದ ಕೆಳಗಿನಮನಿ ಹೇಳಿದರು.

ಮನೋಹರ ಗ್ರಂಥಮಾಲಾ, ವಾಲ್ಮೀಕಿ ವಿಶ್ವವಿದ್ಯಾಲಯ, ಕವಿವಿ ಡಾ. ಆರ್.ಸಿ. ಹಿರೇಮಠ ಅಧ್ಯಯನ ಪೀಠ, ಧಾರವಾಟ ಕಟ್ಟೆ ಕವಿವಿ ವಿಶ್ವನಿಕೇತನ ಭವನದಲ್ಲಿ ಹಮ್ಮಿಕೊಂಡ ಕನ್ನಡ ಕಾದಂಬರಿಗಳ ಅನುಸಂಧಾನ ಉಪನ್ಯಾಸದಲ್ಲಿ ಅವರು ಮಾತನಾಡಿದರು.

ಹೊಸಗನ್ನಡದ ಕಾದಂಬರಿಗಳು ಧರ್ಮ ಮತ್ತು ಪ್ರಭುತ್ವವನ್ನು ಹೊರತುಪಡಿಸಿ, ಮನುಷ್ಯನ ವೈಯಕ್ತಿಕ ಅನುಭವಗಳನ್ನು ದಾಖಲಿಸಿದವು. ನಮ್ಮ ಭಾರತೀಯ ಸಮಾಜದ ಸೂಕ್ಷ್ಮ ವಿಚಾರಗಳನ್ನು ಕಾದಂಬರಿಗಳ ಮೂಲಕ ಎತ್ತಿ ತೋರಿಸಿವೆ ಎಂದರು. ಲೋಹಿಯಾ, ಗಾಂಧೀಜಿ, ಅಂಬೇಡ್ಕರ್ ವಿಚಾರ ಹೊಸಗನ್ನಡ ಕಾದಂಬರಿಗಳ ಮೇಲೆ ಪ್ರಭಾವ ಬೀರಿವೆ. ಶಿವರಾಮ ಕಾರಂತರ ಕಾದಂಬರಿಗಳಲ್ಲಿ ಸಾಮಾಜಿಕ ನ್ಯಾಯದ ಧ್ವನಿ ಇದೆ. ಇಂತಹ ಕಾದಂಬರಿ ಪ್ರಸ್ತುತ ಸಮಾಜಕ್ಕೆ ಬೇಕಿದೆ ಎಂದರು. ಸಮಾಜವನ್ನು ಇರುವ ಹಾಗೆಯೇ ಒಪ್ಪಿಕೊಳ್ಳದೆ, ಸಾಮಾಜಿಕ ಹಾಗೂ ಆರ್ಥಿಕ ಪರಿಸ್ಥಿತಿಯನ್ನು ವಿಮರ್ಶಿಸಿದ್ದು ನವ್ಯ ಸಾಹಿತ್ಯ. ನವ್ಯ, ಬಂಡಾಯ ಸ್ತ್ರೀಪರವಾದ ಆಲೋಚನೆಗಳನ್ನು ಪ್ರಗತಿಶೀಲರು ಆಗಲೇ ಇಣುಕು ನೋಡಿದ್ದಾಗಿ ಅಭಿಪ್ರಾಯ ವ್ಯಕ್ತಪಡಿಸಿದರು. ನಿರ್ಲಕ್ಷ್ಯ ಮತ್ತು ಶೋಷಣೆಗೊಳಪಟ್ಟ ಜನರ ಬದುಕಿನ ವಾಸ್ತವತೆ ನೆಲೆಯ ಮೇಲೆ ಕಾದಂಬರಿಗಳು ರಚಿಸಿ, ನವೋದಯ ಕಾಲದ ಲೇಖಕರು ಓದುಗರಿಗೆ ಕೊಟ್ಟರು. ಬೈರಪ್ಪ ಕಾದಂಬರಿಕಾರರಾದರೂ ವೈಚಾರಿಕ ನೆಲೆಯಲ್ಲಿ ಅವರನ್ನು ಪರಿಗಣಿಸಿಲ್ಲ ಎಂದರು. ಮೇಲ್ಜಾತಿಯವರ ದಬ್ಬಾಳಿಕೆಯ ಜೊತೆಗೆ ತಮ್ಮೊಳಗೆ ಹುಟ್ಟಿಕೊಂಡ ಯಜಮಾನಿಕೆ, ವೈರುಧ್ಯಗಳು, ದ್ವೇಷ-ಅಸೂಯೆಗಳನ್ನು ದಲಿತ, ಬಂಡಾಯ ಸಾಹಿತಿಗಳು ತಮ್ಮ ಕಾದಂಬರಿಗಳಲ್ಲಿ ಚಿತ್ರಿಸಿದ್ದಾರೆ ಎಂದು ಕುಲಪತಿ ಡಾ.ಶಿವಾನಂದ ಮಾಹಿತಿ ನೀಡಿದರು. ನಿವೃತ್ತ ಉಪನ್ಯಾಸಕ ಹರ್ಷ ಡಂಬಳ ಮಾತನಾಡಿ, ವಿದ್ಯಾರ್ಥಿಗಳಿಗೆ ಓದಿನೊಳಗೆ ಕ್ರಮ ಬದ್ಧತೆ ಬೇಕಾಗುತ್ತದೆ. ಕನ್ನಡಿಗರ ಕರ್ಮಕಥೆಗೆ ಬಗ್ಗೆ ಒತ್ತು ನೀಡಬೇಕಿದೆ. ಕಾದಂಬರಿಯ ಅಂತರಂಗ ಮತ್ತು ಬಹಿರಂಗದ ಸಮಸ್ಯೆಗಳು ಮನಸ್ಸು ತಟ್ಟುತ್ತವೆ ಎಂದರು.

ಕವಿವಿ ಆರ್.ಸಿ.ಹಿರೇಮಠ ಅಧ್ಯಯನ ಪೀಠದ ಅಧ್ಯಕ್ಷ ಪ್ರೊ. ಕೃಷ್ಣ ನಾಯಕ, ಕಟ್ಟೆ ಅಧ್ಯಕ್ಷ ಡಾ.ಬಸವರಾಜ ಡೋಣೂರ ಪಾಲ್ಗೊಂಡಿದ್ದರು. ಸಿದ್ದಾರೂಢ ಗುಗ್ಗರಿ ಸ್ವಾಗತಿಸಿದರು. ಡಾ.ವಿಜಯಲಕ್ಷ್ಮೀ ದಾನರಡ್ಡಿ ನಿರೂಪಿಸಿದರು. ಸೌಮ್ಯ ನೇತ್ರೇಕರ ವಂದಿಸಿದರು.



ಸರ್ವರನ್ನೂ ಧರ್ಮದ ಹಾದಿಯಲ್ಲಿ ನಡೆಸಿ



◆ **ನವಲಗುಂದ:** ಸ್ವಾಮೀಜಿಗಳಾದವರು ಹೊರಮುಖವಾದ ಪಂಚೇದ್ರಿಯಗಳನ್ನು ಒಳಮುಖವಾಗಿ ನಿಯಂತ್ರಣ ಮಾಡಿಕೊಳ್ಳುವ ಮೂಲಕ ಧ್ಯಾನಸ್ಥರಾಗಿ ಶಿವಾರಾಧನೆ ಮಾಡುವುದೇ ಅನುಷ್ಠಾನದ ಕ್ರಮವಾಗಿದ್ದು ನೂತನ ಶ್ರೀಗಳು 21 ದಿನಗಳು ನಡೆಸಿದ ಮೌನಾನುಷ್ಠಾನದಿಂದ ಭಕ್ತ ಸಮೂಹ ಸಂಸ್ಕಾರ, ಸುಖ, ಸಮೃದ್ಧಿಯಿಂದ ಮುನ್ನಡೆಸುವಂತಾಗಲಿ ಎಂದು ಶಿರಹಟ್ಟಿ ಭಾವೈಕ್ಯ ಮಠದ ಫಕೀರಸಿದ್ದರಾಮ ಸ್ವಾಮೀಜಿ ಅಭಿಪ್ರಾಯಪಟ್ಟರು.

ಅವರು ನಗರದ ಪಂಚಗ್ರಹ ಹಿರೇಮಠದಲ್ಲಿ ಜರುಗಿದ ನೂತನ ಪೀಠಾಧಿಕಾರಿ ಇಮ್ಮಡಿ ಸಿದ್ಧೇಶ್ವರಶಿವಾಚಾರ್ಯರ21 ದಿನಗಳ ಮೌನ ಅನುಷ್ಠಾನ ಹಾಗೂ ಪಟ್ಟಾಧಿಕಾರ ಮಹೋತ್ಸವದ ಅಭಿನಂದನಾ ಸಮಾರಂಭದ ಸಾನ್ನಿಧ್ಯ ವಹಿಸಿ ಮಾತನಾಡಿದರು.

ನರಗುಂದ ಹಿರೇಮಠದ ಸಿದ್ದಲಿಂಗ ಶಿವಾಚಾರ್ಯ ಸ್ವಾಮೀಜಿ ಮಾತನಾಡಿ, ಕಾಶಿಯಲ್ಲಿ ಅಧ್ಯಯನ ನಡೆಸಿ ಶಿರಹಟ್ಟಿಯಲ್ಲಿ ಗುರುಸೇವೆ ಮಾಡಿ ಪಂಚಪೀಠಾಧೀಶರ ಸಲಹೆ ಹಾಗೂ ತಾಲೂಕಿನ ಭಕ್ತರ ಆಶಯದಂತೆ ಇಮ್ಮಡಿ ಸಿದ್ದೇಶ್ವರ ಶ್ರೀಗಳು ಹಿರೇಮಠಕ್ಕೆ ಪೀಠಾಧಿಕಾರಿಯಾಗಿದ್ದು, ನಿರಂತರ ಭಕ್ತರ ಒಡನಾಟದೊಂದಿಗೆ ಶ್ರೀಮಠವು ಅಕ್ಷರ ಹಾಗೂ ಅನ್ನ ದಾಸೋಹದ ಮೂಲಕ ತಮ್ಮನ್ನು ಸಮಾಜಕ್ಕೆ ಅರ್ಪಣೆಗೊಳಿಬೇಕೆಂದರು.

ಅನುಷ್ಠಾನ ನಿರತ ಇಮ್ಮಡಿ ಸಿದ್ದೇಶ್ವರ ಶಿವಾಚಾರ್ಯ ಸ್ವಾಮೀಜಿ ಮಾತನಾಡಿ, ತಂದೆ-ತಾಯಿಗಳನ್ನು ತೊರೆದು ಮಠಾಧಿಪತಿಯಾಗುವ ಮೂಲಕ ಸಮಾಜದ ಮಗುವಾಗಿ ಮಠದ ಭಕ್ತರ ಸಲಹೆ ಸೂಚನೆಯಂತೆ ಭಕ್ತರ ಹಾಗೂ ಮಠದ ಏಳ್ಗೆಗೆ ನಿರಂತರ ಶ್ರಮಿಸುವ ಕಾರ್ಯ ಮಾಡಲು ಬದ್ಧವಾಗಿದ್ದೇನೆಂದರು.

ಹಿರೇಮಠದ ಹಿರಿಯ ಶ್ರೀಗಳಾದ ಸಿದ್ದೇಶ್ವರ ಶಿವಾಚಾರ್ಯ ಸ್ವಾಮೀಜಿ ಮಾತನಾಡಿ, ಜಾತಿ ಬೇಧ ಮರೆತು ಮಠದ ಎಲ್ಲ ಕಾರ್ಯಗಳನ್ನು ವಿಜೃಂಭಣೆಯಿಂದ ನಡೆಸಿಕೊಟ್ಟ ಭಕ್ತ ಸಮೂಹದ ಕಾರ್ಯ ಅಭಿನಂದನಾರ್ಹವಾಗಿದೆ ಎಂದರು. ಅಣ್ಣಪ್ಪ ಬಾಗಿ ಪ್ರಾಸ್ತಾವಿಸಿದರು, ಮಾಜಿ ಸಚಿವ ಕೆ.ಎನ್.ಗಡ್ಡಿ, ದೇವರಾಜ ದಾಡಿಭಾವಿ, ಪೀಠಾಧಿಕಾರ ಮಹೋತ್ಸವ ಸಮಿತಿ ಪದಾಧಿಕಾರಿಗಳಾದ ಸಿದ್ದಲಿಂಗಯ್ಯ ಹಿರೇಮಠ, ಬಿ.ಬಿ.ಗಂಗಾಧರಮಠ, ಅಂದಾನಯ್ಯ ಹಿರೇಮಠ, ಪಾಂಡಪ್ಪ ಕೋನರಡ್ಡಿ, ವಿ.ಟಿ.ಕರಿಸಕ್ರಣ್ಣವರ, ರಾಯನಗೌಡ ಪಾಟೀಲ, ಬಸವರಾಜ ಹರಿವಾಳದ, ಗಂಗಪ್ಪ ಹಳ್ಳದ, ಕಲ್ಲಯ್ಯ ಹೊಸಮನಿ, ಶಂಕರಗೌಡ ಪಾಟೀಲ, ವಿಜಯಕಾಂತ ನಿಡುವಣಿ, ಬಿ.ಸಿ. ಪೂಜಾರ, ಆರ್.ಎನ್.ಧಾರವಾಡ, ಶ್ರೀಶೈಲ ಮೂಲಿಮನಿ ಉಪಸ್ಥಿತರಿದ್ದರು. ಎ.ಬಿ.ಕೊಪ್ಪದ ಹಾಗೂ ಆರ್.ಎಚ್.ನೇಗಲಿ ನಿರೂಪಿಸಿದರು.

ನಿರಂತರ ಕಲಿಕೆ ಯಶಸ್ಸಿನ ಕಾವಲು

◆ **ಧಾರವಾಡ:** ಪದವಿ ಮುಗಿಸಿದರೆ, ಕಲಿಕೆ ಮುಗಿಯಲ್ಲ, ಇಲ್ಲಿಂದಲೇ ಜೀವನದ ನಿಜವಾದ ಸವಾಲು ಆರಂಭವಾಗುತ್ತವೆ. ನಿರಂತರ ಕಲಿಕೆಯೇ ಯಶಸ್ಸಿನ ಕಾವಲು. ಇಂದಿನ ತಂತ್ರಜ್ಞಾನದ ಯುಗದಲ್ಲಿ ವಿದ್ಯಾರ್ಥಿಗಳು ಕೌಶಲ್ಯಗಳನ್ನು ಬೆಳೆಸಿಕೊಳ್ಳುವಂತೆ ಧಾರವಾಡ ಐಐಐಟಿ ಡೀನ್ ಡಾ. ಕೆ. ಗೋಪಿನಾಥ ಹೇಳಿದರು.

ನಗರದ ಮರಾಠಾ ವಿದ್ಯಾ ಪ್ರಸಾರಕ ಮಂಡಳದ ಸಂಭಾಜಿರಾಜೆ ಭವನದಲ್ಲಿ ನಡೆದ ಛತ್ರಪತಿ ಶಿವಾಜಿ ಮಹರಾಜ ಕಲಾ-ವಾಣಿಜ್ಯ ಪದವಿ ಹಾಗೂ ಎಂ.ಎ. ಅಂತಿಮ ವರ್ಷದ ವಿದ್ಯಾರ್ಥಿಗಳ ಬೀಳ್ಕೊಡುವ, ಎನ್ನೆಸ್ಸೆಸ್-ಕ್ರೀಡಾ ಮತ್ತು ಸಾಂಸ್ಕೃತಿಕ ಚಟುವಟಿಕೆಗಳ ಮುಕ್ತಾಯ ಸಮಾರಂಭ ಉದ್ಘಾಟಿಸಿ ಮಾತನಾಡಿದರು. ಕೇವಲ ಅಂಕಗಳು ಗಳಿಸುವುದು ಶಿಕ್ಷಣದ ಮುಖ್ಯ ಉದ್ದೇಶವಲ್ಲ, ಬದಲಿಗೆ ಸಮಾಜಕ್ಕೆ ಉಪಯುಕ್ತ ಉತ್ತಮ ಚಾರಿತ್ರ್ಯ, ಮಾನವೀಯ ಮೌಲ್ಯಗಳು ಬೆಳೆಸಿಕೊಳ್ಳುವುದು ಮುಖ್ಯ. ದೇಶದ ಅತ್ಯುನ್ನತ ಸಂಸ್ಥೆಯಾದ ಐಐಐಟಿಯಲ್ಲಿ ತಮ್ಮ ಅನುಭವ ಹಂಚಿಕೊಂಡ ಅವರು, ವಿದ್ಯಾರ್ಥಿಗಳು ಧೈರ್ಯ ಹಾಗೂ ಕಠಿಣ ಪರಿಶ್ರಮದಿಂದ ಭವಿಷ್ಯದ ಯಾವುದೇ ಸವಾಲುಗಳನ್ನು ಎದುರಿಸಲು ಸಿದ್ಧರಿರಬೇಕು ಎಂದರು.

ಸಮಾಜದ ಮುಖಂಡರಾದ ಸುನೀಲ ಮೋರೆ ಹಾಗೂ ರಾಜು ಬಿರಜೆನವರ ಮಾತನಾಡಿದರು. ಅಂತಿಮ ವರ್ಷದ ವಿದ್ಯಾರ್ಥಿಗಳು ಕಾಲೇಜಿನಲ್ಲಿ ಕಳೆದ ಮಧುರ ಕ್ಷಣಗಳು ಮತ್ತು ಉಪನ್ಯಾಸಕರು ನೀಡಿದ ಮಾರ್ಗದರ್ಶನವನ್ನು ನೆನೆದು ಭಾವುಕರಾಗಿ ತಮ್ಮ ಹಂಚಿಕೊಂಡರು. ವಿವಿಧ ಸಾಂಸ್ಕೃತಿಕ, ಕ್ರೀಡಾ ಸ್ಪರ್ಧೆಗಳಲ್ಲಿ ವಿಜೇತರಿಗೆ ಬಹುಮಾನ ವಿತರಣೆ ಹಾಗೂ ಅಗ್ನಿವೀರ್ ಸೈನ್ಯಕ್ಕೆ ಆಯ್ಕೆಯಾದ 11 ಜನ ವಿದ್ಯಾರ್ಥಿಗಳಿಗೆ ಹಾಗೂ ಕವಿವಿಯ ಬ್ಲೂ ಆಗಿರುವ ಏಳು ವಿದ್ಯಾರ್ಥಿಗಳಿಗೆ ಸನ್ಮಾನಿಸಲಾಯಿತು. ಪ್ರಾಚಾರ್ಯ ಎಂ.ಎಸ್. ಗಾಣಿಗೇರ ಪ್ರಾಸ್ತಾವಿಸಿದರು. ಮರಾಠಾ ಮಂಡಳದ ಅಧ್ಯಕ್ಷ ಎಂ.ಎನ್. ಮೋರೆ ಅಧ್ಯಕ್ಷತೆ ವಹಿಸಿದ್ದರು. ಸಮಾಜದ ಮುಖಂಡರಾದ ಯಲ್ಲಪ್ಪ ಚವ್ಹಾಣ, ಸುನೀಲ ಮೋರೆ, ರಾಜು ಕಾಳೆ, ವಿದ್ಯಾರ್ಥಿ ಪ್ರತಿನಿಧಿಗಳಾದ ವಿಠ್ಠಲ ಗಿಡ್ಡನವರ, ಭಾಗ್ಯಜ್ಯೋತಿ ಕಲಕೇರಿ ಇದ್ದರು. ಉಪನ್ಯಾಸಕಿ ರಂಜಿತಾ ಅರ್ಕಸಾಲಿ ಪ್ರಾರ್ಥಿಸಿದರು. ಉಪನ್ಯಾಸಕಿ ಸುನಿತಾ ಮಾನೆ ನಿರೂಪಿಸಿದರು. ಉಪನ್ಯಾಸಕಿ ಸವಿತಾ ಕುಸುಗಲ್ಲ ವಂದಿಸಿದರು.



ಜೆಎಸ್ಸೆಸ್‌ನಲ್ಲಿ ವಿಶ್ವ ಪರಿಸರ ದಿನ



◆ **ಧಾರವಾಡ:** ನಗರದ ಜನತಾ ಶಿಕ್ಷಣ ಸಮಿತಿಯ ಶ್ರೀ ಮಂಜುನಾಥೇಶ್ವರ ಆಂಗ್ಲ ಶಾಲೆಯಲ್ಲಿ ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಹುಬ್ಬಳ್ಳಿ-ಧಾರವಾಡ ಪಾಲಿಕೆ ಪೌರಕಾರ್ಮಿಕರನ್ನು ಸನ್ಮಾನಿಸಲಾಯಿತು.

ಸಂಪನ್ಮೂಲ ವ್ಯಕಿಗಳು ಮಕ್ಕಳಿಗೆ ಪರಿಸರದ ಕುರಿತು ಜಾಗೃತಿ ಮೂಡಿಸುವ ಜೊತೆಗೆ ಪರಿಸರ ಹಾನಿ ಹಾಗೂ ಮಾಲಿನ್ಯದಿಂದ ಉಂಟಾಗುವಂತ ದುಷ್ಪರಿಣಾಮಗಳ ಕುರಿತು ಅರಿವು ಕೂಡ ಮೂಡಿಸಲಾಯಿತು. ಪರಿಸರ ದಿನಾಚರಣೆ ಪ್ರಯುಕ್ತ ಏರ್ಪಡಿಸಿದ್ದ ಕಲಾಕೃತಿಗಳ ಸ್ಪರ್ಧೆಯಲ್ಲಿ ಪುಟಾಣಿ ಮಕ್ಕಳು ಒಣಗಿದ ಎಲೆ, ಕಡ್ಡಿಗಳು ಹಾಗೂ ಧಾನ್ಯಗಳನ್ನು ಬಳಸಿ ವಿವಿಧ ಕಲಾಕೃತಿ ರಚಿಸಿದರು. ವಿಜೇತರಿಗೆ ಬಹುಮಾನ ವಿತರಿಸಲಾಯಿತು. ಪ್ರಾಚಾರ್ಯೆ ಡಯಾನ ಜೋಗಿನ್ ಹಾಗೂ ಸಂಯೋಜಕಿ ನಿರ್ಮಲಾ ಪಾಟೀಲ, ಕಮಲಾಕ್ಷಿ ಸಣ್ಣಕ್ಕಿ, ಪ್ರಿಯಾಂಕ ದೇಸಾಯಿ ಇದ್ದರು. ದೀಪ್ತಿ ಚಿಕ್ಕೆರೂರು ಪ್ರತಿಜ್ಞಾ ವಿಧಿ ಬೋಧಿಸಿದಿರು. ಸಾಕ್ಷಿ ಮುತ್ತಣ್ಣವರ ನಿರೂಪಿಸಿ, ವಂದಿಸಿದರು.

ಶಿವಾಜಿ ದೇಶಪ್ರೇಮ ಅನುಕರಣೀಯ

◆ **ಧಾರವಾಡ:** ಹಿಂದವಿ ಸಾಮ್ರಾಜ್ಯದ ಸ್ಥಾಪಕ ಹಾಗೂ ಯುಗಪುರುಷ ಛತ್ರಪತಿ ಶಿವಾಜಿ ಮಹಾರಾಜರ 353ನೇ ಪಟ್ಟಾಭಿಷೇಕ ಮಹೋತ್ಸವದ (ಶಿವಸ್ವರಾಜ್ಯ ದಿನೋತ್ಸವ) ಪ್ರಯುಕ್ತ ನಗರದಲ್ಲಿ ಸಡಗರ ಸಂಭ್ರಮ ಮನೆಮಾಡಿತ್ತು.


ಇಲ್ಲಿನ ಪ್ರಮುಖ ಶಿವಾಜಿ ವೃತ್ತದಲ್ಲಿರುವ ಛತ್ರಪತಿ ಶಿವಾಜಿ ಮಹಾರಾಜರ ಭವ್ಯ ಪುತ್ಥಳಿಗೆ ಮರಾಠಾ ವಿದ್ಯಾಪ್ರಸಾರಕ ಮಂಡಳದ ಅಧ್ಯಕ್ಷ ಎಂ.ಎನ್. ಮೋರೆ ಅವರು ಮಾಲಾರ್ಪಣೆ ಮಾಡಿ, ಜೈಕಾರಗಳ ನಡುವೆ ಗೌರವ ನಮನ ಸಲ್ಲಿಸಿದರು.

ನಂತರ ಮಾತನಾಡಿದ ಎಂ.ಎನ್. ಮೋರೆ, ಶಿವಾಜಿ ಮಹಾರಾಜರ ಆಡಳಿತದ ವೈಖರಿ, ದೇಶಪ್ರೇಮ ಸ್ಮರಿಸಿದ ಅವರು, ಶಿವಾಜಿ ಮಹಾರಾಜರು ಕೇವಲ ಒಂದು ಸಮುದಾಯಕ್ಕೆ ಸೀಮಿತವಾದ ನಾಯಕರಲ್ಲ, ಅವರು ದೇಶ ಹೆಮ್ಮೆ ಪಡುವಂತ ಧೀಮಂತ ನಾಯಕ ಎಂದರು. ಶಿವಾಜಿ ಮಹಾರಾಜರ 353ನೇ ಪಟ್ಟಾಭಿಷೇಕದ ಈ ಸುದಿನವು ನಮ್ಮಲ್ಲಿ ಸನಾತನ ಧರ್ಮದ ರಕ್ಷಣೆ ಮತ್ತು ದೇಶಭಕ್ತಿಯ ಜ್ವಾಲೆಯನ್ನು ಮತ್ತಷ್ಟು ಹೆಚ್ಚಿಸುವಂತಾಗಲಿ ಎಂದರು.

ಸಮಾಜದ ಮುಖಂಡರಾದ ಯಲ್ಲಪ್ಪ ಚವ್ಹಾಣ, ರಾಜು ಬಿರಜೆನವರ, ಸುನೀಲ ಮೋರೆ, ರಾಜು ಕಾಳೆ, ಶಿವಾಜಿ ಸೂರ್ಯವಂಶಿ, ಈಶ್ವರ ಪಾಟೀಲ, ಪ್ರಾಚಾರ್ಯ ಎಂ.ಎಸ್.ಗಾಣಿಗೇರ ಹಾಗೂ ವಿದ್ಯಾರ್ಥಿಗಳು ಇದ್ದರು.



ಬಂಟರ ಸಂಘಕ್ಕೆ ಪದಾಧಿಕಾರಿಗಳ ಆಯ್ಕೆ



◆ **ಹುಬ್ಬಳ್ಳಿ:** ಹುಬ್ಬಳ್ಳಿ-ಧಾರವಾಡ ಬಂಟರ ಸಂಘದ 2026-2028ನೇ ಸಾಲಿನ ನೂತನ ಪದಾಧಿಕಾರಿಗಳ ಆಯ್ಕೆ ಪ್ರಕ್ರಿಯೆ ನಡೆಯಿತು.

ಮೇ 28, 2026 ರಂದು ಸಂಜೆ 6 ಗಂಟೆಗೆ ಸಂಘದ ಸಭಾಂಗಣದಲ್ಲಿ ಹಾಲಿ ಅಧ್ಯಕ್ಷ ವಿಜಯಾನಂದ ಶೆಟ್ಟಿ ಅವರ ಅಧ್ಯಕ್ಷತೆಯಲ್ಲಿ ನಡೆದ ಸಂಘದ ಪ್ರಥಮ ಕಾರ್ಯಕಾರಿ ಸಭೆಯಲ್ಲಿ ಈ ಆಯ್ಕೆ ಮಾಡಲಾಗಿದೆ. ಕಾರ್ಯಕಾರಿ ಸಮಿತಿಯ ನೂತನ ಅಧ್ಯಕ್ಷರಾಗಿ ರಾಜೇಂದ್ರ ವಿ. ಶೆಟ್ಟಿ ಆಯ್ಕೆಯಾಗಿದ್ದಾರೆ. ಉಪಾಧ್ಯಕ್ಷರಾಗಿ ಸುಧೀರ್ ಜೆ. ಶೆಟ್ಟಿ ಹಾಗೂ ಶ್ರೀನಿವಾಸ ಶೆಟ್ಟಿ ಧಾರವಾಡ, ಕಾರ್ಯದರ್ಶಿಯಾಗಿ ರತ್ನಾಕರ್ ಎಂ. ಶೆಟ್ಟಿ (ಕರಾವಳಿ ಕ್ಯಾಟರ್ಸ್) ಖಜಾಂಚಿಯಾಗಿ ದಿನೇಶ್ ಕೆ. ಶೆಟ್ಟಿ (ಗ್ಲೋಬಲ್ ಮೀಡಿಯಾ),

ಕಾರ್ಯದರ್ಶಿಯಾಗಿ ಜ್ಯೋತಿ ಆರ್. ಟಿ. ಶೆಟ್ಟಿ ಆಯ್ಕೆಯಾಗಿದ್ದಾರೆ ಎಂದು ನಿಕಟಪೂರ್ವ ಅಧ್ಯಕ್ಷರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನೂತನ ಮುಖ್ಯಾಧಿಕಾರಿಗೆ ಸನ್ಮಾನ

◆ **ಕುಂದಗೋಳ:** ಇಲ್ಲಿನ ಪಟ್ಟಣ ಪಂಚಾಯಿತಿಯ ಮುಖ್ಯಾಧಿಕಾರಿಯಾಗಿ ನೂತನವಾಗಿ ನೇಮಕಗೊಂಡ ಅಧಿಕಾರಿಗೆ ಸ್ಥಳೀಯ ಮುಖಂಡರು ಹಾಗೂ ಸಾರ್ವಜನಿಕರು ಸನ್ಮಾನಿಸಿದರು. ಪಟ್ಟಣ ಪಂಚಾಯಿತಿ ಕಚೇರಿಯಲ್ಲಿ ಶಾಲು ಹೊದಿಸಿ, ಹಾರ ಹಾಕುವ ಮೂಲಕ ಸನ್ಮಾನಿಸಲಾಯಿತು.

ವಕೀಲ ವೈ.ಬಿ.ಬಿಳೆಬಾಳ ಮಾತನಾಡಿ, ಪಟ್ಟಣದ ಅಭಿವೃದ್ಧಿ ಕಾರ್ಯಗಳಿಗೆ ಹೆಚ್ಚಿನ ಒತ್ತು ನೀಡುವ ಜೊತೆಗೆ ಸಾರ್ವಜನಿಕರ ಸಮಸ್ಯೆಗಳಿಗೆ ತ್ವರಿತ ಸ್ಪಂದನೆ ನೀಡುವಂತೆ ಮನವಿ ಮಾಡಿದರು.

ಪಪಂ ಮುಖ್ಯಾಧಿಕಾರಿ ಗಂಗಾಧರ ಸಾಂಕ್ಯಾನವರ್ ಮಾತನಾಡಿ, ಪಟ್ಟಣದ ಸಮಗ್ರ ಅಭಿವೃದ್ಧಿಗೆ ಪ್ರಾಮಾಣಿಕವಾಗಿ ಕೆಲಸ ಮಾಡುವ ಭರವಸೆ ನೀಡಿ ಸಾರ್ವಜನಿಕರ ಸಹಕಾರ ಅಗತ್ಯ ಎಂದರು.

ಈಶ್ವರ ಹೈಬತ್ತಿ, ವಕೀಲರಾದ ವಿನಾಯಕ ಹಡಪದ, ರವಿ ಕಮಡೊಳ್ಳಿ, ವಾಸು ಹೈಬತ್ತಿ ಸಿಬ್ಬಂದಿ ರಮೇಶ ಚಲವಾದಿ, ವಿ.ಎಸ್ .ನಾರಾಯಕರ, ಮಂಜುನಾಥ ಶಿಕ್ಕಲಗಾರ, ಸೇರಿದಂತೆ ಅನೇಕರಿದ್ದರು.



ಕಿರುಸುದ್ದಿ

ಕೇಂದ್ರದ ದುಬಾರಿ ನೀತಿಯಿಂದ ಸಂಕಷ್ಟ: ಹೆಬ್ಬಾಳ್ಕರ್



ಬೆಳಗಾವಿ: ಅಡುಗೆ ಅನಿಲ ಸಿಲಿಂಡರ್ ಬೆಲೆಯನ್ನು ಮತ್ತೆ 29 ರೂ. ಹೆಚ್ಚಿಸಿರುವ ಕೇಂದ್ರ ಸರ್ಕಾರದ ನಿರ್ಧಾರ ಖಂಡನೀಯ ಎಂದು ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಆಕ್ರೋಶ ವ್ಯಕ್ತಪಡಿಸಿದರು. ಈ ಕುರಿತು ಹೇಳಿಕೆ ನೀಡಿರುವ ಅವರು, ಕಳೆದ ಮೂರು ತಿಂಗಳಲ್ಲೇ ಇದು ಎರಡನೇ ಬಾರಿ ಬೆಲೆ ಏರಿಕೆಯಾಗಿದ್ದು, ಮಾರ್ಚ್ ತಿಂಗಳಲ್ಲಿ 60 ರೂ. ಹೆಚ್ಚಿಸಲಾಗಿತ್ತು. ಈಗಿನ 29 ರೂ. ಏರಿಕೆಯೊಂದಿಗೆ ಕೇವಲ ಮೂರು ತಿಂಗಳಲ್ಲಿ ಒಟ್ಟು 89 ರೂ. ಹೆಚ್ಚಳವಾಗಿದೆ. ಒಂದು ಕಡೆ ಅಗತ್ಯ ವಸ್ತುಗಳ ಬೆಲೆ ದಿನದಿಂದ ದಿನಕ್ಕೆ ಏರುತ್ತಿದ್ದರೆ, ಮತ್ತೊಂದು ಕಡೆ ಅಡುಗೆ ಅನಿಲದ ಬೆಲೆ ಹೆಚ್ಚಿಸುವ ಮೂಲಕ ಕೇಂದ್ರದ ಬಿಜೆಪಿ ಸರ್ಕಾರ ಮಧ್ಯಮ ವರ್ಗ, ಬಡವರು ಮತ್ತು ಗೃಹಿಣಿಯರ ಮೇಲೆ ಮತ್ತಷ್ಟು ಆರ್ಥಿಕ ಹೊರೆ ಹಾಕಿದೆ ಎಂದು ಅಸಮಾಧಾನ ಹೊರ ಹಾಕಿದರು. ಬೆಲೆ ಏರಿಕೆ ನಿಯಂತ್ರಿಸುವ ಬದಲು ನಿರಂತರವಾಗಿ ಜನರ ಮೇಲೆ ಹೊರೆಯಾಗುವ ನಿರ್ಧಾರಗಳನ್ನು ತೆಗೆದುಕೊಳ್ಳುತ್ತಿರುವುದು ಆತಂಕಾರಿ ಬೆಳವಣಿಗೆಯಾಗಿದೆ ಎಂದು ಹೇಳಿದ್ದಾರೆ.

ದೇಶದಲ್ಲಿ ರಸಗೊಬ್ಬರ ಕೊರತೆ: ತಂಗಡಗಿ



ಕಾರಟಗಿ: ದೇಶದಲ್ಲಿ ರಸಗೊಬ್ಬರ, ಬಿತ್ತನೆ ಬೀಜದ ಕೊರತೆ ಇದೆ. ರೈತರ ಪರಿಸ್ಥಿತಿ ಚೆನ್ನಾಗಿಲ್ಲ, ದಿನನಿತ್ಯದ ವಸ್ತುಗಳ ಬೆಲೆ ಗಗನಕ್ಕೇರಿದ್ದು, ಜನ ಸಾಮಾನ್ಯರ ಬದುಕು ದುಸ್ತರವಾಗಿದೆ. ಈ ಬಗ್ಗೆ ಪ್ರಧಾನಿ ನರೇಂದ್ರ ಮೋದಿ ಅವರು ತುಟಿ ಬಿಚ್ಚುತ್ತಿಲ್ಲ ಎಂದು ಬಿಜೆಪಿ ಕೇಂದ್ರದ ವಿರುದ್ಧ ಶಾಸಕ ಶಿವರಾಜ್ ತಂಗಡಗಿ ವಾಗ್ದಾಳಿ ನಡೆಸಿದರು.

ಭಾನುವಾರ ಕಾರಟಗಿ ಪಟ್ಟಣದಲ್ಲಿ ಸುದ್ದಿಗಾರರ ಜೊತೆ ಮಾತನಾಡಿದ ಅವರು, ದೇಶದಲ್ಲಿ ಪೆಟ್ರೋಲ್ ಇಲ್ಲ, ವಿದೇಶದಲ್ಲಿ ಮರ್ಯಾದೆ ಇಲ್ಲ, ರೂಪಾಯಿಗೆ ಬೆಲೆ ಇಲ್ಲ. ಬಿಜೆಪಿಗರು ಈ ದೇಶದ ನಾಟಕ ಕಂಪನಿ ಇದ್ದಂತೆ. ಈ ಹಿಂದೆ ಯುಪಿಎ ಸರ್ಕಾರದ ಅವಧಿಯಲ್ಲಿ ತುಸು ಸಿಲಿಂಡರ್ ಬೆಲೆ ಹೆಚ್ಚಾಗಿದ್ದಕ್ಕೆ ಇಡೀ ದೇಶದಲ್ಲಿ ಖಾಲಿ ಸಿಲಿಂಡರ್ ಹೊತ್ತು ಓಡಾಡಿದ ಬಿಜೆಪಿಗರು ಇದೀಗ ಕಾಣುತ್ತಿಲ್ಲ ಎಂದು ಛೇಡಿಸಿದರು. ಶಾಸಕರಾದ ಬಸವರಾಜ ರಾಯರೆಡ್ಡಿ ಮತ್ತು ರಾಘವೇಂದ್ರ ಹಿಟ್ನಾಳ್ ಅವರು ಸಚಿವ ಸ್ಥಾನ ನೀಡುವಂತೆ ಪಕ್ಷದ ನಾಯಕರನ್ನು ಕೇಳುವುದು ತಪ್ಪಲ್ಲ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು. ಕಾಂಗ್ರೆಸ್ ಪಕ್ಷ ನನಗೆ ಉತ್ತಮ ಅವಕಾಶಗಳನ್ನು ನೀಡಿದೆ. ಎರಡನೇ ಪಟ್ಟಿಯಲ್ಲಿ ನನಗೆ ಸಚಿವ ಸ್ಥಾನ ಸಿಗಲಿದೆ ಎಂಬ ವಿಶ್ವಾಸವಿದೆ ಎಂದರು.

65 ಸರ್ಕಾರಿ ಶಾಲೆಗಳ ವಿಲೀನಕ್ಕೆ ಸಿದ್ಧತೆ

ವಾಗೀಶ ವೀ. ಪಾಟೀಲ

ದಿಗಂತ ವಿಶೇಷ

ರಾಯಚೂರು: ಜಿಲ್ಲೆಯಲ್ಲಿ ಕಾರ್ಯನಿರ್ವಹಣೆ ಮಾಡಲು ಸಿದ್ಧವಾಗಿರುವ 33 ಕರ್ನಾಟಕ ಪಬ್ಲಿಕ್ ಸ್ಕೂಲ್‌ಗಳಲ್ಲಿ ವಿವಿಧ ಗ್ರಾಮಗಳಲ್ಲಿನ 65 ಶಾಲೆಗಳನ್ನು ವಿಲೀನ ಮಾಡಲು ಸಿದ್ಧತೆ ಮಾಡಿಕೊಳ್ಳುತ್ತಿರುವ ಶಿಕ್ಷಣ ಇಲಾಖೆಯ ಕ್ರಮಕ್ಕೆ ಅನೇಕ ಗ್ರಾಮಗಳ ಪಾಲಕರು ಭಯಪಡುವಂತಾಗಿದೆ.

ಕೆಲ ಕೆಪಿಎಸ್ ಶಾಲೆಗಳಿಗೆ 48-50 ಕಿಮೀ ದೂರದಲ್ಲಿರುವ ಕನ್ನಡ ಶಾಲೆಯನ್ನು ವಿಲೀನ ಮಾಡುವುದಕ್ಕೆ ಪಟ್ಟಿ ಸಿದ್ಧಮಾಡಿಕೊಳ್ಳಲಾಗಿದೆ. ಗುಣಮಟ್ಟದ ಶಿಕ್ಷಣ ನೀಡುವ ನೆಪದಲ್ಲಿ ಒಂದು ಕೆಪಿಎಸ್ ಶಾಲೆಯನ್ನು ಆರಂಭಿಸುವುದಕ್ಕೆ 17 ಕನ್ನಡ ಮಾಧ್ಯಮ ಶಾಲೆಗಳಿಗೆ ಬಾಗಿಲು ಹಾಕುವುದಕ್ಕೆ ಮುನ್ನುಡಿ ಬರೆಯುವುದಕ್ಕೆ ಸರ್ಕಾರ ಮುಂದಾಗುತ್ತಿದೆ ಎನ್ನುವುದು ಜನಸಾಮಾನ್ಯರ ಅದರಲ್ಲೂ ಗಡಿ ಭಾಗದ ಜಿಲ್ಲೆಗಳ ಜನತೆಯ ಅಳಲಾಗಿದೆ.

ಪಾಲಕರಲ್ಲಿ ಆತಂಕ

ಹೇಮನೂರು ಗ್ರಾಮದ ಕೆಪಿಎಸ್ ಶಾಲೆಗೆ ಬೊಮ್ಮನನಾಳ ಗ್ರಾಮದಲ್ಲಿ ಶಾಲೆಯನ್ನು ವಿಲೀನ ಮಾಡಲಾಗುತ್ತಿದೆ. ಆದರೆ, ಈ ಎರಡೂ ಗ್ರಾಮಗಳಲ್ಲಿನ ದೂರ 48ಕಿಮೀ ದೂರವಿದ್ದರೆ, ರಾಯಚೂರಿನ ರೈಲ್ವೆ ನಿಲ್ದಾಣದ ಬಳಿಯಲ್ಲಿನ ಕೆಪಿಎಸ್ ಶಾಲೆಗೆ ಎನ್. ಹನುಮಾಪೂರದ ಪ್ರಾಥಮಿಕ ಶಾಲೆ 50 ಕಿಮೀ ದೂರವಿದೆ. ಹಾಗಾದರೆ ಈ ಶಾಲೆಗಳ ಮಕ್ಕಳು ಪ್ರತಿ ನಿತ್ಯ 50 ಕಿಮೀ ದೂರ ಕ್ರಮಿಸಿ ಶಾಲೆಗೆ ಬರುವುದಾದರೂ ಹೇಗೆ ಎನ್ನುವ ಪ್ರಶ್ನೆ ಪಾಲಕರನ್ನು ಕಾಡಲಾರಂಭಿಸಿದೆ.

ಸ್ವಂತ ಗ್ರಾಮಗಳಲ್ಲಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಿದ್ದರೇನೇ ಶಾಲೆಗಳಲ್ಲಿನ ಹಾಜರಾತಿ ಕಡಿಮೆ ಇರುತ್ತಿತ್ತು. ವಿಶೇಷವಾಗಿ ಜಮೀನಿನಲ್ಲಿನ ಕೆಲಸ ಕಾರ್ಯಗಳು ಹೆಚ್ಚಿನ ಇರುವ ಸಂದರ್ಭದಲ್ಲಿ ಮಕ್ಕಳನ್ನು ಶಾಲೆಗೆ ಕಳಿಸದೇ ಹೊಲಕ್ಕೆ ಕರೆದುಕೊಂಡು ಹೋಗುವ ಗ್ರಾಮೀಣ ಭಾಗದ ಪಾಲಕರು ಈಗ ಒಂದು ಗ್ರಾಮದಿಂದ 50 ಕಿಮೀ ದೂರ ಬರುವುದಾದರೆ ಎಷ್ಟು ಮಕ್ಕಳ ಹಾಜರಾತಿ ನಿರೀಕ್ಷಿಸಬಹುದು.

ಗುಣಮಟ್ಟದ ಶಿಕ್ಷಣದ ನೀಡುವ ಹೆಸರಲ್ಲಿ ಶಾಲೆಗಳನ್ನು ವಿಲೀನ ಮಾಡುವುದರಿಂದ ಹೆಚ್ಚಿನ ಮಕ್ಕಳು ಶಿಕ್ಷಣದಿಂದ ದೂರವಿರುವಂತೆ ಮಾಡಬಹುದೆಂಬ ಆತಂಕ ಶಿಕ್ಷಣ ಇಲಾಖೆಯಲ್ಲಿನ ಕೆಲವರು ವ್ಯಕ್ತಪಡಿಸುತ್ತಿದ್ದಾರೆ.

ರಾಯಚೂರಿನ ರೈಲ್ವೆ ನಿಲ್ದಾಣದ ಬಳಿಯಲ್ಲಿನ ಕೆಪಿಎಸ್ ಶಾಲೆಗೆ 17 ಶಾಲೆಗಳನ್ನು ವಿಲೀನ ಮಾಡಲಾಗಿದೆ. ಈ ಶಾಲೆಗೆ 2,4,6,10 ಹಾಗೂ 50 ಕಿಮೀ ದೂರದಿಂದ ಶಾಲಾ ವಿದ್ಯಾರ್ಥಿಗಳು ಆಗಮಿಸಬೇಕಾಗುತ್ತದೆ. ಹೀಗೆ ಶಾಲೆಗಳ ವಿಲೀನ ಮಾಡುವುದರಿಂದ ಮಕ್ಕಳಿಗೆ ಸ್ವಂತ ಗ್ರಾಮಗಳಲ್ಲಿನ ಕನ್ನಡ ಶಾಲೆಗಳಲ್ಲಿ ಮಕ್ಕಳ ಪ್ರವೇಶಾತಿ ಕಡಿಮೆ ಆದರೆ ಮಕ್ಕಳ ಸಂಖ್ಯೆ ಕಡಿಮೆ ಇದೆ ಎಂಬ ಕಾರಣ ನೀಡಿ ಈ ಶಾಲೆಗಳನ್ನು ಮುಚ್ಚುವ ಹುನ್ನಾರ ಎನ್ನುವುದು ಕನ್ನಡ ಪರ ಸಂಘಟನೆಗಳ ಆರೋಪವಾಗಿದೆ.

> ### ಬಡ ಮಕ್ಕಳು ಶಾಲೆಯಿಂದ ಹೊರಗುಳಿಯುವ ಸಾಧ್ಯತೆ
> ಗ್ರಾಮೀಣ ಭಾಗಗಳಲ್ಲಿನ ಮಕ್ಕಳಿಗೆ ಶಿಕ್ಷಣ ನೀಡಬೇಕೆಂಬ ಉದ್ದೇಶದಿಂದಲೇ ಹೆಚ್ಚೆಚ್ಚು ಗ್ರಾಮಗಳಲ್ಲಿ ಪ್ರಾಥಮಿಕ ಹಾಗೂ ಪ್ರೌಢ ಶಾಲೆಗಳನ್ನು ಆರಂಭಿಸಲಾಯಿತು. ಪ್ರೌಢ ಶಾಲೆಯ ನಂತರದಲ್ಲಿ ಗ್ರಾಮೀಣ ಭಾಗಗಳಲ್ಲಿ ವಿದ್ಯಾರ್ಥಿಗಳು ಪದವಿ ಪೂರ್ವ ಶಿಕ್ಷಣವನ್ನು ಮುಂದುವರಿಸುತ್ತಿಲ್ಲ ಎಂಬ ಕಾರಣಕ್ಕೆ ಗ್ರಾಮೀಣ ಭಾಗಗಗಳಲ್ಲಿಯೂ ಪಿಯು ಕಾಲೇಜುಗಳನ್ನು ಹಿಂದಿನ ಅನೇಕ ಸರ್ಕಾರಗಳ ಆರಂಭಿಸಿದ್ದನ್ನು ಕಾಣಬಹುದು. ಆದರೆ, ಈಗ ಈ ಭಾಗಗಳಲ್ಲಿನ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ನೀಡುವ ನೆಪದಲ್ಲಿ ಪ್ರಾಥಮಿಕ, ಪ್ರೌಢ ಶಿಕ್ಷಣದಿಂದಲೇ ವಂಚಿತರನ್ನಾಗಿ ಮಾಡುವ ಸಾಧ್ಯತೆ ಹೆಚ್ಚಿದೆ. ಈ ರೀತಿಯ ಬದಲಾವಣೆ ಖಾಸಗಿ ಶಾಲೆಗಳಿಗೆ ಇನ್ನಷ್ಟು ಪ್ರೋತ್ಸಾಹ ನೀಡಿದಂತಾಗುತ್ತದೆ. ಖಾಸಗಿ ಶಾಲೆಗಳಲ್ಲಿನ ಫೀ ಸೇರಿದಂತೆ ಹೆಚ್ಚಿನ ಹಣ ನೀಡಲಾಗದೇ ಪಾಲಕರು ಮಕ್ಕಳನ್ನು ಶಾಲೆಯಿಂದ ಹೊರಗುಳಿಸುವ ಸಾಧ್ಯತೆ ಹೆಚ್ಚಿದೆ.

> **ಸರ್ಕಾರದ ಸೂಚನೆಯಂತೆ ಯಾವ ಯಾವ ಶಾಲೆಗಳನ್ನು ವಿಲೀನ ಮಾಡಬೇಕೆಂದು ಪಟ್ಟಿಯನ್ನು ಸಿದ್ಧಪಡಿಸಿಟ್ಟುಕೊಳ್ಳಲಾಗಿದೆ. ಇನ್ನು ಯಾವುದೇ ನಿರ್ಧಾರಗಳನ್ನು ಕೈಗೊಳ್ಳಲಾಗಿಲ್ಲ. ಸರ್ಕಾರದ ಸೂಚನೆಯ ಮೇರೆಗೆ ಮುಂದಿನ ಕ್ರಮ ಜರುಗಿಸಲಾಗುವುದು.**
> ■ ಮಲ್ಲಿಕಾರ್ಜುನ, ಡಿಡಿಪಿಐ

ಕಲಬುರಗಿಯಲ್ಲಿ ಭಾರೀ ಮಳೆಯ ಆರ್ಭಟ ಸೇತುವೆ ಕುಸಿತ, ಮನೆಗಳಿಗೆ ನುಗ್ಗಿದ ನೀರು

ಕಲಬುರಗಿ: ಜಿಲ್ಲೆಯ ಚಿಂಚೋಳಿ ತಾಲೂಕಿನಲ್ಲಿ ಸುರಿದ ಭಾರೀಮಳೆಯ ಪರಿಣಾಮ ಜನಜೀವನ ಅಸ್ತವ್ಯಸ್ತಗೊಂಡಿದೆ. ಚಿಮ್ಮನಚೋಡ ಗ್ರಾಮದ ಸಮೀಪ ಇರುವ ಚಿಮ್ಮನಚೋಡ-ನರನಾಳ ಸಂಪರ್ಕ ಸೇತುವೆ ಮಳೆಯ ರಭಸಕ್ಕೆ ಕುಸಿದಿದ್ದು, ಚಿಂಚೋಳಿ ಮತ್ತು ಭಾಲ್ಕಿ ತಾಲೂಕುಗಳ ನಡುವಿನ ಸಂಚಾರ ಸಂಪೂರ್ಣ ಸ್ಥಗಿತಗೊಂಡಿದೆ.

ರಾಜ್ಯದ ವಿವಿಧ ಭಾಗಗಳಲ್ಲಿ ಕಳೆದ ಕೆಲವು ದಿನಗಳಿಂದ ಭಾರಿ ಮಳೆಯಾಗುತ್ತಿರುವ ಹಿನ್ನೆಲೆ ಈ ಘಟನೆ ಸಂಭವಿಸಿದೆ. ಸೇತುವೆ ಕುಸಿತದಿಂದ ವಾಹನ ಸವಾರರು ಹಾಗೂ ಗ್ರಾಮಸ್ಥರು ಪರ್ಯಾಯ ಮಾರ್ಗಗಳ ಮೊರೆ ಹೋಗಬೇಕಾದ ಪರಿಸ್ಥಿತಿ ನಿರ್ಮಾಣವಾಗಿದ್ದು, ನೂರಾರು ಜನರ ಸಂಚಾರಕ್ಕೆ ತೊಂದರೆಯಾಗಿದೆ.

ಇನ್ನೊಂದೆಡೆ, ಚಿಂಚೋಳಿ ತಾಲೂಕಿನ ಬೆಡಕಪಳ್ಳಿ ಗ್ರಾಮದಲ್ಲಿ ಮಳೆ ನೀರು ನುಗ್ಗಿ 20ಕ್ಕೂ ಹೆಚ್ಚು ಮನೆಗಳು ಜಲಾವೃತಗೊಂಡಿವೆ. ಮನೆಗಳೊಳಗೆ ನೀರು ಹರಿದು ಬಂದ ಪರಿಣಾಮ ನಿವಾಸಿಗಳು ತಮ್ಮ ಸಾಮಗ್ರಿಗಳನ್ನು ಸುರಕ್ಷಿತ ಸ್ಥಳಗಳಿಗೆ ಸ್ಥಳಾಂತರಿಸಲು ಹರಸಾಹಸ ಪಡುತ್ತಿದ್ದಾರೆ. ಕೆಲ ಕುಟುಂಬಗಳು ತಾತ್ಕಾಲಿಕವಾಗಿ ಸಂಬಂಧಿಕರ ಮನೆಗಳಿಗೆ ತೆರಳಿರುವುದಾಗಿ ತಿಳಿದುಬಂದಿದೆ.

> ಹನುಮಾನ್ ಮಂದಿರಕ್ಕೆ ನುಗ್ಗಿದ ನೀರು ಜಿಲ್ಲೆಯ ಸೇಡಂ ತಾಲೂಕಿನ ಹೃದಯ ಭಾಗದಲ್ಲಿರುವ ಬಾಬ್ ಸಾಹೇಬ್ ಅಂಬೇಡ್ಕರ್ ಮೂರ್ತಿ ಹಾಗೂ ರೈಲ್ವೆ ಸ್ಟೇಷನ್ ಹೋಗುವ ರಸ್ತೆಯ ಹನುಮಾನ್ ದೇವಸ್ಥಾನ ಮತ್ತು ಜಿಪಂ ಆಫೀಸ್ ಸಂಪೂರ್ಣವಾಗಿ ಚರಂಡಿ ನೀರು ಹಾಗೂ ಮಳೆ ನೀರಿನಿಂದ ರಸ್ತೆ ಮುಳಗಡೆಯಾಗಿ ವಾಹನ ಸವಾರರು ಪರದಾಡಿದರು. ಮಳೆಗಾಲದಲ್ಲಿ ನೀರಿನಿಂದ ತೀವ್ರ ಸಮಸ್ಯೆ ಜನರು ಎದುರಿಸುತ್ತಿದ್ದು, ಸ್ಥಳೀಯ ಆಡಳಿತ ಹಾಗೂ ಸರಕಾರ ಕೂಡಲೇ ಕ್ರಮಕ್ಕೆಗೊಳ್ಳಬೇಕು ಎಂದು ಬಿಜೆಪಿ ಗ್ರಾಮಾಂತರ ಜಿಲ್ಲಾ ಯುವ ಮೋರ್ಚಾದ ಅಧ್ಯಕ್ಷ ವಿರೇಂದ್ರ ಪಾಟೀಲ ರಾಯಕೋಡ ಆಗ್ರಹಿಸಿದರು.



ಬುದ್ಧ, ಬಸವ, ಅಂಬೇಡ್ಕರ್ ಸಿದ್ಧಾಂತಗಳು ಸದಾ ಪ್ರಸ್ತುತ



ವಿಜಯಪುರ: ಬುದ್ಧ, ಬಸವ ಮತ್ತು ಅಂಬೇಡ್ಕರ್ ಅವರ ತತ್ವ, ಸಿದ್ಧಾಂತಗಳು ಸದಾ ಪ್ರಸ್ತುತವಾಗಿವೆ. ಅವರ ಕನಸುಗಳನ್ನು ನನಸಾಗಿಸಲು ಎಲ್ಲರೂ ಒಟ್ಟಾಗಿ ಶ್ರಮಿಸೋಣ ಎಂದು ಕೈಗಾರಿಕೆ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವ ಎಂ.ಬಿ.ಪಾಟೀಲ ಹೇಳಿದರು.

ನಗರದ ಬುದ್ಧ ವಿಹಾರಕ್ಕೆ ಭೇಟಿ ನೀಡಿ ಮಾತನಾಡಿದ ಅವರು, ಬಳಿಕ ಬುದ್ಧ ವಿಹಾರದ ವತಿಯಿಂದ ನಡೆದ ಅಭಿನಂದನೆ ಸ್ವೀಕರಿಸಿ ಮಾತನಾಡಿದ ಅವರು, ಮಾಜಿ ಸಚಿವ ಪ್ರೊ.ರಾಜು ಆಲಗೂರ ಅವರಿಗೆ ಎಂ.ಎಲ್.ಸಿ(ವಿಧಾನ ಪರಿಷತ ಸದಸ್ಯ)ಯಾಗಿ ಮಾಡಲು ಹೈಕಮಾಂಡ್ ಮನವರಿಕೆ ಮಾಡಲು ಶಕ್ತಿಮೀರಿ ಪ್ರಯತ್ನಿಸುವುದಾಗಿ ತಿಳಿಸಿದರು.

ಮಾಜಿ ಶಾಸಕ ಪ್ರೊ.ರಾಜು ಆಲಗೂರ ಮಾತನಾಡಿ, ಸಚಿವ ಎಂ. ಬಿ.ಪಾಟೀಲರು ಸಮಾಜದ ಅಭಿವೃದ್ಧಿಗೆ ಸಾಕಷ್ಟು ಅನುದಾನ ನೀಡಿದ್ದಾರೆ. ಮುಂಬರುವ ದಿನಗಳಲ್ಲಿ ಮತ್ತಷ್ಟು ಕೆಲಸಗಳನ್ನು ಮಾಡಲಿದ್ದಾರೆ. ಅವರು ನಮಗೆ ಬೆನ್ನೆಲುಬಾಗಿ ನಿಂತಿದ್ದಾರೆ ಎಂದು ಹೇಳಿದರು.

ಚಂದ್ರಶೇಖರ ಕೊಡಬಾಗಿ ಮಾತನಾಡಿ, ಮಾಜಿ ಸಚಿವ ದಿ.ಬಿ.ಎಂ.ಪಾಟೀಲ ಶೋಷಿತ ವರ್ಗದ ಪರವಾಗಿದ್ದರು. ಜ ನಾ ಾ ನ್ ಂ ರಾ ಗಿ ಯ ಾ ಗಿ ದ್ ದ ರ್ ಂ. ಅಲ್ಪಸಂಖ್ಯಾತರು ಶಾಸಕರಾಗುವಂತೆ ಮಾಡಿದ್ದರು. ಈಗ ಅವರ ಪುತ್ರ ಸಚಿವ ಎಂ.ಬಿ.ಪಾಟೀಲರು ಅದೇ ಮಾರ್ಗದಲ್ಲಿ ಸಾಗಿದ್ದಾರೆ. ಮುಂಬರುವದಿನಗಳಲ್ಲಿ ಉನ್ನತ ಸ್ಥಾನಕ್ಕೇರಲಿದ್ದಾರೆ ಎಂದು ಹೇಳಿದರು.

ಬುದ್ಧ ವಿಹಾರ ನಿರ್ಮಾಣ ಸಮಿತಿ ಅಧ್ಯಕ್ಷ ರಾಜಶೇಖರ ಯಡಹಳ್ಳಿ ಮಾತನಾಡಿ, ಸಚಿವರು ಬುದ್ಧವಿಹಾರ ನಿರ್ಮಾಣಕ್ಕೆ ರೂ. 4 ಕೋ ಅನುದಾನ ಒದಗಿಸಿದ್ದಾರೆ. ಸಮಾಜದ ಕಲ್ಯಾಣಕ್ಕೂ ಕೊಡುಗೆ ನೀಡಿದ್ದಾರೆ. ಬುದ್ಧ ಮತ್ತು ಬಾಬಾಸಾಹೇಬರ ಆಶೀರ್ವಾದ ಎಂ.ಬಿ.ಪಾಟೀಲರ ಮೇಲಿದೆ ಎಂದರು.

ಈ ಸಂದರ್ಭದಲ್ಲಿ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಡಾ.ಗಂಗಾಧರ ಸಂಬಣ್ಣಿ, ಸಾಬು ಚಲವಾದಿ, ಶಾಂತೇಶ ಶಹಾಪುರ, ಸುರೇಶ ಘೊಣಸಗಿ, ನಾಗರಾಜ ಲಂಬು, ಅಡಿವೆಪ್ಪ ಸಾಲಗಲ, ರಾಜು ತೊರವಿ, ಅಭಿಷೇಕ ಚಕ್ರವರ್ತಿ, ಶಶಿಕಾಂತ ಹೊನವಾಡಕರ, ಸುನೀಲ ಉಕ್ಕಲಿ, ಆನಂದ ಔದಿ, ಕುಮಾರ ಶಹಾಪುರ, ಬಸವಂತ ಗುಣದಾಳ, ರಾಜು ಕುಚಬಾಳ, ಬಸವಂತ ಬ್ಯಾಳಿ, ಎಂ.ಬಿ.ಹಳ್ಳದಮನಿ, ಕುದರಿ, ಮಲ್ಲು ಕುಚಬಾಳ, ಯಂಕು ವಗ್ಯಾನವರ, ಮನೋಜ ಕೋಟ್ಯಾಳ, ರಮೇಶ್ ಯಡಹಳ್ಳಿ, ಮಹಾದೇವ ಬನಸೋಡೆ, ನಾಡಗೇರ, ಸುಜಾತಾ ಚಂಚಲಕರ, ಭಾರತಿ ಹೊಸಮನಿ, ಶಾರದಾ ಹೊಸಮನಿ ಇದ್ದರು.

ತುಂಬಿ ಹರಿದ ಕುಂಬಾರಕೊಪ್ಪ ಹಳ್ಳ



ಅಳ್ನಾವರ: ಪಟ್ಟಣವೂ ಸೇರಿದಂತೆ ಸುತ್ತಮುತ್ತಲಿನ ಗ್ರಾಮಗಳಲ್ಲಿ ಭಾನುವಾರ ಮಧ್ಯಾಹ್ನ ಸುರಿದ ಗುಡುಗು, ಮಿಂಚು ಮಿಶ್ರಿತ ಭಾರೀಮಳೆಗೆ ಜನರು ತತ್ತರಿಸಿದರೆ, ಸಮೀಪದ ಕುಂಬಾರಕೊಪ್ಪ ಗ್ರಾಮದ ಹಳ್ಳ ತುಂಬಿ ಹರಿದ ಪರಿಣಾಮ ಗ್ರಾಮಸ್ಥರು ಪರದಾಡಿದ ಪ್ರಸಂಗ ಜರುಗಿದೆ.

ಇಂದಿನ ಮಳೆಯು ಜನರ ನಿತ್ಯದ ಕೆಲಸ ಮತ್ತು ಕೃಷಿ ಚಟುವಟಿಕೆಗಳಿಗೆ ಅಡಚಣೆ ಮಾಡಿದ್ದು, ಪಟ್ಟಣದ ತಗ್ಗು ಪ್ರದೇಶಗಳಲ್ಲಿ ನೀರು ತುಂಬಿ ನಿವಾಸಿಗಳು ಪರದಾಡುವಂತಾಗಿತ್ತು.

ಮುಂಜಾನೆಯಿಂದ ಬಿಸಿಲಿನ ವಾತಾವರಣವಿದ್ದ ಕಾರಣ ರೈತರು ಹೊಲಗಳಲ್ಲಿ ಬಿತ್ತನೆಯ ಕಾರ್ಯದಲ್ಲಿ ತೊಡಗಿದ್ದರು. ಮಧ್ಯಾಹ್ನ ಮೂರು ಘಂಟೆಗೆ ಜೋರಾದ ಮಳೆ ಸುರಿದ ಪರಿಣಾಮ ಎಲ್ಲ ಕೆಲಸಗಳನ್ನು ಸ್ಥಗಿತಗೊಳಿಸುವ ಅನಿವಾರ್ಯತೆ ಎದುರಾಯಿತು ಎಂದು ಹುಲಿಕೇರಿ ಗ್ರಾಮದ ರೈತ ಯಲ್ಲಪ್ಪ ಬೆಳಗಾವಿ ತಿಳಿಸಿದರು. ಹಣ್ಣು, ತರಕಾರಿ ವ್ಯಾಪಾರಸ್ಥರು ತೊಂದರೆ ಅನುಭವಿಸಿದರು.

ಸೌಲಭ್ಯಕ್ಕಾಗಿ ಸಂಪನ್ಮೂಲ ಕ್ರೋಢೀಕರಣ

• **ಬೆಂಗಳೂರು:** ಗ್ರೇಟರ್ ಬೆಂಗಳೂರು ಪ್ರಾಧಿಕಾರ(ಜಿಬಿಎ)ದ ವ್ಯಾಪ್ತಿಯ ಐದು ನಗರಪಾಲಿಕೆಗಳಲ್ಲಿ ಮೂಲಸೌಕರ್ಯಗಳ ಅಭಿವೃದ್ಧಿ ಹಾಗೂ ನಾಗರಿಕ ಸೌಲಭ್ಯಗಳ ವಿಸ್ತರಣೆಗೆ ಭಾರಿ ಮೊತ್ತದ ಹಣಕಾಸು ಸಂಪನ್ಮೂಲ ಕ್ರೋಢೀಕರಣಕ್ಕೆ ಮುಂದಾಗಿದೆ. ಕೇಂದ್ರ ಸರ್ಕಾರದ ನಗರಾಭಿವೃದ್ಧಿ ಯೋಜನೆಗಳ ದೂರದರ್ಶಿತ್ವದ ಲಾಭವನ್ನು ಪಡೆದುಕೊಳ್ಳಲು ಮುಂದಾಗಿರುವ ಪಾಲಿಕೆಗಳು ಮುನ್ಸಿಪಲ್ ಬಾಂಡ್‌ಗಳ ಮೂಲಕ ಒಟ್ಟು 1,000 ಕೋಟಿ ರೂ. ಬೃಹತ್ ಸಾಲ ಪಡೆಯಲು ಸಕಲ ಸಿದ್ಧತೆಗಳನ್ನು ನಡೆಸಿವೆ.

ಮುನ್ಸಿಪಲ್ ಬಾಂಡ್‌ಗಳ ಮೂಲಕ ಸಂಗ್ರಹವಾಗುವ ನಿಧಿಯನ್ನು ನಗರದ ಸರ್ವತೋಮುಖ ಅಭಿವೃದ್ಧಿಗೆ ವಿನಿಯೋಗಿಸಲಾಗುತ್ತದೆ. ಸುಸಜ್ಜಿತ ರಸ್ತೆಗಳ ನಿರ್ಮಾಣ ಮತ್ತು ಚರಂಡಿ ವ್ಯವಸ್ಥೆಯ ಉನ್ನತೀಕರಣ, ಸಾರ್ವಜನಿಕರಿಗೆ ನಿರಂತರ ಹಾಗೂ ಶುದ್ಧ ಕುಡಿಯುವ ನೀರಿನ ಪೂರೈಕೆ, ನಗರದ ಜೀವನಾಡಿಯಾಗಿರುವ ಕೆರೆಗಳ ಅಭಿವೃದ್ಧಿ ಮತ್ತು ಸಾರ್ವಜನಿಕ ಮೂಲಸೌಕರ್ಯಗಳ ವೃದ್ಧಿಗೆ ಬಳಸಲು ಐದು ಪಾಲಿಕೆಗಳು ಚಿಂತನೆ ನಡೆಸಿವೆ.

ಕೇವಲ ಶೇ. 4ರ ಬಡ್ಡಿ ದರ ಈ ಬಾಂಡ್‌ಗಳ ಮೂಲಕ ಲಭ್ಯವಾಗುವ ಸಾಲದ ಮೇಲಿನ ವಾರ್ಷಿಕ ಬಡ್ಡಿದರವು ಆಡಳಿತಾತ್ಮಕವಾಗಿ ಅತ್ಯಂತ ಲಾಭದಾಯಕವಾಗಿದ್ದು, ಕೇಂದ್ರ ಸರ್ಕಾರದ ಪ್ರೋತ್ಸಾಹಕ ನಿಯಮಾವಳಿಗಳ ಪ್ರಕಾರ, ಪ್ರತಿ 100 ಕೋಟಿ ರೂ. ಸಾಲ ಕ್ರೋಢೀಕರಣಕ್ಕೆ ಶೇ. 15 ರಷ್ಟು ಪ್ರೋತ್ಸಾಹ ಧನ (ಸಬ್ಸಿಡಿ) ಸಿಗಲಿದೆ. 10 ವರ್ಷಗಳ ಅವಧಿಯೊಳಗೆ ಈ ಸಾಲವನ್ನು ನಿಯಮಬದ್ಧವಾಗಿ ಮರುಪಾವತಿಸಿದರೆ, ಪಾಲಿಕೆಗಳಿಗೆ ಹೆಚ್ಚುವರಿ ಹಣಕಾಸು ಸೌಲಭ್ಯ ಹಾಗೂ ಶೇ. 15 ರಷ್ಟು ಸಬ್ಸಿಡಿಯ ಪೂರ್ಣ ಲಾಭ ಸಿಗಲಿದೆ ಎಂದು ಹಿರಿಯ ಅಧಿಕಾರಿಗಳು ತಿಳಿಸಿದ್ದಾರೆ. ಮುಂಬರುವ ನಗರಪಾಲಿಕೆ ಚುನಾವಣೆಗಳ ಹಿನ್ನೆಲೆಯಲ್ಲಿ ನನೆಗುದಿಗೆ ಬಿದ್ದಿರುವ ಹಾಗೂ ಹೊಸ ಅಭಿವೃದ್ಧಿ ಕಾರ್ಯಗಳಿಗೆ ತ್ವರಿತ ಗತಿ ನೀಡಲು ಈ ಆರ್ಥಿಕ ಮಾದರಿಯು ಸಹಕಾರಿಯಾಗಲಿದೆ.

ರಾಮ ಬಾಣ



ಆನ್‌ಲೈನ್ ಗೇಮ್ ಹುಚ್ಚಾಟ ತಂದೆ, ಅಕ್ಕನ ಹತ್ಯೆಗೈದ ಬಾಲಕ

• **ಕೊಪ್ಪಳ:** ಗಂಗಾವತಿ ತಾಲೂಕಿನ ಹೊಸ ಅಯೋಧ್ಯ ಗ್ರಾಮದ ಬಾಲಕನೊಬ್ಬ ತನ್ನ ಪೋಷಕರು ಹಾಗೂ ಸಹೋದರಿಗೆ ಚಾಕು ಇರಿದಿದ್ದು, ತಂದೆ ವೆಂಕಟನಾಯ್ಡು (45) ಹಾಗೂ ಅಕ್ಕ ಪ್ರಗತಿ (19) ಮೃತಪಟ್ಟಿದ್ದಾರೆ. ತಾಯಿ ಸೌಜನ್ಯ ಸ್ಥಿತಿ ಗಂಭೀರವಾಗಿದ್ದು, ಆ ಬಾಲಕ ಕೂಡ ಕೊನೆಯಲ್ಲಿ ತನ್ನ ಕುತ್ತಿಗೆಗೆ ಚಾಕುವಿನಿಂದ ಇರಿದುಕೊಂಡಿದ್ದಾನೆ. ಇವರಿಬ್ಬರಿಗೂ ಬಳ್ಳಾರಿಯಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ. ಪಿಯುಸಿ ದ್ವಿತೀಯ ವರ್ಷದ ವಿದ್ಯಾರ್ಥಿಯಾದ ಬಾಲಕ ಮೊಬೈಲ್ ದಾಸನಾಗಿದ್ದ. ಆನ್‌ಲೈನ್ ಗೇಮ್ ಆಡುವುದನ್ನು ವ್ಯಸನ ಮಾಡಿಕೊಂಡಿದ್ದ ಮಗನಿಗೆ ಬುದ್ಧಿವಾದ ಹೇಳಿದ್ದಕ್ಕೆ ಕೃತ್ಯ ಎಸಗಿದ್ದಾನೆ ಎನ್ನುವುದು ಪ್ರಾಥಮಿಕ ಮಾಹಿತಿಯಿಂದ ಗೊತ್ತಾಗಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಆಗಿದ್ದೇನು: ಗಂಗಾವತಿ ಗ್ರಾಮೀಣ ಪೊಲೀಸ್ ಠಾಣೆ ವ್ಯಾಪ್ತಿಯ ಹೊಸ ಅಯೋಧ್ಯೆ ಗ್ರಾಮದ ವೆಂಕಟನಾಯ್ಡು ಖಾಸಗಿ ಶಾಲೆಯೊಂದರಲ್ಲಿ ಅಡುಗೆ ಭಟ್ಟನಾಗಿ ಕೆಲಸ ಮಾಡುತ್ತಿದ್ದು, ಅವರು ಪತ್ನಿ, ಇಬ್ಬರು ಮಕ್ಕಳು ಮತ್ತು ಅವರ ತಂದೆ ತಾಯಿ ಶನಿವಾರ ರಾತ್ರಿ ಒಟ್ಟಿಗೆ ಊಟ ಮಾಡಿದ್ದಾರೆ. ಬಳಿಕ ವೆಂಕಟನಾಯ್ಡು ಕುಟುಂಬದ ನಾಲ್ವರು ಒಂದು ಕೊಠಡಿಗೆ ಹಾಗೂ ಅವರ ಪೋಷಕರು ಒಂದು ಕೊಠಡಿಯಲ್ಲಿ ಮಲಗಿದ್ದಾರೆ. ರಾತ್ರಿ 10.30ರ ಸುಮಾರಿಗೆ ವೆಂಕಟನಾಯ್ಡು ಮಲಗಿದ್ದ ಕೊಠಡಿಯಲ್ಲಿ ಗಲಾಟೆಯಾಗುತ್ತಿದ್ದ ಸದ್ದು ಕೇಳಿದ್ದು ಬಾಗಿಲು ತೆರೆಯಿರಿ ಎಂದು ಅರಚಿದ್ದಾರೆ.

> ಬಾಲಕ ಚಾಕು ಇರಿದಿದ್ದಾನೆ ಎಂದು ದೂರು ನೀಡಿದ್ದರಿಂದ ದಾಖಲಿಸಿಕೊಂಡಿದ್ದೇವೆ. ಆನ್‌ಲೈನ್ ಮೊಬೈಲ್ ಗೀಳು ಸೇರಿ ಎಲ್ಲ ಆಯಾಮಗಳಿಂದಲೂ ತನಿಖೆ ನಡೆಸಲಾಗುತ್ತಿದೆ.
> ■ ಡಾ.ರಾಮ್ ಎಲ್. ಅರಸಿದ್ಧಿ, ಎಸ್ಪಿ

ಕಿಡಿ ನುಡಿ

• ವಾಸುದೇವರಾವ್ ಕಕ್ಕೆನೇಜಿ

◈ ಜನಾಕ್ರೋಶ ಹತ್ತಿಕ್ಕಲು ಮೋದಿ ತುರ್ತು ಪರಿಸ್ಥಿತಿ ಹೇರಬಹುದು - **ರಾಹುಲ್ ಗಾಂಧಿ**

-ನೀವು ಹೇಳುತ್ತಿರೋದು ಇಂದಿರಾ ಗಾಂಧಿ ಮೋಡೆಲ್ ಕಾಲದ್ದು, ಈಗಿನದ್ದು ನರೇಂದ್ರ ಮೋದಿ ಮೋಡೆಲ್. ಹಾಗಾಗಿ ಹಾಗಾಗಲು ಸಾಧ್ಯವಿಲ್ಲ!

ದಿನ ಭವಿಷ್ಯ

ಮೇಷ
ಹೊರಗಿನ ವ್ಯವಹಾರದಲ್ಲಿ ಹೆಚ್ಚು ವ್ಯಸ್ತ. ಆರ್ಥಿಕ ಸ್ಥಿರತೆ. ದಂಪತಿಗಳಿಗೆ ಶುಭ ಬೆಳವಣಿಗೆ. ಉಪಯುಕ್ತ ವಸ್ತು ಖರೀದಿ ಸಂಭವ.

ವೃಷಭ
ಹೊಟ್ಟೆ ಕೆಡುವ ಸಾಧ್ಯತೆ. ಆಹಾರದಲ್ಲಿ ಎಚ್ಚರ ವಹಿಸಿ. ಸಂಗಾತಿ ಜತೆ ಭಿನ್ನಾಭಿಪ್ರಾಯ. ದೇಹಾಭ್ಯಾಸ ಅತಿಯಾಗಿ ಮಾಡಬೇಡಿ.

ಮಿಥುನ
ನಿಲ್ಲಿಸಿದ್ದ ಯೋಜನೆ ಅಥವಾ ಕಾರ್ಯಕ್ಕೆ ಮರುಚಾಲನೆ ನೀಡಿ. ಅನ್ಯರ ವಿಷಯದಲ್ಲಿ ಹಸ್ತಕ್ಷೇಪ ಮಾಡದಿರಿ. ಕೌಟುಂಬಿಕ ಸಾಮರಸ್ಯ.

ಕಟಕ
ಇತರರ ಜತೆ ಮಾತನಾಡುವಾಗ ತಾಳ್ಮೆ ವಹಿಸಿ. ಸಣ್ಣ ವಿಷಯಕ್ಕೆ ರೇಗದಿರಿ. ಬಂಧುಗಳ ಜತೆ ಪ್ರವಾಸ ಹೋಗುವ ಅವಕಾಶ ಸಿಗಲಿದೆ.

ಸಿಂಹ
ಮನಸ್ಥಿತಿ ಏರುಪೇರು ಮಾಡುವ ಬೆಳವಣಿಗೆ. ಎಲ್ಲವನ್ನು ಸರಿತೂಗಿಸಿಕೊಂಡು ಹೋಗಿ. ಅನ್ಯರ ಟೀಕೆಗೆ ಬೆಲೆ ಕೊಡಬೇಡಿ.

ಕನ್ಯಾ
ಸಂಗಾತಿ ಜತೆ ಪ್ರಾಮಾಣಿಕತೆಯಿಂದ ವರ್ತಿಸಿ. ಮುಚ್ಚುಮರೆ ಬೇಡ. ವೃತ್ತಿಯಲ್ಲಿ ತೊಡಕು. ಗಮನವಿಟ್ಟು ಕಾರ್ಯ ನಿರ್ವಹಿಸಿ.

ತುಲಾ
ವೃತ್ತಿಯಲ್ಲಿ ಹೊಸ ಸವಾಲು. ಧೃತಿಗೆಡಬೇಡಿ. ಆರ್ಥಿಕ ನಷ್ಟವಾದೀತು. ಖರ್ಚು ಕಡಿಮೆ ಮಾಡಲು ಗಮನ ಕೊಡಿ. ಬಂಧು ಜತೆ ವಿರಸವಾದೀತು.

ವೃಶ್ಚಿಕ
ಆರ್ಥಿಕ ಸ್ಥಿರತೆ, ವ್ಯವಹಾರ ಹಿಗ್ಗಿಸಲು ಅವಕಾಶ. ಕೌಟುಂಬಿಕ ವಿಚಾರದಲ್ಲಿ ತುಸು ಚಿಂತೆ. ಆರೋಗ್ಯದ ಬಗ್ಗೆ ಹೆಚ್ಚಿನ ಗಮನ ಅಗತ್ಯ.

ಧನು
ಲಾಭವೂ ಇಲ್ಲದ ನಷ್ಟವೂ ಇಲ್ಲದ ದಿನ. ಹಣ ಗಳಿಕೆಯ ಸುಲಭ ದಾರಿಗೆ ಹೋಗದಿರಿ. ಆಪ್ತರೊಬ್ಬರು ಮನಸ್ಸಿಗೆ ನೆಮ್ಮದಿ, ಸಂತೋಷ ತರುವರು.

ಮಕರ
ಸಹೋದ್ಯೋಗಿ ಜತೆ ಎಚ್ಚರದಿಂದ ವ್ಯವಹರಿಸಿ. ಜಗಳ, ಭಿನ್ನಮತ ಉಂಟಾದೀತು. ದೀರ್ಘಾವಧಿ ಯೋಜನೆಗೆ ಹಣ ಹೂಡಬೇಡಿ.

ಕುಂಭ
ಸ್ವಂತ ವ್ಯವಹಾರ ಆರಂಭಿಸಲು ಕಾಲ ಸೂಕ್ತವಾಗಿದೆ. ಜಡತ್ವ ಬಿಟ್ಟು ಕೆಲಸ ಮಾಡಿ. ಆರ್ಥಿಕ ಒತ್ತಡ ನಿವಾರಣೆ, ಧನಾಗಮ.

ಮೀನ
ಮನೆಯವರ ಜತೆ ಅನುನಯದಿಂದ ವರ್ತಿಸಿ. ಕೋಪತಾಪ ಬೇಡ. ಮಕ್ಕಳು ಹಠಮಾರಿ ಧೋರಣೆ ತೋರುವರು. ಸಂಯಮವಿರಲಿ.

ರಾಹುಕಾಲ: 7.30-9.00
ಗುಳಿಕಕಾಲ: 1.30-3.00
ಅದೃಷ್ಟ ಸಂಖ್ಯೆ: 3,9,4,7

ಠಾಣೆಗಳಲ್ಲಿ ಆ್ಯಂಟಿ ರೌಡಿ ಸ್ಕ್ವಾಡ್

• **ಬೆಂಗಳೂರು:** ರಾಜ್ಯದಲ್ಲಿ ರೌಡಿಸಂ ಮತ್ತು ಅಕ್ರಮ ಚಟುವಟಿಕೆಗಳನ್ನು ನಿಯಂತ್ರಿಸಲು ಕರ್ನಾಟಕ ಪೊಲೀಸ್ ಇಲಾಖೆ ಮಹತ್ವದ ಕ್ರಮ ಕೈಗೊಂಡಿದ್ದು, ರಾಜ್ಯದ ಎಲ್ಲಾ ಪೊಲೀಸ್ ವಲಯಗಳು ಮತ್ತು ಠಾಣೆಗಳಲ್ಲಿ ವಿಶೇಷ ಆ್ಯಂಟಿ ರೌಡಿ ಸ್ಕ್ವಾಡ್‌ಗಳನ್ನು ರಚಿಸಲು ಆದೇಶಿಸಿದೆ. ರಾಜ್ಯ ಪೊಲೀಸ್ ಮಹಾನಿರ್ದೇಶಕ ಡಾ. ಎಂ.ಎ. ಸಲೀಂ ಅವರು ಈ ಸಂಬಂಧ ಸುತ್ತೋಲೆ ಹೊರಡಿಸಿದ್ದು, ರೌಡಿಸಂ ವಿರುದ್ಧ ಶೂನ್ಯ ಸಹಿಷ್ಣುತೆ ನೀತಿಯನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸುವಂತೆ ಸೂಚಿಸಿದ್ದಾರೆ. ರೌಡಿ ಅಂಶಗಳು ಸಮಾಜದಲ್ಲಿ ಭಯದ ವಾತಾವರಣ ಸೃಷ್ಟಿಸುವುದರ ಜತೆಗೆ ಸಾರ್ವಜನಿಕ ಶಾಂತಿ ಮತ್ತು ಸಾಮಾಜಿಕ ಸೌಹಾರ್ದತೆಗೆ ಧಕ್ಕೆ ಉಂಟುಮಾಡುತ್ತಿವೆ. ಈ ಹಿನ್ನೆಲೆಯಲ್ಲಿ ಮುಖ್ಯಮಂತ್ರಿಯವರ ನಿರ್ದೇಶನದಂತೆ ರಾಜ್ಯಾದ್ಯಂತ ರೌಡಿಸಂ ನಿರ್ಮೂಲನೆಗೆ ಕಠಿಣ ಕ್ರಮ ಕೈಗೊಳ್ಳಲು ನಿರ್ಧರಿಸಿದೆ. ಪ್ರತಿ ಪೊಲೀಸ್ ವಲಯದಲ್ಲಿ ಸರ್ಕಲ್ ಇನ್ಸ್‌ಪೆಕ್ಟರ್‌ಗಳ ಮೇಲ್ವಿಚಾರಣೆಯಲ್ಲಿ ಹಾಗೂ ಠಾಣೆ ಮಟ್ಟದಲ್ಲಿ ಪೊಲೀಸ್ ಇನ್ಸ್‌ಪೆಕ್ಟರ್‌ಗಳ ನೇತೃತ್ವದಲ್ಲಿ ಪ್ರತ್ಯೇಕ ಆ್ಯಂಟಿ ರೌಡಿ ಸ್ಕ್ವಾಡ್‌ಗಳನ್ನು ರಚಿಸಲಾಗುವುದು. ಸ್ಥಳೀಯ ಅಗತ್ಯತೆ ಮತ್ತು ಅಪರಾಧ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ಸ್ಕ್ವಾಡ್‌ನ ಸಂಯೋಜನೆಯನ್ನು ಉಪ ವಿಭಾಗಾಧಿಕಾರಿ ಅಥವಾ ಎಸಿಪಿಗಳು ನಿರ್ಧರಿಸಲಿದ್ದಾರೆ. ಆ್ಯಂಟಿ ರೌಡಿ ಸ್ಕ್ವಾಡ್‌ಗಳು ರೌಡಿ ಶೀಟರ್‌ಗಳ ಚಟುವಟಿಕೆಗಳ ಮೇಲೆ ನಿಗಾವಹಿಸುವುದು, ಹೊಸ ರೌಡಿ ಅಂಶಗಳು ಮತ್ತು ಗ್ಯಾಂಗ್‌ಗಳನ್ನು ಗುರುತಿಸುವುದು, ಅಪರಾಧ ಗುಂಪುಗಳ ಬಗ್ಗೆ ಮಾಹಿತಿ ಸಂಗ್ರಹಿಸುವುದು ಹಾಗೂ ಅಗತ್ಯ ಕಾನೂನು ಕ್ರಮಗಳನ್ನು ಕೈಗೊಳ್ಳುವ ಜವಾಬ್ದಾರಿ ವಹಿಸಲಿವೆ.

ಬೆಂಗಳೂರು ನಗರಾಭಿವೃದ್ಧಿ ಸಚಿವ ಕೃಷ್ಣ ಬೈರೇಗೌಡ ಬಣ್ಣನೆ

ಸಾಧನೆ ಮುಂದೆ ಸಂಪತ್ತು ಗೌಣ

• **ಬೆಂಗಳೂರು:** ಹಣ, ಆಸ್ತಿ, ಸಂಪತ್ತುಗಳಿಕೆ ಖುಷಿ ಕೊಡುತ್ತದೆ ಎಂಬುದು ನಿಜ, ಆದರೆ ಸಾಧನೆಗಳ ಮುಂದೆ ಈ ಎಲ್ಲ ಸಂಪತ್ತುಗಳು ಗೌಣ ಎಂದು ಬೆಂಗಳೂರು ನಗರಾಭಿವೃದ್ಧಿ ಸಚಿವ ಕೃಷ್ಣ ಬೈರೇಗೌಡ ಬಣ್ಣಿಸಿದರು.

ವಿಶ್ವದ ಅತಿ ಎತ್ತರದ ಭೂಶಿಖರ ಮೌಂಟ್ ಎವರೆಸ್ಟ್ (8,848.86 ಮೀಟರ್) ಆರೋಹಣ ಮಾಡಿದ ಕರ್ನಾಟಕ ಮೌಂಟೇನೀರಿಂಗ್ ಅಸೋಸಿಯೇಷನ್ ಸದಸ್ಯರಾದ ಸಂತೋಷ್ ದೇವರಾಜಪ್ಪ ಮತ್ತು ಡಾ. ಚಿನ್ಮಯಿ ತ್ರಿಶೂಲಮೂರ್ತಿ ಅವರನ್ನು ಸಹಕಾರ ನಗರದ ವಿವಿಧ ಸಂಘ - ಸಂಸ್ಥೆಗಳ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಸನ್ಮಾನಿಸಿ ಮಾತನಾಡಿದರು. ಸಂಪತ್ತು ಗಳಿಕೆಯಿಂದ ಚೆನ್ನಾಗಿರಬಹುದು. ಆದರೆ ಅದರ ಹೊರತಾಗಿಯೂ ಜೀವನ ಇದೆ. ಸಾಧನೆಗಳ ಮೂಲಕ ಬದುಕನ್ನು ಸಾರ್ಥಕಪಡಿಸಿಕೊಂಡು ಮತ್ತೊಬ್ಬರಿಗೆ ಪ್ರೇರಣೆಯಾಗುವಂತೆ ಜೀವಿಸಬೇಕು. ಅಂತಹ ಬದುಕು ನೀಡುವ ಖುಷಿಗೆ ಮಿತಿ ಇರುವುದಿಲ್ಲ ಎಂದರು.

ಸಂತೋಷ ದೇವರಾಜಪ್ಪ ಕನ್ನಡಿಗರಷ್ಟೇ ಅಲ್ಲ, ಅವರು ನನ್ನ ಕ್ಷೇತ್ರದವರು ಎಂಬುದು ನನಗೆ ಇನ್ನೂ ಹೆಮ್ಮೆ. ಹೀಗಾಗಿ ನಾನೇ ಅವರನ್ನು ಗೌರವಿಸಬೇಕು ಎಂಬ ಆಶಯ ವ್ಯಕ್ತಪಡಿಸಿದೆ. ಆದರೆ ಸಹಕಾರ ನಗರದ ಸಂಘ ಸಂಸ್ಥೆಗಳು ಒಟ್ಟಾಗಿ ಕಾರ್ಯಕ್ರಮ ಆಯೋಜನೆ ಮಾಡಿರುವುದು ತಿಳಿದ ನಂತರ ಅವರೊಟ್ಟಿಗೆ ನಾನೂ ಭಾಗಿಯಾದೆ ಎಂದು ಸಚಿವರು ಹೇಳಿದರು.

ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ವಿದ್ಯಾರ್ಥಿಗಳ ಪ್ರಶ್ನೆಗಳಿಗೆ ಉತ್ತರ ನೀಡಿದ ಸಂತೋಷ್ ದೇವರಾಜಪ್ಪ ಮತ್ತು ಡಾ. ಚಿನ್ಮಯಿ ತ್ರಿಶೂಲಮೂರ್ತಿ ಅವರು ತಮ್ಮ ಅನುಭವಗಳನ್ನು ಹಂಚಿಕೊಂಡರು. ಸಹಕಾರ ನಗರದ ವೆಲ್ಫೇರ್ ಅಸೋಸಿಯೇಷನ್ ಅಧ್ಯಕ್ಷ ದೇವರಾಜಪ್ಪ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಕಾರ್ಯದರ್ಶಿ ತುಳಸಿ ಮದ್ದಿನೇನಿ, ಕರ್ನಾಟಕ ಮೌಂಟೇನೀರಿಂಗ್ ಅಸೋಸಿಯೇಷನ್ ಅಧ್ಯಕ್ಷ ಎಸ್.ಕೆ. ಮೆಹತಾ ವೇದಿಕೆಯಲ್ಲಿದ್ದರು. ವಾಣಿಜ್ಯ ತೆರಿಗೆಗಳ ಅಪರ ಆಯುಕ್ತ ಕೆ.ಸಿ. ವಿರೂಪಾಕ್ಷ ಅವರು ಸಂತೋಷ್ ದೇವರಾಜಪ್ಪ ಮತ್ತು ಡಾ. ಚಿನ್ಮಯಿ ಅವರ ಸಾಧನೆಯ ಹಾದಿಯನ್ನು ವಿವರಿಸಿದರು.



ಆಮ್ಲಜನಕ ಖಾಲಿಯಾಯ್ತು...

ಮೌಂಟ್ ಎವರೆಸ್ಟ್ ಆರೋಹಣ ಮಾಡಬೇಕು ಎಂಬ ಮಹದಾಸೆಯನ್ನೇನೋ ಈಡೇರಿಸಿಕೊಂಡೆವು. ಶಿಖರವನ್ನು ಇಳಿಯಬೇಕು ಎನ್ನುವ ಸಮಯದಲ್ಲಿ ನನ್ನ ಆಮ್ಲಜನಕ ಸಿಲಿಂಡರ್ ಖಾಲಿಯಾಯ್ತು. ಆಗ ನನಗೆ ನಿಜಕ್ಕೂ ಭಯವಾಯ್ತು. ದೇವರೇ ಎಂದು ಪ್ರಾರ್ಥಿಸಿದೆ. ಮೌಂಟ್ ಎವರೆಸ್ಟ್ ಶಿಖರ ಆರೋಹಣದ ಅನುಭವವನ್ನು ಹಂಚಿಕೊಳ್ಳುವ ವೇಳೆ ಈ ಸಂದರ್ಭವನ್ನು ನೆನೆದ ಸಂತೋಷ್ ದೇವರಾಜಪ್ಪ ಅವರು ಕೆಲ ಕ್ಷಣ ಭಾವುಕರಾದರು. ನನ್ನ ಜೊತೆಗಿದ್ದ ಶೆರ್ಪಾ ಅವರಿಗೆ ಆಮ್ಲಜನಕ ಖಾಲಿಯಾದ ವಿಷಯ ತಿಳಿಸಿದೆ. ಅವರು ಈಗ ಏನೂ ಮಾಡಲು ಸಾಧ್ಯವಿಲ್ಲ. ಮತ್ತೊಂದು ಸಿಲಿಂಡರ್ ಇರುವ ಸ್ಥಳಕ್ಕೆ ಇದೇ ಸ್ಥಿತಿಯಲ್ಲಿ ಹೋಗುವುದು ಅನಿವಾರ್ಯ ಎಂದು ಪರಿಸ್ಥಿತಿ ವಿವರಿಸಿದರು. ಆಮ್ಲಜನಕದ ಸಪೋರ್ಟ್ ಇಲ್ಲದೆ ಹೇಗೋ ಮತ್ತೊಂದು ಸಿಲಿಂಡರ್ ಇರುವ ಸ್ಥಳ ತಲುಪಿದ್ದಾಯ್ತು. ತಕ್ಷಣ ಸಿಲಿಂಡರ್ ಹಾಕಿಕೊಂಡೆ. ಅಷ್ಟರಲ್ಲಿ ನನ್ನ ದೇಹದಲ್ಲಿ ಆಮ್ಲಜನಕ ಕೊರತೆಯಿಂದ ಬದಲಾವಣೆಗಳು ಕಾಣಿಸತೊಡಗಿದ್ದವು. ಸಿಲಿಂಡರ್ ಹಾಕಿಕೊಳ್ಳುತ್ತಿದ್ದಂತೆ ಹೋದ ಜೀವ ಬಂದಂತೆ ಆಯಿತು ಎಂದು ಸ್ಮರಿಸಿದರು.

> ಕರ್ನಾಟಕ ಮೌಂಟೇನೀರಿಂಗ್ ಅಸೋಸಿಯೇಷನ್ನ 60ನೇ ವಾರ್ಷಿಕೋತ್ಸವದ ಸಂದರ್ಭದಲ್ಲಿ ನನ್ನನ್ನು ಮತ್ತು ಸಂತೋಷ್ ಅವರನ್ನು ಮೌಂಟ್ ಎವರೆಸ್ಟ್ ಆರೋಹಣಕ್ಕೆ ಆಯ್ಕೆ ಮಾಡಿದಾಗ ಇದು ಸಾಧ್ಯವೇ ಎಂಬ ಪ್ರಶ್ನೆ ಮೂಡಿತ್ತು.
> ■ ಡಾ. ಚಿನ್ಮಯಿ ತ್ರಿಶೂಲಮೂರ್ತಿ, ಮೌಂಟ್ ಎವರೆಸ್ಟ್ ಏರಿದವರು

ಹಗರಣದ ರೋಚಕ ರಹಸ್ಯ ಬಿಚ್ಚಿಟ್ಟ ಸಿಐಡಿ

• **ಬೆಳಗಾವಿ:** ಇಡೀ ರಾಜ್ಯವನ್ನೇ ಬೆಚ್ಚಿ ಬೀಳಿಸಿದ್ದ ಬರೋಬ್ಬರಿ 4,500 ಕೋಟಿ ರೂಪಾಯಿ ವಂಚನೆ ಪ್ರಕರಣಕ್ಕೆ ಸಂಬಂಧಿಸಿದಂತೆ ಬೆಳಗಾವಿಯ 'ಶಿವಂ ಅಸೋಸಿಯೇಟ್ಸ್' ಸಂಸ್ಥೆಯ ಮಾಲೀಕ ಶಿವಾನಂದ ನೀಲಣ್ಣನವರ್‌ನನ್ನು ಸಿಐಡಿ ಪೊಲೀಸರು ಬಂಧಿಸಿದ್ದು, ತನಿಖೆಯ ವೇಳೆ ವಂಚನೆ ನಡೆದಿರುವುದು ಸಾಕ್ಷ್ಯಸಮೇತ ಸಾಬೀತಾಗಿದೆ.



ಈ ಕುರಿತು ಬೆಳಗಾವಿಯಲ್ಲಿ ಮಹತ್ವದ ಜಂಟಿ ಪತ್ರಿಕಾಗೋಷ್ಠಿ ನಡೆಸಿದ ಸಿಐಡಿ ಡಿಐಜಿಪಿ ಡಾ. ಭೀಮಾಶಂಕರ್ ಗುಳೇದ್ ಅವರು ಪ್ರಕರಣದ ಸ್ಫೋಟಕ ಮಾಹಿತಿಗಳನ್ನು ಮಾಧ್ಯಮಗಳ ಮುಂದೆ ಬಿಚ್ಚಿಟ್ಟಿದ್ದಾರೆ. ಶಿವಂ ಅಸೋಸಿಯೇಟ್ಸ್ ಸಂಸ್ಥೆಯ ಮೇಲೆ ಜಿಲ್ಲಾಡಳಿತ ಮತ್ತು ಪೊಲೀಸ್ ಇಲಾಖೆಯಿಂದ ಜಂಟಿ ದಾಳಿ ನಡೆದು, ಎಫ್‌ಐಆರ್ ದಾಖಲಾದ ಬಳಿಕವೂ ಸಾರ್ವಜನಿಕರು ಶಿವಂ ಅಸೋಸಿಯೇಟ್ಸ್‌ಗೆ ಮತ್ತೆ 5 ಕೋಟಿ ರೂಪಾಯಿ ಹೂಡಿಕೆ ಮಾಡಿದ್ದಾರೆ. ಹಾಗಾಗಿ, ಇನ್ಮುಂದೆ ಯಾದರೂ ಸಾರ್ವಜನಿಕರು ಎಚ್ಚೆತ್ತುಕೊಳ್ಳಲಿ ಮತ್ತು ಇಂತಹ ವಂಚನೆಗೆ ಬಲಿ ಬೀಳದಿರಲಿ ಎಂಬ ಆಗ್ರಹಿಸಿದ್ದಾರೆ.

ಹೊಸಬರ ಹಣ ಹಳಬರಿಗೆ ಬಡ್ಡಿ: ಪೊಂಜಿ ಸ್ಕೀಮ್'ರಹಸ್ಯ ಮುಖವಾಡ ಕಳಚಿದ ಸಿಐಡಿ ಸಿಐಡಿ ಡಿಐಜಿಪಿ ಮಾಹಿತಿ ನೀಡಿರುವ ಪ್ರಕಾರ, ಶಿವಾನಂದ ನೀಲಣ್ಣವರ್ ಈವರೆಗೆ ಸುಮಾರು 40,700 ಹೂಡಿಕೆದಾರರಿಂದ ಒಟ್ಟು 2,400 ಕೋಟಿ ರೂಪಾಯಿ ಸಂಗ್ರಹಿಸಿದ್ದಾನೆ. ಈ ಪೈಕಿ ಬಹುಪಾಲು ಹಣವನ್ನು ಸಾರ್ವಜನಿಕರಿಗೆ ಹಿಂದಿರುಗಿಸಿದ್ದಾನೆ. ಹೊಸದಾಗಿ ಬರುತ್ತಿದ್ದ ಹೂಡಿಕೆದಾರರ ಹಣವನ್ನು ಹಳಬರಿಗೆ ಬಡ್ಡಿಯ ರೂಪದಲ್ಲಿ ಹಂಚಲಾಗುತ್ತಿತ್ತು. ಆದರೆ, ಹೊಸದಾಗಿ ಸಂಗ್ರಹವಾಗುತ್ತಿದ್ದ ಹಣಕ್ಕಿಂತ ಹಳಬರಿಗೆ ಕೊಡಬೇಕಾದ ಬಡ್ಡಿಯ ಮೊತ್ತವೇ ಹೆಚ್ಚಾದಾಗ ಇಡೀ ವ್ಯವಸ್ಥೆ ಕುಸಿದು ಬಿದ್ದು, ವಂಚನೆಯ ರಹಸ್ಯ ಬಯಲಾಗಿದೆ.

ಷೇರು ಮಾರುಕಟ್ಟೆಯಲ್ಲಿ ನಷ್ಟ, ಸ್ವಂತಕ್ಕೆ ಬಳಕೆ: ಸಂಗ್ರಹಿಸಿದ ಹಣದಲ್ಲಿ 540 ಕೋಟಿ ರೂಪಾಯಿಯನ್ನು ಸ್ಟಾಕ್ ಮಾರ್ಕೆಟ್‌ನಲ್ಲಿ ಹೂಡಿಕೆ ಮಾಡಲಾಗಿದ್ದು, ಅದರಲ್ಲಿ 170 ಕೋಟಿ ರೂಪಾಯಿ ನಷ್ಟ ಮಾಡಿಕೊಳ್ಳಲಾಗಿದೆ. ಸದ್ಯದ ತನಿಖೆಯಲ್ಲಿ 660 ಕೋಟಿ ರೂ. ಕೊರತೆ ಕಂಡು ಬಂದಿದ್ದು, ಇದರಲ್ಲಿ 330 ಕೋಟಿ ರೂ. ರಿಕವರಿ ಮಾಡಬಹುದು ಎಂದು ಅಂದಾಜಿಸಲಾಗಿದೆ. ಮಾಲೀಕ ನೀಲಣ್ಣವರ್ ಕಂಪನಿಯಿಂದ ಕಾನೂನು ಬಾಹಿರವಾಗಿ 55 ಕೋಟಿ ರೂ. ಹಣವನ್ನು ತನ್ನ ವೈಯಕ್ತಿಕ ಖಾತೆಗೆ ವರ್ಗಾಯಿಸಿಕೊಂಡಿದ್ದಾನಲ್ಲದೆ, ಪ್ರಕರಣದಲ್ಲಿ ಮತ್ತೊಬ್ಬ ಪಾಲುದಾರನೂ ಶಾಮೀಲಾಗಿದ್ದಾನೆ. ಆರೋಪಿಯಿಂದ ಈಗಾಗಲೇ 5 ಐಷಾರಾಮಿ ಕಾರುಗಳನ್ನು ಜಪ್ತಿ ಮಾಡಲಾಗಿದೆ.

ಚಂದ್ರಗುಪ್ತ ಗುಪ್ತಚರ, ಪ್ರಣಬ್ ಮೊಹಾಂತಿಗೆ ಸಿಐಡಿ ಜವಾಬ್ದಾರಿ

ಪುಟ ೧➜ ಗ್ರೇಟರ್ ಬೆಂಗಳೂರು ಪ್ರಾಧಿಕಾರದ (ಕಂದಾಯ ವಿಭಾಗದಲ್ಲಿ) ವಿಶೇಷ ಆಯುಕ್ತರಾಗಿರುವ ಮೌನಿಷ್ ಮೌದ್ಗಿಲ್ ಅವರನ್ನು ಮುಖ್ಯಮಂತ್ರಿಗಳ ಪ್ರಧಾನ ಕಾರ್ಯದರ್ಶಿಯನ್ನಾಗಿ (ಕಾರ್ಯಕ್ರಮ ಹಾಗೂ ಯೋಜನೆ ಜಾರಿ) ಹೊಸದಾಗಿ ಸೃಷ್ಟಿಸಿದ ಹುದ್ದೆಯ ಜವಾಬ್ದಾರಿ ನೀಡಲಾಗಿದೆ. ನಗರಾಭಿವೃದ್ಧಿ ಇಲಾಖೆಯ ಕಾರ್ಯದರ್ಶಿಯಾಗಿದ್ದ ದೀಪಾ ಚೋಳನ್ ಅವರನ್ನು ಸಾರಿಗೆ ಇಲಾಖೆಯ ಕಾರ್ಯದರ್ಶಿಯನ್ನಾಗಿ ವರ್ಗಾವಣೆ ಮಾಡಲಾಗಿದೆ. ನಗರಾಭಿವೃದ್ಧಿ ಇಲಾಖೆ ಕಾರ್ಯದರ್ಶಿಯನ್ನಾಗಿ ಬಿ.ಬಿ.ಕಾವೇರಿಯವರನ್ನು ನೇಮಿಸಲಾಗಿದೆ. ಯೋಜನೆ ಹಾಗೂ ಸಾಂಖ್ಯಿಕ ಇಲಾಖೆ ಕಾರ್ಯದರ್ಶಿಯಾಗಿದ್ದ ಎಂ.ವಿ.ವೆಂಕಟೇಶ್ ಅವರನ್ನು ಸಹಕಾರ ಸಂಘಗಳ ಉಪನಿಬಂಧಕರ ಹುದ್ದೆಗೆ ವರ್ಗಾಯಿಸಲಾಗಿದೆ. ಆರ್. ಸೆಲ್ವಮಣಿ ಅವರನ್ನು ಸಾರಿಗೆ ಇಲಾಖೆ ಆಯುಕ್ತರನ್ನಾಗಿ ವರ್ಗಾವಣೆ ಮಾಡಿ ಸರ್ಕಾರ ಆದೇಶಿಸಿದೆ.

ವಿದೇಶಿಯರಿದ್ದರೆ ಮಾಹಿತಿ ನೀಡಿ

ಪುಟ ೧➜ ಕಳೆದ ವರ್ಷ ಬಿಹಾರದಲ್ಲಿ ನಡೆದ ಪರಿಷ್ಕರಣೆ ವೇಳೆ ಬಾಂಗ್ಲಾದೇಶ, ನೇಪಾಳ ಮತ್ತು ಮ್ಯಾನ್ಮಾರ್‌ನ ಹಲವು ನಾಗರಿಕರು ಮತದಾರರ ಪಟ್ಟಿಯಲ್ಲಿದ್ದಾರೆ ಎಂದು ಅಧಿಕಾರಿಗಳು ಹೇಳಿಕೊಂಡಿದ್ದರು. ಆದರೆ, ಆಯೋಗವು ಯಾವುದೇ ನಿಖರ ಸಂಖ್ಯೆ ಅಥವಾ ಪುರಾವೆಗಳನ್ನು ಹಂಚಿಕೊಂಡಿರಲಿಲ್ಲ. ಈ ಹಿನ್ನೆಲೆಯಲ್ಲಿ ವಿರೋಧ ಪಕ್ಷಗಳು ಚುನಾವಣಾ ಆಯೋಗದ ಈ ಕ್ರಮವನ್ನು ತೀವ್ರವಾಗಿ ಟೀಕಿಸಿದ್ದವು.

ಕೋಟಿಗಟ್ಟಲೆ ಮತದಾರರ ಹೆಸರು ಕಡಿತ: ಈ ಹಿಂದೆ ನಡೆದ 2ನೇ ಹಂತದ ಪರಿಷ್ಕರಣೆಯಲ್ಲಿ 12 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ ಒಟ್ಟು ಮತದಾರರ ಪಟ್ಟಿಯಿಂದ ಬರೋಬ್ಬರಿ ಶೇ.10.2 ರಷ್ಟು ಹೆಸರುಗಳನ್ನು ಕೈಬಿಡಲಾಗಿದೆ. 50.99 ಕೋಟಿ ಇದ್ದ ಮತದಾರರ ಸಂಖ್ಯೆ 45.81 ಕೋಟಿಗೆ ಕುಸಿದಿದ್ದು, ಒಟ್ಟಾರೆ 5.18 ಕೋಟಿ ಹೆಸರುಗಳನ್ನು ಪಟ್ಟಿಯಿಂದ ತೆಗೆದುಹಾಕಲಾಗಿದೆ. ಇದರಲ್ಲಿ 60 ಲಕ್ಷಕ್ಕೂ ಹೆಚ್ಚು ಮೃತ ಮತದಾರರು ಸೇರಿದ್ದಾರೆ.

ಈ ಹಿಂದೆ ಟಿಎಂಸಿ ವರಿಷ್ಠೆ ಮಮತಾ ಬ್ಯಾನರ್ಜಿ ಸೇರಿದಂತೆ ಹಲವು ನಾಯಕರು ಈ ಪ್ರಕ್ರಿಯೆಯನ್ನು ವಿರೋಧಿಸಿ ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದರು. ಹಿಮಾಚಲ ಪ್ರದೇಶ, ಜಮ್ಮು-ಕಾಶ್ಮೀರ ಮತ್ತು ಲಡಾಖ್‌ನಲ್ಲಿ ಹವಾಮಾನ ವೈಪರೀತ್ಯ ಕಾರಣದಿಂದಾಗಿ ನಂತರದ ದಿನಗಳಲ್ಲಿ ಈ ಪ್ರಕ್ರಿಯೆ ನಡೆಯಲಿದೆ ಎಂದು ಆಯೋಗ ತಿಳಿಸಿದೆ.

ಶಿಕ್ಷಕರ ಹುದ್ದೆ ಭರ್ತಿ

• **ಬೆಂಗಳೂರು:** ರಾಜ್ಯದ ಖಾಸಗಿ ಅನುದಾನಿತ ಪ್ರೌಢಶಾಲೆಗಳಲ್ಲಿನ ಶಿಕ್ಷಕರ ಖಾಲಿ ಹುದ್ದೆಗಳ ಭರ್ತಿ ಪ್ರಕ್ರಿಯೆಯನ್ನು ಸಂಪೂರ್ಣವಾಗಿ ಆನ್‌ಲೈನ್ ತಂತ್ರಾಂಶದ ಮೂಲಕವೇ ನಡೆಸಲು ಶಾಲಾ ಶಿಕ್ಷಣ ಇಲಾಖೆ ತೀರ್ಮಾನಿಸಿದೆ. 2016 ರಿಂದ 2020 ರವರೆಗೆ ನಿವೃತ್ತಿ ಮತ್ತು ಅಕಾಲಿಕ ಮರಣದಿಂದಾಗಿ ತೆರವಾಗಿದ್ದ ಪ್ರೌಢಶಾಲಾ ಶಿಕ್ಷಕರ ಹುದ್ದೆಗಳನ್ನು ಈ ಪ್ರಕ್ರಿಯೆಯ ಮೂಲಕ ಭರ್ತಿ ಮಾಡಲಾಗುತ್ತಿದೆ. ಕಳೆದ 11 ವರ್ಷಗಳಿಂದ ಶಿಕ್ಷಕರ ಕೊರತೆಯಿಂದ ತೊಂದರೆ ಅನುಭವಿಸುತ್ತಿದ್ದ ವಿದ್ಯಾರ್ಥಿಗಳಿಗೆ ಇದರಿಂದ ಅನುಕೂಲವಾಗಲಿದೆ.ಸಂಪೂರ್ಣ ನೇಮಕಾತಿ ಪ್ರಕ್ರಿಯೆಯನ್ನು ಅಭಿವೃದ್ಧಿಪಡಿಸಲಾಗಿದೆ.

ಮಾತುಕತೆ ಮೂಲಕ ಗಡಿ ವಿವಾದ ಇತ್ಯರ್ಥ

ಪುಟ ೧➜ **ಚೀನಾ-ಬ್ರಿಟನ್ ಮಧ್ಯಸ್ಥಿಕೆ ಕುರಿತ ಗೊಂದಲಕ್ಕೆ ಸ್ಪಷ್ಟನೆ:** ಇತ್ತೀಚೆಗೆ ನೇಪಾಳ ಪ್ರಧಾನಿ ಬಲೆನ್ ಶಾ ಅವರು ಗಡಿ ವಿವಾದ ಬಗೆಹರಿಸಲು ಚೀನಾ ಮತ್ತು ಬ್ರಿಟನ್ ಸಹಕಾರದ ಕುರಿತು ಹೇಳಿಕೆ ನೀಡಿದ್ದರಿಂದ ವಿವಾದ ಉಂಟಾಗಿತ್ತು. ಇದಕ್ಕೆ ಸ್ಪಷ್ಟನೆ ನೀಡಿದ ಖನಾಲ್, ಬ್ರಿಟನ್‌ನ ಪಾತ್ರ ಎಂದರೆ ಅಲ್ಲಿನ ಗ್ರಂಥಾಲಯಗಳು ಹಾಗೂ ವಸ್ತುಸಂಗ್ರಹಾಲಯಗಳಲ್ಲಿ ಇರುವ ಐತಿಹಾಸಿಕ ದಾಖಲೆಗಳನ್ನು ಪಡೆಯುವುದಷ್ಟೇ ಎಂದರು. ನಾವು ಮಧ್ಯಸ್ಥಿಕೆಯನ್ನು ಕೇಳಿಲ್ಲ, ವಿವಾದಗಳನ್ನು ರಾಜತಾಂತ್ರಿಕ ಮಾತುಕತೆಯ ಮೂಲಕವೇ ಬಗೆಹರಿಸಲು ಬಯಸುತ್ತೇವೆ. ಭಾವನಾತ್ಮಕ ರಾಷ್ಟ್ರವಾದದ ಬದಲಿಗೆ ದಾಖಲೆ ಹಾಗೂ ಸಾಕ್ಷ್ಯಾಧಾರಿತ ಚರ್ಚೆಗೆ ಒತ್ತು ನೀಡುತ್ತಿದ್ದೇವೆ ಎಂದು ಹೇಳಿದರು.

ಲಿಪುಲೇಖ್-ಕಾಲಾಪಾನಿ ವಿವಾದ ಮುಂದುವರಿಕೆ: ಲಿಪುಲೇಖ್, ಲಿಂಪಿಯಾಧುರಾ ಹಾಗೂ ಕಾಲಾಪಾನಿ ಪ್ರದೇಶಗಳ ಬಗ್ಗೆ ಭಾರತ ಮತ್ತು ನೇಪಾಳ ನಡುವೆ ಹಲವು ವರ್ಷಗಳಿಂದ ಗಡಿ ವಿವಾದವಿದೆ. ಈ ಪ್ರದೇಶಗಳು ಉತ್ತರಾಖಂಡದ ಭಾಗವೆಂದು ಭಾರತ ವಾದಿಸುತ್ತಿದ್ದು, ನೇಪಾಳ ತನ್ನ ಹಕ್ಕು ಪ್ರತಿಪಾದಿಸುತ್ತಿದೆ.

ಕೈಲಾಸ ಮಾನಸಸರೋವರ ಯಾತ್ರೆಗೆ ಲಿಪುಲೇಖ್ ಮಾರ್ಗ ಬಳಕೆಯ ಕುರಿತು ಭಾರತ ಮತ್ತು ಚೀನಾ ಮಾಡಿಕೊಂಡಿರುವ ಒಪ್ಪಂದಕ್ಕೆ ನೇಪಾಳ ಆಕ್ಷೇಪ ವ್ಯಕ್ತಪಡಿಸಿದೆ. ವಿವಾದಿತ ಪ್ರದೇಶದ ಬಗ್ಗೆ ನೇಪಾಳದ ಅನುಮತಿ ಇಲ್ಲದೆ ಯಾವುದೇ ಒಪ್ಪಂದ ಮಾಡಬಾರದು ಎಂಬುದನ್ನು ಎರಡೂ ದೇಶಗಳಿಗೆ ರಾಜತಾಂತ್ರಿಕವಾಗಿ ತಿಳಿಸಲಾಗಿದೆ ಎಂದು ಖನಾಲ್ ಹೇಳಿದರು.

ನೇಪಾಳ ಸಂಬಂಧಕ್ಕೆ ಮತ್ತಷ್ಟು ಬಲ: ಜೈಶಂಕರ್

ಪುಟ ೧➜ ಭಾರತ-ನೇಪಾಳ ಸಂಬಂಧವು ದಕ್ಷಿಣ ಏಷ್ಯಾದ ಅತ್ಯಂತ ಸ್ಥಿರ ಮತ್ತು ಬಲಿಷ್ಠ ಸಂಬಂಧಗಳಲ್ಲಿ ಒಂದಾಗಿದೆ ಎಂದರು. ಉಭಯ ದೇಶಗಳ ನಡುವಿನ ಮುಕ್ತ ಗಡಿ, ಜನರ ನಡುವಿನ ನಿಕಟ ಸಂಪರ್ಕ, ಸಾಂಸ್ಕೃತಿಕ ಹಾಗೂ ಐತಿಹಾಸಿಕ ಬಾಂಧವ್ಯಗಳು ಈ ಸಂಬಂಧದ ಭದ್ರ ಅಡಿಪಾಯವಾಗಿವೆ ಎಂದು ತಿಳಿಸಿದರು. ಇತ್ತೀಚಿನ ವರ್ಷಗಳಲ್ಲಿ ವ್ಯಾಪಾರ, ಹೂಡಿಕೆ, ಇಂಧನ, ಶಿಕ್ಷಣ, ಮೂಲಸೌಕರ್ಯ ಅಭಿವೃದ್ಧಿ, ವಿಪತ್ತು ನಿರ್ವಹಣೆ ಹಾಗೂ ಸಾಂಸ್ಕೃತಿಕ ವಿನಿಮಯ ಕ್ಷೇತ್ರಗಳಲ್ಲಿ ಸಹಕಾರ ಗಣನೀಯವಾಗಿ ವಿಸ್ತರಿಸಿದೆ ಎಂದು ಜೈಶಂಕರ್ ಹೇಳಿದರು. ಮುಂದಿನ ಹಂತದಲ್ಲಿ ಸ್ಟಾರ್ಟ್‌ಅಪ್‌ಗಳು, ಕೃತಕ ಬುದ್ಧಿಮತ್ತೆ (ಎಐ), ಮಾಹಿತಿ ತಂತ್ರಜ್ಞಾನ ಹಾಗೂ ನವೀಕರಿಸಬಹುದಾದ ಇಂಧನ ಕ್ಷೇತ್ರಗಳಲ್ಲಿ ಸಹಕಾರ ಹೆಚ್ಚಿಸಲು ಎರಡೂ ದೇಶಗಳಿಗೆ ಉತ್ತಮ ಅವಕಾಶಗಳಿವೆ ಎಂದು ಅವರು ಅಭಿಪ್ರಾಯಪಟ್ಟರು. ಪಶ್ಚಿಮ ಏಷ್ಯಾದಲ್ಲಿನ ಅಸ್ಥಿರ ಪರಿಸ್ಥಿತಿಯ ನಡುವೆಯೂ ನೇಪಾಳದ ಇಂಧನ ಅಗತ್ಯಗಳನ್ನು ಪೂರೈಸಲು ಭಾರತ ನಿರಂತರ ಬೆಂಬಲ ನೀಡಿದೆ. ಅಲ್ಲದೆ ಗಡಿ ನಿರ್ವಹಣೆ ಮತ್ತು ಭದ್ರತಾ ಸಹಕಾರವೂ ಉಭಯ ರಾಷ್ಟ್ರಗಳ ಸಂಬಂಧದಲ್ಲಿ ಪ್ರಮುಖ ಪಾತ್ರ ವಹಿಸುತ್ತಿದೆ ಎಂದರು. ಪ್ರಧಾನಿ ನರೇಂದ್ರ ಮೋದಿ ಅವರ ದೃಷ್ಟಿಕೋನದಂತೆ, ನೇಪಾಳದೊಂದಿಗೆ ಮತ್ತಷ್ಟು ನಿಕಟವಾಗಿ ಕಾರ್ಯನಿರ್ವಹಿಸಿ ಉಭಯ ದೇಶಗಳ ಅಭಿವೃದ್ಧಿ, ಸಮೃದ್ಧಿ ಹಾಗೂ ಜನರ ಕಲ್ಯಾಣಕ್ಕಾಗಿ ಭಾರತ ಬದ್ಧವಾಗಿದೆ ಎಂದು ಜೈಶಂಕರ್ ಪುನರುಚ್ಚರಿಸಿದರು.

ನಿಮ್ಮ ಮನೆ ಮಗ ನಾನು

ಪುಟ ೧➜ ನಿಮ್ಮ ಪಾಲಿಗೆ ನಾನು ಸಿಎಂ ಅಲ್ಲ, ಸೇವಕ. ನನ್ನ ಕೊನೆಯುಸಿರು ಇರುವವರೆಗೂ ನಿಮ್ಮ ಮನೆ ಮಗನಾಗಿ ಸೇವೆ ಮಾಡುವೆ. ಸ್ವಂತ ಮಗನಂತೆ ನನ್ನನ್ನು ಬೆಳೆಸಿದ್ದೀರಿ. ನನ್ನ ಕ್ಷೇತ್ರದ ಪ್ರತಿಯೊಬ್ಬರಿಗೂ ಸಾಷ್ಟಾಂಗ ನಮಸ್ಕಾರಗಳು. ನಾನು ಈ ಕ್ಷೇತ್ರ ದಾಟಿ ಹೋದಾಗ ಮಾತ್ರ ಮುಖ್ಯಮಂತ್ರಿ. ಇಲ್ಲಿಗೆ ಬಂದಾಗ ನಿಮ್ಮ ಮನೆ ಸೇವಕ ಎನ್ನುವ ಮಾತನ್ನು ಭೇಟಿ ಕೊಟ್ಟ ಪ್ರತಿ ಊರಿನಲ್ಲೂ ಹೇಳಿದರು.

ಪ್ರಾರ್ಥನೆ ಫಲಿಸಿದೆ: ದುಃಖವನ್ನು ದೂರ ಮಾಡುವ ದೇವಿ ದುರ್ಗಾದೇವಿ. ಬೆಂಗಳೂರು ದಕ್ಷಿಣ ಜಿಲ್ಲೆಯ ಮಗನಾಗಿ ಜನರ ಮುಂದೆ ನಿಂತಿದ್ದೇನೆ. ಈ ಕ್ಷೇತ್ರದ ಜನ ನನ್ನ ಪರವಾಗಿ ಪ್ರಾರ್ಥನೆ ಮಾಡಿದ್ದೀರಿ. ನೋವು, ದುಃಖವನ್ನು ಅನುಭವಿಸಿದ್ದೀರಿ. ವಿಧಾನಸೌಧದ ಮೂರನೇ ಮಹಡಿಯಲ್ಲಿ ನಾನು ಕುಳಿತುಕೊಳ್ಳಬೇಕು ಎಂದು ನೀವು ಪ್ರಾರ್ಥನೆ ಮಾಡಿದ್ದರ ಫಲವಾಗಿ ನಾನು ಈ ರಾಜ್ಯದ ಮುಖ್ಯಮಂತ್ರಿಯಾಗಿದ್ದೇನೆ. ಪ್ರಯತ್ನ ವಿಫಲವಾಗಬಹುದು. ಆದರೆ ಪ್ರಾರ್ಥನೆ ವಿಫಲವಾಗುವುದಿಲ್ಲ ಎಂದರು.

ಮೆಣಸಿನಕಾಯಿ, ಬೆಳ್ಳುಳ್ಳಿ ಹಾರ!

ನೂತನ ಸಿಎಂ ಅವರಿಗೆ ಯಾರ ದೃಷ್ಟಿಯೂ ತಾಕದಿರಲಿ ಎಂದು ಮೆಣಸಿನಕಾಯಿ ಹಾಗೂ ಬೆಳ್ಳುಳ್ಳಿ ಪೋಣಿಸಿ ಮಾಡಿದ್ದ ಬೃಹತ್ ಹಾರವನ್ನು ಹಾರೋಹಳ್ಳಿಯ ಜನರು ಹಾಕಿದ್ದು ವಿಶೇಷವಾಗಿತ್ತು. ಸುಮಾರು 50 ಕೆಜಿ ಒಣ ಮೆಣಸಿನಕಾಯಿ 70 ಕೆಜಿಗೂ ಹೆಚ್ಚು ಹಸಿಮೆಣಸಿನಕಾಯಿ ಮತ್ತು 50 ಕೆಜಿಗೂ ಹೆಚ್ಚು ಬೆಳ್ಳುಳ್ಳಿ ಬಳಸಲಾಗಿತ್ತು. ಕ್ರೇನ್ ಮೂಲಕ ಬೃಹತ್ ಸೇಬಿನ ಹಾರವನ್ನು ಹಾಕಿ ಅಭಿಮಾನಿಗಳು ಸಂಭ್ರಮಿಸಿದರು.



500 ಕೆಜಿಗೂ ಹೆಚ್ಚು ತೂಕದ ಸೇಬಿನ ಹಾರಗಳು

ಕಗ್ಗಲೀಪುರ, ತುಂಗಣಿ, ನಾರಾಯಣಪುರಗಳಲ್ಲಿ ಅಭಿಮಾನಿಗಳು ಸುಮಾರು 500 ಕೆಜಿಗೂ ಹೆಚ್ಚು ಸೇಬು ಬಳಸಿ ಬೃಹತ್ ಹಾರಗಳನ್ನು ಮಾಡಿಸಿ ಡಿ.ಕೆ. ಶಿವಕುಮಾರ್ ಅವರ ಮೇಲಿನ ಅಭಿಮಾನ ಮೆರೆದರು. ತುಂಗಣಿಯಲ್ಲಿ 2 ಸೇಬಿನ ಹಾರಗಳು ಇದ್ದಿದ್ದು ವಿಶೇಷವಾಗಿತ್ತು. ಹೆರಿಂದ್ಯಾಪನಹಳ್ಳಿಯಲ್ಲಿ ಮಾಡಿದ್ದ ಸೇಬಿನ ಹಾರ 30 ಅಡಿಗೂ ಹೆಚ್ಚು ಉದ್ದವಾಗಿತ್ತು.

ಟ್ರಾಫಿಕ್ ಸಮಸ್ಯೆ ತಪ್ಪಿಸಲು ಸಿಎಂ ಮೆಟ್ರೋ ಪ್ರಯಾಣ

ಪುಟ ೧➜ ಯುವಕ ಯುವತಿಯರು ನಮ್ಮ ಸಿಎಂ ಎಂದು ಹುಮ್ಮಸ್ಸಿನಿಂದ ಮಾತನಾಡಿಸಿ ಹಸ್ತಲಾಘವ ಮಾಡಿದರು. ಅನೇಕರು ಮುಖ್ಯಮಂತ್ರಿಗಳ ಜತೆ ಸೆಲ್ಫಿ ತೆಗೆದುಕೊಂಡು ಸಂಭ್ರಮಿಸಿದರು. ಮೆಟ್ರೋ ಪ್ರಯಾಣ ಹೇಗೆನಿಸುತ್ತದೆ ಎಂದು ಸಿಎಂ ಯುವತಿಯೊಬ್ಬರನ್ನು ಕೇಳಿದಾಗ, ಮೆಟ್ರೋ ರೈಲು ಪ್ರಯಾಣದಿಂದ ಸಾಕಷ್ಟು ಸಮಯ ಉಳಿಯುತ್ತಿದೆ ಎಂದು ಉತ್ತರಿಸಿದರು. ಇದೇ ವೇಳೆ ಮಗುವಿಗೆ ಚಾಕೊಲೇಟ್ ನೀಡಿ ಅವರ ಪೋಷಕರ ಜೊತೆ ಸೆಲ್ಫಿ ತೆಗೆದುಕೊಂಡರು.

ನನಗೆ ಜಾತಿ, ಧರ್ಮ ಭೇದವಿಲ್ಲ

ಪುಟ ೧➜ ನಾರಾಯಣಪುರ, ಸಂತೆಕೋಡಿಹಳ್ಳಿ, ಹೆರಿಂದ್ಯಾಪನಹಳ್ಳಿಯಲ್ಲಿ ಮಾತನಾಡಿದ ಡಿ.ಕೆ.ಶಿವಕುಮಾರ್ ಅವರು, ತಿಹಾರ್ ಜೈಲಿನಲ್ಲಿ ಇದ್ದಾಗ ನನ್ನ ಕ್ಷೇತ್ರದ ಜನರು ಕಣ್ಣೀರು ಸುರಿಸಿ ಪ್ರಾರ್ಥನೆ ಮಾಡಿದರು. ಆ ಪ್ರಾರ್ಥನೆ ನನ್ನನ್ನು ಕಾಪಾಡಿದೆ. ನೀವು ನನ್ನ ಪರವಾಗಿ ಕೊರಗಿದ್ದು ನನ್ನ ರಕ್ಷಿಸಿದೆ. ನನಗೆ ಹಣದ, ಅಹಂಕಾರದ ಅವಶ್ಯಕತೆ ಇಲ್ಲ, ನಿಮ್ಮ ಜೀವನದಲ್ಲಿ ಬದಲಾವಣೆ ಉಂಟಾಗಬೇಕು ಎಂಬುದೇ ನನ್ನ ಧ್ಯೇಯ ಎಂದರು.

ಸಿಎಂಗೆ ಪೂರ್ಣಕುಂಭ ಸ್ವಾಗತ

ನಾರಾಯಣಪುರದಲ್ಲಿ ಪೂಜಾಕುಣಿತ ಕಲಾವಿದರು ಸ್ವಾಗತಿಸಿದರೆ, ಕೊಳಗೊಂಡನಹಳ್ಳಿಯಲ್ಲಿ ನಂದಿಧ್ವಜ, ಪಟ ಕುಣಿತ, ನಂದಿಧ್ವಜ ಹೊತ್ತ ಕಲಾವಿದರು ಸ್ವಾಗತಿಸಿದರು. ಪ್ರತಿ ಊರಿನಲ್ಲೂ ತಮಟೆ, ನಗಾರಿ ಸದ್ದು ಮೇಳೈಸಿತ್ತು. ಬೇಕುಪ್ಪೆಯಲ್ಲಿ ಮನೆದೇವರು ಕೆಂಕೇರಮ್ಮನಿಗೆ ಹಾಗೂ ತುಂಗಣಿಯಲ್ಲಿ ಚಾಮುಂಡೇಶ್ವರಿ ದೇವಾಲಯದಲ್ಲಿ ಸಹೋದರ ಡಿ.ಕೆ.ಸುರೇಶ್ ಅವರ ಜತೆಗೂಡಿ ಶಿವಕುಮಾರ್ ಪೂಜೆ ಸಲ್ಲಿಸಿದರು. ಕ್ಷೇತ್ರದ ಗಡಿ ಭಾಗದಲ್ಲಿ ಮಹಿಳೆಯರು ಪೂರ್ಣಕುಂಭ ಸ್ವಾಗತ ನೀಡಿದರು.

ಯುವ ಯುಗ ಘೋಷಣೆಗೆ ಸ್ವಕ್ಷೇತ್ರದಲ್ಲೇ ಶಕ್ತಿ: ಡಿ.ಕೆ. ಶಿವಕುಮಾರ್ ಅವರು ಅಧಿಕಾರ ವಹಿಸಿಕೊಂಡಾಗ ಕರ್ನಾಟಕದಲ್ಲಿ ಯುವ ಯುಗ ಆರಂಭ ಎಂದು ಯುವಕರನ್ನು ಗಮನದಲ್ಲಿಟ್ಟುಕೊಂಡು ಘೋಷಣೆ ಮಾಡಿದ್ದರು. ಪ್ರತಿ ಊರಿನಲ್ಲೂ ಯುವಕರು ನೀಡಿದ ಕೊಡುಗೆಗೆ ಧನ್ಯವಾದ ತಿಳಿಸಿದರು. ಪ್ರತಿ ಊರಿನಲ್ಲೂ ಯುವಕರೇ ಮುಂದೆ ನಿಂತು ಮುಖ್ಯಮಂತ್ರಿಗಳನ್ನು ಸ್ವಾಗತಿಸಿದರು.

ಸಂಪುಟ ವಿಸ್ತರಣೆ ಶೀಘ್ರ: ಸತೀಶ

ಗೋಕಾಕ: ರಾಜ್ಯ ಸಚಿವ ಸಂಪುಟದ ಎರಡನೇ ಹಂತದ ವಿಸ್ತರಣೆ ಶೀಘ್ರದಲ್ಲೇ ನಡೆಯಲಿದ್ದು, ಬೆಳಗಾವಿ ಜಿಲ್ಲೆಗೆ ಮತ್ತಷ್ಟು ಸಚಿವ ಸ್ಥಾನಗಳು ದೊರೆಯುವ ವಿಶ್ವಾಸವಿದೆ ಎಂದು ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಹೇಳಿದ್ದಾರೆ.



ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸಚಿವ ಸಂಪುಟದಲ್ಲಿ ಇನ್ನೂ ಹಲವು ಸ್ಥಾನಗಳು ಖಾಲಿ ಇದ್ದು, ಅವುಗಳನ್ನು ಹೆಚ್ಚು ದಿನ ಖಾಲಿ ಇಡಲು ಸಾಧ್ಯವಿಲ್ಲ. ಈ ತಿಂಗಳೊಳಗೆ ಸಚಿವ ಸಂಪುಟ ವಿಸ್ತರಣೆ ನಡೆದರೆ ಉತ್ತಮ ಎಂದು ಅಭಿಪ್ರಾಯಪಟ್ಟರು. ಪಕ್ಷದಲ್ಲಿ ಒಬ್ಬರಿಗೆ ಒಂದು ಹುದ್ದೆ ಎಂಬ ನೀತಿಯನ್ನು ಅನುಸರಿಸುವ ಪ್ರಯತ್ನ ನಡೆಯುತ್ತಿರುವುದರಿಂದ ಕೆಪಿಸಿಸಿ ಅಧ್ಯಕ್ಷ ಸ್ಥಾನ ಮತ್ತು ಸಚಿವ ಸ್ಥಾನ ಎರಡನ್ನೂ ಒಬ್ಬರಿಗೆ ನೀಡುವ ಸಾಧ್ಯತೆ ಕಡಿಮೆಯಾಗಿದೆ ಎಂದು ಅವರು ಹೇಳಿದರು. ಪಕ್ಷದ ವರಿಷ್ಠರು ತೆಗೆದುಕೊಳ್ಳುವ ನಿರ್ಧಾರವನ್ನು ಎಲ್ಲರೂ ಒಪ್ಪಿಕೊಳ್ಳಬೇಕಾಗಿದೆ ಎಂದರು.

ಮುಸ್ಲಿಂ ಸಮುದಾಯಕ್ಕೆ ಸಚಿವ ಸಂಪುಟದಲ್ಲಿ ಪ್ರಾತಿನಿಧ್ಯ ನೀಡುವ ಕುರಿತು ಕೇಳಿದ ಪ್ರಶ್ನೆಗೆ ಉತ್ತರಿಸಿದ ಅವರು, ಈ ಕುರಿತು ಪಕ್ಷದ ವರಿಷ್ಠರು ಸೂಕ್ತ ನಿರ್ಧಾರ ಕೈಗೊಳ್ಳಲಿದ್ದು, ಯಾವುದೇ ಸಮುದಾಯಕ್ಕೆ ಅನ್ಯಾಯವಾಗದಂತೆ ನೋಡಿಕೊಳ್ಳಲಾಗುವುದು ಎಂದು ತಿಳಿಸಿದರು. ಬೆಳಗಾವಿ ಮಹಾನಗರ ಪಾಲಿಕೆಯಲ್ಲಿ ಬೆಳಗಾವಿ ಕರ್ನಾಟಕದ ಅವಿಭಾಜ್ಯ ಅಂಗ ಎಂಬ ನಿರ್ಣಯ ಅಂಗೀಕರಿಸುವಂತೆ ಕನ್ನಡಪರ ಸಂಘಟನೆಗಳು ನಡೆಸುತ್ತಿರುವ ಹೋರಾಟದ ಕುರಿತು ಪ್ರತಿಕ್ರಿಯಿಸಿದ ಅವರು, ವಿಷಯದ ಬಗ್ಗೆ ಅಧಿಕಾರಿಗಳೊಂದಿಗೆ ಚರ್ಚಿಸಿ ಅಗತ್ಯ ಕ್ರಮ ಕೈಗೊಳ್ಳುವುದಾಗಿ ಹೇಳಿದರು. ಆದಿತ್ಯ ರಾಜ್ ಕ್ಯಾಪಿಟಲ್ ಸೇರಿದಂತೆ ಹಣಕಾಸು ವಂಚನೆ ಪ್ರಕರಣಗಳ ಕುರಿತು ಮಾತನಾಡಿದ ಸಚಿವರು, ದೂರುಗಳು ಮತ್ತು ಕಾನೂನು ಪ್ರಕ್ರಿಯೆಗಳ ಆಧಾರದ ಮೇಲೆ ಸರ್ಕಾರ ಅಗತ್ಯ ಕ್ರಮ ಕೈಗೊಳ್ಳಲಿದೆ ಎಂದು ತಿಳಿಸಿದರು. ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೊಂದಿಗೆ ತಮ್ಮ ಸಂಬಂಧದಲ್ಲಿ ಯಾವುದೇ ಬದಲಾವಣೆ ಇಲ್ಲ ಎಂದು ಸ್ಪಷ್ಟಪಡಿಸಿದರು.

ವಿಶೇಷ ಪೂಜೆ



ಕನಕಪುರದ ಬೇಕುಪ್ಪೆಯಲ್ಲಿ ಮುಖ್ಯಮಂತ್ರಿ ಡಿ. ಕೆ. ಶಿವಕುಮಾರ್ ಅವರು ತಮ್ಮ ಮನೆದೇವರು ಕೆಂಕೇರಮ್ಮ ದೇವಿಗೆ ಭಾನುವಾರ ಪೂಜೆ ಸಲ್ಲಿಸಿದರು. ಸಹೋದರ, ಬಮುಲ್ ಅಧ್ಯಕ್ಷ ಡಿ. ಕೆ. ಸುರೇಶ್ ಜತೆಗಿದ್ದರು.

3,395 ಪೊಲೀಸ್ ಪೇದೆ ನೇಮಕ

ಬೆಂಗಳೂರು: ಕರ್ನಾಟಕ ರಾಜ್ಯ ಪೊಲೀಸ್ ಇಲಾಖೆಯ ಮಿಕ್ಕುಳಿದ (ಉಳಿದ ಮೂಲ) ವೃಂದದಲ್ಲಿನ ವಿವಿಧ ಜಿಲ್ಲಾ, ನಗರ ಹಾಗೂ ಘಟಕಗಳಲ್ಲಿ ಖಾಲಿ ಇರುವ ಒಟ್ಟು 3,395 ಪೊಲೀಸ್ ಕಾನ್‌ಸ್ಟೇಬಲ್ (ಸಿವಿಲ್) ಹುದ್ದೆಗಳ ನೇರ ನೇಮಕಾತಿಗಾಗಿ ಅರ್ಹ ಅಭ್ಯರ್ಥಿಗಳಿಂದ ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ ಎಂದು ಗೃಹ ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದ್ದಾರೆ.



ಅಭ್ಯರ್ಥಿಗಳಿಂದ ಆನ್‌ಲೈನ್ ಮೂಲಕ ಅರ್ಜಿ

ಈ ನೇಮಕಾತಿಯ ಪ್ರಮುಖ ಪ್ರಕ್ರಿಯೆಯಾದ ಸ್ಪರ್ಧಾತ್ಮಕ ಲಿಖಿತ ಪರೀಕ್ಷೆಯನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ನಡೆಸಲಿದ್ದು, ಆಫ್‌ಲೈನ್-ಒಎಂಆರ್ ಮಾದರಿಯಲ್ಲಿ ಪರೀಕ್ಷೆಗಳು ಜರುಗಲಿವೆ. ಒಟ್ಟು 3,395 ಹುದ್ದೆಗಳಲ್ಲಿ ಪುರುಷ ಅಭ್ಯರ್ಥಿಗಳಿಗೆ 2266, ಮಹಿಳಾ ಅಭ್ಯರ್ಥಿಗಳಿಗೆ 755, ಸೇವಾನಿರತ ಪುರುಷರಿಗೆ 257, ಸೇವಾನಿರತ ಮಹಿಳೆಯರಿಗೆ 82 ಹಾಗೂ ತೃತೀಯ ಲಿಂಗಿ ಅಭ್ಯರ್ಥಿಗಳಿಗೆ 35 ಹುದ್ದೆಗಳನ್ನು ಕಾಯ್ದಿರಿಸಲಾಗಿದೆ. ಆಯ್ಕೆಯಾಗುವ ಅಭ್ಯರ್ಥಿಗಳಿಗೆ 37,500 ರೂ.ನಿಂದ 76,100 ರವರೆಗಿನ ವೇತನ ಶ್ರೇಣಿ ಅನ್ವಯವಾಗಲಿದ್ದು, ರಾಷ್ಟ್ರೀಯ ಪಿಂಚಣಿ ಯೋಜನೆ ಸೌಲಭ್ಯ ದೊರೆಯಲಿದೆ ಎಂದು ತಿಳಿಸಿದ್ದಾರೆ.

ಅರ್ಜಿ ಸಲ್ಲಿಸಲು ಇಚ್ಛಿಸುವ ಅಭ್ಯರ್ಥಿಗಳು ಪಿಯುಸಿ ಅಥವಾ ಸಿಬಿಎಸ್‌ಇ, ಐಎಸ್‌ಸಿ, ಎನ್‌ಐಒಎಸ್ ಹಾಗೂ ಮೂರು ವರ್ಷಗಳ ಡಿಪ್ಲೊಮಾ ಸೇರಿದಂತೆ ಸರ್ಕಾರದ ನಿಯಮಾವಳಿಗ ಅನ್ವಯ ತತ್ಸಮಾನ ವಿದ್ಯಾರ್ಹತೆ ಹೊಂದಿರಬೇಕು. ಜನ್ಮ ದಿನಾಂಕದ ಆಧಾರದ ಮೇಲೆ ಕನಿಷ್ಠ 18 ವರ್ಷ ವಯಸ್ಸಾಗಿರಬೇಕಾಗಿದ್ದು, ಸರ್ಕಾರವು ಒಂದು ಬಾರಿಗೆ ಅನ್ವಯವಾಗುವಂತೆ ಗರಿಷ್ಠ ವಯೋಮಿತಿಯಲ್ಲಿ 5 ವರ್ಷಗಳ ಸಡಿಲಿಕೆ ನೀಡಿದೆ ಎಂದು ತಿಳಿಸಿದ್ದಾರೆ. ಈ ಅನ್ವಯ ಸಾಮಾನ್ಯ ಅರ್ಹತೆಯ ಅಭ್ಯರ್ಥಿಗಳಿಗೆ 33 ವರ್ಷಗಳು, ಎಸ್‌ಸಿ/ಎಸ್‌ಟಿ ಮತ್ತು ಹಿಂದುಳಿದ ವರ್ಗಗಳ ಅಭ್ಯರ್ಥಿಗಳಿಗೆ 35 ವರ್ಷಗಳು ಹಾಗೂ ಬುಡಕಟ್ಟು ಅಭ್ಯರ್ಥಿಗಳಿಗೆ ಗರಿಷ್ಠ 38 ವರ್ಷಗಳ ವಯೋಮಿತಿಯನ್ನು ನಿಗದಿಪಡಿಸಲಾಗಿದೆ ಎಂದೂ ಹೇಳಿದ್ದಾರೆ.

ಕಿರುಸುದ್ದಿ

ವೈದ್ಯರ ಹುದ್ದೆ ಭರ್ತಿಗೆ ಕ್ರಮ: ಸಚಿವ ಖಾದರ್

ಮಂಗಳೂರು: ರಾಜ್ಯದ ಸರ್ಕಾರಿ ಆಸ್ಪತ್ರೆಗಳಲ್ಲಿ ಸುಮಾರು 900ರಷ್ಟು ಹುದ್ದೆಗಳು ಖಾಲಿ ಇದ್ದು, ಭರ್ತಿಗೆ ಕ್ರಮ ಕೈಗೊಳ್ಳಲಾಗುವುದು ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಖಾತೆ ಸಚಿವ ಯು.ಟಿ.ಖಾದರ್ ತಿಳಿಸಿದ್ದಾರೆ. ಮಂಗಳೂರಿನಲ್ಲಿ ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸರಕಾರಿ ಆಸ್ಪತ್ರೆಗಳಲ್ಲಿ ವೈದ್ಯರ ಕೊರತೆ ಇರುವುದು ಗಮನದಲ್ಲಿದೆ. ಖಾಯಂ ನೇಮಕ ಪ್ರಕ್ರಿಯೆ ಆಗುವವರೆಗೆ ಗುತ್ತಿಗೆ ಆಧಾರದಲ್ಲಿ ನೇಮಕ ಮಾಡಲಾಗುವುದು. ಹಂತ ಹಂತವಾಗಿ ಸರ್ಕಾರಿ ಆಸ್ಪತ್ರೆಗಳ ವಿವಿಧ ಸಮಸ್ಯೆಗಳನ್ನು ಬಗೆಹರಿಸಲು ಒತ್ತು ನೀಡುವುದಾಗಿ ತಿಳಿಸಿದರು. ಎಂಬಿಬಿಎಸ್ ಆದವರು ಸೇವೆ ಸಲ್ಲಿಸಲು ಬಂದರೆ ಅವರಿಗೆ ಡಿಎಚ್‌ಒಗಳು ಒಂದು ವಾರದೊಳಗೆ ತಾತ್ಕಾಲಿಕ ನೇಮಕಾತಿಯ ಆದೇಶ ಪತ್ರ ನೀಡಬೇಕು. ಇಲ್ಲದಿದ್ದಲ್ಲಿ ಡಿಎಚ್‌ಒಗಳನ್ನು ಅಮಾನತು ಮಾಡಲಾಗುವುದು. ನೇಮಕ ಆದವರಿಗೆ 60,000 ವೇತನ ನೀಡಲಾಗುವುದು ಎಂದು ಯು.ಟಿ.ಖಾದರ್ ತಿಳಿಸಿದರು. ರಾಜ್ಯದ ಸರ್ಕಾರಿ ಆಸ್ಪತ್ರೆಗಳಲ್ಲಿ ವೈದ್ಯರು ಮತ್ತು ಸಿಬ್ಬಂದಿಗಳು ಯಾವ ರೀತಿ ಸೇವೆ ಸಲ್ಲಿಸುತ್ತಿದ್ದಾರೆ ಎಂಬುದನ್ನು ಖುದ್ದಾಗಿ ಸ್ಥಳಕ್ಕೆ ತೆರಳಿ ಪರಿಶೀಲಿಸುತ್ತೇನೆ. ಈ ನಿಟ್ಟಿನಲ್ಲಿ ರಾತ್ರಿ ವೇಳೆ ಆಸ್ಪತ್ರೆಗಳಿಗೆ ಭೇಟಿ ನೀಡಲು ನಿರ್ಧರಿಸಿದ್ದುಫಿ, ಇದೇ ರೀತಿ ಜಿಲ್ಲೆ ಮತ್ತು ತಾಲೂಕು ಮಟ್ಟದ ಅಽಕಾರಿಗಳು ಕೂಡ ದಿಢೀರ್ ರಾತ್ರಿ ಪರಿಶೀಲಿಸಲು ಸೂಚಿಸುವುದಾಗಿ ಅವರು ತಿಳಿಸಿದರು.

ಮೋದಿಗೆ ಜನರ ಬಗ್ಗೆ ಕಾಳಜಿಯಿಲ್ಲ: ಯತೀಂದ್ರ

ವಿಜಯಪುರ: ಪ್ರಧಾನಿ ಮೋದಿ ಸರ್ಕಾರಕ್ಕೆ ಜನತೆಯ ಬಗ್ಗೆ ಕಿಂಚಿತ್ತೂ ಕಾಳಜಿಯಿಲ್ಲ ಎಂದು ಸಚಿವ ಯತೀಂದ್ರ ಸಿದ್ದರಾಮಯ್ಯ ಹೇಳಿದರು. ಗ್ಯಾಸ್ ಬೆಲೆ ಏರಿಕೆಗೆ ನಗರದಲ್ಲಿ ಪ್ರತಿಕ್ರಿಯಿಸಿದ ಅವರು, ಜನರು ಹೇಗಾದರೂ ಹಾಳಾಗಲಿ ಎಂದು ಬೆಲೆ ಏರಿಕೆ ಮಾಡಿದ್ದಾರೆ. ಬೆಲೆ ಏರಿಕೆಯಿಂದ ಜನತೆಗೆ ಹೊರೆ ಆಗುತ್ತದೆ. ಇದರಿಂದ ಆರ್ಥಿಕಕ್ಕೆ ಹೊಡೆತ ಬೀಳುತ್ತದೆ ಎಂದರು. ಆದರೆ, ಕೇಂದ್ರದಲ್ಲಿ ನಮ್ಮ ಸರ್ಕಾರದ ಅವಧಿಯಲ್ಲಿ ಎಲ್ಲವೂ ಕಡಿಮೆ ಬೆಲೆ ಇತ್ತು. ನಮ್ಮ ಸರ್ಕಾರದ ಅವಽಯಲ್ಲಿ ಬಾಂಡ್‌ಗಳನ್ನು ಖರೀದಿ ಮಾಡಿ, ಬೆಲೆ ಇಳಿಕೆ ಮಾಡಲಾಗಿತ್ತು ಎಂದರು. ಕಾಕ್ರೋಚ್ ಜನತಾ ಪಾರ್ಟಿ ಪ್ರತಿಭಟನೆಗೆ ಪ್ರತಿಕ್ರಿಯಿಸಿ, ಪ್ರಜಾಪ್ರಭುತ್ವದಲ್ಲಿ ಎಲ್ಲರಿಗೂ ಪ್ರತಿಭಟನೆ ಮಾಡುವ ಅವಕಾಶ ಇರುತ್ತದೆ ಎಂದರು.

ಡಿಕೆಶಿಗೆ ಸೇಬಿನ ಹಾರ: ಕ್ರೇನ್ ಬಸ್‌ಗೆ ತಗುಲಿ ಮಹಿಳೆಗೆ ಗಾಯ

ಕನಕಪುರ: ತಾಲೂಕಿನ ಕೋಡಿಹಳ್ಳಿಯಲ್ಲಿ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರಿಗೆ ಭಾನುವಾರ ನಡೆದ ಕೃತಜ್ಞತೆ ಸಮರ್ಪಣೆ ಕಾರ್ಯಕ್ರಮದಲ್ಲಿ ಡಿಕೆಶಿ ಅವರಿಗೆ ಸೇಬುಗಳಿಂದ ಮಾಡಿದ ಬೃಹತ್ ಹಾರ ಹಾಕಲು ತಂದಿದ್ದ ಕ್ರೇನ್ ಕೆಎಸ್‌ಆರ್‌ಟಿ ಬಸ್ಸಿಗೆ ತಾಗಿದ್ದರಿಂದ ಮಹಿಳೆಯೊಬ್ಬರು ಗಾಯಗೊಂಡಿದ್ದಾರೆ. ಕ್ರೇನ್ ತಾಗಿದ ರಭಸಕ್ಕೆ ಬಸ್ಸಿನ ಗಾಜು ಒಡೆದು ಮಹಿಳೆಗೆ ಸಣ್ಣಪುಟ್ಟ ಗಾಯಗಳಾಗಿವೆ. ಕೂಡಲೇ ಮಹಿಳೆಗೆ ಸಮೀಪದ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಲಾಗಿದೆ. ಕೋಡಿಹಳ್ಳಿ ಬಸ್ ನಿಲ್ದಾಣ ವೃತ್ತದಲ್ಲಿ ನಡೆದ ಕಾರ್ಯಕ್ರಮದಲ್ಲಿ ಶಿವಕುಮಾರ್ ಅವರಿಗೆ ಸೇಬಿನ ಹಾರ ಹಾಕಿದ ಬಳಿಕ, ಅವರು ಅಲ್ಲಿಂದ ತೆರಳಿದರು. ಬಳಿಕ ಕ್ರೇನ್ ಚಾಲಕ ಹಾರವನ್ನು ಕೆಳಕ್ಕಿಳಿಸಿ ರಿವರ್ಸ್ ತೆಗೆದುಕೊಳ್ಳುವಾಗ, ಪಕ್ಕದಲ್ಲಿದ್ದ ಬಸ್ಸಿಗೆ ಹಿಂದಿನ ಗಾಜಿಗೆ ಕ್ರೇನ್ ತಾಗಿದೆ. ಮಹಿಳೆಗೆ ಸಣ್ಣಪುಟ್ಟ ಗಾಯವಾಗಿರುವುದು ಬಿಟ್ಟರೆ ಮತ್ಯಾರಿಗೂ ತೊಂದರೆಯಾಗಿಲ್ಲ ಎಂದು ಪೊಲೀಸರು ಮಾಹಿತಿ ನೀಡಿದರು.

ಬಸವಕಲ್ಯಾಣ ಶಾಸಕ ಶರಣು ಸಲಗರ್‌ಗೆ ಬಂಧನದ ವಾರೆಂಟ್

ಬೀದರ್: ಜಿಲ್ಲೆಯ ಬಸವಕಲ್ಯಾಣ ಕ್ಷೇತ್ರದ ಶಾಸಕ ಶರಣು ಸಲಗಾರ ಬಂಧನಕ್ಕೆ ವಾರಂಟ್ ಜಾರಿಯಾಗಿದೆ. 2023ರಲ್ಲಿ ಬಕ್ರೀದ್ ಕುರ್ಬಾನಿ ವಿಚಾರದಲ್ಲಿ ಗಲಾಟೆ ಮಾಡಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಬಸವಕಲ್ಯಾಣದ ಬಿಜೆಪಿ ಶಾಸಕ ಶರಣು ಸಲಗರ್ ಸೇರಿದಂತೆ 9 ಜನರಿಗೆ ಬೆಂಗಳೂರಿನ 42ನೇ ಎಸಿಜೆಎಂ ನ್ಯಾಯಾಲಯ ಬಂಧನದ ವಾರೆಂಟ್ ಜಾರಿಗೊಳಿಸಿದೆ. ಪ್ರಕರಣದಲ್ಲಿ ಇನ್ನುಳಿದ ಆರೋಪಿಗಳಾದ ಲಿಂಗರಾಜ್, ಸಂತೋಷ್, ಶಿವಕುಮಾರ್, ವಿನೋದ್, ಸಚಿನ್, ರಾಜಕುಮಾರ್, ಶಂಬುಲಿಂಗ್ ಹಾಗೂ ಶರಣಬಸಪ್ಪ ಇವರುಗಳಿಗೆ ಬಂಧನದ ವಾರೆಂಟ್ ಹೊರಡಿಸಿದೆ.

ಪ್ರಕರಣದ ಹಿನ್ನೆಲೆ: 2023ರ ಜುಲೈ 1ರ ಬಕ್ರೀದ್ ದಿನದಂದು ಶಾಸಕ ಶರಣು ಸಲಗರ್ ಸೇರಿದಂತೆ ಹಲವರು ಬಸವಕಲ್ಯಾಣ ನಗರದ ಹಿರೇಮಠ ಕಾಲೋನಿಯ ವ್ಯಕ್ತಿಯೊಬ್ಬರ ಮನೆಗೆ ತೆರಳಿ, ಕುರ್ಬಾನಿ ನೀಡುತ್ತಿರುವ ನಿಮಗೆ ಮಾನ ಮರ್ಯಾದೆ ಇಲ್ಲ, ಕುರ್ಬಾನಿ ನೀಡುತ್ತಿರುವುದು ಬಂದ್ ಮಾಡಬೇಕು ಎಂದು ಆ ಕುಟುಂಬಸ್ಥರಿಗೆ ಬೆದರಿಕೆ ಹಾಕಿ, ದ್ವೇಷದ ಮಾತುಗಳನ್ನಾಡಿದ್ದರು ಎಂದು ಆರೋಪಿಸಿ ಬಸವಕಲ್ಯಾಣ ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಇದೀಗ ಬೆಂಗಳೂರಿನ 42ನೇ ಎಸಿಜೆಎಂ ನ್ಯಾಯಾಲಯವು ಬಂಧನದ ವಾರೆಂಟ್ ಜಾರಿಗೊಳಿಸಿದೆ.

ಮತದಾರರಿಗೆ ಕೃತಜ್ಞತೆ ಸಲ್ಲಿಸಬೇಕಾಗಿದೆ: ಸಿಎಂ ಡಿ.ಕೆ ಶಿವಕುಮಾರ್

ಜನ ಸೇವೆ ನನ್ನ ಕರ್ತವ್ಯ

ಬೆಂಗಳೂರು: ನನ್ನ ಕ್ಷೇತ್ರದ ಜನಕ್ಕೆ ರಾಜಕೀಯ ತಿಳುವಳಿಕೆ, ಪ್ರಜ್ಞೆಯಿದೆ. ನನ್ನಿಂದ ಅಪೇಕ್ಷೆ ಮಾಡದೇ ಹೋದರೂ ನಾನು ಅವರ ಸೇವೆ ಮಾಡಬೇಕಿರುವುದು ನನ್ನ ಕರ್ತವ್ಯ ಎಂದು ಡಿ.ಕೆ ಶಿವಕುಮಾರ್ ತಿಳಿಸಿದರು.

ತಮ್ಮ ತವರು ಕ್ಷೇತ್ರಕ್ಕೆ ತೆರಳು ವೇಳೆ ಕನಕಪುರ ರಸ್ತೆವರೆಗೂ ಮೆಟ್ರೋ ಮೂಲಕ ಪ್ರಯಾಣಿಸುವ ಮುನ್ನ ಮಾಧ್ಯಮಗಳ ಜತೆಗೆ ಪ್ರತಿಕ್ರಿಯಿಸಿದ ಅವರು, ನನ್ನ ಕ್ಷೇತ್ರದ ಜನ ವಿಧಾನ ಸೌಧದ ಮೆಟ್ಟಿಲು ಹತ್ತಿಸಿದ್ದಾರೆ. ಕಳೆದ 40 ವರ್ಷಗಳಿಂದ ಬೆಳೆಸಿದ್ದಾರೆ ಮೊದಲು ಅವರಿಗೆ ಕೃತಜ್ಞತೆ ಸಲ್ಲಿಸಬೇಕಾಗಿರೋದು ನನ್ನ ಕರ್ತವ್ಯ. ಆದಕ್ಕೆ ಎಲ್ಲಾ ಕೆಲಸ ಮುಗಿಸಿ ಜನರ ಭೇಟಿಗೆ ಹೋಗುತ್ತಿದ್ದೇನೆ ಎಂದು ಹೇಳಿದರು.

ನನ್ನ ಕ್ಷೇತ್ರದ ಜನ ದೊಡ್ಡ ಆಲಳ್ಳಿಯಿಂದ ನನ್ನನ್ನು ಇಲ್ಲಿಯವರೆಗೆ ಕರೆತಂದಿದ್ದಾರೆ. ಕ್ಷೇತ್ರದ ಜನರು ನನ್ನನ್ನು ಭೇಟಿಯಾಗಬೇಕು ಎಂದು ಕೇಳುತ್ತಿದ್ದರು. ಆದಕ್ಕೆ ನನ್ನ ಕ್ಷೇತ್ರ, ನನ್ನ ಜನತೆ ಭೇಟಿಯಾಗುತ್ತಿದ್ದೇನೆ. ನನ್ನ ಕ್ಷೇತ್ರದ ಜನತೆಯ ಸಮಸ್ಯೆ, ಕುಂದುಕೊರತೆಗಳನ್ನು ಆಲಿಸಲು ಪ್ರತ್ಯೇಕ ಅಧಿಕಾರಿಗಳನ್ನು ನೇಮಕ ಮಾಡುತ್ತೇನೆ. ನನ್ನ ಕ್ಷೇತ್ರದ ಜನತೆ ಎಂದೂ ತೊಂದರೆಕೊಟ್ಟವರಲ್ಲ, ಅವರವರ ಕೆಲಸ ನೋಡಿಕೊಂಡು ಹೋಗುತ್ತಿದ್ದಾರೆ ಎಂದರು.

ನನ್ನ ಜನರಿಗೆ ಕೃತಜ್ಞತೆ ಸಲ್ಲಿಸಬೇಕು. ಅವರ ಭಾವನೆ, ಶ್ರಮಕ್ಕೆ ತಕ್ಕ ಫಲ ಸಿಗಬೇಕು. ಸಾತನೂರು ಕ್ಷೇತ್ರ, ದೊಡ್ಡಾಲಹಳ್ಳಿ ಜಿಲ್ಲಾ ಪಂಚಾಯತಿ, ಕನಕಪುರದ ಜನ ನನ್ನ ಭೇಟಿ ಮಾಡಬೇಕು ಎಂದು ಹೇಳುತ್ತಿದ್ದರು. ಅವರಿಗೆ ಸಮಯ ನೀಡುವುದಕ್ಕೆ ಆಗಿರಲಿಲ್ಲ. ಯಾರೂ ಬೆಂಗಳೂರಿಗೆ ಬರಬೇಡಿ ಅಂತ ಮನವಿ ಮಾಡಿದ್ದೆ. ಆದ ಕಾರಣಕ್ಕೆ ಕ್ಷೇತ್ರಕ್ಕೆ ಭೇಟಿ ನೀಡುತ್ತಿದ್ದೇನೆ ಎಂದು ಹೇಳಿದರು.



ವಿದೇಶಿಗನ ಮೆಟ್ರೋ ಅನುಭವ ಕೇಳಿದ ಸಿಎಂ

ವಿದೇಶಿ ಪ್ರವಾಸಿಗರಿಗೆ ಮೆಟ್ರೋ ಪ್ರಯಾಣ ಅನುಭವ ಹೇಗಿದೆ ಎಂದು ಕೇಳಿ ತಿಳಿದುಕೊಂಡರು. ಯುವತಿಯೋರ್ವರಿಗೆ ಏನು ಓದುತ್ತಿದ್ದೀರಿ, ಎಲ್ಲಿ, ಎಲ್ಲಿ ವಾಸ ಮಾಡುತ್ತಿದ್ದೀರಿ ಎಂದು ಮಾಹಿತಿ ಪಡೆದು. ಚೆನ್ನಾಗಿ ಓದಬೇಕು. ಭಾರತವನ್ನು ಕರ್ನಾಟಕದ ಮೂಲಕ ನೋಡಲಾಗುತ್ತಿದೆ. ಸಿಕ್ಕ ಅವಕಾಶಗಳನ್ನು ಬಳಸಿಕೊಳ್ಳಬೇಕು ಎಂದು ಕಿವಿಮಾತು ಹೇಳಿದರು. ಕನಕಪುರ ರಸ್ತೆ ನಿಲ್ದಾಣದವರೆಗೂ ಪ್ರಯಾಣಿಕರು ಸೆಲ್ಫಿ ತಗೆದುಕೊಂಡು ಖುಷಿ ವ್ಯಕ್ತಪಡಿಸಿದರು.

ಗ್ಯಾಸ್, ಡೀಸೆಲ್ ಬೆಲೆ ಏರಿಕೆಗೆ ಖಂಡನೆ

ಗೃಹ ಬಳಕೆಯ ಸಿಲಿಂಡರ್ ದರ ಏರಿಕೆ ಬಗ್ಗೆ ಪ್ರತ್ಯೇಕ ವರದಿ ಕೇಳಿದ್ದೇನೆ. ಇದಕ್ಕಿಂತ ಇಂಡಸ್ಟ್ರಿಯಲ್ ಗ್ಯಾಸ್ ಬೆಲೆ, ಡೀಸೆಲ್ ಬೆಲೆ ಏರಿಕೆ ಗಾಬರಿ ಆಗುವಂತೆ ಏರಿಕೆ ಮಾಡಿದ್ದಾರೆ. ವರದಿ ತೆಗೆದುಕೊಳ್ಳುತ್ತಿದ್ದೇನೆ. ಸೋಮ ವಾರ ಇದರ ಬಗ್ಗೆ ಮಾತನಾಡುತ್ತೇನೆ ಎಂದರು.

ಕ್ರೀಡೆಯಿಂದ ವ್ಯಕ್ತಿತ್ವ ವಿಕಸನ: ಗೆಹಲೋತ್

ಬೆಂಗಳೂರು: ಕ್ರೀಡೆಗಳು ವ್ಯಕ್ತಿತ್ವ ವಿಕಸನಕ್ಕೆ ಪ್ರಬಲ ಮಾಧ್ಯಮವಾಗಿದ್ದು, ನಾಯಕತ್ವ ಕೌಶಲ್ಯಗಳನ್ನು ಬೆಳೆಸುವ ಜತೆಗೆ ಆತ್ಮವಿಶ್ವಾಸ ಮತ್ತು ತಂಡದ ಮನೋ ಭಾವವನ್ನು ಬಲಪಡಿಸುತ್ತವೆ ಎಂದು ರಾಜ್ಯಪಾಲ ಥಾವರ ಚಂದ್ ಗೆಹಲೋತ್ ಅವರು ಹೇಳಿದರು.

ಭಾನುವಾರ ಬೆಂಗಳೂರು ಗಾಲ್ಫ್ ಕ್ಲಬ್‌ನಲ್ಲಿ ಗವರ್ನರ್ಸ್ ಕಪ್-2026ರ ಪಂದ್ಯಾವಳಿಯಲ್ಲಿ ಗೆದ್ದ ವಿಜೇತರಿಗೆ ಬಹುಮಾನಗಳನ್ನು ವಿತರಿಸಿ ಮಾತನಾಡಿದರು. ಜೀವನದಲ್ಲಿ ಹೇಗೆ ಪ್ರತಿಯೊಂದು ನಿರ್ಧಾರ ಮಹತ್ವದ್ದಾಗಿದೆಯೋ, ಗಾಲ್ಫ್‌ನಲ್ಲಿಯೂ ಪ್ರತಿಯೊಂದು ಹೊಡೆತ ನಿರ್ಣಾಯಕವಾಗಿರುತ್ತದೆ ಎಂದರು.

ನಿರಂತರ ಅಭ್ಯಾಸ, ಸಕಾರಾತ್ಮಕ ಚಿಂತನೆ ಮತ್ತು ಆತ್ಮಶಿಸ್ತು ಯಶಸ್ಸಿನ ಮೂಲ ಮಂತ್ರಗಳಾಗಿವೆ. ಈ ಮೌಲ್ಯಗಳನ್ನು ಮೈಗೂಡಿಸಿಕೊಂಡು ಅತ್ಯುತ್ತಮ ಪ್ರದರ್ಶನ ನೀಡಿದ ಎಲ್ಲ ಆಟಗಾರರನ್ನು ರಾಜ್ಯಪಾಲರು ಅಭಿನಂದಿಸಿದರು. ವಿಜೇತರು ಗೌರವಕ್ಕೆ ಅರ್ಹರಾಗಿದ್ದರೂ, ಕೊನೆಯವರೆಗೂ ಸಮರ್ಪಣೆ ಮತ್ತು ಬದ್ಧತೆಯಿಂದ ಸ್ಪರ್ಧಿಸಿದ ಎಲ್ಲ ಸ್ಪರ್ಧಿಗಳೂ ಪ್ರಶಂಸೆಗೆ ಪಾತ್ರರಾಗಿದ್ದಾರೆ. ಗೆಲುವಿನಲ್ಲಿ ವಿನಮ್ರತೆ ಮತ್ತು ಸೋಲಿನಲ್ಲಿ ಸಂಯಮ ಪ್ರದರ್ಶಿಸುವುದು ಉತ್ತಮ ಕ್ರೀಡಾಪಟುವಿನ ಲಕ್ಷಣ ಎಂದು ಅಭಿಪ್ರಾಯಪಟ್ಟರು.

ಗವರ್ನರ್ಸ್ ಕಪ್ ಸ್ಪರ್ಧೆಯ ಯಶಸ್ಸು ತಂಡದ ಕಾರ್ಯಪಟುತ್ವ, ಪರಸ್ಪರ ಗೌರವ ಮತ್ತು ಸ್ನೇಹಭಾವದ ಪ್ರತೀಕವಾಗಿದೆ. ಈ ಸ್ಪರ್ಧೆಯು ಅನೇಕ ಹೊಸ ಪ್ರತಿಭೆಗಳಿಗೆ ವೇದಿಕೆ ಒದಗಿಸಿದ್ದು, ಯುವ ಆಟಗಾರರ ಉತ್ಸಾಹವನ್ನು ಕಂಡಾಗ ಭಾರತವು ಗಾಲ್ಫ್ ಕ್ಷೇತ್ರದಲ್ಲಿ ಉಜ್ವಲ ಭವಿಷ್ಯ ಹೊಂದಿದೆ ಎಂಬ ವಿಶ್ವಾಸ ಮೂಡುತ್ತದೆ ಎಂದರು. ಬೆಂಗಳೂರು ಗಾಲ್ಫ್ ಕ್ಲಬ್‌ನ ನಾಯಕ ರವಿಕುಮಾರ್ ರಾಜು ಇದ್ದರು.

ಭಾರತೀಯ ಯುವಕರ ಗಮನಾರ್ಹ ಸಾಧನೆ

ಭಾರತ ಸರ್ಕಾರದ ಖೇಲೋ ಇಂಡಿಯಾ ಮತ್ತು ಫಿಟ್ ಇಂಡಿಯಾ ಕಾರ್ಯಕ್ರಮಗಳು ದೇಶದಲ್ಲಿ ಕ್ರೀಡಾ ಚಟುವಟಿಕೆಗಳಿಗೆ ಉತ್ತೇಜನ ನೀಡುತ್ತಿವೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಕ್ರೀಡಾ ಕ್ಷೇತ್ರದ ಅಭಿವೃದ್ಧಿಗಾಗಿ ವಿವಿಧ ಯೋಜನೆಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸುತ್ತಿದ್ದು, ಅದರ ಪರಿಣಾಮವಾಗಿ ಭಾರತೀಯ ಯುವಕರು ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ಮಟ್ಟದಲ್ಲಿ ಗಮನಾರ್ಹ ಸಾಧನೆಗಳನ್ನು ಮಾಡುತ್ತಿದ್ದಾರೆ ಎಂದು ರಾಜ್ಯಪಾಲರು ತಿಳಿಸಿದರು.

ಲಂಚ ಪಡೆದ ಎಎಸ್‌ಐ, ಪೇದೆ ಲೋಕಾ ಬಲೆಗೆ

ಕಲಬುರಗಿ: ರಾಜ್ಯದ ಗೃಹ ಸಚಿವ ಪ್ರಿಯಾಂಕ್ ಖರ್ಗೆಯವರ ತವರೂರಲ್ಲಿ ಪೋಕ್ಸೋ ಪ್ರಕರಣದಲ್ಲಿ ಸಹಾಯ ಮಾಡುವುದಾಗಿ ಹೇಳಿ ಲಂಚಕ್ಕೆ ಬೇಡಿಕೆ ಇಟ್ಟು ಹಣ ಸ್ವೀಕರಿಸುತ್ತಿದ್ದ ವೇಳೆ ಮಹಿಳಾ ಪೊಲೀಸ್ ಪೇದೆ ಹಾಗೂ ಎಎಸ್‌ಐ ಅವರನ್ನು ಲೋಕಾಯುಕ್ತ ಅಧಿಕಾರಿಗಳು ಬಂಧಿಸಿರುವ ಘಟನೆ ಕಲಬುರಗಿಯಲ್ಲಿ ನಡೆದಿದೆ.



ಸ್ಟೇಷನ್ ಬಜಾರ್ ಪೊಲೀಸ್ ಠಾಣೆಯ ಮಹಿಳಾ ಪೊಲೀಸ್ ಸಿಬ್ಬಂದಿ ಜ್ಯೋತಿ ಹಾಗೂ ಎಎಸ್‌ಐ ಶಿವಶರಣಪ್ಪ ಬಂಧಿತ ಆರೋಪಿಗಳಾಗಿದ್ದಾರೆ. ದೂರುದಾರೆ ರೋಹಿಣಿ ಎಂಬುವರ ಪೋಕ್ಸೋ ಪ್ರಕರಣಕ್ಕೆ ಸಂಬಂಧಿಸಿದಂತೆ ಸಹಾಯ ಮಾಡುವುದಾಗಿ ಭರವಸೆ ನೀಡಿದ್ದ ಆರೋಪಿಗಳು, ಆರಂಭದಲ್ಲಿ 1,000 ಲಂಚ ಪಡೆದು ಬಳಿಕ ತಲಾ 5,000ರಂತೆ ಒಟ್ಟು 10,000 ನೀಡುವಂತೆ ಬೇಡಿಕೆ ಇಟ್ಟಿದ್ದರು ಎನ್ನಲಾಗಿದೆ. ಪ್ರಕರಣದಲ್ಲಿ ಸಾರ್ವಜನಿಕ ಅಭಿಯೋಜಕರಿಗೆ (ಪಿಪಿ) ಹಣ ನೀಡಬೇಕಾಗುತ್ತದೆ ಎಂದು ಹೇಳಿ ಲಂಚಕ್ಕಾಗಿ ಒತ್ತಾಯ ಮಾಡಲಾಗಿತ್ತು ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ.

ದೂರುದಾರೆ ನೀಡಿದ ಮಾಹಿತಿಯ ಆಧಾರದ ಮೇಲೆ ಲೋಕಾಯುಕ್ತ ಅಧಿಕಾರಿಗಳು ಬಲೆ ಬೀಸಿದ್ದು, ಉಳಿದ 10,000 ಲಂಚದ ಹಣವನ್ನು ಸ್ವೀಕರಿಸುತ್ತಿದ್ದ ವೇಳೆ ಆರೋಪಿಗಳನ್ನು ರೆಡ್‌ಹ್ಯಾಂಡ್ ಆಗಿ ಬಂಧಿಸಿದ್ದಾರೆ. ಈ ಕಾರ್ಯಾಚರಣೆಯನ್ನು ಕರ್ನಾಟಕ ಲೋಕಾಯುಕ್ತ ಕಲಬುರಗಿ ಪೊಲೀಸ್ ಅಧೀಕ್ಷಕ ಸಿದ್ದರಾಜು ಸಿ.ಅವರ ಮಾರ್ಗದರ್ಶನದಲ್ಲಿ, ಲೋಕಾಯುಕ್ತ ಪೊಲೀಸ್ ಇನ್‌ಸ್ಪೆಕ್ಟರ್ ಅರುಣ್ ಕುಮಾರ್ ಮುರುಗುಂಡಿ ನೇತೃತ್ವದಲ್ಲಿ ನಡೆಸಲಾಗಿದೆ. ಬಂಧಿತ ಆರೋಪಿಗಳನ್ನು ವಿಚಾರಣೆಗೆ ಒಳಪಡಿಸಲಾಗಿದ್ದು, ತನಿಖೆ ಪೂರ್ಣಗೊಂಡ ನಂತರ ನ್ಯಾಯಾಲಯದ ಮುಂದೆ ಹಾಜರು ಪಡಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗುವುದು ಎಂದು ಲೋಕಾಯುಕ್ತ ಅಧಿಕಾರಿಗಳು ತಿಳಿಸಿದ್ದಾರೆ.

ಟಿಕೆಟ್ ಹಂಚಿಕೆಯಲ್ಲಿ ಮಂಡ್ಯಕ್ಕೆ ಬಂಪರ್

ಮಂಡ್ಯ: ರಾಜ್ಯಸಭೆ ಹಾಗೂ ವಿಧಾನಪರಿಷತ್ ಸ್ಥಾನಗಳ ಕಾಂಗ್ರೆಸ್ ಪಕ್ಷದ ಟಿಕೆಟ್ ಹಂಚಿಕೆಯಲ್ಲಿ ಮಂಡ್ಯಕ್ಕೆ ಬಂಪರ್ ಹೊಡೆದಿದೆ. ಇದೇ ಪ್ರಥಮ ಬಾರಿಗೆ ರಾಜ್ಯಸಭೆಯ ಒಂದು ಹಾಗೂ ಪರಿಷತ್‌ನ ಎರಡು ಸ್ಥಾನಗಳಿಗೆ ಮಂಡ್ಯ ಮೂಲದವರಿಗೆ ಟಿಕೆಟ್ ದೊರಕಿದೆ.

ಕೆ.ಆರ್.ಪೇಟೆ ಕ್ಷೇತ್ರದ ಕೇಂದ್ರ ಮಾಜಿ ಸಚಿವ ಕೆ.ರೆಹಮಾನ್‌ಖಾನ್ ಪುತ್ರ ಮನ್ಸೂರ್ ಅಲಿಖಾನ್ ಅವರಿಗೆ ರಾಜ್ಯಸಭೆ ಟಿಕೆಟ್ ದೊರಕಿದ್ದರೆ, ಕೆಪಿಸಿಸಿ ಪ್ರಧಾನ ಕಾರ್ಯದರ್ಶಿಯಾಗಿರುವ ಮಳವಳ್ಳಿ ಕ್ಷೇತ್ರದ ದಡದ ಪುರ ಶಿವಣ್ಣ ಹಾಗೂ ಜಿಲ್ಲೆಯ ಹಿರಿಯ ರಾಜಕಾರಣಿ ಸಾಹುಕಾರ್ ಚನ್ನಯ್ಯನವರ ಮೊಮ್ಮಗ ಹಾಗೂ ಕೆಪಿಸಿಸಿ ಖಜಾಂಚಿ ವಿನಯ್ ಕಾರ್ತಿಕ್ ಅವರಿಗೆ ವಿಧಾನಪರಿಷತ್ ಟಿಕೆಟ್ ದೊರಕಿದೆ.

ದಡದಪುರ ಶಿವಣ್ಣ ಅವರು ಹಿಂದಿನಿಂದಲೂ ಸಿದ್ದರಾಮಯ್ಯ ಆಪ್ತವಲಯದಲ್ಲಿ ಗುರುತಿಸಿಕೊಂಡಿದ್ದರು. ಸಿದ್ದರಾಮಯ್ಯನವರು ಭಾಗವಹಿಸುತ್ತಿದ್ದ ಬಹುತೇಕ ಸಭೆ-ಸಮಾರಂಭಗಳಲ್ಲಿ ಶಿವಣ್ಣನವರ ಹಾಜರಿರುತ್ತಿದ್ದರು. ಶ್ರೀ ರಾಮಮನೋಹರ ಲೋಹಿಯಾ ವಿಚಾರ ವೇದಿಕೆ ಅಧ್ಯಕ್ಷರಾಗಿ ಸಮಾಜಮುಖಿ ಚಟುವಟಿಕೆಗಳಲ್ಲಿ ಸಕ್ರಿಯರಾಗಿ ತೊಡಗಿಸಿಕೊಂಡಿದ್ದಾರೆ. ಸಾಮಾಜಿಕ ಕ್ಷೇತ್ರದಲ್ಲಿ ತಮ್ಮದೇ ಆದ ಛಾಪು ಮೂಡಿಸಿರುವ ಶಿವಣ್ಣ ಅವರು, ರಾಜಕೀಯವಾಗಿ ಕಾಂಗ್ರೆಸ್ ಪಕ್ಷದಲ್ಲೂ ಸಕ್ರಿಯರಾಗಿದ್ದಾರೆ. ಬೆಂಗಳೂರಿನಲ್ಲಿ ನೆಲೆಸಿದ್ದರೂ ಕ್ಷೇತ್ರದ ಜನರೊಂದಿಗೆ ನಿರಂತರ ಸಂಪರ್ಕದಲ್ಲಿದ್ದಾರೆ.

ಪ್ರಸ್ತುತ ಕೆಪಿಸಿಸಿ ಪ್ರಧಾನ ಕಾರ್ಯದರ್ಶಿಯಾಗಿರುವ ದಡದಪುರ ಶಿವಣ್ಣ ಕಾಂಗ್ರೆಸ್‌ನ ನಿಷ್ಠಾವಂತ ಮುಖಂಡರೆನಿಸಿ ಕೊಂಡಿದ್ದಾರೆ. ಇದುವರೆಗೂ ಜಿಲ್ಲೆಯಿಂದ ಹಿಂದುಳಿದ ವರ್ಗ ಕುರುಬ ಸಮುದಾಯಕ್ಕೆ ವಿಧಾನಪರಿಷತ್ ಪ್ರವೇಶಿಸುವ ಅವಕಾಶ ದೊರಕಿರಲಿಲ್ಲ. ಇದೀಗ ದಡದಪುರ ಶಿವಣ್ಣ ಅವರಿಗೆ ಕಾಂಗ್ರೆಸ್‌ನಿಂದ ವಿಧಾನಪರಿಷತ್‌ಗೆ ನಾಲ್ಕನೇ ಅಭ್ಯರ್ಥಿಯಾಗಿ ಪ್ರವೇಶ ಪಡೆಯುವ ಅದೃಷ್ಟ ಒಲಿದುಬಂದಿದೆ. 1999ರಲ್ಲಿ ಮಳವಳ್ಳಿಯ ಕಿರುಗಾವಲು ಕ್ಷೇತ್ರದಿಂದ ಜನತಾದಳದಿಂದ ಸ್ಪರ್ಧಿಸಿದ್ದರು.

ಕಾಂಗ್ರೆಸ್ ಪಕ್ಷದಿಂದ ಐದನೇ ಅಭ್ಯರ್ಥಿಯಾಗಿ ಕಣ ಪ್ರವೇಶಿಸಲಿರುವ ವಿನಯ್ ಕಾರ್ತಿಕ್ ಕೂಡ ಮಂಡ್ಯ ಮೂಲದವರೇ ಆಗಿದ್ದಾರೆ. ಜಿಲ್ಲೆಯ ಹಿರಿಯ ರಾಜಕಾರಣಿ ಸಾಹುಕಾರ್ ಚನ್ನಯ್ಯನವರ ಮೊಮ್ಮಗ. ಪ್ರಸ್ತುತ ಕೆಪಿಸಿಸಿ ಖಜಾಂಚಿಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಡಿ.ಕೆ. ಶಿವಕುಮಾರ್ ಆಪ್ತ ಬಳಗದಲ್ಲಿ ಗುರುತಿಸಿಕೊಂಡಿದ್ದಾರೆ.

ಶಾಸಕರ ಸಂಖ್ಯೆ ಹೆಚ್ಚಳ

ದಡದಪುರ ಶಿವಣ್ಣ ವಿಧಾನ ಪರಿಷತ್ ಚುನಾವಣೆಯಲ್ಲಿ ಕಾಂಗ್ರೆಸ್‌ನ ಐದು ಸ್ಥಾನಗಳ ಪೈಕಿ ನಾಲ್ಕನೇ ಅಭ್ಯರ್ಥಿಯಾಗಿ ಕಣಕ್ಕಿಳಿಯಲಿದ್ದಾರೆ. ಇದರಿಂದ ಬಹುತೇಕ ಚುನಾವಣೆ ನಡೆದರೆ ಇಲ್ಲವೇ ಅವಿರೋಧವಾಗಿ ಆಯ್ಕೆಯಾಗುವ ಸಾಧ್ಯತೆ ಹೆಚ್ಚಿದೆ. ಇದರಿಂದ ಮಂಡ್ಯ ಜಿಲ್ಲೆಗೆ ಮೂರು ವಿಧಾನ ಪರಿಷತ್ ಸದಸ್ಯರು ಸಿಕ್ಕಂತಾಗಲಿದೆ. ಈಗಾಗಲೇ ಸ್ಥಳೀಯ ಸಂಸ್ಥೆಗಳಿಂದ ದಿನೇಶ್‌ಗೂಳಿಗೌಡ, ದಕ್ಷಿಣ ಪದವೀಧರ ಕ್ಷೇತ್ರದಿಂದ ಮಧು ಜಿ.ಮಾದೇಗೌಡ ಸದಸ್ಯರಾಗಿದ್ದಾರೆ. ಜಿಲ್ಲೆಯಲ್ಲಿ ಕಾಂಗ್ರೆಸ್ ಹಾಗೂ ಬೆಂಬಲಿತ ಸೇರಿದಂತೆ ಶಾಸಕರ ಸಂಖ್ಯೆ 9ಕ್ಕೇರಲಿದೆ.

ಕಾರಾಗೃಹದಲ್ಲಿ ಧರ್ಮದ ಪರ ಘೋಷಣೆ

ಬೆಂಗಳೂರು: ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿ ಬಾಂಬ್ ಸ್ಫೋಟ ಪ್ರಕರಣದ ಕೈದಿಗಳಿಂದ ಜೈಲು ಸಿಬ್ಬಂದಿಗಳ ಮೇಲೆ ಮತ್ತೆ ಹಲ್ಲೆಗೆ ಯತ್ನಿಸಿದ್ದು, ಧರ್ಮದ ಪರ ಘೋಷಣೆಗಳನ್ನು ಕೂಗಿ ಪುಂಡಾಟ ನಡೆಸಿರುವ ಗಂಭೀರ ಘಟನೆ ತಡವಾಗಿ ಬೆಳಕಿಗೆ ಬಂದಿದೆ.

ಬಾಂಬ್ ಸ್ಫೋಟ ಪ್ರಕರಣದ ಜೈಲು ಪಾಲಾಗಿರುವ ಕೈದಿಗಳು ಬ್ಯಾರಕ್‌ಗಳಲ್ಲಿ ಗಲಾಟೆ ನಡೆಸುತ್ತಿದ್ದರು. ಇದನ್ನು ಪ್ರಶ್ನಿಸಲು ಬಂದ ಜೈಲು ಸಿಬ್ಬಂದಿ ಜತೆ ವಾಗ್ವಾದ ನಡೆಸಿ, ಧರ್ಮದ ಪರ ಘೋಷಣೆ ಕೂಗಲು ಆರಂಭಿಸುತ್ತಿದ್ದಂತೆ ಸುಮಾರು 50ಕ್ಕೂ ಹೆಚ್ಚು ಕೈದಿಗಳು ಜಮಾವಣೆಗೊಂಡು ಜೈಲಿನಲ್ಲಿ ಆತಂಕದ ವಾತಾವರಣ ನಿರ್ಮಾಣ ಮಾಡಿದ್ದರು. ಮೂರು ದಿನಗಳ ಹಿಂದೆ ಈ ಘಟನೆ ನಡೆದಿದ್ದು, ಯಾವುದೇ ಪ್ರಕರಣ ದಾಖಲಿಸಿಲ್ಲ ಎಂದು ಜೈಲು ಅಧಿಕಾರಿಗಳು ಹೇಳಿದ್ದಾರೆ.

ಕೈದಿಗಳಿಂದ ಹಲ್ಲೆ: ಬೇರೆ ಕೈದಿಗಳ ಪರವಾಗಿ ಇಬ್ಬರು ಕೈದಿಗಳು ಜೈಲಿನ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯಲು ಆಗಮಿಸಿದ್ದರು. ಆರೋಗ್ಯವಾಗಿದ್ದರು ತಮಗೆ ಆಸ್ಪತ್ರೆಯಲ್ಲಿ ದಾಖಲಿಸಿಕೊಳ್ಳಬೇಕೆಂದು ಹೇಳಿದ್ದರು. ಇದಕ್ಕೆ ಜೈಲು ವಾರ್ಡರ್ ದಾಖಲೆ ಪರಿಶೀಲಿಸಿದಾಗ ಇಬ್ಬರು ಹೆಸರು ಬೇರೆಯದ್ದಾಗಿರುವುದು ಪತ್ತೆಯಾಗಿದೆ.

ಬೇರೆ ಕೈದಿಗಳ ಹೆಸರಿನಲ್ಲಿ ಏಕೆ ಬಂದಿದ್ದೀರಿ? ಎಂದು ವಾರ್ಡರ್ ಪ್ರಶ್ನಿಸಿದಾಗ ಗಲಾಟೆಯಾಗಿದೆ. ಇದರಿಂದ ವಿವಿಧ ಬ್ಯಾರಕ್‌ನಲ್ಲಿದ್ದ ಕೈದಿಗಳು ಜಮಾವಣೆಗೊಂಡು ಘೋಷಣೆ ಕೂಗಿದ್ದಾರೆ. ಅಷ್ಟೇ ಅಲ್ಲದೆ, ಕರ್ತವ್ಯದಲ್ಲಿದ್ದ ಜೈಲು ವಾರ್ಡರ್ ಮೇಲೆ ಹಲ್ಲೆಗೆ ಯತ್ನಿಸಿದ್ದರು ಎನ್ನಲಾಗಿದೆ.

ನದಿ ಮತ್ತು ನಾಲೆ ಸೇರಿ 436 ಕ್ಯುಸೆಕ್ ನೀರು ಹೊರಕ್ಕೆ | ರಾಜ್ಯದಲ್ಲಿ ಮುಂಗಾರು ಪೂರ್ವ ಮಳೆ ಕ್ಷೀಣ

ರೈತರ ಜೀವನಾಡಿ ಕೆಆರ್‌ಎಸ್ ನೀರಿನ ಮಟ್ಟ 81 ಅಡಿಗೆ ಕುಸಿತ

ಶ್ರೀನಿವಾಸ್.ಕೆ.ಬೆಳ್ಳೂರು

ಮಂಡ್ಯ: ಜಿಲ್ಲೆಯ ಜೀವನಾಡಿ ಕೃಷ್ಣರಾಜಸಾಗರ ಜಲಾಶಯದ ನೀರಿನ ಮಟ್ಟ 81 ಅಡಿಗೆ ಕುಸಿದಿದೆ. ಮೂರು ವರ್ಷಗಳ ಹಿಂದೆ ಜೂನ್ ತಿಂಗಳಲ್ಲಿ ಅಣೆಕಟ್ಟೆಯೊಳಗೆ ಈ ಪ್ರಮಾಣದ ನೀರಿನ ಮಟ್ಟ ದಾಖಲಾಗಿತ್ತು. ಮುಂಗಾರು ಆಗಮನ ವಿಳಂಬವಾದರೆ ಜಲಾಶಯದ ನೀರಿನ ಮಟ್ಟ ಅಪಾಯದ ಮಟ್ಟ ತಲುಪುವ ಆತಂಕ ಎದುರಾಗಿದೆ.

ಪ್ರಸ್ತುತ ಜಲಾಶಯದಲ್ಲಿ 81.35 ಅಡಿ ನೀರಿದ್ದು, ಅಣೆಕಟ್ಟೆಗೆ 474 ಕ್ಯುಸೆಕ್ ನೀರು ಹರಿದುಬರುತ್ತಿದೆ. ಜಲಾಶಯದಿಂದ ಹೊರಕ್ಕೆ ನದಿ ಮತ್ತು ನಾಲೆ ಸೇರಿ 436 ಕ್ಯುಸೆಕ್ ನೀರನ್ನು ಹೊರಬಿಡಲಾಗುತ್ತಿದ್ದು, ಅಣೆಕಟ್ಟೆಯಲ್ಲಿ 11.394 ಟಿಎಂಸಿ ಅಡಿ ನೀರು ಸಂಗ್ರಹವಾಗಿದೆ.

ಕಳೆದ ವರ್ಷ ಇದೇ ದಿನ ಜಲಾಶಯದಲ್ಲಿ 107.68 ಅಡಿ ನೀರು ಸಂಗ್ರಹವಾಗಿತ್ತು. ಆ ಸಮಯದಲ್ಲಿ ಮುಂಗಾರು ಪೂರ್ವ ಮಳೆ ವಾಡಿಕೆಗಿಂತ ಹೆಚ್ಚಾಗಿ ಸುರಿದಿತ್ತು. ಜೊತೆಗೆ ಮುಂಗಾರು ಮಳೆಯೂ ನಿರೀಕ್ಷೆಯಂತೆ ಆಗಮನವಾಗಿದ್ದರಿಂದ ಅಂದು ಜಲಾಶಯಕ್ಕೆ 6513 ಕ್ಯುಸೆಕ್ ನೀರು ಹರಿದುಬರುತ್ತಿತ್ತು. ಅಂದು ಜಲಾಶಯದಲ್ಲಿ 29.454 ಟಿಎಂಸಿ ಅಡಿ ನೀರು ಸಂಗ್ರಹವಾಗಿತ್ತು.



ದಿಗಂತ ವಿಶೇಷ

ಈ ಬಾರಿ ಮುಂಗಾರು ಪೂರ್ವ ಮಳೆ ಕೈಕೊಟ್ಟ ಪರಿಣಾಮ ಜಲಾಶಯದಿಂದ ಬೇಸಿಗೆ ಬೆಳೆಗಳಿಗೆ ನೀರು ಹರಿಸಲಾಯಿತು. ಹಲವು ಕೆರೆ-ಕಟ್ಟೆಗಳಿಗೆ ನೀರು ತುಂಬಿಸಲಾಯಿತು. ಇದರಿಂದ ಅಣೆಕಟ್ಟೆಯಲ್ಲಿ ನೀರನ್ನು ಕಾಯ್ದಿರಿಸಲು ಸಾಧ್ಯವಾಗಲಿಲ್ಲ, ಮಳೆ ಬಾರದಿದ್ದರೆ ಕುಡಿಯುವ ನೀರಿಗೂ ತತ್ವಾರ ಎದುರಾಗುವ ಆತಂಕ ಸೃಷ್ಟಿಯಾಗಿದೆ. ಜಲಾಶಯದಲ್ಲಿ ನೀರು ಕಡಿಮೆಯಾಗುತ್ತಿರುವುದರಿಂದ ನೀರೊಳಗೆ ಮುಳುಗಿದ್ದ ದೇಗುಲಗಳು ಗೋಚರಿಸಲಾರಂಭಿಸಿವೆ. 2023ರಲ್ಲಿ ಮುಂಗಾರು ಆಗಮನದ ವಿಳಂಬದಿಂದಾಗಿ ಜಲಾಶಯದ ನೀರಿನ ಮಟ್ಟ ಜೂನ್ ತಿಂಗಳಲ್ಲಿ 78 ರಿಂದ 79 ಅಡಿಗೆ ತಲುಪಿತ್ತು. ಮುಂಗಾರು ಮಳೆಯ ಕೊರತೆ ಹಾಗೂ ಬರಗಾಲದ ಛಾಯೆಯಿಂದ ಆ ವರ್ಷ ಅಣೆಕಟ್ಟು ಭರ್ತಿಯಾಗಲೇ ಇಲ್ಲ, ಮಳೆಯ ಅಭಾವದಿಂದ ಜಲಾಶಯದ ನೀರಿನ ಮಟ್ಟ ಆ ವರ್ಷ 107.18 ಅಡಿಗೆ ತಲುಪಿತ್ತು.

ಈ ಬಾರಿ ನಿರೀಕ್ಷೆಯಂತೆ ಮುಂಗಾರು ಪೂರ್ವ ಮಳೆ ಬರಲಿಲ್ಲ, ಮುಂಗಾರು ಮಳೆಯ ಪ್ರಮಾಣವೂ ಕಡಿಮೆಯಾಗಲಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ. ಎಲ್‌ನಿನೋ ಪರಿಣಾಮ ಮುಂಗಾರು ಕ್ಷೀಣಿಸಲಿರುವುದರಿಂದ ಜುಲೈ ತಿಂಗಳಲ್ಲಿ ಭರ್ತಿಯಾಗುತ್ತಿದ್ದ ಜಲಾಶಯ ಈ ಬಾರಿ ಇನ್ನಷ್ಟು ವಿಳಂಬವಾಗುವ ಲಕ್ಷಣಗಳು ಗೋಚರಿಸುತ್ತಿವೆ. ಹಾಲಿ ಅಣೆಕಟ್ಟೆಯ ನೀರಿನ ಮಟ್ಟ 81 ಅಡಿಗೆ ತಲುಪಿರುವುದು ಅಪಾಯದ ಮುನ್ಸೂಚನೆಯಾಗಿದೆ. 70 ಅಡಿಯವರೆಗಷ್ಟೇ ನೀರನ್ನು ಪಡೆಯಲು ಸಾಧ್ಯ. ಆನಂತರ ಉಳಿದಿದ್ದೆಲ್ಲವೂ ಡೆಡ್ ಸ್ಟೋರೇಜ್ ಆಗಿದೆ. ಮುಂಗಾರು ಮಳೆ ಆರಂಭವಾಗಿ ಜಲಾಶಯಕ್ಕೆ ನೀರು ಹರಿದುಬರುವಂತಾದರೆ ನೀರಿನ ಸಮಸ್ಯೆ ಸುಧಾರಿಸಬಹುದು. ಒಮ್ಮೆ ಮಳೆ ನಿರೀಕ್ಷೆಯಂತೆ ಬಾರದಿದ್ದರೆ ಪರಿಸ್ಥಿತಿ ಇನ್ನಷ್ಟು ಸಂಕಷ್ಟಮಯವಾಗಲಿದೆ.

ಕೃಷಿ ಮೇಲೆ ಕರಾಳ ಛಾಯೆ

ಕಳೆದ ಮೂರು ವರ್ಷದಿಂದ ಹೆಚ್ಚುವರಿ ಮಳೆ ಸುರಿದಾಗಲೆಲ್ಲಾ ಮಳೆಯಿಂದ ಬಿದ್ದ ಹೆಚ್ಚುವರಿ ನೀರನ್ನೆಲ್ಲಾ ಯಾವುದೇ ಅಡೆತಡೆಗಳಿಲ್ಲದೆ ತಮಿಳುನಾಡಿಗೆ ಹರಿಸಲಾಯಿತು. ಕೆರೆಗಳಲ್ಲಿ ತುಂಬಿರುವ ಹೂಳೆತ್ತಿಸಿ ನೀರಿನ ಸಂಗ್ರಹವನ್ನು ಹೆಚ್ಚಿಸುವ, ಹೊಸ ಕೆರೆಗಳನ್ನು, ಮಿನಿ ಬ್ಯಾರೇಜ್‌ಗಳನ್ನು ನಿರ್ಮಿಸಿಕೊಂಡು ನೀರು ಶೇಖರಣೆಗೆ ಆದ್ಯತೆ ನೀಡುವ ಯೋಜನೆಗಳು ರಾಜ್ಯದ ಕಾವೇರಿ ಕಣಿವೆಯಲ್ಲೆಲ್ಲೂ ನಡೆಯಲೇ ಇಲ್ಲ. ಪರಿಣಾಮ ಮಳೆ ಅಭಾವ ಎದುರಾದಾಗಲೆಲ್ಲಾ ತಮಿಳುನಾಡಿನೊಂದಿಗೆ ಕದನಕ್ಕಿಳಿಯುವುದು ಸರ್ವೇಸಾಮಾನ್ಯವಾಗಿದೆ. ಇದು ಮೂರು ದಶಕಗಳಿಂದಲೂ ಸಂಪ್ರದಾಯಬದ್ಧವಾಗಿ ನಡೆದುಕೊಂಡೇ ಬರುತ್ತಿದೆ. ರೈತರು ಕೂಡ ಮುಂಗಾರು ಮಳೆಯ ಮೇಲೆ ನಿರೀಕ್ಷೆ ಇಟ್ಟುಕೊಂಡು ಬಿತ್ತನೆ ಬೀಜ, ರಸಗೊಬ್ಬರಗಳನ್ನು ಸಂಗ್ರಹಿಸಿಟ್ಟುಕೊಂಡಿದ್ದಾರೆ. ಅಣೆಕಟ್ಟೆಗೂ ಒಳಹರಿವು ಬಾರದಿರುವುದರಿಂದ ಕೃಷಿಯ ಚಟುವಟಿಕೆಯ ಮೇಲೆ ಕರಾಳ ಛಾಯೆ ಆವರಿಸಲಾರಂಭಿಸಿದೆ.

ಸಂಪಾದಕೀಯ


ಪ್ರತಿಭಟನೆಗೆ ಹಕ್ಕಿದೆ, ಅಸಭ್ಯತೆಗೆ ಅಲ್ಲ

ಲಂಡನ್‌ನ ಬಿರ್ಕ್‌ಬೆಕ್ ಕಾಲೇಜಿನಲ್ಲಿ ಭಾರತದ ಮುಖ್ಯ ನ್ಯಾ. ಸೂರ್ಯಕಾಂತ್ ಅವರ ಉಪನ್ಯಾಸದ ವೇಳೆ ನಡೆದ ಅಡ್ಡಿಪಡಿಸುವ ಘಟನೆ ಮತ್ತೊಮ್ಮೆ ಪ್ರಜಾಪ್ರಭುತ್ವದಲ್ಲಿ ಭಿನ್ನಾಭಿಪ್ರಾಯ ವ್ಯಕ್ತಪಡಿಸುವ ವಿಧಾನಗಳ ಕುರಿತು ಚರ್ಚೆಗೆ ಕಾರಣವಾಗಿದೆ. ಕಾರ್ಯಕ್ರಮದ ವೇಳೆ ಕೆಲವರು ಭಾರತದ ಪ್ರಜಾಪ್ರಭುತ್ವ, ಭಿನ್ನಮತ ಮತ್ತು ನ್ಯಾಯಾಂಗಕ್ಕೆ ಸಂಬಂಧಿಸಿದ ಪ್ರಶ್ನೆಗಳನ್ನು ಎತ್ತಲು ಯತ್ನಿಸಿದ್ದು, ಕಾರ್ಯಕ್ರಮದ ಶಿಸ್ತು ಭಂಗವಾಗುವಂತಹ ಪರಿಸ್ಥಿತಿ ಉಂಟಾಯಿತು. ಇದನ್ನು ಲಂಡನ್‌ನ ಭಾರತೀಯ ಹೈಕಮಿಷನ್ ಅಸಭ್ಯ ವರ್ತನೆ ಎಂದು ಖಂಡಿಸಿದೆ. ಪ್ರಜಾಪ್ರಭುತ್ವದಲ್ಲಿ ಪ್ರಶ್ನೆ ಕೇಳುವ ಹಕ್ಕು ಅತ್ಯಂತ ಮಹತ್ವದ್ದು. ನ್ಯಾಯಾಂಗ ಸೇರಿದಂತೆ ಯಾವುದೇ ಸಂಸ್ಥೆ ಸಾರ್ವಜನಿಕ ಚರ್ಚೆ ಮತ್ತು ವಿಮರ್ಶೆಯಿಂದ ಹೊರತಾಗಿರಲು ಸಾಧ್ಯವಿಲ್ಲ. ಆದರೆ ಭಿನ್ನಾಭಿಪ್ರಾಯ ವ್ಯಕ್ತಪಡಿಸುವ ಹಕ್ಕು ಮತ್ತು ಸಾರ್ವಜನಿಕ ಕಾರ್ಯಕ್ರಮವೊಂದನ್ನು ಉದ್ದೇಶಪೂರ್ವಕವಾಗಿ ಅಸ್ತವ್ಯಸ್ತಗೊಳಿಸುವ ನಡೆ ಎರಡೂ ಒಂದೇ ಅಲ್ಲ. ಸಂವಾದದ ಅವಕಾಶವನ್ನು ಬಳಸಿಕೊಳ್ಳುವ ಬದಲು ಗದ್ದಲ ಸೃಷ್ಟಿಸುವುದು ಚರ್ಚೆಯ ಗುಣಮಟ್ಟವನ್ನು ಕುಗ್ಗಿಸುತ್ತದೆ.

ವಿಶೇಷವಾಗಿ ವಿದೇಶಿ ನೆಲದಲ್ಲಿ ಭಾರತದ ಅತ್ಯುನ್ನತ ನ್ಯಾಯಾಂಗ ಹುದ್ದೆಯ ಪ್ರತಿನಿಧಿಯೊಬ್ಬರು ಭಾಗವಹಿಸಿರುವ ಕಾರ್ಯಕ್ರಮದಲ್ಲಿ ಸಂಯಮ ಮತ್ತು ಗೌರವ ಕಾಪಾಡುವುದು ಎಲ್ಲರ ಜವಾಬ್ದಾರಿಯಾಗಿದೆ. ಭಿನ್ನಮತದ ಧ್ವನಿ ಕೇಳಿಸಬೇಕು, ಆದರೆ ಅದು ಸಾಂಸ್ಕೃತಿಕ ಮತ್ತು ಪ್ರಜಾಸತ್ತಾತ್ಮಕ ಮಿತಿಗಳೊಳಗೆ ವ್ಯಕ್ತವಾಗಬೇಕು. ಇಲ್ಲವಾದರೆ ನಿಜವಾದ ಪ್ರಶ್ನೆಗಳೂ ಗದ್ದಲದ ನಡುವೆ ಕಣ್ಮರೆಯಾಗುವ ಅಪಾಯವಿದೆ. ಈ ಘಟನೆಯ ಮತ್ತೊಂದು ಆಯಾಮವೆಂದರೆ, ಸಾಮಾಜಿಕ ಜಾಲತಾಣಗಳ ಯುಗದಲ್ಲಿ ಪ್ರತಿಭಟನೆಗಳು ಹೆಚ್ಚಾಗಿ ಗಮನ ಸೆಳೆಯುವ ಉದ್ದೇಶಕ್ಕೆ ಸೀಮಿತವಾಗುತ್ತಿರುವುದು. ವಿಚಾರಗಳ ಕುರಿತು ಗಂಭೀರ ಚರ್ಚೆ ನಡೆಸುವುದಕ್ಕಿಂತ ಕಾರ್ಯಕ್ರಮವನ್ನು ಅಡ್ಡಿಪಡಿಸಿ ಸುದ್ದಿ ಮಾಡುವುದು ಕೆಲವರ ಉದ್ದೇಶವಾಗಿರುವುದು ಕಂಡುಬರುತ್ತಿದೆ. ಇಂತಹ ಪ್ರವೃತ್ತಿ ಪ್ರಜಾಪ್ರಭುತ್ವದ ಆರೋಗ್ಯಕ್ಕೆ ಪೂರಕವಲ್ಲ, ನ್ಯಾಯಾಂಗವು ಪ್ರಜಾಪ್ರಭುತ್ವದ ಮೂರು ಪ್ರಮುಖ ಅಂಗಗಳಲ್ಲಿ ಒಂದಾಗಿದೆ. ಅದರ ತೀರ್ಪುಗಳನ್ನು ಟೀಕಿಸುವ ಹಕ್ಕು ನಾಗರಿಕರಿಗೆ ಇದ್ದರೂ, ನ್ಯಾಯಾಂಗದ ಘನತೆ ಮತ್ತು ಸಂಸ್ಥೆಯ ಮೇಲಿನ ಸಾರ್ವಜನಿಕ ನಂಬಿಕೆಯನ್ನು ಕುಂದಿಸುವ ಪ್ರಯತ್ನಗಳು ದೂರಗಾಮಿ ಪರಿಣಾಮಗಳನ್ನು ಉಂಟುಮಾಡಬಹುದು. ಸಂಸ್ಥೆಗಳ ಮೇಲಿನ ವಿಶ್ವಾಸ ದುರ್ಬಲವಾದರೆ ಅದರ ನಷ್ಟ ಅಂತಿಮವಾಗಿ ಸಮಾಜಕ್ಕೇ ಆಗುತ್ತದೆ. ಭಾರತವು ವಿಶ್ವದ ಅತಿದೊಡ್ಡ ಪ್ರಜಾಪ್ರಭುತ್ವವೆಂಬ ಹೆಗ್ಗಳಿಕೆಯನ್ನು ಹೊಂದಿದೆ. ಆದ್ದರಿಂದ ದೇಶದ ಒಳಗೆ ಮಾತ್ರವಲ್ಲ, ವಿದೇಶಗಳಲ್ಲಿಯೂ ಭಾರತೀಯರ ವರ್ತನೆ ಪ್ರಜಾಸತ್ತಾತ್ಮಕ ಸಂಸ್ಕೃತಿಯ ಪ್ರತಿಬಿಂಬವಾಗಿರಬೇಕು. ಭಿನ್ನಾಭಿಪ್ರಾಯಗಳು ಇರಬಹುದು, ಪ್ರತಿಭಟನೆಗಳೂ ನಡೆಯಬಹುದು, ಆದರೆ ಅವು ಸಂಸ್ಕಾರ, ಸಂಯಮ ಮತ್ತು ಪರಸ್ಪರ ಗೌರವದ ಚೌಕಟ್ಟಿನೊಳಗೆ ನಡೆದಾಗ ಮಾತ್ರ ಪ್ರಜಾಪ್ರಭುತ್ವದ ನಿಜವಾದ ಅರ್ಥ ಸಾರ್ಥಕವಾಗುತ್ತದೆ. ಹಕ್ಕು ಮತ್ತು ಹೊಣೆಗಾರಿಕೆ ಎರಡೂ ಜೊತೆಯಾಗಿ ನಡೆದಾಗ ಮಾತ್ರ, ಪ್ರಜಾಪ್ರಭುತ್ವದ ಮೌಲ್ಯಗಳು ಉಳಿಯುತ್ತವೆ. ಇದೇ ಈ ಘಟನೆಯು ನೀಡುವ ಪ್ರಮುಖ ಪಾಠ. ಇದನ್ನು ಉಳಿಸಿಕೊಂಡು ಹೋದರೆ ಸಾಕು, ನಾಳೆಯೆ ಸಾಮಾಜಿಕ ಮಾಧ್ಯಮದಲ್ಲಿ ಹೀರೋಗಳಾಗುವ ಕಾರಣದಿಂದ ಇಂಥ ಹುಚ್ಚಾಟಗಳು ಸಹನೀಯ ಅಲ್ಲವೇ ಅಲ್ಲ.

ಮಮತಾ ದೀದಿ ಕೋಟೆ ಈಗ ಛಿದ್ರಛಿದ್ರ

ಟಿಎಂಸಿ ತನ್ನ ಸ್ವಯಂಕೃತಾಪರಾಧಗಳಿಂದ ಸೋತುಸುಣ್ಣವಾಗಿದೆ. ಅದರ ಬೇರುಗಳೆಲ್ಲ ದಿನೇ ದಿನೇ ಒಣಗುತ್ತಿವೆ. ಆ ಪಕ್ಷದ ಅಸ್ತಿತ್ವಕ್ಕೇ ಧಕ್ಕೆ ಒದಗಿದೆ.



ನೇರ ನೋಟ
• ದು.ಗು. ಲಕ್ಷ್ಮಣ
dugulakshman@yahoo.com

ದೇಶದೆಲ್ಲೆಡೆಯ ರಾಜಕೀಯ, ಚುನಾವಣೆ ಒಂದು ಬಗೆಯದಾದರೆ ಪಶ್ಚಿಮ ಬಂಗಾಳ ರಾಜ್ಯದ್ದೇ ಬೇರೊಂದು ಬಗೆ. ಲಾಗಾಯ್ತಿನಿಂದಲೂ ಆ ರಾಜ್ಯದಲ್ಲಿ ಹಿಂಸಾಮುಕ್ತ ರಾಜಕೀಯ, ಹಿಂಸಾಮುಕ್ತ ಚುನಾವಣೆ ನಡೆದ ನಿದರ್ಶನವೇ ಇಲ್ಲ. ಚುನಾವಣಾ ಪೂರ್ವ, ಚುನಾವಣೋತ್ತರ ಹಿಂಸೆ ಆ ರಾಜ್ಯದಲ್ಲಿ ಸಾಮಾನ್ಯ.,ಸಹಜ ಎಂಬ ಸ್ಥಿತಿಗೆ ತಲುಪಿರುವುದಕ್ಕೆ ಆ ರಾಜ್ಯವನ್ನು 35 ವರ್ಷ ನಿರಂತರ ಆಳಿದ ಸಿಪಿಎಂ ಮತ್ತು 15 ವರ್ಷ ಆಳಿದ ಟಿಎಂಸಿ ಪಕ್ಷಗಳ ಗೂಂಡಾ ವರ್ತನೆಯೇ ಕಾರಣ. ಮಾರ್ಕ್ಸಿಸ್ಟರ ಹಿಂಸಾತ್ಮಕ ದುರಾಡಳಿತದಿಂದ ಬೇಸತ್ತ ಬಂಗಾಳದ ಮತದಾರರು ತೃಣಮೂಲ ಕಾಂಗ್ರೆಸ್ ಪಕ್ಷಕ್ಕೆ ಮತ ನೀಡಿದರು. ಆದರೆ ತೃಣಮೂಲದ ಕಾರ್ಯಕರ್ತರು ಕಳೆದ 15 ವರ್ಷಗಳಲ್ಲಿ ನಡೆಸಿದ ಗೂಂಡಾಗಿರಿ, ಅತ್ಯಾಚಾರ, ಅಕ್ರಮ ವ್ಯವಹಾರ ಈಗ ಒಂದೊಂದಾಗಿ ಬಯಲಾಗುತ್ತಿದೆ. ಟಿಎಂಸಿಯ ಮೇರೆಮೀರಿದ ಹಿಂಸಾಚಾರ, ಅತ್ಯಾಚಾರ, ದುರಾಡಳಿತದಿಂದ ಆಕ್ರೋಶಗೊಂಡ ಮತದಾರರು ಈ ಬಾರಿ ಬಿಜೆಪಿಗೆ ಭರ್ಜರಿ ಗೆಲುವು ತಂದುಕೊಟ್ಟಿದ್ದು ಈಗ ಇತಿಹಾಸ.

ಬಿಜೆಪಿ ಸರ್ಕಾರ ಅಧಿಕಾರಕ್ಕೇರಿದ ಬಳಿಕವೂ ಅದೇ ರೀತಿಯ ಹಿಂಸಾಚಾರ ಮುಂದುವರೆದಿದೆ. ಸೋತ ತೃಣಮೂಲ ಪಕ್ಷದ ಮುಖಂಡರ ಮೇಲೆ ಹಲ್ಲೆ ನಡೆಸಲಾಗಿದೆ. ಮಮತಾ ಬ್ಯಾನರ್ಜಿ ಅವರ ಅಳಿಯ, ಸಂಸದ ಅಭಿಷೇಕ್ ಬ್ಯಾನರ್ಜಿ ಹಾಗೂ ಮತ್ತೊಬ್ಬ ಸಂಸದ ಕಲ್ಯಾಣ ಬ್ಯಾನರ್ಜಿ ಮೇಲೆ ಮಾರಣಾಂತಿಕ ಹಲ್ಲೆ ನಡೆದಿದೆ ಎಂದು ಸುದ್ದಿ ಪ್ರಸಾರವಾಗಿದ್ದರೂ ವಾಸ್ತವ ಮಾತ್ರ ಬೇರೆಯೇ ಇದೆ ಎಂಬುದು ಅನಂತರದ ವಿದ್ಯಮಾನಗಳಿಂದ ಬಯಲಾಗಿದೆ. ಅಭಿಷೇಕ್ ಮೇಲಿನ ಹಲ್ಲೆ ಪ್ರಕರಣಕ್ಕೆ ಸಂಬಂಧಿಸಿ ಬಂಧಿಸಲಾದ 6 ಜನರಲ್ಲಿ ನಾಲ್ಕು ಮಂದಿ ಟಿಎಂಸಿಯ ಮಾಜಿ ಶಾಸಕಿ ಲಪ್ಲಿ ಮೈತ್ರಾ ಅವರ ಆಪ್ತರು! ಅಲ್ಲದೆ ಅಭಿಷೇಕ್ ಮೇಲೆ ನಡೆದಿದ್ದು ಮಾರಣಾಂತಿಕ ಹಲ್ಲೆ ಖಂಡಿತ ಅಲ್ಲ, ಕೊಳೆತ ಕೋಳಿಮೊಟ್ಟೆ, ಟೊಮ್ಯಾಟೋ ಎಸೆದು ಹಲ್ಲೆ ನಡೆಸಿದರೆ ಅದನ್ನು ಮಾರಣಾಂತಿಕ ಹಲ್ಲೆ ಎನ್ನಲು ಸಾಧ್ಯವೆ? ಇನ್ನು ಕಲ್ಯಾಣ ಬ್ಯಾನರ್ಜಿ ತನ್ನ ತಲೆಗೆ ಗಾಯವಾಗಿದೆ ಎಂದು ಬಿಳಿಬಟ್ಟೆ ಸುತ್ತಿಕೊಂಡಿದ್ದು ಒಂದು ಕಣ್ಣೊರೆಸುವ ತಂತ್ರವಾಗಿತ್ತು. ತಲೆಗೆ ಸುತ್ತಿದ್ದ ಬಿಳಿ ಬಟ್ಟೆ ಬಿಚ್ಚಿದಾಗ ಅಲ್ಲಿ ಯಾವುದೇ ಗಾಯ ಕಂಡುಬಂದಿರಲಿಲ್ಲ, ಬಿಜೆಪಿ ಆಡಳಿತದಲ್ಲಿ ಭಾರೀ ಹಿಂಸಾಚಾರ ನಡೆದಿದೆ ಎಂದು ಬಿಂಬಿಸಲು ಟಿಎಂಸಿ ಮುಖಂಡರು ಹೂಡಿದ ತಂತ್ರಗಾರಿಕೆ ಇದಲ್ಲದೆ ಮತ್ತೇನು?

2021ರ ಚುನಾವಣೆಯಲ್ಲಿ ಮಮತಾ ದೀದಿ ಮೂರನೇ ಬಾರಿ ಗೆದ್ದಾಗ ಪಶ್ಚಿಮ ಬಂಗಾಳದಲ್ಲಿ ಅಕ್ಷರಶಃ ರಕ್ತದೋಕುಳಿಯೇ ಹರಿದಿತ್ತು. ಬಿಜೆಪಿಗೆ ಮತ ನೀಡಿದ ಹಿಂದು ಕುಟುಂಬಗಳನ್ನು ಅಟ್ಟಾಡಿಸಿಕೊಂಡು ಥಳಿಸಲಾಗಿತ್ತು. ಸಿಕ್ಕಸಿಕ್ಕ ಹೆಣ್ಣುಮಕ್ಕಳ ಮೇಲೆ ಟಿಎಂಸಿ ಗೂಂಡಾಗಳು ಬಲಾತ್ಕಾರ, ಅತ್ಯಾಚಾರ ನಡೆಸಿದ್ದರು. ನೂರಾರು ಕುಟುಂಬಗಳು ಹೆದರಿ ನೆರೆಯ ಅಸ್ಸಾಂಗೆ ಗುಳೆ ಹೋಗಬೇಕಾಯ್ತು. ಹಿಂಸಾಚಾರಕ್ಕೆ ಆಗ ಬಲಿಯಾದದ್ದು 29ಕ್ಕೂ ಹೆಚ್ಚು ಮಂದಿ. 500ಕ್ಕೂ ಹೆಚ್ಚು ಮಂದಿ ತೀವ್ರ ಗಾಯಗೊಂಡಿದ್ದರು. ಆದರೆ ಈ ಬಾರಿ ಚುನಾವಣೋತ್ತರ ಹಿಂಸೆಯಲ್ಲಿ ಸಾವಿಗೀಡಾದವರ ಸಂಖ್ಯೆ ಕೇವಲ ಐದು. 2021ರ ಚುನಾವಣೋತ್ತರ ಹಿಂಸಾಚಾರದ ವೇಳೆ ಮಾನಸ್ ದುರ್ಜತಿ ಎಂಬ ಮಗ್ರಹತ್ ಪಶ್ಚಿಮ ಕ್ಷೇತ್ರದ ಬಿಜೆಪಿ ಮಹಿಳಾ ಅಭ್ಯರ್ಥಿಯನ್ನು ಹೊಡೆದು ಸಾಯಿಸಲಾಗಿತ್ತು. ಹಿಂದಿನ ಒಂದೂವರೆ ದಶಕಗಳಿಗೆ ಹೋಲಿಸಿದರೆ ಪ್ರಸಕ್ತ ಚುನಾವಣೆ ವೇಳೆ ಚುನಾವಣಾ ಪೂರ್ವ ಮತ್ತು ಚುನಾವಣೋತ್ತರ ಹಿಂಸೆ, ಸಾವು ನೋವಿನ ಪ್ರಮಾಣ ತೀರಾ ಕಡಿಮೆಯೆಂದೇ ಹೇಳಬೇಕಾಗಿದೆ. ಸೇಡಿನ ರಾಜಕೀಯ ಅಷ್ಟರಮಟ್ಟಿಗೆ ಕಡಿಮೆಯಾಗಿದೆ ಎಂದು ಇದರರ್ಥವಲ್ಲವೆ?

ಈ ಬಾರಿ ಜನಾಕ್ರೋಶದ ಪರಿಣಾಮವಾಗಿ ಹೀನಾಯ ಸೋಲು ಕಂಡರೂ ಟಿಎಂಸಿ ಮುಖ್ಯಸ್ಥೆ ಮಮತಾ ದೀದಿಗೆ ಇನ್ನೂ ಜ್ಞಾನೋದಯವಾದಂತಿಲ್ಲ, ಪಕ್ಷವೂ ಸೋತು ತಾನೂ ಸೋತು ಹೋಗಿದ್ದರೂ ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ಕೊಡುವ ರಾಜಕೀಯ ಸಾಂವಿಧಾನಿಕ ಶಿಷ್ಟಾಚಾರವನ್ನು ಕೂಡ ಪಾಲಿಸದಷ್ಟು ದುರಹಂಕಾರ ಆಕೆಗೆ. ಆದರೇನು, ಆಕೆಯ ಪಕ್ಷದ ಶಾಸಕರು, ಸಂಸದರೇ ಈಗ ದೂರ ಸರಿದು ಮಮತಾ ದುರಹಂಕಾರಕ್ಕೆ ತಕ್ಕ ಪಾಠ ಕಲಿಸುತ್ತಿದ್ದಾರೆ. ಮಮತಾ ಕರೆದ ಟಿಎಂಸಿ ಶಾಸಕಾಂಗ ಪಕ್ಷದ ಸಭೆಗೆ 80 ಶಾಸಕರ ಪೈಕಿ ಹಾಜರಾಗಿದ್ದು ಕೇವಲ 20 ಮಂದಿ. ಪಕ್ಷ ವಿರೋಧಿ ಚಟುವಟಿಕೆ ಕಾರಣಕ್ಕಾಗಿ ಇಬ್ಬರನ್ನು ಉಚ್ಚಾಟಿಸಲಾಗಿದೆ.



ಅಷ್ಟೇ ಅಲ್ಲ, ಪಕ್ಷದೊಳಗೆ ಈಗ ಬಂಡಾಯ ಪರ್ವ ಶುರುವಾಗಿದೆ. ಮಹಾರಾಷ್ಟ್ರದಲ್ಲಿ ಕೆಲವು ವರ್ಷ ಹಿಂದೆ ಎನ್‌ಸಿಪಿ ಹಾಗೂ ಶಿವಸೇನೆ ಇಬ್ಭಾಗವಾದಂತೆ ಬಂಗಾಳದಲ್ಲೂ ಟಿಎಂಸಿ ಇಬ್ಭಾಗವಾಗುವತ್ತ ಸಾಗಿದೆ. ಮಮತಾ ಆಪ್ತರಾದ ಶೋಭನ್ ದೇಬ್ ಚಟ್ಟೋಪಾಧ್ಯಾಯ ಅವರನ್ನು ಶಾಸಕಾಂಗ ಪಕ್ಷದ ನಾಯಕ ಎಂದು ಇತ್ತೀಚೆಗೆ ಕೈಗೊಂಡ ನಿರ್ಣಯಕ್ಕೆ ಪಕ್ಷೀಯರೇ ತಿರುಗಿಬಿದ್ದಿದ್ದಾರೆ. ಸಭೆ ನಡೆಸದೇ ಈ ಆಯ್ಕೆ ಮಾಡಲಾಗಿದೆ. ಅಲ್ಲದೆ ಈ ನಿರ್ಣಯಕ್ಕೆ ತಮ್ಮ ನಕಲಿ ಸಹಿ ಬಳಸಲಾಗಿದೆ ಎಂದು ಶಾಸಕರಾದ ಋತಬ್ರತ ಬ್ಯಾನರ್ಜಿ ಹಾಗೂ ಸಂದೀಪನ್ ಸಾಹಾ ಸ್ಪೀಕರ್‌ಗೆ ದೂರಿದ್ದರು.58 ಮಂದಿ ಶಾಸಕರು ತಮ್ಮ ಜೊತೆಗಿದ್ದಾರೆಂದು ಋತಬ್ರತ ಬ್ಯಾನರ್ಜಿ ದಾಖಲೆ ಒದಗಿಸಿದ ಹಿನ್ನೆಲೆಯಲ್ಲಿ ಸ್ಪೀಕರ್ ಋತಬ್ರತ ಅವರನ್ನೇ ವಿರೋಧ ಪಕ್ಷದ ನಾಯಕನಾಗಿ ಮಾನ್ಯ ಮಾಡಿದರು. ಇದರ ವಿರುದ್ಧ ಈಗ ಮಮತಾ ಹೈಕೋರ್ಟ್ ಮೆಟ್ಟಿಲೇರಿದ್ದಾರೆ. ಪಕ್ಷದಲ್ಲಿ ಬಂಡಾಯದ ಭುಗಿಲು ಎದ್ದಿರುವುದರಿಂದ ಪಕ್ಷದ ಎಲ್ಲ ಸಾಂಸ್ಥಿಕ ಸಮಿತಿಗಳನ್ನು ವಿಸರ್ಜಿಸಲಾಗಿದೆ. ಋತಬ್ರತ ಬ್ಯಾನರ್ಜಿ ಬಣಕ್ಕೆ ಇದೀಗ 23 ಟಿಎಂಸಿ ಸಂಸದರೂ (ಲೋಕಸಭೆಯಲ್ಲಿ ಟಿಎಂಸಿ ಸಂಸದರ ಸಂಖ್ಯೆ 29) ಸೇರ್ಪಡೆಯಾಗಿ ದೀದಿಗೆ ಹೊಸ ತಲೆನೋವು ತಂದಿಟ್ಟಿದ್ದಾರೆ. ಕೋಲ್ಕತ್ತಾದ ಟಿಎಂಸಿಗೆ ಸೇರಿದ ಮೇಯರ್ ಫರ್ಹಾನ್ ಹಕೀಂ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿರುವುದು ಮಮತಾ ಪಾಲಿಗೆ ಇನ್ನೊಂದು ಶಾಕ್. ಟಿಎಂಸಿ ವಕ್ತಾರ ಹಾಗೂ ರಾಜ್ಯ ಉಪಾಧ್ಯಕ್ಷ ಜಯ್‌ಪ್ರಕಾಶ್ ಮಜುಂದಾರ್ ತಾನಿದ್ದ ಬಾಡಿಗೆ ಮನೆಗೆ ಬಾಡಿಗೆ ಕಟ್ಟುವುದನ್ನೇ ನಿಲ್ಲಿಸಿ, ತನ್ನ ರಾಜಕೀಯ ಪ್ರಭಾವ ಬಳಸಿ ಮನೆ ಮಾಲಕಿಯನ್ನೇ ಹೊರಗಟ್ಟಿದ್ದರು. ಈಗ ಆಕೆಯ ದೂರಿನ ಮೇರೆಗೆ ಮಜುಂದಾರ್ ಬಂಧನವಾಗಿದೆ. ಜನರಿಂದ, ವ್ಯಾಪಾರಸ್ಥರಿಂದ ಟಿಎಂಸಿ ಮುಖಂಡರು ವಸೂಲಿ ಮಾಡಿದ್ದ 'ಕಟ್‌ಮನಿ' (ಬಲಾತ್ಕಾರದ ವಸೂಲಿ ಹಣ)ಯನ್ನು ಅವರೆಲ್ಲ ವಾಪಾಸು ಕೊಡುತ್ತಿದ್ದಾರೆ.

ಜೊತೆಗೆ ಶಿಕ್ಷಕರ ನೇಮಕಾತಿ ಹಗರಣ, ಶಾರದಾ ಚಿಟ್‌ಫಂಡ್ ಹಗರಣ, ಕಲ್ಲಿದ್ದಲು ಹಗರಣ, ಆರ್‌ಜಿಕಾರ್ ವೈದ್ಯೆ ಅತ್ಯಾಚಾರ ಯಾ ಕೊಲೆ ಪ್ರಕರಣ ಹೀಗೆ ಮಮತಾ ದುರಾಡಳಿತ ಕಾಲದಲ್ಲಿ ನಡೆದಿದ್ದ ಗಂಭೀರ ಹಗರಣಗಳೆಲ್ಲ ಈಗ ಮತ್ತೆ ತನಿಖೆಯ ಬ್ರಹ್ಮಾಸ್ತ್ರಕ್ಕೆ ಸಿಲುಕಿವೆ. ಶಿಕ್ಷಕರ ಹಗರಣದಲ್ಲಿ ಆರೋಪಿ, ಸಂಸದ ಅಭಿಷೇಕ್ ಬ್ಯಾನರ್ಜಿಗೆ ವಿಚಾರಣೆಗೆ ಹಾಜರಾಗುವಂತೆ ಇಡಿ (ಜಾರಿ ನಿರ್ದೇಶನಾಲಯ) ಸಮನ್ಸ್ ಜಾರಿ ಮಾಡಿದೆ.

ಹೀಗಿದ್ದರೂ ಮಮತಾ ದೀದಿಯ ರಾಜಕೀಯ ದರ್ಪ, ದೌಲತ್ತು ಇನ್ನೂ ಕಡಿಮೆಯಾಗಿಲ್ಲ. ಸುಪ್ರೀಂ ಕೋರ್ಟ್ ಮೆಟ್ಟಿಲೇರಿ, ಕಾಂಗ್ರೆಸ್‌ನ ದುಬಾರಿ ವಕೀಲ ಕಪಿಲ್ ಸಿಬಲ್ ಮೂಲಕ ತನ್ನ ಹಾಗೂ ತನ್ನ ಪಕ್ಷದ ಮೇಲಿನ ಆರೋಪಗಳನ್ನು ಕಳೆದುಕೊಳ್ಳಲು ಹೆಣಗುತ್ತಿದ್ದಾರೆ. ಟಿಎಂಸಿ ನಾಯಕರ ಮೇಲೆ ನಡೆಯುತ್ತಿರುವ ಹಲ್ಲೆ, ಹಿಂಸಾಚಾರ ನೋಡಿದರೆ ಈ ದೇಶದಲ್ಲಿರಲು ನನಗೆ ಅವಮಾನವೆನಿಸುತ್ತಿದೆ ಎಂದು ಸಿಬಾಲ್ ಅಪ್ಪಣೆ ಕೊಡಿಸಿದ್ದಾರೆ. ಒಂದೊಂದು ಹಿಯರಿಂಗ್‌ಗೆ ಲಕ್ಷಲಕ್ಷಗಳಲ್ಲಿ ಶುಲ್ಕ ಪಡೆಯುವ ಅತ್ಯಂತ ದುಬಾರಿ 'ದೇಶದ್ರೋಹಿ' ವಕೀಲ ಸಿಬಲ್ ಇಲ್ಲಿರಲು ಅವಮಾನವೆನಿಸಿದರೆ ಕೂಡಲೇ ಪಾಕಿಸ್ತಾನಕ್ಕೆ ತೆರಳಿ ಕ್ಷೇಮವಾಗಿರುವುದಕ್ಕೆ ಯಾರೂ ಅಡ್ಡಿಪಡಿಸಲಾರರು!

ಈ ನಡುವೆ ಹಲವು ತೃಣಮೂಲ ಕಾಂಗ್ರೆಸ್ ಕಚೇರಿಗಳು ಧ್ವಂಸವಾಗಿವೆ. ಆದರೆ ಹೀಗೆ ಧ್ವಂಸಗೊಳಿಸಿದ್ದು ಬಿಜೆಪಿ ಕಾರ್ಯಕರ್ತರಲ್ಲ, ಟಿಎಂಸಿ ಕಾರ್ಯಕರ್ತರೇ ಈ ಧ್ವಂಸಕಾರ್ಯದ ಮುಂದಾಳುಗಳು. ತಾವು ಬಿಜೆಪಿ ಬೆಂಬಲಿಗರೆಂದು ನೆಲೆ ಕಂಡುಕೊಳ್ಳಲು ಟಿಎಂಸಿ ಕಾರ್ಯಕರ್ತರೇ ಪಕ್ಷದ ಕಚೇರಿಗಳನ್ನು ಧ್ವಂಸಗೊಳಿಸಿದ್ದಾರೆಂದು ಟಿಎಂಸಿ ವಕ್ತಾರ ಕೊಹಿನೂರ್ ಮಜುಂದಾರ್ ಸ್ಫೋಟಕ ಹೇಳಿಕೆ ನೀಡಿದ್ದಾರೆ. ತೃಣಮೂಲದ ರಾಷ್ಟ್ರೀಯ ವಕ್ತಾರ ರಿಜುದತ್ತ 'ತನ್ನನ್ನು ಹಾಗೂ ನನ್ನ ಕುಟುಂಬವನ್ನು ಟಿಎಂಸಿ ಗೂಂಡಾಗಳಿಂದ ರಕ್ಷಿಸಿದ್ದಕ್ಕೆ ಬಿಜೆಪಿ ಕಾರ್ಯಕರ್ತರಿಗೆ ಧನ್ಯವಾದ ಹೇಳಿದ್ದಾರೆ. ಆದರೆ ಇದೇ ಕಾರಣಕ್ಕೆ ಅವರನ್ನು ಪಕ್ಷದಿಂದ 6 ವರ್ಷ ಕಾಲ ಅಮಾನತು ಮಾಡಲಾಗಿದೆ.

ಪಶ್ಚಿಮ ಬಂಗಾಳದ ರಾಜಕೀಯ ಪರಂಪರೆಯೇ ಅಂತಹುದು. ಮತದಾರರು ಯಾವುದೇ ಪಕ್ಷಕ್ಕೆ ಅಧಿಕಾರದಲ್ಲಿರಲು ದೀರ್ಘಾವಧಿ ನೀಡುತ್ತಾರೆ. ಅದುವರೆಗೂ ಆ ಪಕ್ಷದ ಎಲ್ಲ ಅಪಸವ್ಯಗಳನ್ನೂ ಸಹಿಸುತ್ತಾರೆ. ಆದರೆ ಆಕ್ರೋಶ ಮಡುಗಟ್ಟಿ ಕ್ರೋಧಾಗ್ನಿಯಾಗಿ ಹೊರಹೊಮ್ಮಿದಾಗ ಆ ಪಕ್ಷವನ್ನು ಮುಲಾಜಿಲ್ಲದೆ ಕಿತ್ತು ಬಿಸುಡುತ್ತಾರೆ. ಮತ್ತೆ ಅಧಿಕಾರಕ್ಕೇರಲು ಮತದಾರರು ಖಂಡಿತ ಬಿಡುವುದಿಲ್ಲ. 1977ರಲ್ಲಿ ಕಾಂಗ್ರೆಸ್ ಅಲ್ಲಿ ಅಧಿಕಾರ ಕಳೆದುಕೊಂಡಿತು. ಮರಳಿ ಅದು ಅಧಿಕಾರಕ್ಕೇರಲೇ ಇಲ್ಲ. 2011ರಲ್ಲಿ 35 ವರ್ಷ ಆಳ್ವಿಕೆ ನಡೆಸಿದ ಎಡಪಕ್ಷ ಸಿಪಿಎಂ ಅಧಿಕಾರ ಕಳೆದುಕೊಂಡಿತು. ಈಗ ವಿಪಕ್ಷವಾಗುವಷ್ಟು ಸ್ಥಾನ ಕೂಡ ಅದಕ್ಕಿಲ್ಲ. 15 ವರ್ಷ ಆಳ್ವಿಕೆ ನಡೆಸಿದ ಟಿಎಂಸಿ ತನ್ನ ಸ್ವಯಂಕೃತಾಪರಾಧಗಳಿಂದ ಸೋತುಸುಣ್ಣವಾಗಿದೆ. ಅದರ ಬೇರುಗಳೆಲ್ಲ ದಿನೇ ದಿನೇ ಒಣಗುತ್ತಿವೆ. ಆ ಪಕ್ಷದ ಅಸ್ತಿತ್ವಕ್ಕೇ ಧಕ್ಕೆ ಒದಗಿದೆ.

ಈಗ ಅಧಿಕಾರಕ್ಕೇರಿರುವ ಬಿಜೆಪಿಗೂ ಮುಂದೊಂದು ದಿನ ಅಂತಹುದೇ ಸ್ಥಿತಿ ಕಾದಿದೆಯೇ? ಜನಪರ ಆಡಳಿತ, ಹಿಂಸಾಮುಕ್ತ ರಾಜಕೀಯ, ಭ್ರಷ್ಟಾಚಾರ ರಹಿತ ಆಳ್ವಿಕೆ ನಡೆಸಲು ಬದ್ಧವಾಗಿರುವ ಬಿಜೆಪಿಗೆ ಅಂತಹ ಪರಿಸ್ಥಿತಿ ಬರಲಿಕ್ಕಿಲ್ಲ ಎಂಬುದು ರಾಜಕೀಯ ವಿಶ್ಲೇಷಕರ ಅಭಿಮತ. ಒಟ್ಟೈಕೆ ರಾಜಕೀಯ, ಜನವಿರೋಧಿ ನಡೆಯಿಂದ ದೂರ ಉಳಿದರೆ, ಜನಪರ ಕಾಳಜಿ ಮರೆಯದಿದ್ದರೆ ಬಂಗಾಳದಲ್ಲಿ ಕೇಸರಿ ಬಾವುಟ ರಾರಾಜಿಸುತ್ತಲೇ ಇರುತ್ತದೆ.

ಹರೆಯದವರು ಮತ್ತು ಸಮಾಜ

ಹರೆಯದವರ ಶೋಷಣೆಯನ್ನು ತಡೆದು ಅವರಿಗೆ ರಕ್ಷಣೆ ಒದಗಿಸುವುದು ಸಮಾಜದ ಕರ್ತವ್ಯ.



ತಾರುಣ್ಯ ತಲ್ಲಣ
• ಡಾ.ಕೆ.ಆರ್. ಶ್ರೀಧರ್
drkrsridhar208@gmail.com

ತರುಣರು ದೇಶದ ಬೆನ್ನೆಲುಬು ಎಂದು ಕರೆಯುತ್ತಾರೆ. ನಮ್ಮ ದೇಶದ ಜನಸಂಖ್ಯೆಯಲ್ಲಿ ಸುಮಾರು ಶೇಕಡಾ ನಲವತ್ತು ಮಂದಿ ಪ್ರಜೆಗಳು ತರುಣರು. ಅವರು ಆರೋಗ್ಯವಂತರಾಗಿ, ಮಾನಸಿಕ ಮತ್ತು ಸಾಮಾಜಿಕವಾಗಿ ನೆಮ್ಮದಿಯಿಂದ ಮುನ್ನಡೆಯುವಂತೆ ರೂಪಿಸುವಲ್ಲಿ ಸಮಾಜವು ಮಹತ್ವದ ಪಾತ್ರವಹಿಸುತ್ತದೆ. ಅಂತಹ ಸಮಾಜವು ಆರೋಗ್ಯವಂತ ಸಮಾಜ ಎನಿಸಿಕೊಳ್ಳುತ್ತದೆ. ತರುಣರು ಆರೋಗ್ಯದಿಂದ, ಸಂಸ್ಕಾರವಂತರಾಗಿ ಪರಸ್ಪರ ಪ್ರೀತಿ ಪ್ರೇಮದಿಂದ ಇರಬೇಕು. ದ್ವೇಷ ಅಸೂಯೆಗಳಿಂದ ದೂರಉಳಿದು ಕಲೆ, ಸಾಹಿತ್ಯ, ಸಂಗೀತ, ನೃತ್ಯ ಮತ್ತು ಸಮೂಹ ಕಲೆಗಳನ್ನು ಅಳವಡಿಸಿಕೊಳ್ಳುವಂತೆ ಪ್ರೋತ್ಸಾಹಿಸುವುದು ಸಮಾಜದ ಜವಾಬ್ದಾರಿ. ತರುಣರು ಗುಣಮಟ್ಟದ ಶಿಕ್ಷಣ ಪಡೆದು, ಇತರರೊಂದಿಗೆ ಕೂಡಿ ಬಾಳಲು ಅನುವಾಗುವಂತೆ ಮತ್ತು ದೇಶಪ್ರೇಮ ಬೆಳೆಸಿಕೊಳ್ಳಲು ಪ್ರೋತ್ಸಾಹಿಸಬೇಕು. ಅಂತಹ ಸಮಾಜವು ಉನ್ನತ ಸಮಾಜವೆನಿಸಿಕೊಳ್ಳುತ್ತದೆ. ಹಾಗಾಗಿ ತರುಣರನ್ನು ಒಳ್ಳೆಯ ಸಂಸ್ಕಾರಗಳಿಂದ ಕೂಡಿದ ಪ್ರಜೆಗಳಾಗಿ ರೂಪಿಸುವಲ್ಲಿ ಸಮಾಜದ ಜವಾಬ್ದಾರಿ ಹಿರಿದು.

ಹಿಂದಿನ ಅಧ್ಯಾಯಗಳಲ್ಲಿ ಹರೆಯದವರನ್ನು ಆರೋಗ್ಯ ಮತ್ತು ಸಂಸ್ಕಾರವಂತ ಪ್ರಜೆಗಳಾಗಿ ರೂಪಿಸಲು ಕೌಟುಂಬಿಕ ಪರಿಸರ ಮತ್ತು ಪೋಷಕರ ಜವಾಬ್ದಾರಿ ಏನು ಎಂಬುದರ ಕುರಿತು ಓದುಗರೊಂದಿಗೆ ಕೆಲವು ಅಂಶಗಳನ್ನು ಹಂಚಿಕೊಂಡಿದ್ದೆ. ಈ ಲೇಖನದಲ್ಲಿ ತರುಣರನ್ನು ಆರೋಗ್ಯ ಮತ್ತು ಸಂಸ್ಕಾರವಂತರಾಗಿ ಮುನ್ನಡೆಸುವಲ್ಲಿ ಸಮಾಜದ ಪಾತ್ರದ ಕುರಿತು ಕೆಲವು ಅಂಶಗಳನ್ನು ತಿಳಿಯೋಣ.

ಇತ್ತೀಚಿನ ಕೆಲವು ಘಟನೆಗಳನ್ನು ಉದಾಹರಿಸಬೇಕೆಂದರೆ, ಕೇಂದ್ರ ಸರ್ಕಾರವು ನಡೆಸುವ ನೀಟ್ ಸ್ಪರ್ಧಾತ್ಮಕ ಪರೀಕ್ಷೆಯನ್ನು ಸುಮಾರು ಇಪ್ಪತ್ತೈದು ಲಕ್ಷ ವಿದ್ಯಾರ್ಥಿಗಳು ಬರೆದಿದ್ದರು. ಪರೀಕ್ಷೆಯ ಫಲಿತಾಂಶ ಇನ್ನೇನು ಕೆಲವೇ ದಿನಗಳಲ್ಲಿ ಪ್ರಕಟವಾಗಲಿದೆ ಎಂದು ಪರೀಕ್ಷೆ ಬರೆದವರು ಚಾತಕ ಪಕ್ಷಿಗಳಂತೆ ಕಾಯುತ್ತಿದ್ದರು. ಆಗ ಕೆಲವು ವಿದ್ಯಾರ್ಥಿಗಳು ಪರೀಕ್ಷೆಯಲ್ಲಿ ಮೊದಲೇ ದೊರೆತ ಉತ್ತರಗಳನ್ನು ಬರೆದು ಉಳಿದವರಿಗೆ ಅನ್ಯಾಯವಾಗಿದೆ ಎಂಬುದು ಸಾಬೀತಾಯಿತು. ಆದ್ದರಿಂದ ಪರೀಕ್ಷೆಯನ್ನು ವಜಾ ಮಾಡಿ ಮರುಪರೀಕ್ಷೆ ಮಾಡಲಾಗುತ್ತದೆ ಎಂಬ ಸರ್ಕಾರದ ಪ್ರಕಟಣೆಯನ್ನು ತಿಳಿದ ವಿದ್ಯಾರ್ಥಿಗಳಿಗೆ ಆಕಾಶವೇ ಕಳಚಿ ತಲೆಯ ಬಿದ್ದಂತಾಯಿತು. ಇದರಿಂದ



ಎಷ್ಟೋ ವಿದ್ಯಾರ್ಥಿಗಳು ಖಿನ್ನತೆಗೊಳಗಾದರು. ಸುಮಾರು ನಾಲ್ಕೈದು ಜನ ವಿದ್ಯಾರ್ಥಿಗಳು ಆತ್ಮಹತ್ಯೆ ಮಾಡಿಕೊಂಡರು. ಇದರಿಂದ ಹರೆಯದವರು ಅನುಭವಿಸಿದ ಸಂಕಟ ಊಹೆಗೂ ನಿಲುಕದ್ದು.

ಇನ್ನೊಂದು ಉದಾಹರಣೆಯನ್ನು ನೋಡೋಣ. ಫೇಸ್ ಬುಕ್, ಯೂಟ್ಯೂಬ್ ಮುಂತಾದ ಸಾಮಾಜಿಕ ಜಾಲತಾಣಗಳ ವ್ಯಸನಕ್ಕೆ ಸಿಕ್ಕು ಲೆಕ್ಕವಿಲ್ಲದಷ್ಟು ಹರೆಯದವರು ಶಿಕ್ಷಣದಿಂದ ವಂಚಿತರಾಗಿ ದಾರಿತಪ್ಪುತ್ತಿದ್ದಾರೆ ಎಂದು ಪೋಷಕರು ಮತ್ತು ತಜ್ಞರು ಅಭಿಪ್ರಾಯ ಪಟ್ಟರು. ಆ ಕಾರಣದಿಂದ ಸರ್ಕಾರವು ಹದಿನಾರು ವರ್ಷಗಳವರೆಗೆ ತರುಣರು ಸ್ಮಾರ್ಟ್ ಮೊಬೈಲ್ ಫೋನನ್ನು ಉಪಯೋಗಿಸದಂತೆ ಕಾನೂನನ್ನು ರಚಿಸುವ ನಿಟ್ಟಿನಲ್ಲಿದೆ. ಇದು ನಮ್ಮ ದೇಶದಲ್ಲಿ ಒಂದೇ ಅಲ್ಲ, ದೂರದ ಆಸ್ಟ್ರೇಲಿಯಾ, ಸಿಂಗಾಪುರ ದೇಶಗಳಲ್ಲೂ ಇದರ ಕುರಿತು ಕಾನೂನುಗಳನ್ನು ರಚಿಸಿದ್ದಾರೆ.

ಗುಣಮಟ್ಟದ ಶಿಕ್ಷಣವನ್ನು ಒದಗಿಸುವುದು ಸಮಾಜದ ಕರ್ತವ್ಯ. ಗುಣಮಟ್ಟದ ಶಿಕ್ಷಣ ಅಂದರೆ ಕೇವಲ ಪುಸ್ತಕದ ಜ್ಞಾನವೊಂದೇ ಅಲ್ಲ. ಶಿಕ್ಷಣವು ಉತ್ತಮ ಬದುಕನ್ನು ರೂಪಿಸಿಕೊಳ್ಳಲು ಅಗತ್ಯವಿರುವ ಜ್ಞಾನ, ಕೌಶಲಗಳು, ಮತ್ತು ಸಾಮಾಜಿಕ ಮೌಲ್ಯಗಳನ್ನು ಅಳವಡಿಸಿಕೊಂಡು, ಆರೋಗ್ಯಕರ ವ್ಯಕ್ತಿತ್ವವನ್ನು ರೂಪಿಸುವ ಅಂಶಗಳಿಂದ ಕೂಡಿರಬೇಕು. ಹರೆಯದವರ ಭಾವನಾತ್ಮಕ, ಸಾಮಾಜಿಕ ಮತ್ತು ದೈಹಿಕ ಬೆಳವಣಿಗೆಯನ್ನು ಉತ್ತೇಜಿಸುವಂತಿರಬೇಕು. ಗುಣಮಟ್ಟದ ಶಿಕ್ಷಣವು ಹರೆಯದವರನ್ನು ಸಮಾಜದಲ್ಲಿ ಆರ್ಥಿಕವಾಗಿ ಉತ್ಪಾದಕರನ್ನಾಗಿ, ಮತ್ತು ಜವಾಬ್ದಾರಿಯುತ ನಾಗರಿಕರನ್ನಾಗಿ ಮಾಡುತ್ತದೆ.

ಹರೆಯದವರ ಶೋಷಣೆಯನ್ನು ತಡೆದು ಅವರಿಗೆ ರಕ್ಷಣೆ ಒದಗಿಸುವುದು ಸಮಾಜದ ಕರ್ತವ್ಯ. ಹಿಂಸಾತ್ಮಕ ಪರಿಸರದಿಂದ ನಡೆಯುವ ದೌರ್ಜನ್ಯ, ಲೈಂಗಿಕ ಅತ್ಯಾಚಾರಗಳು, ಹಿಂಸೆ ಇವುಗಳಿಂದ ಹರೆಯದವರನ್ನು ರಕ್ಷಿಸುವುದು ಸಮಾಜದ ಹೊಣೆ. ಈ ನಿಟ್ಟಿನಲ್ಲಿ ಒಂದೆರಡು ಉದಾಹರಣೆಗಳನ್ನು ಉಲ್ಲೇಖಿಸಬಹುದು. ಬಾಲ ಕಾರ್ಮಿಕರನ್ನು ಯಾವ ಸಂಸ್ಥೆಗಳೂ, ನೇಮಕ ಮಾಡಿಕೊಳ್ಳುವಂತಿಲ್ಲ, ಅದು ಹರೆಯದವರ ಶೋಷಣೆಯಾಗುತ್ತದೆ. ಹಾಗೆ ಬಾಲ ಕಾರ್ಮಿಕರನ್ನು ನೇಮಿಸಿಕೊಂಡರೆ, ನೇಮಿಸಿಕೊಂಡವರಿಗೆ ಮತ್ತು ಅವರ ಪೋಷಕರಿಗೆ ಜೈಲು ಶಿಕ್ಷೆ ಆಗುತ್ತದೆಂಬ ಕಾನೂನನ್ನು ಸರ್ಕಾರ ರಚಿಸಿದೆ. ಅದೇ ರೀತಿ ಬಾಲ್ಯ ವಿವಾಹದಿಂದ ಆಗುವ ಅನಾಹುತಗಳನ್ನು ತಪ್ಪಿಸಲು ''ಶಾರದಾ ಆ್ಯಕ್ಟ್ (Sharada Act)'' ಎಂಬ ಕಾನೂನನ್ನು ಸರ್ಕಾರ ಸಾವಿರದ ಒಂಬೈನೂರ ಐವತ್ತರ ದಶಕದಲ್ಲಿ ಸರ್ಕಾರ ಜಾರಿಗೆ ತಂದಿತು. ಬಾಲ್ಯವಿವಾಹದಿಂದ ಆಗುವ ದುಷ್ಪರಿಣಾಮಗಳು ಹರೆಯದವರ ಜೀವನವನ್ನು ದುಸ್ತರಗೊಳಿಸುತ್ತದೆ. ಇದರಿಂದ ಹೆಣ್ಣು ಮಕ್ಕಳು ದೈಹಿಕವಾಗಿ, ಮಾನಸಿಕವಾಗಿ ಸಂಕಟಗೊಳಗಾಗುತ್ತಾರೆ. ಅವರ ಬೆಳವಣಿಗೆಯೂ ಕುಂಠಿತಗೊಳ್ಳುತ್ತದೆ. ಶಿಕ್ಷಣಕ್ಕೂ ಕತ್ತರಿ ಬೀಳಬಹುದು.

ಸಂಘ ಸಂಸ್ಥೆಗಳು ಹರೆಯದವರ ಹಕ್ಕುಗಳಿಗೆ ಮಾನ್ಯತೆ ನೀಡಿ, ಗೌರವಿಸಬೇಕು. ಅವರಲ್ಲಿ ಇರುವ ಸೃಜನಶೀಲತೆಗೆ ಅವಕಾಶ ಮಾಡಿಕೊಡಬೇಕು. ಅವರ ಅಹವಾಲುಗಳನ್ನು ಆಲಿಸಿ ಗೌರವಿಸಬೇಕು. ಅವುಗಳನ್ನು ಜಾರಿಗೊಳಿಸಲು ಸೂಕ್ತಕ್ರಮ ತೆಗೆದುಕೊಳ್ಳಬೇಕು. ಮಕ್ಕಳು ಮತ್ತು ತರುಣರನ್ನು ಕೌಟುಂಬಿಕ ಹಿಂಸೆಗಳಿಂದ ರಕ್ಷಿಸುವುದು ಸಮಾಜದ ಕರ್ತವ್ಯ.

ಹರೆಯದವರಿಗೆ ಒದಗಿಸಬೇಕಾದ ಮತ್ತೊಂದು ಮುಖ್ಯವಾದ ಅಂಶ, ಲೈಂಗಿಕ ಶಿಕ್ಷಣ. ಆರೋಗ್ಯಕರ ಲೈಂಗಿಕತೆಯು ತರುಣರ ಭವಿಷ್ಯದ ನೆಮ್ಮದಿಯ ಜೀವನಕ್ಕೆ ಬುನಾದಿ. ಹರೆಯದವರು ದೈಹಿಕ ಮತ್ತು ಮಾನಸಿಕ ಆರೋಗ್ಯವನ್ನು ಕಾಪಾಡಿಕೊಳ್ಳುವಲ್ಲಿ ಲೈಂಗಿಕ ಶಿಕ್ಷಣವು ಮಹತ್ವದ ಪಾತ್ರ ವಹಿಸುತ್ತದೆ. ಲೈಂಗಿಕ ಶಿಕ್ಷಣದಿಂದ ಹರೆಯದವರನ್ನು ಹೆಚ್.ಐ.ವಿ ಸೋಂಕು, ವಿಕೃತ ಲೈಂಗಿಕ ಕ್ರಿಯೆಗಳು ಮತ್ತು ಲೈಂಗಿಕ ರೋಗಗಳಿಂದ ದೂರವಿಡಬಹುದು. ಅದೇ ರೀತಿ ಲೈಂಗಿಕ ತಪ್ಪು ಕಲ್ಪನೆಗಳಿಂದ ಮನಸ್ಸನ್ನು ನಿರಾಳಗೊಳಿಸಬಹುದು. ಸಲಿಂಗ ಕಾಮಿಗಳಿಂದ ಲೈಂಗಿಕ ಅತ್ಯಾಚಾರ, ಹರೆಯದ ಹೆಣ್ಣು ಮಕ್ಕಳಲ್ಲಿ ನಾವು ನೋಡುವ ಗರ್ಭಧರಿಸುವಿಕೆ ಇವುಗಳಿಂದ ಹರೆಯದವರನ್ನು ದೂರವಿಡಬಹುದು. ಹರೆಯದವರು ಸ್ವತಂತ್ರವಾಗಿ ಬದುಕಲು, ಸಮಗ್ರವಾಗಿ ಯೋಚಿಸುವ, ಆರ್ಥಿಕವಾಗಿ ಸಬಲರಾಗುವ ಮತ್ತು ಸರಿಯಾದ ತೀರ್ಮಾನ ತೆಗೆದುಕೊಳ್ಳುವ ಕೌಶಲಗಳನ್ನು ಬೆಳೆಸಿಕೊಳ್ಳುವ ದಿಸೆಯಲ್ಲಿ ಅವರಿಗೆ ಸಕಾರಾತ್ಮಕ ಸಲಹೆ ನೀಡಬೇಕು.

ಹರೆಯದವರು ಸಾಮಾಜಿಕವಾಗಿ ಸದೃಢವಾಗಲು ಸಮುದಾಯಗಳ ಸ್ವಯಂ ಸೇವಾ ಸಂಸ್ಥೆಗಳು, ಕ್ರೀಡಾ ಸಂಸ್ಥೆಗಳು, ಸಾಹಿತ್ಯ, ಸಂಗೀತ, ಕಲೆಗಳಲ್ಲಿ ತಮ್ಮನ್ನು ಅಳವಡಿಸಿಕೊಳ್ಳಲು ಪ್ರೋತ್ಸಾಹಿಸಬೇಕು. ಗುಣಮಟ್ಟದ ಶಿಕ್ಷಣ, ಸಾಮಾಜಿಕ ಕೌಶಲಗಳು, ಹವ್ಯಾಸಗಳು, ಮತ್ತು ಜೀವನ ಕೌಶಲಗಳು ಹರೆಯದವರನ್ನು ಸಂಸ್ಕಾರವಂತ ಪ್ರಜೆಗಳನ್ನಾಗಿ ರೂಪಿಸುತ್ತದೆ. ಸಂಸ್ಕಾರವು ಹರೆಯದವರನ್ನು ಕೆಟ್ಟ ಚಟಗಳಿಂದ ಮತ್ತು ಸಮಾಜಬಾಹಿರ ವರ್ತನೆಗಳಿಂದ ದೂರವಿಡಲು ಪೂರಕ. ಆತ್ಮೀಯ ಗೆಳೆಯರು, ಹಿರಿಯರು ಮತ್ತು ಸಾಧಕರ ಒಡನಾಟ, ಅವರೊಂದಿಗಿನ ಮಾತುಕತೆಗಳು, ಮಾರ್ಗದರ್ಶನಗಳು ಹರೆಯದವರ ಮನಸ್ಸನ್ನು ಮತ್ತು ಅವರ ನಡವಳಿಕೆಗಳನ್ನು ಮಾದರಿಯಾಗಿರಿಸಿ, ಮುನ್ನಡೆಯಲು ಪೂರಕ.

ಹರೆಯದವರು ಸ್ವತಂತ್ರರಾಗಿ, ಕುಟುಂಬದ ಮತ್ತು ಸಮಾಜದ ರೀತಿ ರಿವಾಜುಗಳನ್ನು ಅನುಸರಿಸಿ, ತಮ್ಮ ಯೋಚನೆಗಳನ್ನು ಮತ್ತು ಭಾವನೆಗಳನ್ನು ಆತ್ಮವಿಶ್ವಾಸದಿಂದ ಒಳ್ಳೆಯ ಮಾತುಗಳಲ್ಲಿ ವ್ಯಕ್ತಪಡಿಸುವುದು ಹರೆಯದವರ ಕರ್ತವ್ಯ. ''ಕೋಶ ಓದು, ದೇಶ ನೋಡು'' ಎಂಬ ನಾಣ್ನುಡಿಯಂತೆ ಹರೆಯದವರನ್ನು ಜ್ಞಾನಗಳಿಸಲು ಕತೆ ಕಾದಂಬರಿಗಳ ಮೂಲಕ ಜ್ಞಾನ ಗಳಿಸುತ್ತಾ, ಬೇರೆ ಬೇರೆ ಸ್ಥಳಗಳನ್ನು ವೀಕ್ಷಿಸುತ್ತಾ ಜನರನ್ನು ಭೇಟಿ ಮಾಡಿ, ಅಲ್ಲಿಯ ಸಂಸ್ಕೃತಿಯನ್ನು ಅರಿತುಕೊಂಡು ಒಳ್ಳೆಯ ವ್ಯಕ್ತಿತ್ವವನ್ನು ಗಳಿಸಿಕೊಳ್ಳಲು ಪ್ರೋತ್ಸಾಹಿಸುವುದು ಸರ್ಕಾರ, ಸಮಾಜ, ಪೋಷಕರು, ಉಪಾಧ್ಯಾಯರು ಮತ್ತು ಸಮಾಜ ಚಿಂತಕರ ಕರ್ತವ್ಯ. ಹೀಗೆ ಹರೆಯವದರನ್ನು ಪ್ರಜ್ಞಾವಂತ ಪ್ರಜೆಯಾಗಿ ರೂಪಿಸುವಲ್ಲಿ ಸಮಾಜವು ಮಹತ್ವದ ಪಾತ್ರ ವಹಿಸುತ್ತದೆ.

'ಕ್ಯಾರಿಮನ್' ಕಿ ಬಾತ್!

ಹೆಂಡತಿ ಶಾಪಿಂಗ್ ಮಾಡುವಾಗ ಚೀಲ ಹಿಡಿದುಕೊಳ್ಳುವ ಹೊಣೆಗಾರಿಕೆ ಗಂಡನ ಹೆಗಲೇರುವುದು ಸಾಮಾನ್ಯ. ಇನ್ನು ಆ ಕೆಲಸವನ್ನು 'ಕ್ಯಾರಿಮನ್' ಮಾಡುತ್ತಾರೆ.



ವಾರದ ವರಸೆ
• ಸಂದೇಶ್ ನಾಯ್ಕ್ ಹಕ್ಲಾಡಿ
naiksh2@gmail.com

'ಶಾಪಿಂಗ್ ಹೋಗಬೇಕು' ಹೀಗೊಂದು ಮಾತು ತುಟಿಯಿಂದೀಚೆಗೆ ಜಿಗಿಯುತ್ತಿದ್ದಂತೆ, ಕೆಲವರ ಬಾಯಿಯಿಂದ ತರತರಹದ ಆಕ್ಷೇಪ, ಅಪಸ್ವರಗಳು ಒಂದೇ ಸಮನೆ ಪ್ರವಾಹೋಪಾದಿಯಲ್ಲಿ ಹರಿದು ಬರಲಾರಂಭಿಸುತ್ತದೆ.

''ಅಯ್ಯೋ ಮತ್ತೆ ಶಾಪಿಂಗಾ? ನನಗಂತೂ ಬರಲಾಗದಪ್ಪಾ, ನೀವೇ ಹೋಗಿ ಬನ್ನಿ, ಅಬ್ಬಾ ಅಷ್ಟು ಹೊತ್ತು ಅಲ್ಲೆಲ್ಲಾ ಕಾಯುತ್ತಾ; ತಿರುಗಾಡುತ್ತಾ ಕಾಲಕಳೆಯಲು ಸಾಧ್ಯವೇ ಇಲ್ಲ, ಅಲ್ಲಿ ನಾನಂತೂ ಚೀಲವನ್ನೆಲ್ಲಾ ಹೊತ್ತು ನಡೆದಾಡಲಾರೆ, ಶಾಪಿಂಗ್ ಏಕೆ? ಅದಕ್ಕಿಂತ ಆನ್‌ಲೈನ್‌ಲಿ ಆರ್ಡರ್ ಮಾಡಬಹುದಲ್ಲ?'' ಇಂಥ ಬಗೆ ಬಗೆಯ ಬೇಸರವನ್ನು ಹೊರಹಾಕುವ ನುಡಿಬುಗ್ಗೆಯಂತೆ ಬಾಯಿ ಕಾರ್ಯನಿರ್ವಹಿಸಲಾರಂಭಿಸುತ್ತದೆ. ಶಾಪಿಂಗ್ ಎಂಬ ಪ್ರಕ್ರಿಯೆಯೊಂದು ಈ ಬಗೆಯ ಕೋಪ-ತಾಪಗಳತ್ತ ತಿರುಗಿ, 'ಅರರ್ರೇ.. ಇದೇನಿದು ಶಾಪಿಂಗೋ? ಶಾಪವೋ?' ಎಂಬ ಅನುಮಾನವೊಂದು ಮೂಡಲೂ ಇದು ಕಾರಣವಾದರೆ ಅಚ್ಚರಿ ಏನಿಲ್ಲ. ಪರಸ್ಪರ ಅಸಹನೆ, ಅತೃಪ್ತಿ ಹಾಗೂ ಆಕ್ರೋಶವೆಂಬ ಗೊಂದಲ ಮೂಡಲೂ ಇದು ಕಾರಣವಾಗುತ್ತಿತ್ತು. ಒಟ್ಟಾರೆಯಾಗಿ, 'ಇಲ್ಲ ಇಲ್ಲ ಚೀಲ ಹೊತ್ತು ತಿರುಗಲು ಸಾಧ್ಯವಿಲ್ಲ' ಎಂಬ ಕೆಲವರ ಮನದಾಳದ ಕೊರಗು ಹಾಗೂ ಪ್ರತಿರೋಧದ ಕೂಗಿಗೂ ಮನ್ನಣೆಯೊಂದು ಸಿಕ್ಕ ಸುದ್ದಿ ದಿಲ್ಲಿಯಿಂದಿಲ್ಲಿಗೆ ತೇಲಿ ಬಂದಿದೆ. ಅದುವೇ 'ಕ್ಯಾರಿಮೆನ್' ಬುಕ್ಕಿಂಗ್.

ಜವಾಬ್ದಾರಿಗೆ ಹೆಗಲು ನೀಡುವುದು, ಹೊಣೆ ಹೊರುವುದು ಎಂದೆಲ್ಲಾ ಹೇಳುವಾಗ ಈ ಬದುಕಿನಲ್ಲಿ 'ಹೊರುವ' ಕಾಯಕಕ್ಕೆ ಆದರದ್ದೇ ಆದ ಮಹತ್ವ ಇದೆ ಎಂದನಿಸುವುದರಲ್ಲಿ ಯಾವುದೇ ಸಂಶಯವಿಲ್ಲ. 'ಒಂಭತ್ತು ತಿಂಗಳು ಹೊತ್ತು....' ಎಂದು ಹೇಳುವುದರಿಂದ ಹಿಡಿದು, 'ಜೀವನದಲ್ಲಿ ಅದೆಷ್ಟೇ ಆಸ್ತಿ, ಅಂತಸ್ತು ಮಾಡಿಟ್ಟರೂ ಕೂಡಾ ಕೊನೆಯಲ್ಲಿ ನಾಲ್ಕು ಜನ ತಮ್ಮ ಹೆಗಲ ಮೇಲೆ ಹೊತ್ತು ಸಾಗುತ್ತಾರೆ' ಎಂದೆನ್ನುವವರೆಗೆ ಈ ಹೊರುವುದು ಹೇಗೆಲ್ಲ ಮಾನವ ಜೀವನವನ್ನು ಆವರಿಸಿಕೊಂಡಿದೆ ಎನ್ನುವುದನ್ನು ಅರ್ಥೈಸಿಕೊಳ್ಳಬಹುದು. ಅಂದರೆ ನಾವೆಲ್ಲರೂ ಬದುಕಿನ ಈ ಪ್ರಯಾಣದಲ್ಲಿ ಏನೇನನ್ನೆಲ್ಲಾ ಹೊರಬೇಕಾಗುತ್ತದೆ ಎಂದು ಹೇಳಲಂತೂ ಸಾಧ್ಯವೇ ಇಲ್ಲ. ಅವುಗಳ ಪೈಕಿ ನಾವು ಹೆಚ್ಚು ಹೊರುವುದೇ ಒಂದಿಲ್ಲೊಂದು ಚೀಲಗಳನ್ನು. ಈ ಚೀಲಗಳ ಜಾಲದಲ್ಲಿಯೇ ಮಾನವ ಬದುಕು ಸಿಲುಕಿಕೊಂಡಿದೆ ಎನ್ನುವುದಕ್ಕೆ ಶಾಲಾಚೀಲ, ಊಟದ ಚೀಲ, ಮನೆಯ ದಿನಸಿ ಸಾಮಾನಿನ ಚೀಲ, ಲ್ಯಾಪ್‌ಟಾಪ್ ಚೀಲ, ಕೈ ಚೀಲ, ಎಲೆ ಅಡಿಕೆ ಚೀಲ, ದುಡ್ಡಿನ ಚೀಲ ಹೀಗೆ ಅದೆಷ್ಟೋ ಚೀಲಗಳೇ ಜೀವಂತ ಸಾಕ್ಷಿ ಎನ್ನಬಹುದು. ಈ ತೆರನಾದ ಹತ್ತು ಹಲವು ಚೀಲಗಳನ್ನು ಹೊತ್ತು ಹೊತ್ತೂ ಸುಸ್ತಾದ ಜನರಿಗೆ, ಮತ್ತೆ ಶಾಪಿಂಗ್‌ನ ಆ ಹಲವಾರು ಚೀಲಗಳನ್ನು ಹೊತ್ತು ಸಾಗಬೇಕು ಎಂದರೆ ಅಸಾಧ್ಯವೇ ಸರಿ. ಅದರಲ್ಲೂ ಇರುವ ಎರಡೇ ಎರಡು ಕೈಗಳಲ್ಲಿ ಅದೆಷ್ಟು ಚೀಲಗಳನ್ನು ತಾನೇ ಹೊರಲಾದೀತು ಹೇಳಿ? ಹೀಗಾಗಿ ಚೀಲಗಳನ್ನು ಕ್ಯಾರಿ ಮಾಡಬೇಕು ಎಂದು ಶಾಪಿಂಗ್‌ಗೆ ಜೊತೆಯಾದವರಲ್ಲಿ ಹೇಳಿದರೆ ಅವರಂತೂ ಕೆಕ್ಕರಿಸಿ ನೋಡದೇ ಇರಲಾರರು. ಅಷ್ಟೂ ಸಾಲದೆನ್ನುವಂತೆ ಕ್ಯಾಕರಿಸಿ ಉಗಿದರೂ ಉಗಿಸಿಕೊಳ್ಳಬೇಕಷ್ಟೇ!



ನಾವು ಮಾತಿನ ಭರದಲ್ಲಿ ''ಹೇಯ್ ಕ್ಯಾರಿ ಆನ್..'' ಎಂದು ಹೇಳಿದಷ್ಟೂ ಸಲೀಸಾಗಿ ಈ ಬದುಕು ಮುಂದೆ ಸಾಗಬೇಕು ಎಂದರೆ ಕ್ಯಾರಿ ಬ್ಯಾಗ್‌ಗಳನ್ನು ಕ್ಯಾರಿ ಮಾಡಲೇಬೇಕಾಗುತ್ತದೆ ಎನ್ನುವುದು ಸರ್ವವಿಧಿತ. ಹಾಗಂತ ಅದಕ್ಕಾಗಿ ಯಾರು ಯಾರದೋ ಕೈಕಾಲು ಹಿಡಿದು, ಬಗೆ ಬಗೆಯಾಗಿ ಬೇಡಿಕೊಂಡು, ಹಲ್ಲು ಗಿಂಜುವುದೆಲ್ಲ ಹಳತಾಯಿತು. ಸದ್ಯ ಅದರ ಗೋಜಿಗೆ ಹೋಗದೇ 'ಕ್ಯಾರಿಮನ್'ಗಳ ಸಹಾಯ ಪಡೆದರೆ ಶಾಪಿಂಗ್‌ನ ಈ ಸಮಸ್ಯೆಗಳೆಲ್ಲವೂ ಶಾಪಮುಕ್ತವೇ ಸರಿ. ಅವರು ಸಿಕ್ಕರೆಂದರೆ ಶಾಪಿಂಗ್ ಶಿಖಾಮಣಿಗಳ ಕೆಲಸ ಬಲು ಸುಲಭ, ಸರಾಗ ಎನ್ನುವುದು ಅವರು ಏನೇನು ಕೆಲಸ ಮಾಡುತ್ತಾರೆ ಎನ್ನುವುದನ್ನು ನೋಡಿದರೆ ಅರ್ಥವಾಗುತ್ತದೆ. ಶಾಪಿಂಗ್‌ಗೆ ಸಂಬಂಧಿಸಿದಂತೆ ಚೀಲಗಳನ್ನು ಕ್ಯಾರಿ ಮಾಡಲು ವಿಫಲರಾಗಿ ಅವರ ಮನ ಗೆಲ್ಲಲು ಸೋತವರೂ ಸಹ ಈಗ 'ಕ್ಯಾರಿಮನ್' ಸೇವೆಯನ್ನು ಬಳಸಿಕೊಂಡು ಅವರ ಮನಗೆಲ್ಲಲು ಸಾಧ್ಯವಿದೆ. ಅಂದರೆ ಈ ಸೌಲಭ್ಯದಿಂದ ಶಾಪಿಂಗ್‌ನಲ್ಲಿ ಖರೀದಿಸಿದ ಸಾಮಾನುಗಳನ್ನು ಕ್ಯಾರಿ ಮಾಡುವ ಕಿರಿ ಕಿರಿ ಇಲ್ಲದೇ ತಮಗೆ ಬೇಕೆನಿಸಿದ್ದನ್ನೆಲ್ಲಾ ನಿಶ್ಚಿಂತೆಯಿಂದ ಖರೀದಿಸುತ್ತಾ ಸಾಗುವ ಮೂಲಕ ಮನ ಹಗುರಾಗಿದೆ, ಎಲ್ಲೆಲ್ಲೋ ತೇಲಾಡಿದೆ, ಖುಷಿಯಲ್ಲಿ ಹಾರಾಡಿದೆ ಎಂದೆನ್ನುತ್ತಾ ಶಾಪಿಂಗೂ ವರವಾಗುವ ಪರಿಯನ್ನು ಅನುಭವಿಸಿ ತೀರಬಹುದು. ಹಾಗೆ ನೋಡಿದರೆ ಇದು ನಾರಿಮಣಿಗಳಿಗಂತೂ ತುಂಬಾ ಪ್ರಯೋಜನ ಎಂದು ಹೇಳಿದರೂ ಕೂಡಾ, ಗಂಡಸರೂ ಇದರ ಫಲಾನುಭವಿಗಳೇ! ಏಕೆಂದರೆ ಅವರಿಗೀಗ ಈ ಕ್ಯಾರಿ ಮಾಡುವ ಬಲು ತ್ರಾಸದಾಯಕ ಕೆಲಸದಿಂದ ಒಂದು ತೆರನಾದ ಮುಕ್ತಿ ದೊರಕಿದಂತೆಯೇ ಸರಿ. ಆದರೂ ಮಹಿಳೆಯರಿಗೂ ಪುರುಷರ ಅನುಮತಿಗೆ ಕ್ಯಾರೇ ಅನ್ನದೇ ಶಾಪಿಂಗ್‌ನಲ್ಲಿ ತೊಡಗಿಸಿಕೊಳ್ಳಲೂ ಇದರಿಂದ ಅವರಿಗೂ ಅನುಕೂಲವೇ ಸೈ.

ಜನಜಂಗುಳಿಯಿಂದ ಗಿಜಿಗುಡುವ, ಎಲ್ಲೆಲ್ಲೂ ನೂಕುನುಗ್ಗಲಿನಿಂದ ಕೂಡಿರುವ, ತಮ್ಮಿಷ್ಟದ ಶಾಪಿಂಗ್‌ನಲ್ಲಿ ಮುಳುಗಿಹೋಗಿರುವ ಜನರ ದಂಡಿನಿಂದ ತುಂಬಿ ಹೋಗಿರುವ ಮಾಲ್ ಅಥವಾ ಮಾರ್ಕೆಟ್‌ನ್ನು ನೋಡಿದ ಯಾವುದೋ ಸ್ಟಾರ್ಟ್-ಅಪ್ ಶೂರನಿಗೆ ಹೀಗೊಂದು ವಿಚಾರ ಸ್ಪಷ್ಟವಾಗಿರಬೇಕು. ಅದೇನೆಂದರೆ ಈ ಭೂಮಿಯ ಮೇಲೆ ಉಂಟಾಗುತ್ತಿರುವ ವಾಯುಗುಣದ ಬದಲಾವಣೆ, ದೇಶ-ದೇಶಗಳ ನಡುವಿನ ಯುದ್ಧ, ಹಿಮಾಲಯ ಕರಗುವುದು, ನೆರೆ-ಬರ ಇವುಗಳೆಲ್ಲ ಅಸಲಿ ಸಮಸ್ಯೆಗಳೇ ಅಲ್ಲ. ಬದಲಿಗೆ ಆ ಕೈಯ್ಯಲ್ಲಿ ನಾಲ್ಕಾರು ಈ ಕೈಯ್ಯಲ್ಲಿ ನಾಲ್ಕಾರು ತುಂಬಿದ ಚೀಲಗಳನ್ನು ಹಿಡಿದುಕೊಂಡು, ಹೆಜ್ಜೆಯ ಮೇಲೆ ನಿಯಂತ್ರಣ ಸಾಧಿಸಲಾಗದೇ ಅತ್ತಿಂದಿತ್ತ, ಇತ್ತಿಂದತ್ತ ಓಲಾಡುತ್ತಾ ಓಲಾ, ಉಬರ್‌ಗೆ ಕಾಯುತ್ತಾ ಇಲ್ಲವೇ ಅದನ್ನು ಪಾರ್ಕಿಂಗ್ ನಿಲ್ಲಿಸಿರುವ ಕಾರಿನವರೆಗೆ ಅತ್ಯಂತ ಪ್ರಯಾಸದಿಂದ ಹೊತ್ತುಕೊಂಡು ಹೋಗುವಲ್ಲಿನ ತೊಂದರೆ ತಾಪತ್ರಯಗಳೇ ಈ ಕಾಲದ ಬಹುದೊಡ್ಡ ಜ್ವಲಂತ ಸಮಸ್ಯೆ ಅನಿಸಿರಬೇಕು. ಈ ಕಾರಣಕ್ಕೆ ಆತ ತುಂಬಾ ಯೋಚಿಸಿ ಹೀಗೊಂದು ವ್ಯವಸ್ಥೆಯನ್ನು ಸ್ಟಾರ್ಟ್-ಅಪ್ ಆಗಿ ಪರಿಚಯಿಸಿರಲಿಕ್ಕೂ ಸಾಕು. ಸೊನ್ನೆಯನ್ನು ಶೋಧಿಸಿದ, ಚಂದ್ರನೆಡೆಗೆ ಹೆಜ್ಜೆ ಹಾಕಿದ, AI ಅಂಗಳಕ್ಕೆ ಲಗ್ಗೆಯಿಟ್ಟ ಮಾನವ ಇದೀಗ ಶಾಪಿಂಗ್ ಹೋದವರ ಲಗೇಜ್‌ಗಳನ್ನು ಹಿಡಿದುಕೊಳ್ಳಲು ಅನುಕೂಲವಾಗುವಂತೆ ವ್ಯಕ್ತಿಗಳನ್ನು ಕಂಡುಹಿಡಿದಿರುವುದು ಅಲ್ಲಲ್ಲ ಪರಿಚಯಿಸಿರುವುದು ವಿಶೇಷವೇ ಸರಿ.

ಹೆಂಡತಿಶಾಪಿಂಗ್‌ಮಾಡುವಾಗಚೀಲಹಿಡಿದುಕೊಳ್ಳುವಹೊಣೆಗಾರಿಕೆಗಂಡನ ಹೆಗಲೇರುವುದುಸಾಮಾನ್ಯ.ಇನ್ನುಆಕೆಲಸವನ್ನು'ಕ್ಯಾರಿಮನ್'ಮಾಡುತ್ತಾರೆ. ಅಲ್ಲಿಗೆಗಂಡನಮೊದಲಟಾಸ್ಕ್‌ಔಟ್‌ಸೋರ್ಸ್‌ಮಾಡಿದಂತಾಯಿತು.ಮುಂದೆ ಈಕ್ಯಾರಿಮನ್‌ಬುಕ್ಕಿಂಗ್‌ನಪ್ರೋ,ಪ್ರೀಮಿಯಮ್,ಗೋಲ್ಡ್‌ಪ್ಯಾಕೇಜ್‌ಎಂದೆಲ್ಲ ಪರಿಚಯಿಸಿ,ಅವರುಮಾಡುವಖರೀದಿಯಆಯ್ಕೆಯನ್ನುಪ್ರಶಂಸಿಸುವುದು, ಸೋಷಿಯಲ್‌ಮೀಡಿಯಾಗಳಲ್ಲಿಪೋಸ್ಟ್‌ಮಾಡಲುಅನುಕೂಲಕರವಾಗುವಂತೆ ಲೆಕ್ಕವಿಲ್ಲದಷ್ಟು ಬಗೆ ಬಗೆಯ ಪೋಸ್‌ಗಳ ಫೋಟೊ ಕ್ಲಿಕ್ಕಿಸಿ ನೀಡುವುದು, ಇನ್ನು ಅವರು ಅದೆಷ್ಟೇ ಅಂಗಡಿಗಳನ್ನು ಹತ್ತಿಳಿದರೂ ತಾಳ್ಮೆವಹಿಸಿ ಸಮಾಧಾನದಿಂದ ಇರುವುದು ಇನ್ನಿತ್ಯಾದಿ ಫೀಚರ್‌ಗಳನ್ನೂ ಅದರ ಜೊತೆಗೆ ಸೇರಿಸಬಹುದು. ಯಾವ ಯಾವ ಫೀಚರ್‌ನ ಅಗತ್ಯವಿದೆಯೋ ಅದಕ್ಕೆ ತಕ್ಕಂತೆ ಹಣ ಪಾವತಿಸಿ, ಆಯ್ಕೆ ಮಾಡಿಕೊಳ್ಳುವ ಅವಕಾಶವೂ ಲಭ್ಯವಾಗಬಹುದು.

ಈ ಎಲ್ಲಾ ಬೆಳವಣಿಗೆಗಳ ನಡುವೆ ಒಂದು ಕೈಯ್ಯಲ್ಲಿ ತರಕಾರಿ ಚೀಲ, ಮತ್ತೊಂದರಲ್ಲಿ ದಿನಸಿ ಚೀಲ, ಹೆಗಲಲ್ಲಿ ನೇತಾಡುವ ವ್ಯಾನಿಟಿ ಬ್ಯಾಗ್, ಕಂಕುಳ ಮಧ್ಯದಲ್ಲಿ ಸಿಕ್ಕಿಸಿಕೊಂಡ ನೀರಿನ ಬಾಟಲ್ ಜೊತೆಗೊಂದು ಪುಟ್ಟ ಮಗುವನ್ನೂ ಅದು ಹೇಗೋ ಅಡ್ಜೆಸ್ಟ್ ಮಾಡಿ ಕರೆದುಕೊಂಡು ಹೋಗಬಲ್ಲ ಅತ್ಯಪರೂಪದ ಸಾಮರ್ಥ್ಯವುಳ್ಳ ಕೆಲವು ಭಾರತೀಯ ಮಹಿಳೆಯರಲ್ಲಿ ಈ ಬಗ್ಗೆ ಹೇಳಿದರೆ ಅವರು''ಅದ್ಯಾಕೆ ಅವರಿಗೆ ಹಣ ಕೊಡಬೇಕು? ಬೇಕಿದ್ದರೆ ಅವರ ಯಾವುದಾದರೂ ಚೀಲ ಇದ್ದರೆ ಹೇಳಿ ಅದನ್ನೂ ನಾವೇ ಹಿಡಿದುಕೊಂಡು ಹೋಗುತ್ತೇವೆ'' ಎಂದರೂ ಅಚ್ಚರಿಯೇನಿಲ್ಲ. ಇಂಥ ಚೀಲ ಹಿಡಿದುಕೊಳ್ಳುವ ವಿಷಯದಲ್ಲಿ ಅವರೆಂದೂ ಅಷ್ಟ/ನವ/ದಶಭುಜೆಯರೇ ಹೌದು. ಆದಾಗ್ಯೂ ಈ ಕ್ಯಾರಿಮನ್‌ಗಳು ಅದು ಹೇಗೆ ಮನ ಗೆಲ್ಲುವರೋ ಕಾದು ನೋಡಬೇಕಷ್ಟೇ!

ಓವರ್‌ಡೋಸ್: ''ನೀ ಏನೂ ಮಾಡುವುದು ಬೇಡ, ಜಸ್ಟ್ ನನ್ ಜೊತೆ ಬಂದರೆ ಅಷ್ಟೇ ಸಾಕು'' ಎಂದು ಹೇಳಿಯೇ ಶಾಪಿಂಗ್‌ಗೆ ಕರೆದುಕೊಂಡು ಹೋಗುತ್ತಾರೆ. ಆದರೆ ಆ ಶಾಪಿಂಗ್ ಮುಗಿಯುವಷ್ಟರಲ್ಲಿ ಜಸ್ಟ್ ಬಂದರಷ್ಟೇ ಸಾಕಾಗುವುದಿಲ್ಲ ಎಂಬ ಬಹುದೊಡ್ಡ ಸತ್ಯವೊಂದು ಅರ್ಥವಾಗಿರುತ್ತದೆ.

12 ವರ್ಷಗಳ ಮೋದಿ ಆಳ್ವಿಕೆ ಪಾರದರ್ಶಕ: ಸಚಿವ

ನಮೋ ಆಡಳಿತ ವಿಕಸಿತ ಭಾರತ

ಹೊಸದಿಲ್ಲಿ: ಪ್ರಧಾನಿ ಮೋದಿ ನೇತೃತ್ವದ 12 ವರ್ಷಗಳ ಆಡಳಿತವು ಭಾರತವನ್ನು ಅವಕಾಶ, ನಾವೀನ್ಯತೆ, ಆತ್ಮವಿಶ್ವಾಸದಿಂದ ಮುನ್ನಡೆಯುವ ಮಹತ್ವಾಕಾಂಕ್ಷೆಯ ರಾಷ್ಟ್ರವಾಗಿ ಪರಿವರ್ತಿಸಿದೆ ಎಂದು ಕೇಂದ್ರ ಸಚಿವ ಜಿತೇಂದ್ರ ಸಿಂಗ್ ಭಾನುವಾರ ಹೇಳಿದ್ದಾರೆ. ಆಡಳಿತಾತ್ಮಕ ಸುಧಾರಣೆಗಳು, ತಂತ್ರಜ್ಞಾನದ ಪ್ರಜಾಪ್ರಭುತ್ವೀಕರಣ ಮತ್ತು ನಾಗರಿಕ ಕೇಂದ್ರಿತ ನೀತಿಗಳು ಭಾರತೀಯರ ಭವಿಷ್ಯದ ದೃಷ್ಟಿಕೋನವನ್ನೇ ಬದಲಾಯಿಸಿವೆ ಎಂದು ಅವರು ಪ್ರತಿಪಾದಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 2047ರ ವೇಳೆಗೆ ಭಾರತವನ್ನು ಅಭಿವೃದ್ಧಿ ಹೊಂದಿದ ರಾಷ್ಟ್ರವನ್ನಾಗಿ ಮಾಡುವ ಗುರಿಯತ್ತ ದೇಶವು ಮುನ್ನಡೆಯುತ್ತಿದ್ದು, ಪ್ರಸ್ತುತ ಸುಮಾರು 9 ಬಿಲಿಯನ್ ಇರುವ ಭಾರತದ ಬಾಹ್ಯಾಕಾಶ ಆರ್ಥಿಕತೆಯು ಮುಂದಿನ 7-8 ವರ್ಷಗಳಲ್ಲಿ 45 ಬಿಲಿಯನ್‌ಗೆ ವಿಸ್ತರಿಸುವ ನಿರೀಕ್ಷೆಯಿದೆ ಎಂದರು.

ಬಾಹ್ಯಾಕಾಶ ಮತ್ತು ಸ್ಟಾರ್ಟ್‌ಅಪ್ ಕ್ಷೇತ್ರದಲ್ಲಿ ಕ್ರಾಂತಿ: ಪ್ರಧಾನಿ ನರೇಂದ್ರ ಮೋದಿ ಅವರು ಸತತವಾಗಿ 4,399 ದಿನಗಳ ಅಧಿಕಾರಾವಧಿ ಪೂರೈಸಿರುವುದನ್ನು ಉಲ್ಲೇಖಿಸಿದ ಡಾ. ಜಿತೇಂದ್ರ ಸಿಂಗ್, ಕಳೆದ ದಶಕದಲ್ಲಿ ಕಂಡುಬಂದ ಗಮನಾರ್ಹ ಸಾಧನೆಗಳನ್ನು ಪಟ್ಟಿ ಮಾಡಿದರು. ಕೆಲವು ವರ್ಷಗಳ ಹಿಂದೆ ಒಂಟಿ ಅಂಕಿಯಲ್ಲಿದ್ದ ದೇಶದ ಬಾಹ್ಯಾಕಾಶ ಸ್ಟಾರ್ಟ್‌ಅಪ್‌ಗಳ ಸಂಖ್ಯೆ ಇಂದು ಸುಮಾರು 400ಕ್ಕೆ ತಲುಪಿದೆ ಮತ್ತು ಇತ್ತೀಚೆಗೆ ಒಂದು ಸ್ಟಾರ್ಟ್‌ಅಪ್ ಯೂನಿಕಾರ್ನ್ ಸ್ಥಾನಮಾನವನ್ನು ಪಡೆದುಕೊಂಡಿದೆ ಎಂದು ಹೇಳಿದರು.

2014ರಲ್ಲಿ ಕೇವಲ 350-400 ರಷ್ಟಿದ್ದ ದೇಶದ ಒಟ್ಟಾರೆ ಸ್ಟಾರ್ಟ್‌ಅಪ್‌ಗಳ ಸಂಖ್ಯೆ ಇಂದು 2.3 ಲಕ್ಷ ದಾಟಿದ್ದು, ಸುಮಾರು 24-25 ಲಕ್ಷ ಉದ್ಯೋಗಗಳನ್ನು ಸೃಷ್ಟಿಸಿದೆ. ವಿಶೇಷವೆಂದರೆ, ಇವುಗಳಲ್ಲಿ ಅರ್ಧದಷ್ಟು ಸ್ಟಾರ್ಟ್‌ಅಪ್‌ಗಳು ದ್ವಿತೀಯ ಮತ್ತು ತೃತೀಯ ದರ್ಜೆಯ ನಗರಗಳಲ್ಲಿದ್ದರೆ, ಶೇ.35 ರಿಂದ 39ರಷ್ಟು ಸ್ಟಾರ್ಟ್‌ಅಪ್‌ಗಳನ್ನು ಮಹಿಳೆಯರೇ ಮುನ್ನಡೆಸುತ್ತಿದ್ದಾರೆ.

ನಾಗರಿಕ ಕೇಂದ್ರಿತ ಸುಧಾರಣೆ: ಸರ್ಕಾರದ ಆರಂಭಿಕ ಸುಧಾರಣೆಗಳು ನಾಗರಿಕ ಕೇಂದ್ರಿತ ಆಡಳಿತ ಮಾದರಿಗೆ ಸಾಕ್ಷಿಯಾಗಿವೆ ಎಂದು ಸಚಿವರು ಹೇಳಿದರು. ಗೆಜೆಟೆಡ್ ಅಧಿಕಾರಿಗಳಿಂದ ದಾಖಲೆಗಳ ದೃಢೀಕರಣದ ಅಗತ್ಯವನ್ನು ಕೊನೆಗೊಳಿಸಿ, ಸ್ವಯಂ ದೃಢೀಕರಣಕ್ಕೆ ಅವಕಾಶ ನೀಡಿದ್ದು ನಾಗರಿಕರ ಮೇಲಿನ ನಂಬಿಕೆಯನ್ನು ಪ್ರತಿಬಿಂಬಿಸುತ್ತದೆ. ಹಾಗೆಯೇ, ಸರ್ಕಾರಿ ನೇಮಕಾತಿ ಗಳಲ್ಲಿ ಸಂದರ್ಶನ ಪ್ರಕ್ರಿಯೆಯನ್ನು ರದ್ದುಗೊಳಿಸುವ ಮೂಲಕ ಸ್ವಜನಪಕ್ಷಪಾತ, ಭ್ರಷ್ಟಾಚಾರಕ್ಕೆ ಬ್ರೇಕ್ ಹಾಕಲಾಗಿದ್ದು, ಪ್ರತಿಭೆಗೆ ಆದ್ಯತೆ ನೀಡಲಾಗಿದೆ ಎಂದರು.

ನನ್ನಿಂದಲೂ ಸಾಧ್ಯ ಎಂಬ ಸಕಾರಾತ್ಮಕ ಮನಸ್ಥಿತಿ: ಕಳೆದ 12 ವರ್ಷಗಳಲ್ಲಿ ಭಾರತೀಯರಲ್ಲಿ ಉಂಟಾಗಿರುವ ಮಾನಸಿಕ ಬದಲಾವಣೆಯು ಮೋದಿ ಸರ್ಕಾರದ ದೊಡ್ಡ ಹೆಗ್ಗುರುತಾಗಿದೆ. ಇಂದು ಸಣ್ಣ ನಗರಗಳು ಮತ್ತು ಗ್ರಾಮೀಣ ಭಾಗದ ಯುವಕರು ನಾಗರಿಕ ಸೇವಾ ಪರೀಕ್ಷೆಗಳಲ್ಲಿ (ಯುಪಿಎಸ್‌ಸಿ) ಟಾಪರ್‌ಗಳಾಗಿ ಹೊರಹೊಮ್ಮುತ್ತಿದ್ದಾರೆ. ಇದು ತಂತ್ರಜ್ಞಾನ, ಪಾರದರ್ಶಕತೆಯಿಂದಾಗಿ ಎಲ್ಲರಿಗೂ ಸಮಾನ ಅವಕಾಶ ಸಿಗುತ್ತಿರುವುದಕ್ಕೆ ಸಾಕ್ಷಿ ಎಂದು ಸಚಿವರು ಅಭಿಪ್ರಾಯಪಟ್ಟರು. ಚಂದ್ರಯಾನ ಯಶಸ್ಸನ್ನು ಉಲ್ಲೇಖಿಸಿದ ಅವರು, ವೈಜ್ಞಾನಿಕ ಹಿನ್ನಡೆಗಳ ಸಂದರ್ಭದಲ್ಲಿ ಪ್ರಧಾನಿ ಮೋದಿ ಅವರು ವಿಜ್ಞಾನಿಗಳನ್ನು ಪ್ರೋತ್ಸಾಹಿಸಿದ ರೀತಿ ಮತ್ತು ಯಶಸ್ಸನ್ನು ಸಂಭ್ರಮಿಸಿದ ರೀತಿ, ದೇಶದಲ್ಲಿ ವೈಜ್ಞಾನಿಕ ಆವಿಷ್ಕಾರಗಳನ್ನು ಸಾಮೂಹಿಕ ರಾಷ್ಟ್ರೀಯ ಪ್ರಯತ್ನವನ್ನಾಗಿ ನೋಡುವಂತೆ ಮಾಡಿದೆ ಎಂದರು.

ಖಾಸಗಿ ಭಾಗಿತ್ವ ಮತ್ತು ಸಮಾನ ಅಭಿವೃದ್ಧಿ

ಬಾಹ್ಯಾಕಾಶ ಮತ್ತು ಪರಮಾಣು ಶಕ್ತಿಯಂತಹ ಆಯಕಟ್ಟಿನ ವಲಯಗಳನ್ನು ಖಾಸಗಿ ಸಹಭಾಗಿತ್ವಕ್ಕೆ ಮುಕ್ತಗೊಳಿಸುವ ಮೂಲಕ ಉದ್ಯಮಶೀಲತೆಗೆ ಹೊಸ ವೇದಿಕೆ ಕಲ್ಪಿಸಲಾಗಿದೆ. ಸರ್ಕಾರದ ಕಲ್ಯಾಣ ಯೋಜನೆಗಳು ಮತ್ತು ವಸತಿ ಯೋಜನೆಗಳು ಯಾವುದೇ ಜಾತಿ, ಧರ್ಮದ ತಾರತಮ್ಯವಿಲ್ಲದೆ ಪಾರದರ್ಶಕವಾಗಿ ಫಲಾನುಭವಿಗಳನ್ನು ತಲುಪುತ್ತಿದ್ದು, ಇದು ಸಾರ್ವಜನಿಕ ಆಡಳಿತದ ಮೇಲಿನ ನಂಬಿಕೆಯನ್ನು ಹೆಚ್ಚಿಸಿದೆ ಎಂದು ಜಿತೇಂದ್ರ ಸಿಂಗ್ ತಿಳಿಸಿದರು.



3 ದಿನದ ಭೇಟಿಗಾಗಿ ಬಿಹಾರಕ್ಕೆ ಭಾಗವತ್

ಪಾಟ್ನಾ: ರಾಷ್ಟ್ರೀಯ ಸ್ವಯಂಸೇವಕ ಸಂಘದ (ಆರ್‌ಎಸ್‌ಎಸ್) ಸರಸಂಘಚಾಲಕ ಡಾ.ಮೋಹನ್ ಭಾಗವತ್ ಅವರು ಭಾನುವಾರ ಬಿಹಾರಕ್ಕೆ 3 ದಿನಗಳ ಭೇಟಿಗಾಗಿ ಪಾಟ್ನಾಗೆ ಆಗಮಿಸಿದರು. ಬಿಹಾರದ ಸಿಎಂ ಸಮ್ರಾಟ್ ಚೌಧರಿ ಸ್ವಾಗತಿಸಿದರು.

ಭಾಗವತ್ ಅವರು ಜೂನ್ 9ರವರೆಗೆ ಮುಂಗೇರ್‌ನಲ್ಲಿ ತಂಗಲಿದ್ದು, ಸಂಘದ ವಿವಿಧ ಸಂಘಟನಾ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳಲಿದ್ದಾರೆ. ಪುರಾನಿ ಗಂಜ್‌ನ ಸರಸ್ವತಿ ವಿದ್ಯಾಮಂದಿರದಲ್ಲಿ ನಡೆಯುತ್ತಿರುವ 'ಸಂಘ ಶಿಕ್ಷಣ ವರ್ಗ'ದಲ್ಲಿ ಅವರು ಸ್ವಯಂಸೇವಕರಿಗೆ ಮಾರ್ಗದರ್ಶನ ನೀಡಲಿದ್ದಾರೆ.

ಸುಮಾರು 700 ಸ್ವಯಂಸೇವಕರು ತರಬೇತಿ ಶಿಬಿರಗಳಲ್ಲಿ ಭಾಗವಹಿಸುತ್ತಿದ್ದು, ಸಂಘಟನಾ ಸಾಮರ್ಥ್ಯ ವೃದ್ಧಿ, ನಾಯಕತ್ವ ಕೌಶಲ ಅಭಿವೃದ್ಧಿ ಮತ್ತು ಸಮಾಜಮುಖಿ ಕಾರ್ಯಗಳಲ್ಲಿ ಸಕ್ರಿಯ ಪಾತ್ರ ವಹಿಸುವ ಉದ್ದೇಶದಿಂದ ಈ ತರಬೇತಿ ಕಾರ್ಯಕ್ರಮಗಳು ನಡೆಯುತ್ತಿವೆ ಎಂದು ಸಂಘದ ಮೂಲಗಳು ತಿಳಿಸಿವೆ.

ಅಂಡಮಾನ್ ಸಮುದ್ರದಲ್ಲಿ ಭಾರೀ ಪ್ರಮಾಣದ ನೈಸರ್ಗಿಕ ಅನಿಲ ಪತ್ತೆ



ಅಂಡಮಾನ್ ಸಮುದ್ರದಲ್ಲಿ ಭಾರೀ ಪ್ರಮಾಣದ ನೈಸರ್ಗಿಕ ಅನಿಲ ಪತ್ತೆಯಾಗಿರುವುದು ಇಂಧನ ಸ್ವಾವಲಂಬನೆಗಾಗಿ ಭಾರತ ನಡೆಸುತ್ತಿರುವ ಪ್ರಯತ್ನಕ್ಕೆ ಹೊಸ ಭರವಸೆ ದೊರೆತಂತಾಗಿದೆ. ಸಾರ್ವಜನಿಕ ವಲಯದ ಆಯಿಲ್ ಇಂಡಿಯಾ ಲಿಮಿಟೆಡ್ (ಒಐಎಲ್), ಅಂಡಮಾನ್ ದ್ವೀಪಗಳ ಪೂರ್ವ ಕರಾವಳಿಯಿಂದ ಸುಮಾರು 15 ಕಿಮೀ ದೂರದಲ್ಲಿರುವ ಶ್ರೀ ವಿಜಯಪುರಂ-3 ಪರಿಶೋಧನಾ ಬಾವಿಯಲ್ಲಿ ನೈಸರ್ಗಿಕ ಅನಿಲ ಇರುವುದನ್ನು ಖಚಿತಪಡಿಸಿದೆ. ಈ ಮೈಲಿಗಲ್ಲು, ಕಡಲಾಚೆಯ ಪರಿಶೋಧನಾ ಕಾರ್ಯಕ್ರಮಕ್ಕೆ ದೊರೆತ ದೊಡ್ಡ ಯಶಸ್ಸಾಗಿದ್ದು, ಈ ಪ್ರದೇಶ ಇಂಧನ ವಲಯದ ಪ್ರಮುಖ ಕೇಂದ್ರವಾಗಿ ಹೊರಹೊಮ್ಮುವ ಸಾಧ್ಯತೆ ಹೆಚ್ಚಿದೆ. ಆ ಕುರಿತ ಸಂಕ್ಷಿಪ್ತ ವಿವರ ಇಲ್ಲಿದೆ.

ಸುದ್ದಿ ಸಮಗ್ರ

ಇಂಧನ ಭದ್ರತೆಗೆ ಹೊಸ ಭರವಸೆ

ಸಮುದ್ರ ಮಂಥನ ಮಿಷನ್ ಎಂದೂ ಕರೆಯಲ್ಪಡುವ ರಾಷ್ಟ್ರೀಯ ಆಳ ಸಮುದ್ರ ಪರಿಶೋಧನಾ ಮಿಷನ್‌ನಲ್ಲಿ ಭಾರತ ತನ್ನ ಪ್ರಯತ್ನಗಳನ್ನು ತೀವ್ರಗೊಳಿಸುತ್ತಿರುವ ನಿರ್ಣಾಯಕ ಸಮಯದಲ್ಲಿ ಈ ಆವಿಷ್ಕಾರ ನಡೆದಿದೆ.



ಪ್ರಸ್ತುತ ಭಾರತ ಇಂಧನಕ್ಕಾಗಿ ವಿದೇಶಗಳ ಮೇಲೆ ಹೆಚ್ಚು ಅವಲಂಬಿತವಾಗಿದ್ದು, ತನ್ನ ಕಚ್ಚಾ ತೈಲ ಅಗತ್ಯತೆಯ ಶೇ.85ಕ್ಕಿಂತ ಹೆಚ್ಚು ಭಾಗವನ್ನು ಮತ್ತು ಗಣನೀಯ ಪ್ರಮಾಣದ ದ್ರವೀಕೃತ ನೈಸರ್ಗಿಕ ಅನಿಲವನ್ನು (ಎಲ್‌ಎನ್‌ಜಿ) ಆಮದು ಮಾಡಿಕೊಳ್ಳುತ್ತಿದೆ. ಈ ಒಂದು ಆವಿಷ್ಕಾರ ರಾತ್ರೋರಾತ್ರಿ ಪರಿಸ್ಥಿತಿಯನ್ನು ಬದಲಾಯಿಸದಿದ್ದರೂ, ಆಮದು ಅವಲಂಬನೆಯನ್ನು ಕಡಿಮೆ ಮಾಡಲು ಇದು ಒಂದು ಮಾರ್ಗವನ್ನಂತೂ ತೋರಿಸಿದೆ. ಅಂಡಮಾನ್ ಜಲಾನಯನ ಪ್ರದೇಶದಲ್ಲಿ ವಾಣಿಜ್ಯಿಕವಾಗಿ ಲಾಭದಾಯಕ ಅನಿಲ ಸಂಗ್ರಹಣೆ ದೃಢಪಟ್ಟರೆ, ಅದು ಜಾಗತಿಕ ಇಂಧನ ಮಾರುಕಟ್ಟೆಯ ಬೆಲೆ ಏರಿಳಿತಗಳಿಂದ ಭಾರತೀಯ ಆರ್ಥಿಕತೆಯನ್ನು ರಕ್ಷಿಸಲಿದೆ.

ಆವಿಷ್ಕಾರದ ಪ್ರಮಾಣ

ಕೇಂದ್ರ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವ ಹರ್ದೀಪ್ ಸಿಂಗ್ ಪುರಿ, ಈ ಆವಿಷ್ಕಾರವನ್ನು ಇಂಧನ ಅವಕಾಶಗಳ ಸಾಗರ ಎಂದು ಬಣ್ಣಿಸಿದ್ದಾರೆ. ಸಮುದ್ರದ 355 ಮೀಟರ್ ಆಳದಲ್ಲಿ ಮತ್ತು ಸಮುದ್ರ ತಳದ 1,900 ಮೀಟರ್‌ಗಿಂತಲೂ ಹೆಚ್ಚಿನ ಆಳದಲ್ಲಿ ಪ್ರಾಥಮಿಕ ಪರೀಕ್ಷೆಗಳನ್ನು ನಡೆಸಿದಾಗ ಅನಿಲ ಇರುವುದು ಪತ್ತೆಯಾಗಿದೆ. ಪರೀಕ್ಷೆಯ ಸಂದರ್ಭದಲ್ಲಿ ನಿರಂತರ ಜ್ವಾಲೆ ಉರಿದಿರುವುದು ಅನಿಲದ ಸ್ಥಿರ ಉಪಸ್ಥಿತಿಯನ್ನು ದೃಢಪಡಿಸಿದೆ. ಪ್ರಸಕ್ತ ಪರಿಶೋಧನಾ ಅಭಿಯಾನದಲ್ಲಿ ಅಂಡಮಾನ್ ಪ್ರದೇಶದಲ್ಲಿ ಕೊರೆಯಲಾದ ಮೂರು ಬಾವಿಗಳಲ್ಲಿ ಎರಡರಲ್ಲಿ ಹೈಡ್ರೋಕಾರ್ಬನ್ ಪತ್ತೆಯಾಗಿರುವುದು, ಈ ವಲಯದಲ್ಲಿ ಇನ್ನೂ ಹೆಚ್ಚಿನ ಯಶಸ್ಸು ಸಿಗುವ ಭರವಸೆ ಮೂಡಿಸಿದೆ.

- ಆವಿಷ್ಕಾರದ ಸ್ಥಳ ಶ್ರೀ ವಿಜಯಪುರಂ-3 ಬಾವಿ
- ಅಂಡಮಾನ್ ಕರಾವಳಿಯಿಂದ 15 ಕಿಮೀ ದೂರ
- 1,900 ಪ್ಲಸ್ ಮೀಟರ್ ಆಳದಲ್ಲಿ ಅನಿಲ ಪತ್ತೆ
- ಸಮುದ್ರ ಮಂಥನ ಪರಿಶೋಧನಾ ಮಿಷನ್‌ನ ಭಾಗ
- ಸಾಮರ್ಥ್ಯ 370 ಎಂಎಂಟಿ ತೈಲದ ಅಂದಾಜು

ಸಮುದ್ರ ಮಂಥನಕ್ಕೆ ಸಿಕ್ಕ ಉತ್ತೇಜನ

ಈ ಆವಿಷ್ಕಾರ ಪ್ರಧಾನಿ ನರೇಂದ್ರ ಮೋದಿ ಘೋಷಿಸಿದ ಸಮುದ್ರ ಮಂಥನ ಯೋಜನೆಗೆ ಸಿಕ್ಕ ಪ್ರಮುಖ ಯಶಸ್ಸು ಎನ್ನಲಾಗುತ್ತಿದೆ. ಈ ಯೋಜನೆ, ಭಾರತದ ವಿಶೇಷ ಆರ್ಥಿಕ ವಲಯಗಳಲ್ಲಿ ಬಳಕೆಯಾಗದ ಸಂಪನ್ಮೂಲಗಳನ್ನು ಮಿಷನ್ ಮೋಡ್‌ನಲ್ಲಿ ಅನ್ವೇಷಿಸುವ ಗುರಿ ಹೊಂದಿದೆ. ಸರ್ಕಾರ ಅಂತಾರಾಷ್ಟ್ರೀಯ ತಜ್ಞರೊಂದಿಗೆ ಸಹಕರಿಸುವುದನ್ನು ಮುಂದುವರಿಸುತ್ತಿರುವುದರಿಂದ, ಶ್ರೀ ವಿಜಯಪುರಂ-3ರಲ್ಲಿ ಸಿಕ್ಕ ಯಶಸ್ಸು ಭಾರತದ ಆಳ ಸಮುದ್ರದ ಗಡಿಗಳಲ್ಲಿ ಹೆಚ್ಚಿನ ಹೂಡಿಕೆಯನ್ನು ಆಕರ್ಷಿಸಲು ಅಗತ್ಯ ವೇಗವನ್ನು ನೀಡುವ ನಿರೀಕ್ಷೆಯಿದೆ. ಪೆಟ್ರೋಲಿಯಂ ಸಚಿವಾಲಯದ ಮೂಲಗಳ ಪ್ರಕಾರ, ಅಂಡಮಾನ್ ಜಲಾನಯನ ಪ್ರದೇಶದ ಭೂವೈಜ್ಞಾನಿಕ ರಚನೆ ಅತ್ಯಂತ ಸಂಕೀರ್ಣವಾಗಿದೆ. ಈ ಭಾಗದಲ್ಲಿ ವಾಣಿಜ್ಯ ಬಳಕೆಯನ್ನು ಖಚಿತಪಡಿಸಿಕೊಳ್ಳಲು ಆಯಿಲ್ ಇಂಡಿಯಾ ಲಿಮಿಟೆಡ್ ಅತ್ಯಾಧುನಿಕ 3ಡಿ ಭೂಕಂಪನ ಸಮೀಕ್ಷೆಗಳನ್ನು ನಡೆಸಲು ಯೋಜಿಸಿದೆ. ಏನೇ ಆದರೂ, ಈ ಆವಿಷ್ಕಾರ, ಭಾರತದ ಇಂಧನ ಸ್ವಾವಲಂಬನೆಯ ಆತ್ಮನಿರ್ಭರ ಭಾರತದ ಕನಸಿಗೆ ಮತ್ತಷ್ಟು ಬಲ ತುಂಬಲಿದೆ ಎಂದು ನಿರೀಕ್ಷಿಸಲಾಗಿದೆ.



ಗಯಾನಾ ದೇಶಕ್ಕೆ ಹೋಲಿಕೆ

ಅಂಡಮಾನ್ ಜಲಾನಯನ ಪ್ರದೇಶದ ಸಾಮರ್ಥ್ಯವನ್ನು ಆಗಾಗ್ಗೆ ಗಯಾನಾ ದೇಶಕ್ಕೆ ಹೋಲಿಸಲಾಗುತ್ತಿದೆ. ಅಲ್ಲಿ ಇತ್ತೀಚೆಗೆ ಪತ್ತೆಯಾದ ಬೃಹತ್ ಕಡಲಾಚೆಯ ನಿಕ್ಷೇಪಗಳು ಆ ಸಣ್ಣ ರಾಷ್ಟ್ರವನ್ನು ಜಾಗತಿಕ ಇಂಧನ ಶಕ್ತಿಯಾಗಿ ಪರಿವರ್ತಿಸಿವೆ. ಪ್ರಾಥಮಿಕ ಸಮೀಕ್ಷೆಗಳ ಪ್ರಕಾರ, ಅಂಡಮಾನ್ ಪ್ರದೇಶ, 307ರಿಂದ 370 ಮಿಲಿಯನ್ ಮೆಟ್ರಿಕ್ ಟನ್ ತೈಲ-ಸಮಾನ ಹೈಡ್ರೋಕಾರ್ಬನ್ ಅನ್ನು ಹೊಂದಿರಬಹುದು ಎಂದು ಅಂದಾಜಿಸಲಾಗಿದೆ. ಇವು ಕೇವಲ ಪ್ರಾಥಮಿಕ ನಿಕ್ಷೇಪಗಳಾಗಿದ್ದರೂ, ಸರ್ಕಾರದ ಭರವಸೆ ಹೆಚ್ಚಿಸಿವೆ. ಅಂಡಮಾನ್ ಸಮುದ್ರದಲ್ಲಿ ಮತ್ತೊಂದು ದೊಡ್ಡ ಗಯಾನಾ ಮಾದರಿಯ ನಿಕ್ಷೇಪವನ್ನು ಕಂಡುಹಿಡಿಯುವುದು ಕೇವಲ ಸಮಯದ ವಿಷಯ ಎಂದು ಸಚಿವ ಪುರಿ ಈ ಹಿಂದೆ ಹೇಳಿದ್ದರು.

ಮುಂದಿರುವ ಸುದೀರ್ಘ ಹಾದಿ

ಪ್ರಸ್ತುತ ಆವಿಷ್ಕಾರ ಉತ್ಸಾಹ ಮೂಡಿಸಿದ್ದರೂ, ಪರಿಶೋಧನಾ ಹಂತದಿಂದ ವಾಣಿಜ್ಯ ಉತ್ಪಾದನೆಗೆ ತಲುಪುವುದು ಹಲವು ವರ್ಷಗಳ ಸುದೀರ್ಘ ಹಾದಿ. ಆಯಿಲ್ ಇಂಡಿಯಾ ಸಂಸ್ಥೆ ಪ್ರಸ್ತುತ ಅನಿಲದ ಗುಣಮಟ್ಟ ಮತ್ತು ಮೂಲವನ್ನು ನಿರ್ಣಯಿಸಲು ಅನಿಲ ಮಾದರಿ, ಐಸೊಟೋಪ್ ಅಧ್ಯಯನ ಮತ್ತು ಕ್ಯಾಲೋರಿಫಿಕ್ ಮೌಲ್ಯದ ಮೌಲ್ಯಮಾಪನಗಳನ್ನು ನಡೆಸುತ್ತಿದೆ. ಗ್ರಾಹಕರಿಗೆ ಅನಿಲವನ್ನು ತಲುಪಿಸುವ ಮೊದಲು ವ್ಯಾಪಕ ಮೂಲಸೌಕರ್ಯ ಅಭಿವೃದ್ಧಿ, ಪರಿಸರ ಪರವಾನಿಗೆಗಳು ಮತ್ತು ಹೆಚ್ಚಿನ ಇನ್ನಷ್ಟು ಭೂಮಿಯನ್ನು ಕೊರೆದು ಮೌಲ್ಯಮಾಪನ ಮಾಡುವ ಅಗತ್ಯವಿದೆ. ಈ ಪ್ರಮಾಣದ ಕಡಲಾಚೆಯ ಯೋಜನೆಗಳಿಗೆ ಮುಕ್ತ ಸಮುದ್ರದ ತಾಂತ್ರಿಕ ಸವಾಲುಗಳನ್ನು ಎದುರಿಸಲು ಜಾಗತಿಕ ಆಳ ಸಮುದ್ರ ತಜ್ಞರೊಂದಿಗೆ ಸಹಭಾಗಿತ್ವದ ಅಗತ್ಯವಿರುತ್ತದೆ.



ಕಿರುಸುದ್ದಿ

ರಾಷ್ಟ್ರ ಪ್ರಶಸ್ತಿ ಪುರಸ್ಕೃತ ನಟ ಸಲೀಂ ಕುಮಾರ್ ವಿಧಿವಶ

ಕೊಚ್ಚಿ: ರಾಷ್ಟ್ರ ಪ್ರಶಸ್ತಿ ವಿಜೇತ ಖ್ಯಾತ ಮಲಯಾಳಂ ನಟ ಸಲೀಂ ಕುಮಾರ್ ಅವರು ಶನಿವಾರ ರಾತ್ರಿ ನಿಧನರಾದರು. ಅವರಿಗೆ 56 ವರ್ಷ ವಯಸ್ಸಾಗಿತ್ತು. ಆರೋಗ್ಯ ಸಮಸ್ಯೆಯಿಂದ ಅವರನ್ನು ಶನಿವಾರ ಅಮೃತಾ ಆಸ್ಪತ್ರೆಗೆ ದಾಖಲಿಸಲಾಯಿತಾದರೂ, ಚಿಕಿತ್ಸೆ ಫಲಕಾರಿಯಾಗದೆ ಕೊನೆಯುಸಿರೆಳೆದ್ದಾರೆ. ಸಲೀಂ ಅವರ ನಿಧನಕ್ಕೆ ಕೇರಳ ಸರ್ಕಾರ ತೀವ್ರ ಸಂತಾಪ ವ್ಯಕ್ತಪಡಿಸಿದೆ.



ಮಲಯಾಳಂ ಚಿತ್ರರಂಗಕ್ಕೆ ಅವರು ನೀಡಿದ ಅಮೂಲ್ಯ ಕೊಡುಗೆಯನ್ನು ಸರ್ಕಾರ ಸ್ಮರಿಸಿದೆ. 2010ರಲ್ಲಿ ಆದಾಮಿಂಟೆ ಮಗನ್ ಅಬು ಚಿತ್ರದ ಅಭಿನಯಕ್ಕಾಗಿ ಅವರು ಅತ್ಯುತ್ತಮ ನಟ ವಿಭಾಗದ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿಯನ್ನು ಪಡೆದಿದ್ದರು. 2005ರಲ್ಲಿ ಅಚನುರಂಗಾಥ ವೀಡು ಚಿತ್ರಕ್ಕಾಗಿ ಕೇರಳ ರಾಜ್ಯ ಚಲನಚಿತ್ರ ಪ್ರಶಸ್ತಿಯ ದ್ವಿತೀಯ ಅತ್ಯುತ್ತಮ ನಟ ಪ್ರಶಸ್ತಿಯೂ ಅವರಿಗೆ ಲಭಿಸಿತ್ತು. ಎರ್ನಾಕುಳಂ ಜಿಲ್ಲೆಯ ಉತ್ತರ ಪಾರವೂರಿನಲ್ಲಿ ಅವರ ಅಂತ್ಯಕ್ರಿಯೆಯನ್ನು ಭಾನುವಾರ ಸಕಲ ಸರ್ಕಾರಿ ಗೌರವಗಳೊಂದಿಗೆ ನೆರವೇರಿಸಲಾಗಿದೆ.

ಗೃಹಬಳಕೆ ಎಲ್‌ಪಿಜಿ ಸಿಲಿಂಡರ್ ದರ ಹೆಚ್ಚಳ

ಹೊಸದಿಲ್ಲಿ: ಗೃಹಬಳಕೆಯ 14.2 ಕೆಜಿ ಎಲ್‌ಪಿಜಿ ಸಿಲಿಂಡರ್ ದರವನ್ನು ಕೇಂದ್ರ ಸರ್ಕಾರ 29 ರೂ. ಹೆಚ್ಚಿಸಿದ್ದು, ಜೂ.7ರಿಂದ ದಿಲ್ಲಿಯಲ್ಲಿ ಸಿಲಿಂಡರ್ ಬೆಲೆ 913 ರೂ.ಗಳಿಂದ 942 ರೂ.ಗೆ ಏರಿಕೆಯಾಗಿದೆ. ಪಶ್ಚಿಮ ಏಷ್ಯಾದಲ್ಲಿನ ಸಂಘರ್ಷ ಹಾಗೂ ಜಾಗತಿಕ ಇಂಧನ ಬೆಲೆ ಏರಿಕೆಯ ಹಿನ್ನೆಲೆಯಲ್ಲಿ ಮೂರು ತಿಂಗಳಲ್ಲಿ ಎರಡನೇ ಬಾರಿಗೆ ದರ ಹೆಚ್ಚಳ ಮಾಡಲಾಗಿದೆ. ದರ ಏರಿಕೆಯನ್ನು ಸಮರ್ಥಿಸಿಕೊಂಡಿರುವ ಕೇಂದ್ರ ಸರ್ಕಾರ, ಭಾರದಲ್ಲಿ ವಿಶ್ವದಲ್ಲೇ ಕಡಿಮೆ ದರದಲ್ಲಿ ಅನಿಲ ಪೂರೈಸಲಾಗುತ್ತಿದೆ ಎಂದು ತಿಳಿಸಿದೆ. ಉದ್ಯಮ ಮೂಲಗಳ ಪ್ರಕಾರ, ಎಲ್‌ಪಿಜಿ ಮಾರಾಟದಲ್ಲಿ ಉಂಟಾಗುತ್ತಿರುವ ನಷ್ಟವನ್ನು ಭಾಗಶಃ ಸರಿದೂಗಿಸಲು ಈ ಕ್ರಮ ಕೈಗೊಳ್ಳಲಾಗಿದೆ. ಇದಕ್ಕೂ ಮುನ್ನ ವಾಣಿಜ್ಯ ಎಲ್‌ಪಿಜಿ ಸಿಲಿಂಡರ್ ದರದಲ್ಲಿಯೂ ಹೆಚ್ಚಳವಾಗಿತ್ತು. ದರ ಏರಿಕೆಯನ್ನು ಸಮರ್ಥಿಸಿಕೊಂಡಿರುವ ಕೇಂದ್ರ ಸರ್ಕಾರ, ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಗೃಹಬಳಕೆಯ ಎಲ್‌ಪಿಜಿ ಸಿಲಿಂಡರ್ ಪೂರೈಕೆ ವೆಚ್ಚ 1,600 ರೂ. ಮೀರಿದ್ದರೂ ಭಾರತದಲ್ಲಿ ಗ್ರಾಹಕರು ಕಡಿಮೆ ದರದಲ್ಲಿ ಅನಿಲ ಪಡೆಯುತ್ತಿದ್ದಾರೆ ಎಂದು ತಿಳಿಸಿದೆ. ಭಾರತದಲ್ಲಿನ ಎಲ್‌ಪಿಜಿ ದರವು ಪಾಕಿಸ್ತಾನ, ನೇಪಾಳ, ಬಾಂಗ್ಲಾದೇಶ, ಶ್ರೀಲಂಕಾ ಸೇರಿದಂತೆ ಹಲವು ದೇಶಗಳಿಗಿಂತ ಕಡಿಮೆಯಿದೆ ಎಂದು ಸರ್ಕಾರ ಹೇಳಿದೆ.

ಮೀನು, ಮಾಂಸ ಮಳಿಗೆ ವಾರಾಣಸಿಯಿಂದ ಆಚೆಗೆ

ವಾರಾಣಸಿ: ವಾರಾಣಸಿ ಮಹಾನಗರ ಪಾಲಿಕೆ, ನಗರದ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಮಾಂಸ ಮತ್ತು ಮೀನು ಮಾರಾಟ ಮಳಿಗೆಗಳನ್ನು ನಗರದ ಹೊರವಲಯದ ನಿಗದಿತ ಸ್ಥಳಗಳಿಗೆ ಸ್ಥಳಾಂತರಿಸುವ ಪ್ರಸ್ತಾವನೆಗೆ ಅನುಮೋದನೆ ನೀಡಿದೆ.

ವಾರಾಣಸಿ ಮಹಾಪೌರ ಅಶೋಕ್ ಕುಮಾರ್ ತಿವಾರಿ ಅಧ್ಯಕ್ಷತೆಯಲ್ಲಿ ನಡೆದ ಕೌನ್ಸಿಲ್ ಸಭೆಯಲ್ಲಿ ಈ ನಿರ್ಧಾರವನ್ನು ಅಂತಿಮಗೊಳಿಸಲಾಗಿದೆ. ಸ್ಥಳಾಂತರದ ಮಾರ್ಗಸೂಚಿ ಸಿದ್ಧವಾಗಿದ್ದು, ಮುಂಬರುವ ದಿನಗಳಲ್ಲಿ ಮೊದಲ ಹಂತದ ಅನುಷ್ಠಾನ ಪ್ರಕ್ರಿಯೆ ಆರಂಭವಾಗಲಿದೆ, ಎಂದು ಪಾಲಿಕೆ ಅಧಿಕಾರಿಗಳು ದೃಢಪಡಿಸಿದ್ದಾರೆ. ಯೋಜನೆಯ ಆರಂಭಿಕ ಹಂತಕ್ಕಾಗಿ ನಗರದ ಗಡಿಯ ಸಮೀಪವಿರುವ ಐದು ಸ್ಥಳಗಳನ್ನು ಗುರುತಿಸಲಾಗಿದೆ ಎಂದು ಮಹಾನಗರ ಪಾಲಿಕೆ ಆಯುಕ್ತ ಹಿಮಾಂಶು ನಾಗ್ಪಾಲ್ ಸಭೆಗೆ ಮಾಹಿತಿ ನೀಡಿದ್ದಾರೆ. ಈ ನಿಗದಿತ ವಲಯಗಳನ್ನು ರಾಮನಗರ, ಸುಜಾಬಾದ್, ಗಣೇಶ್‌ಪುರ, ಅವಲೇಶ್‌ಪುರ ಮತ್ತು ಶಿವಪುರದಲ್ಲಿ ಗುರುತಿಸಲಾಗಿದೆ, ಎಂದು ತಿಳಿದುಬಂದಿದೆ.

ನಗರ ನಿರ್ವಹಣೆ, ನೈರ್ಮಲ್ಯ, ಸಂಚಾರ ದಟ್ಟಣೆಯ ಪರಿಸ್ಥಿತಿಯನ್ನು ಸುಧಾರಿಸುವ ಉದ್ದೇಶವನ್ನು ಈ ಯೋಜನೆ ಹೊಂದಿದೆ. ದಟ್ಟಣೆಯ ಜನಸಂಖ್ಯೆ ಇರುವ ಪ್ರದೇಶಗಳಿಂದ ಹೊರಗೆ ಇಂತಹ ಮಳಿಗೆಗಳನ್ನು ವ್ಯವಸ್ಥಿತ ಕ್ಲಸ್ಟರ್‌ಗಳಿಗೆ ಸ್ಥಳಾಂತರಿಸುವುದರಿಂದ ಸ್ವಚ್ಛತೆ ಕಾಪಾಡಲು ಮತ್ತು ಪಾಲಿಕೆ ಸೇವೆಗಳನ್ನು ಸುಗಮಗೊಳಿಸಲು ಸಹಾಯವಾಗಲಿದೆ ಎಂದು ನಿರೀಕ್ಷಿಸಲಾಗಿದೆ. ಹೊಸ ಸ್ಥಳಗಳಲ್ಲಿನ ಮೂಲಸೌಕರ್ಯ ಮತ್ತು ಸಂತ್ರಸ್ತ ಮಾಲೀಕರಿಗೆ ಮಾಡಲಾಗುವ ವ್ಯವಸ್ಥೆಗಳ ಕುರಿತಾದ ಹೆಚ್ಚಿನ ವಿವರಗಳನ್ನು ಮುಂಬರುವ ದಿನಗಳಲ್ಲಿ ಬಿಡುಗಡೆ ಮಾಡಲಾಗುವುದು ಎಂದು ತಿಳಿದುಬಂದಿದೆ.

ಬಂಗಾಳದಲ್ಲಿ ಬೃಹತ್ ರೈಲ್ವೆ ಮೂಲಸೌಕರ್ಯ

ಕೋಲ್ಕತಾ: ಪಶ್ಚಿಮ ಬಂಗಾಳದ ಸಾರಿಗೆ ಜಾಲವನ್ನು ಸಂಪೂರ್ಣವಾಗಿ ನವೀಕರಿಸಲು ಕೇಂದ್ರ ಸರ್ಕಾರ 61 ಪ್ರಮುಖ ರೈಲ್ವೆ ಯೋಜನೆಗಳಿಗೆ ಅನುಮೋದನೆ ನೀಡಿದೆ.

ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಸುವೇಂದು ಅಧಿಕಾರಿ ಅವರೊಂದಿಗೆ ಸಭೆ ನಡೆಸಿದ ಬಳಿಕ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್, ಈ ಅಭಿವೃದ್ಧಿ ಕಾರ್ಯಗಳನ್ನು ಪ್ರಕಟಿಸಿದರು. ರಾಜ್ಯದಾದ್ಯಂತ ವಿವಿಧ ರೈಲ್ವೇ ಯೋಜನೆಗಳಿಗಾಗಿ ಕೇಂದ್ರ ಸರ್ಕಾರ 1 ಲಕ್ಷ ಕೋಟಿ ರೂಪಾಯಿಗಳನ್ನು ಮೀಸಲಿಟ್ಟಿದೆ.



ಲಖನೌ, ವಾರಾಣಸಿ ಮತ್ತು ಪಾಟ್ನಾ ಮೂಲಕ ಹೊಸದಿಲ್ಲಿ ಹಾಗೂ ಸಿಲಿಗುರಿ ನಡುವೆ ಬುಲೆಟ್ ರೈಲು ಸೇವೆ ಸಂಪರ್ಕ ಕಲ್ಪಿಸಲಿದ್ದು, ಪ್ರಯಾಣದ ಸಮಯವನ್ನು ಆರು ಗಂಟೆಗಳಿಗೆ ಕಡಿತಗೊಳಿಸಲಿದೆ. ಒಂದು ಪ್ರತ್ಯೇಕ ಪೂರ್ವ-ಪಶ್ಚಿಮ ಸರಕು ಸಾಗಣೆ ಕಾರಿಡಾರ್, ಬಂಗಾಳದ ದಂಕುನಿಯನ್ನು ಗುಜರಾತ್‌ನ ಸೂರತ್‌ಗೆ ಜೋಡಿಸಲಿದೆ.

ಈ ವಿಸ್ತರಣೆಯಲ್ಲಿ, 538 ಹೊಸ ಫ್ಲೈಓವರ್‌ಗಳು ಮತ್ತು ಅಂಡರ್‌ಪಾಸ್‌ಗಳು ಹಾಗೂ 102 ಅಮೃತ್ ಭಾರತ್ ನಿಲ್ದಾಣಗಳ ಅಭಿವೃದ್ಧಿ ಒಳಗೊಂಡಿದೆ. ಮುಂದಿನ ಐದು ವರ್ಷಗಳಲ್ಲಿ, ರಾಜ್ಯ 60 ಹೊಸ ರೈಲು ಸೇವೆಗಳನ್ನು ಮತ್ತು 60 ಹೊಸ ಕೋಲ್ಕತಾ ಮೆಟ್ರೋ ರ್‍ಯಾಕ್‌ಗಳನ್ನು ಪಡೆಯಲಿದೆ. ಕೇಂದ್ರ ಮತ್ತು ರಾಜ್ಯ ಸರ್ಕಾರದ ನಡುವಿನ ಸಹಕಾರ ಹಿಂದಿನ ಯೋಜನಾ ವಿಳಂಬಗಳನ್ನು ಬಗೆಹರಿಸಲಿದೆ. ರೈಲ್ವೆ ಜಾಲದ ವಿಸ್ತರಣೆ ಮತ್ತು ಭೂಸ್ವಾಧೀನ ಪ್ರಕ್ರಿಯೆಗಳಿಗೆ ರೈಲ್ವೆ ಮಂಡಳಿಗೆ ನೆರವು ನೀಡುವಂತೆ ಜಿಲ್ಲಾಧಿಕಾರಿಗಳಿಗೆ ಆದೇಶಿಸಲಾಗಿದೆ ಎಂದು ಮುಖ್ಯಮಂತ್ರಿ ತಿಳಿಸಿದ್ದಾರೆ.

ಮೈತ್ರಿ ದ್ರೋಹವೆಸಗಿದ ಕಾಂಗ್ರೆಸ್‌ದು ವ್ಯಭಿಚಾರ

ಪುದುಕೊಟ್ಟೈ(ತಮಿಳುನಾಡು): ಪಕ್ಷಕ್ಕೆ ದ್ರೋಹ ಬಗೆದ ಕಾಂಗ್ರೆಸ್ ಜತೆ ಭವಿಷ್ಯದಲ್ಲಿ ಯಾವುದೇ ಹೊಂದಾಣಿಕೆ ಮಾಡಿಕೊಳ್ಳುವ ಸಾಧ್ಯತೆಯನ್ನು ತಳ್ಳಿಹಾಕಿರುವ ಡಿಎಂಕೆ ಹಿರಿಯ ನಾಯಕ ಆರ್‌ಎಸ್ ಭಾರತಿ, ಮೈತ್ರಿಕೂಟಕ್ಕೆ ದ್ರೋಹವೆಸಗಿ ಅಧಿಕಾರಕ್ಕಾಗಿ ಇನ್ನೊಂದು ಪಕ್ಷದ ಜತೆ ಹೋಗುವ ಕಾಂಗ್ರೆಸ್ ನಡೆಯನ್ನು 'ವ್ಯಭಿಚಾರ'ಕ್ಕೆ ಹೋಲಿಸಿದರು. ದ್ರಾವಿಡ ಪ್ರಮುಖ ಪಕ್ಷವು ಇಂತಹ ಮಿತ್ರದ್ರೋಹವನ್ನೆಂದಿಗೂ ಕ್ಷಮಿಸುವುದಿಲ್ಲ ಎಂದು ಸಾರಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, 'ಕಾಂಗ್ರೆಸ್ ಇರುವ ಮೈತ್ರಿಕೂಟದಲ್ಲಿ ನಾವು ಇಲ್ಲ. ನಾನು ಅದನ್ನು ಸ್ಪಷ್ಟಪಡಿಸುತ್ತಿದ್ದೇನೆ.' ಮುಂಬರುವ ಸ್ಥಳೀಯ ಸಂಸ್ಥೆ ಚುನಾವಣೆಗಳಲ್ಲಿ ಮೈತ್ರಿ ಇಲ್ಲದೆ ಒಂದೇ ಒಂದು ಮೇಯರ್ ಸ್ಥಾನವನ್ನು ಗೆದ್ದು ತೋರಿಸಲಿ ಕಾಂಗ್ರೆಸ್ ಎಂದು ಸವಾಲೊಡ್ಡಿದರು.

ಡಿಎಂಕೆಯ ಕಾರ್ಯಕ್ಷಮತೆ ಮತ್ತು ಮೈತ್ರಿ ಡೈನಾಮಿಕ್ಸ್ ಬಗ್ಗೆ ಕಾಂಗ್ರೆಸ್ ನಾಯಕ ಮಾಣಿಕ್ಕಂ ಟ್ಯಾಗೋರ್ ಅವರ ಟೀಕಾತ್ಮಕ ಹೇಳಿಕೆಗಳ ಬಗ್ಗೆ ಕೇಳಿದಾಗ, ಟ್ಯಾಗೋರ್‌ಗೆ ಮೊದಲು ತಮ್ಮ ಸ್ವಂತ ಗೆಲುವಿನ ಬಗ್ಗೆ ಯೋಚಿಸಲಿ. ಕೆಲವು ಬೇರ್ಪಡುವಿಕೆಗಳು ಪರಸ್ಪರ ಒಪ್ಪಿಗೆಯಿಂದ ಸಂಭವಿಸಿದರೂ, ಈ ವಿಘಟನೆಯು ಪಾಲುದಾರ 'ರಹಸ್ಯ ಸಂಬಂಧ'ದಲ್ಲಿ ತೊಡಗಿರುವಂತೆಯೇ ಇದೆ ಎಂದು ಲೇವಡಿಗೈದರು. ಸ್ಥಾನಮಾನಗಳಿಗಾಗಿ ಒಂದು ಪಕ್ಷದಿಂದ ಇನ್ನೊಂದು ಪಕ್ಷಕ್ಕೆ ಹೋಗುವ ಜನರು ಹೆಚ್ಚು ಕಾಲ ಉಳಿಯುವುದಿಲ್ಲ, ಆರು ತಿಂಗಳಲ್ಲಿ ಸರ್ಕಾರ ಪತನವಾದರೆ, ಅವರೆಲ್ಲರೂ ಮತ್ತೆ ಓಡಿ ಬರುತ್ತಾರೆ ಎಂದ ಅವರು, ವಿಜಯ್ ಅವರ ಟಿವಿಕೆ ಪಕ್ಷದ ಇತ್ತೀಚಿನ ಚುನಾವಣಾ ಗೆಲುವು ಸಿದ್ಧಾಂತದ ಅನುಮೋದನೆಗಿಂತ 'ಜಾಕ್‌ಪಾಟ್ ಲಾಟರಿ ಟಿಕೆಟ್' ಎಂದು ಬಣ್ಣಿಸಿದರು.

ಇಂದು ದಿಲ್ಲಿಯಲ್ಲಿ ಇಂಡಿ ಕೂಟ ಸಭೆ

ಹೊಸದಿಲ್ಲಿ: ಪ್ರತಿಪಕ್ಷಗಳ ಇಂಡಿ ಮೈತ್ರಿಕೂಟದ 23 ರಾಜಕೀಯ ಪಕ್ಷಗಳ ನಾಯಕರು ಸೋಮವಾರ ಹೊಸದಿಲ್ಲಿಯಲ್ಲಿ ಸಭೆ ಸೇರಿ ಬಿಜೆಪಿ ವಿರುದ್ಧದ ಮುಂದಿನ ರಾಜಕೀಯ ತಂತ್ರದ ಕುರಿತು ಚರ್ಚಿಸಲಿದ್ದಾರೆ. ಇತ್ತೀಚಿನ ವಿಧಾನಸಭಾ ಚುನಾವಣೆಯಲ್ಲಿ ತೃಣಮೂಲ ಕಾಂಗ್ರೆಸ್(ಟಿಎಂಸಿ) ಹಾಗೂ ಡಿಎಂಕೆ ಹಿನ್ನಡೆ ಅನುಭವಿಸಿದ ಬಳಿಕ ಬದಲಾಗಿರುವ ರಾಜಕೀಯ ಪರಿಸ್ಥಿತಿಯಲ್ಲಿ ಈ ಸಭೆ ಮಹತ್ವ ಪಡೆದಿದೆ.

ಸಭೆಯಲ್ಲಿ ರಾಹುಲ್ ಗಾಂಧಿ, ಮಲ್ಲಿಕಾರ್ಜುನ ಖರ್ಗೆ, ಮಮತಾ ಬ್ಯಾನರ್ಜಿ, ಅಖಿಲೇಶ್ ಯಾದವ್, ತೇಜಸ್ವಿ ಯಾದವ್ ಮತ್ತು ಉದ್ಧವ್ ಠಾಕ್ರೆ ಸೇರಿದಂತೆ ಹಲವು ನಾಯಕರು ಭಾಗವಹಿಸುವ ನಿರೀಕ್ಷೆಯಿದೆ.

ಡಿಎಂಕೆ ಮತ್ತು ಆಮ್ ಆದ್ಮಿ ಪಕ್ಷ ಸಭೆಗೆ ಗೈರಾಗುವ ಸಾಧ್ಯತೆಇದ್ದು, ತ.ನಾಡಿನ ಟಿವಿಕೆ ಪಕ್ಷವನ್ನು ಮೈತ್ರಿಕೂಟಕ್ಕೆ ಸೇರಿಸಿಕೊಳ್ಳುವ ಬಗ್ಗೆ ಚರ್ಚೆಯಾಗಬಹುದು. ಮುಂದಿನ ರಾಜ್ಯ ಚುನಾವಣೆಗಳು, 2029ರ ಲೋಕಸಭೆ ಚುನಾವಣೆಯನ್ನು ಗಮನದಲ್ಲಿಟ್ಟುಕೊಂಡು ಪ್ರತಿಪಕ್ಷಗಳ ಒಗ್ಗಟ್ಟನ್ನು ಬಲಪಡಿಸುವುದು ಸಭೆಯ ಮುಖ್ಯ ಉದ್ದೇಶವಾಗಿದೆ.

ಆದಾಯಕ್ಕೂ ಮೀರಿದ ಆಸ್ತಿಗಳಿಸಿದ ಸರ್ಕಾರಿ ಇಂಜಿನಿಯರ್ | ತನಿಖೆ ಶುರು

₹6,000 ಸಂಬಳದ ನೌಕರ ಕೋಟ್ಯಧಿಪತಿ!

ಭುವನೇಶ್ವರ: ಒಡಿಶಾದ ವಿಜಿಲೆನ್ಸ್ ಅಧಿಕಾರಿಗಳು, ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಬೈಕುಂಠ ನಾಥ್ ಬೆಹೆರಾ ಮನೆ ಮತ್ತು ಕಚೇರಿಗಳ ಮೇಲೆ ದಾಳಿ ನಡೆಸಿ ಕೋಟ್ಯಂತರ ರೂ. ಮೌಲ್ಯದ ಆಸ್ತಿಯನ್ನು ಪತ್ತೆಹಚ್ಚಿದ್ದು, ತನಿಖೆ ಆರಂಭಿಸಿದ್ದಾರೆ.



ಬೆಹೆರಾ, ತಮ್ಮ ಅಧಿಕೃತ ಆದಾಯದ ಮೂಲಗಳಿಗಿಂತ ಹೆಚ್ಚಿನ ಆಸ್ತಿ ಹೊಂದಿದ್ದಾರೆ ಎಂಬ ಆರೋಪದ ಹಿನ್ನೆಲೆಯಲ್ಲಿ ಶನಿವಾರ ಒಂಬತ್ತು ಸ್ಥಳಗಳಲ್ಲಿ ಏಕಕಾಲದಲ್ಲಿ ಶೋಧ ಕಾರ್ಯ ನಡೆಸಲಾಯಿತು. ಭುವನೇಶ್ವರ, ಬಾಲಸೋರ್, ಜಾಜ್‌ಪುರ, ಬಾಲಿಗುಡಾದಲ್ಲಿರುವ ಅವರ ನಿವಾಸ, ಕಚೇರಿ ಮತ್ತು ಪೂರ್ವಜರ ಆಸ್ತಿಗಳ ಮೇಲೆ ಈ ದಾಳಿ ನಡೆದಿದೆ.

ಪತ್ತೆಯಾದ ಆಸ್ತಿ ವಿವರ: ವಿಜಿಲೆನ್ಸ್ ತಂಡಗಳು, ಬೆಹೆರಾ ಅವರ ಮನೆ ಮತ್ತು ಬ್ಯಾಂಕ್ ಲಾಕರ್‌ಗಳಿಂದ ಸುಮಾರು 2.4 ಕೋಟಿ ರೂ. ನಗದನ್ನು ವಶಪಡಿಸಿಕೊಂಡಿವೆ. ಪತ್ತೆಯಾದ ಆಸ್ತಿಗಳಲ್ಲಿ ಐದು ಮಹಡಿ ಕಟ್ಟಡಗಳು, ಭುವನೇಶ್ವರ ಮತ್ತು ಅದರ ಸುತ್ತಮುತ್ತಲಿನ 13ರಿಂದ 14 ನಿವೇಶನಗಳು, 341 ಗ್ರಾಂ ಚಿನ್ನದ ಆಭರಣಗಳು ಮತ್ತು 45 ಲಕ್ಷ ರೂ.ಗೂ ಹೆಚ್ಚಿನ ಬ್ಯಾಂಕ್ ಠೇವಣಿಗಳು ಸೇರಿವೆ. ಪತ್ತೆಯಾದ ಕಟ್ಟಡಗಳ ಅಧಿಕೃತ ಮೌಲ್ಯಮಾಪನ ಪ್ರಕ್ರಿಯೆ ಪ್ರಗತಿಯಲ್ಲಿದೆ.



ವೃತ್ತಿ ಹಿನ್ನೆಲೆ: ಬೆಹೆರಾ, 1999ರಲ್ಲಿ ನಬರಂಗ್‌ಪುರ ಬ್ಲಾಕ್‌ನಲ್ಲಿ ಮಾಸಿಕ 6,000 ರೂ. ಸಂಬಳಕ್ಕೆ ಜೂನಿಯರ್ ಸಿವಿಲ್ ಇಂಜಿನಿಯರ್ ಆಗಿ ಸರ್ಕಾರಿ ಸೇವೆಗೆ ಸೇರಿದ್ದರು. ನಂತರ 2016ರಲ್ಲಿ ಇಂಟಿಗ್ರೇಟೆಡ್ ಟ್ರೈಬಲ್ ಡೆವಲಪ್‌ಮೆಂಟ್ ಏಜೆನ್ಸಿಯಲ್ಲಿ (ಐಟಿಡಿಎ) ಸಹಾಯಕ ಇಂಜಿನಿಯರ್ ಆಗಿ ಬಡ್ತಿ ಪಡೆಯುವ ಮುನ್ನ ಉಡಾಲಾ ಮತ್ತು ನಬರಂಗ್‌ಪುರದಲ್ಲಿ ಸೇವೆ ಸಲ್ಲಿಸಿದ್ದರು. ಇದೇ ವರ್ಷ ಫೆಬ್ರವರಿಯಲ್ಲಿ ಅವರು ಬಾಲಿಗುಡಾದಲ್ಲಿ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಆಗಿ ಬಡ್ತಿ ಪಡೆದಿದ್ದರು.

ತನಿಖೆ ಪೂರ್ಣಗೊಂಡ ನಂತರ ಹೆಚ್ಚಿನ ವಿವರಗಳನ್ನು ಹಂಚಿಕೊಳ್ಳಲಾಗುವುದು ಎಂದು ವಿಜಿಲೆನ್ಸ್ ಎಸ್‌ಪಿ ಸುಶಾಂತ್ ಕುಮಾರ್ ಬಿಸ್ವಾಲ್ ತಿಳಿಸಿದ್ದಾರೆ.

ಹೊಸದಿಲ್ಲಿ ನಿರ್ಧಾರಗಳನ್ನು ಯಾರೂ ನಿರ್ದೇಶಿಸಲು ಸಾಧ್ಯವಿಲ್ಲ: ಪುಟಿನ್


ಭಾರತ ಬಲಿಷ್ಠ; ಪಾಶ್ಚಾತ್ಯ ಒತ್ತಡ ಫಲಿಸಲ್ಲ

ಮಾಸ್ಕೋ/ಸೇಂಟ್‌ಪೀಟರ್ಸ್‌ಬರ್ಗ್: ಭಾರತ-ರಷ್ಯಾ ನಡುವಿನ ದೀರ್ಘಕಾಲದ ಕಾರ್ಯತಂತ್ರದ ಪಾಲುದಾರಿಕೆಯನ್ನು ಯಾವುದೇ ಬಾಹ್ಯ ಶಕ್ತಿ ದುರ್ಬಲಗೊಳಿಸಲು ಸಾಧ್ಯವಿಲ್ಲ ಎಂದು ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಹೇಳಿದ್ದಾರೆ. ಭಾರತದ ಸ್ವತಂತ್ರ ವಿದೇಶಾಂಗ ನೀತಿಯನ್ನು ಶ್ಲಾಘಿಸಿದ ಅವರು, ಹೊಸದಿಲ್ಲಿಯ ನಿರ್ಧಾರಗಳನ್ನು ಯಾರೂ ನಿರ್ದೇಶಿಸಲು ಸಾಧ್ಯವಿಲ್ಲ ಎಂದು ಸ್ಪಷ್ಟಪಡಿಸಿದರು.

ಸೇಂಟ್ ಪೀಟರ್ಸ್‌ಬರ್ಗ್ ಅಂತಾರಾಷ್ಟ್ರೀಯ ಆರ್ಥಿಕ ವೇದಿಕೆಯಲ್ಲಿ ಮಾತನಾಡಿದ ಪುಟಿನ್, ಭಾರತವನ್ನು ವಿಶ್ವಾಸಾರ್ಹ ಹಾಗೂ ನಂಬಿಕಸ್ಥ ಪಾಲುದಾರ ಎಂದು ಬಣ್ಣಿಸಿದರು. ರಷ್ಯಾ ವಿರುದ್ಧ ಜಾಗತಿಕ ನಿರ್ಬಂಧಗಳು ಮತ್ತು ಭೌಗೋಳಿಕ ರಾಜಕೀಯ ಉದ್ವಿಗ್ನತೆಗಳ ನಡುವೆಯೂ ಉಭಯ ದೇಶಗಳ ಸಂಬಂಧ ಮತ್ತಷ್ಟು ವಿಸ್ತರಿಸುತ್ತಿದೆ ಎಂದು ಹೇಳಿದರು.

ಭಾರತದ ಸ್ವಾಯತ್ತ ನಿಲುವಿಗೆ ಬೆಂಬಲ: ಭಾರತ ತನ್ನ ರಾಷ್ಟ್ರೀಯ ಹಿತಾಸಕ್ತಿಗಳಿಗೆ ಅನುಗುಣವಾಗಿ ನಿರ್ಧಾರಗಳನ್ನು ತೆಗೆದುಕೊಳ್ಳುವ ಸಾರ್ವಭೌಮ ಹಕ್ಕು ಹೊಂದಿದೆ ಎಂದು ಪುಟಿನ್ ಹೇಳಿದರು. ಭಾರತ-ರಷ್ಯಾ ಸ್ನೇಹವು ಹಲವು ದಶಕಗಳ ಇತಿಹಾಸ ಹೊಂದಿದ್ದು, ಪಾಶ್ಚಾತ್ಯ ರಾಷ್ಟ್ರಗಳ ಒತ್ತಡದಿಂದ ಅದನ್ನು ದುರ್ಬಲಗೊಳಿಸಲು ಸಾಧ್ಯವಿಲ್ಲ ಎಂದರು.

ವಿವಿಧ ಕ್ಷೇತ್ರಗಳಲ್ಲಿ ಸಹಕಾರ ವಿಸ್ತರಣೆ: ರಕ್ಷಣಾ, ಇಂಧನ, ವ್ಯಾಪಾರ, ತಂತ್ರಜ್ಞಾನ ಮತ್ತು ಮೂಲಸೌಕರ್ಯ ಸೇರಿದಂತೆ ಹಲವು ಕ್ಷೇತ್ರಗಳಲ್ಲಿ ಉಭಯ ರಾಷ್ಟ್ರಗಳು ನಿಕಟ ಸಹಕಾರ ಮುಂದುವರಿಸಿವೆ. ಮಾಹಿತಿ ತಂತ್ರಜ್ಞಾನ, ಶಿಕ್ಷಣ, ವಿಜ್ಞಾನ ಹಾಗೂ ಸಾರಿಗೆ ಕ್ಷೇತ್ರಗಳಲ್ಲಿಯೂ ಸಹಭಾಗಿತ್ವ ಹೆಚ್ಚಿಸಲು ಪ್ರಯತ್ನಗಳು ನಡೆಯುತ್ತಿವೆ.



ಕಾರ್ಯತಂತ್ರದ ಪಾಲುದಾರಿಕೆ ಮುಂದುವರಿಕೆ: ಉಕ್ರೇನ್ ಸಂಘರ್ಷದ ಹಿನ್ನೆಲೆಯಲ್ಲಿ ರಷ್ಯಾ ಮೇಲೆ ಪಾಶ್ಚಾತ್ಯ ರಾಷ್ಟ್ರಗಳು ನಿರ್ಬಂಧ ಹೇರಿದ್ದರೂ, ಭಾರತ ತನ್ನ ಕಾರ್ಯತಂತ್ರದ ಸ್ವಾಯತ್ತತೆ ನೀತಿಯನ್ನು ಮುಂದುವರಿಸಿದೆ. ಪರಸ್ಪರ ಗೌರವ ಮತ್ತು ನಂಬಿಕೆಯ ಆಧಾರದ ಮೇಲೆ ನಿರ್ಮಿತವಾಗಿರುವ ಭಾರತ-ರಷ್ಯಾ ಸಂಬಂಧ ಮುಂದಿನ ದಿನಗಳಲ್ಲೂ ಮತ್ತಷ್ಟು ಬಲಗೊಳ್ಳಲಿದೆ ಎಂದು ಪುಟಿನ್ ವಿಶ್ವಾಸ ವ್ಯಕ್ತಪಡಿಸಿದರು.

ಆಧಾರ್ ಸೇವಾ ಕೇಂದ್ರಕ್ಕೆ ಸಚಿವ ಪ್ರಹ್ಲಾದ ಜೋಶಿ ಚಾಲನೆ

ಆಧಾರ್ ಕೇಂದ್ರ ಪುನರಾರಂಭ

ಧಾರವಾಡ: ಸಾಂಸ್ಕೃತಿಕ ನಗರಿ ಧಾರವಾಡಿಗರ ಆಗ್ರಹದ ಮೇರೆಗೆ ಸಿ.ಬಿ.ನಗರದಲ್ಲಿ ಪುನರ್ ಕಾರ್ಯಾರಂಭ ಮಾಡಿದ ನವೀಕೃತ ಹಾಗೂ ಸುಸಜ್ಜಿತ ಆಧಾರ್ ಸೇವಾ ಕೇಂದ್ರಕ್ಕೆ ಭಾನುವಾರ ಕೇಂದ್ರ ಸಚಿವ ಪ್ರಹ್ಲಾದ ಜೋಶಿ ಅಧಿಕೃತವಾಗಿ ಚಾಲನೆ ನೀಡಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಸಚಿವ ಪ್ರಹ್ಲಾದ ಜೋಶಿ, ದೇಶದ 135 ಕೋಟಿ ಜನರ ಪ್ರಾಥಮಿಕ ಆಧಾರ್ ನೋಂದಣಿ ಪ್ರಕ್ರಿಯೆ ಮುಗಿದ ನಂತರವೇ ಕೇಂದ್ರ ಸರ್ಕಾರವು ಒಂದು ಜಿಲ್ಲೆಗೆ ಒಂದು ಆಧಾರ್ ಕೇಂದ್ರ ಜಾರಿಗೆ ತಂದಿದ್ದಾಗಿ ತಿಳಿಸಿದರು.

ಹೊಸದಾಗಿ ಜನಿಸಿದ ಮಕ್ಕಳ ಆಧಾರ್ ಕಾರ್ಡ್ ಮಾಡಿಸಲು ಹಾಗೂ ತಿದ್ದುಪಡಿಗೆ ಈ ನಿಯಮ ಜಾರಿಗೆ ಬಂತು. ಈ ಹೊಸ ನಿಯಮ ಮತ್ತು ಹಿಂದಿನ ಟೆಂಡರ್ ಮುಗಿದ ಕಾರಣಕ್ಕಾಗಿ ಧಾರವಾಡ ಕೇಂದ್ರದ ಸೇವೆ ಸ್ಥಗಿತಗೊಂಡಿದ್ದಾಗಿ ಮಾಹಿತಿ ನೀಡಿದರು.

ಧಾರವಾಡದ ಆಧಾರ್ ಕೇಂದ್ರ ಹುಬ್ಬಳ್ಳಿಗೆ ಸ್ಥಳಾಂತರಿಸಲಾಗಿದೆ ಎಂದು ಕೆಲವರು ವದಂತಿ ಮತ್ತು ಗುಲ್ಲೆಬ್ಬಿಸಿದ್ದರು. ಆದರೆ ತಾಂತ್ರಿಕ ಕಾರಣಗಳಿಂದ ಸ್ಥಗಿತಗೊಂಡ ಈ ಕೇಂದ್ರವನ್ನು ಧಾರವಾಡದಲ್ಲಿ ಉಳಿಸಲು ಜಿಲ್ಲೆಯ ನಾಗರಿಕರು ಆಗ್ರಹಿಸಿದ್ದಾಗಿ ಹೇಳಿದರು.

ಧಾರವಾಡ ಕೇಂದ್ರ ಪುನರಾರಂಭಿಸಲು ಧಾರವಾಡ ನಾಗರಿಕರು ತಮಗೆ ಮತ್ತು ಶಾಸಕರಿಗೆ ಕೋರಿದ ಹಿನ್ನೆಲೆ ಕೇಂದ್ರ ಸಚಿವ ಅಶ್ವಿನಿ ವೈಷ್ಣವ್ ಜೊತೆಗೆ ಚರ್ಚಿಸಿ ಧಾರವಾಡದಲ್ಲಿ ಕೇಂದ್ರ ಸ್ಥಾಪನೆಯ ಅಗತ್ಯತೆ ಮನವರಿಕೆ ಮಾಡಿಕೊಡಲಾಗಿದೆ ಎಂದರು.

ತಮ್ಮ ಮನವಿಗೆ ಸ್ಪಂದಿಸಿದ ಕೇಂದ್ರ ಮಾಹಿತಿ ತಂತ್ರಜ್ಞಾನ ಸಚಿವ ಅಶ್ವಿನಿ ವೈಷ್ಣವ್ ಹಾಗೂ ಕೇಂದ್ರ ಸರ್ಕಾರವು ವಿಶೇಷ ಆದ್ಯತೆಯ ಮೇರೆಗೆ ಧಾರವಾಡ ನಗರದಲ್ಲಿ ಮತ್ತೊಮ್ಮೆ ಸುಸಜ್ಜಿತವಾದ ಆಧಾರ್ ಕೇಂದ್ರ ಮಂಜೂರು ಮಾಡಿದ್ದಾಗಿ ಮಾಹಿತಿ ನೀಡಿದರು.

ಶಾಸಕ ಅರವಿಂದ ಬೆಲ್ಲದ, ಮಾಜಿ ಶಾಸಕಿ ಸೀಮಾ ಮಸೂತಿ, ಪಾಲಿಕೆ ಸದಸ್ಯ ಶಿವು ಹಿರೇಮಠ, ಶಂಕರ ಶೇಳಕೆ, ಬಿಜೆಪಿ ಮಹಿಳಾ ರಾಜ್ಯ ಉಪಾಧ್ಯಕ್ಷೆ ಸವಿತಾ ಅಮರಶೆಟ್ಟಿ, ಮೋಹನ ರಾಮದುರ್ಗ, ಮಾಧ್ಯಮ ವಕ್ತಾರ ನಾಗರಾಜ ಅನೇಕರು ಇದ್ದರು.



ಇಂದಿನಿಂದ ಸಾರ್ವಜನಿಕರ ಸೇವೆಗೆ ಮುಕ್ತ

ರಾಜ್ಯದಲ್ಲಿ ಮೊದಲ ಹಂತದ ಆಧಾರ್ ಕಾರ್ಯ ಮುಗಿದ ಬಳಿಕ ಕೇವಲ ಎಂಟು ಆಧಾರ್ ಕೇಂದ್ರಗಳು ಉಳಿಸಿಕೊಳ್ಳಲಾಗಿದೆ. ಈ ಪೈಕಿ ರಾಜಧಾನಿ ಬೆಂಗಳೂರಲ್ಲಿ ಎರಡು ಹಾಗೂ ಹುಬ್ಬಳ್ಳಿ-ಧಾರವಾಡದಲ್ಲಿ ಎರಡು ಕೇಂದ್ರ ಕಾರ್ಯನಿರ್ವಹಿಸಲಿವೆ. ಇದು ಜಿಲ್ಲೆಗೆ ಸಿಕ್ಕಿರುವ ದೊಡ್ಡ ಕೊಡುಗೆ. ಇಂದಿನಿಂದ ಧಾರವಾಡ ಕೇಂದ್ರ ಸಹ ಸಾರ್ವಜನಿಕರ ಸೇವೆಗೆ ಮುಕ್ತವಾಗಿದೆ ಎಂದು ಸಚಿವ ಪ್ರಹ್ಲಾದ ಜೋಶಿ ಹೇಳಿದರು.



ಜೈನ ಮುನಿಗಳಿಗೆ ಸುರಕ್ಷತೆ ನೀಡಲು ಆಗ್ರಹ

ಗದಗ: ಒಬ್ಬ ಸಂತನ ನಷ್ಟವು ಕೇವಲ ಅಪಘಾತವಲ್ಲ, ಅದು ನಮ್ಮ ಸಾಮೂಹಿಕ ಮನಸ್ಸಿಗೆ ನೋವಿನ ಸಂಗತಿಯಾಗಿದ್ದು ಜೈನ ಸಾಧು-ಸಾಧ್ವಿಯರ ರಕ್ಷಣೆಗೆ ಕ್ರಮ ಕೈಗೊಳ್ಳುವಂತೆ ಆಗ್ರಹಿಸಿ ನಗರದಲ್ಲಿ ಜಿಲ್ಲಾ ಜೈನ ಸಮಾಜವು ಪ್ರಧಾನ ಮಂತ್ರಿ, ರಾಷ್ಟ್ರಪತಿಗೆ ಜಿಲ್ಲಾಧಿಕಾರಿಗಳ ಮೂಲಕ ಮನವಿ ಸಲ್ಲಿಸಿತು.

ಶತಮಾನಗಳಿಂದ ಅಹಿಂಸೆ, ಶಾಂತಿ ಮತ್ತು ಆಧ್ಯಾತ್ಮಿಕ ಶಿಸ್ತಿನ ಸಂದೇಶವನ್ನು ಹೊತ್ತು ಬರಿಗಾಲಿನಲ್ಲಿ ದೇಶಾದ್ಯಂತ ಪಾದಯಾತ್ರೆ ಮಾಡುವುದು ಜೈನ ತಪಸ್ವಿಗಳ ಪರಂಪರೆ. ಇದು ಕೇವಲ ಧಾರ್ಮಿಕ ಆಚರಣೆಯಲ್ಲ, ಭಾರತದ ನಾಗರಿಕ ಪರಂಪರೆಯ ಜೀವಂತ ದ್ಯೋತಕ. ಸಂವಿಧಾನ ನೀಡಿರುವ ಧಾರ್ಮಿಕ ಸ್ವಾತಂತ್ರ್ಯ ಮತ್ತು ಚಲನಾ ಸ್ವಾತಂತ್ರ್ಯದ ಹಕ್ಕಿನಡಿ ಸಾಗುವ ಈ ಶಾಂತಿದೂತರ ಪಯಣ ಇಂದು ಹೆದ್ದಾರಿಗಳಲ್ಲಿ ಅಪಾಯಕ್ಕೆ ಸಿಲುಕುವಂತಾಗಿದೆ. ಇತ್ತೀಚೆಗೆ ಸರಣಿಯಾಗಿ ನಡೆಯುತ್ತಿರುವ ಅಪಘಾತಗಳು ಜೈನ ಸಮುದಾಯವನ್ನು ತೀವ್ರ ಆತಂಕಕ್ಕೀಡು ಮಾಡಿವೆ. ಹಾಗಾಗಿ ರಾಷ್ಟ್ರೀಯ ಮತ್ತು ರಾಜ್ಯ ಹೆದ್ದಾರಿಗಳ ಪಕ್ಕದಲ್ಲಿ ಜೈನ ತಪಸ್ವಿಗಳು, ಗ್ರಾಮೀಣರು ಹಾಗೂ ಕಾಲ್ನಡಿಗೆ ಪ್ರಯಾಣಿಕರಿಗಾಗಿ ಮೀಸಲಾದ, ಸಂರಕ್ಷಿತ ಪಾದಚಾರಿ ಕಾರಿಡಾರ್ ಮಾರ್ಗ ನಿರ್ಮಿಸಬೇಕು. ಹೆದ್ದಾರಿಗಳಲ್ಲಿ ಸನ್ಯಾಸಿ ದಾಟುವಿಕೆ ವಲಯ ಎಂದು ಸೂಚಿಸುವ ಶಾಶ್ವತ ಎಚ್ಚರಿಕೆ ಫಲಕಗಳ ಅಳವಡಿಕೆ ಮತ್ತು ವಾಹನಗಳ ವೇಗ ನಿಯಂತ್ರಣಕ್ಕೆ ಕ್ರಮ ಜರುಗಿಸಬೇಕು. ಪಾದಯಾತ್ರೆ ವೇಳೆ ಸಂಭವಿಸುವ ಜೈನ ಸನ್ಯಾಸಿ-ಸನ್ಯಾಸಿನಿಯರ ಸಾವಿನ ಪ್ರಕರಣಗಳಲ್ಲಿ ನಿಷ್ಪಕ್ಷಪಾತ ಹಾಗೂ ಸಮಗ್ರ ತನಿಖೆ ನಡೆಸಿ ತಪ್ಪಿತಸ್ಥರ ವಿರುದ್ಧ ಕ್ರಮ ಜರುಗಿಸಬೇಕು ಎಂದು ಒತ್ತಾಯಿಸಿದರು.

ಮನವಿ ಸ್ವೀಕರಿಸಿದ ಜಿಲ್ಲಾಧಿಕಾರಿ ಸಿ.ಎನ್. ಶ್ರೀಧರ ಈ ಕುರಿತು ಮನವಿಯನ್ನು ಮುಂದಿನ ಕ್ರಮಕ್ಕೆ ರವಾನಿಸಲಾಗುವುದು ಎಂದರು.

ಶ್ವೇತಾಂಬರ ಮೂರ್ತಿ ಪೂಜಕ ಅಧ್ಯಕ್ಷ ಇಂದ್ರಕುಮಾರ ಬಾಫಣಾ, ವರ್ಧಮಾನ ಸ್ಥಾನಿಕವಾಸಿ ಸಮಾಜದ ಅಧ್ಯಕ್ಷ ರೂಪಚಂದಜೀ ಪಾಲರೇಚಾ, ತೇರಾಪಂಥ ಸಮಾಜದ ಅಧ್ಯಕ್ಷ ಖೀಮಚಂದ ಬನ್ಸಾಲಿ, ಕೆ.ಡಿ.ಓ ಜೈನ ಮಹಾಜನ್ ಸಮಾಜದ ಅಧ್ಯಕ್ಷ ವಿಜಯ ಲೂಥಿಯಾ, ಜಿಲ್ಲಾ ದಿಗಂಬರ ಜೈನ ಸಮಾಜದ ಅಧ್ಯಕ್ಷ ಪದ್ಮರಾಜ ಕುಲಕರ್ಣಿ ಹಾಗೂ ಜೈನ ಸಮಾಜದ ಮಹಿಳಾ, ಯುವಕ ಮಂಡಳದ ಪದಾಧಿಕಾರಿಗಳು ಇದ್ದರು.



ಕಿರುಸುದ್ದಿ



ಗದಗ: ಬಾಳೆಹೊನ್ನೂರ ರಂಭಾಪುರಿ ಮಹಾಪೀಠದ ರಂಭಾಪುರಿ ವೀರ ಸಿಂಹಾಸನಧೀಶ್ವರ 1 ಡಾ. ವೀರಸೋಮೇಶ್ವರ ಸ್ವಾಮೀಜಿ ಅವರನ್ನು ವಿಧಾನ ಪರಿಷತ್ ಸದಸ್ಯ ಎಸ್.ವಿ. ಸಂಕನೂರ ಅವರು ಭೇಟಿ ಮಾಡಿ ಆಶೀರ್ವಾದ ಪಡೆದರು. ಚಂದ್ರು ಬಾಳೆಹಳ್ಳಿಮಠ ವಿರೇಶ ಕೂಗು ಇದ್ದರು.


ಶ್ರೀಮದ್ಭಾಗವತ ಸಪ್ತಾಹ ಇಂದಿನಿಂದ

ಹುಬ್ಬಳ್ಳಿ: ಅಧಿಕ ಪುರುಷೋತ್ತಮ ಮಾಸದ ನಿಮಿತ್ತ ಶ್ರೀಮದ್ಭಾಗವತ ಕಥಾ ಪ್ರವಚನ ಸಪ್ತಾಹ ಕಾರ್ಯಕ್ರಮವು ಗಾನ ಪ್ರವಚನ ಸಂಗಮ ಪರ್ವ ರೂಪಾತ್ಮಕವಾಗಿ ಆಯೋಜಿಸಲಾಗಿದೆ.

ಕಂಠಪಲ್ಲೀ ವೇದಪೀಠ ಟ್ರಸ್ಟ್ ಹಾಗೂ ಶ್ರೀವಿಜಯಾಂಜನೇಯ ವೇದ ಸಂಸ್ಕೃತ ವಿದ್ಯಾಲಯದ ಸಹಯೋಗದಲ್ಲಿ ಜೂ.8 ರಿಂದ 14 ರ ವರೆಗೆ ಸಂಜೆ 6.30 ರಿಂದ 7.45 ರ ವರೆಗೆ ಇಲ್ಲಿನ ವಿಜಯನಗರ ಕೆಂಪಣ್ಣವರ ಕಲ್ಯಾಣ ಮಂಟಪದ ಮಾರುತಿ ದೇವಾಲಯದಲ್ಲಿ ಈ ವಿಶಿಷ್ಟವಾದ ಕಾರ್ಯಕ್ರಮ ಆಯೋಜಿಸಲಾಗಿದೆ.

ವೇದಪೀಠದ ಕುಲಾಧಿಪತಿ ಡಾ. ಕಂಠಪಲ್ಲೀ ಆಚಾರ್ಯರು ಕಥಾಪ್ರವಚನವನ್ನು ಮತ್ತು ಸಂಗೀತ ವಿದುಷಿ ಪ್ರತಿಮಾ ಜೋಶಿ ಇವರು ಪೂರಕವಾಗಿ ಹರಿದಾಸರ ಗೀತೆಗಳನ್ನು ಪ್ರಸ್ತುತಪಡಿಸುತ್ತಾರೆ. ಇದೇ ಸಂದರ್ಭದಲ್ಲಿ ಪಿಯು, ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಗುತ್ತದೆ ಎಂದು ವೇದಪೀಠದ ಕಾರ್ಯದರ್ಶಿಗಳು ತಿಳಿಸಿದ್ದಾರೆ.

ವಿವಿಧ ಧಾರ್ಮಿಕ ಕಾರ್ಯ



ಕುಂದಗೋಳ: ಪಟ್ಟಣದ ಕರೋಗಲ್ ಓಣಿಯಲ್ಲಿ ಜೇಷ್ಠ ಅಧಿಕ ಮಾಸದ ಪ್ರಯುಕ್ತ ದತ್ತಾತ್ರೇಯ ದೇವಸ್ಥಾನದಲ್ಲಿ ಭಾನುವಾರ ರುದ್ರಾಭಿಷೇಕ ಹಾಗೂ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ನೆರವೇರಿದವು. ನಂತರ ಅನ್ನಪ್ರಸಾದ ಜರುಗಿತು.

ಶಿರಸ್ತೇದಾರಗೆ ಬೀಳ್ಕೊಡುಗೆ



ನವಲಗುಂದ: ಸಿವಿಲ್ ಹಾಗೂ ಜೆ.ಎಂ.ಎಫ್.ಸಿ.ನ್ಯಾಯಾಲಯದಿಂದ ಧಾರವಾಡದ ಪ್ರಧಾನ ಹಿರಿಯ ಸಿವಿಲ್ ಹಾಗೂ ಸಿ.ಜೆ.ಎಂ.ನ್ಯಾಯಾಲಯಕ್ಕೆ ವರ್ಗಾವಣೆಗೊಂಡ ಶಿರಸ್ತೇದಾರ ರಮೇಶ ಕಮ್ಮಾರ ಅವರ ಬೀಳ್ಕೊಡುವ ಕಾರ್ಯಕ್ರಮವನ್ನು ನ್ಯಾಯಾಲಯದ ಸಂಕೀರ್ಣದಲ್ಲಿ ಆಯೋಜಿಸಲಾಗಿತ್ತು. ಶಿರಸ್ತೇದಾರ ಕಮ್ಮಾರ ಅವರನ್ನು ಸನ್ಮಾನಿಸಿ ಮಾತನಾಡಿದ ಹಿರಿಯ ಸಿವಿಲ್ ನ್ಯಾಯಾಧೀಶ ಮಂಜುನಾಥ ಪಾನಘಂಟಿ , ಕಮ್ಮಾರವರ ಕಾರ್ಯ ದಕ್ಷತೆ, ಪ್ರಾಮಾಣಿಕತೆ, ಕಾರ್ಯವೈಖರಿ ಹಾಗೂ ಅವರ ಮೃದು ಸ್ವಭಾವದ ಬಗ್ಗೆ ಬಣ್ಣಿಸಿ, ವೃತ್ತಿ ಜೀವನ ಸುಖಕರವಾಗಲಿ. ಮತ್ತೆ ಹಿರಿಯ ಶಿರಸ್ತೇದಾರರಾಗಿ ನವಲಗುಂದಕ್ಕೆ ಬರಲಿ ಎಂದು ಹಾರೈಸಿದರು. ಕಿರಣ ನಿರೂಪಿಸಿದರು. ಗಿರೀಶ ದಾಸರ ಸ್ವಾಗತಿಸಿದರು. ಸುರೇಶ ವಂದಿಸಿದರು. ನ್ಯಾಯಾಲಯದ ಎಲ್ಲ ಸಿಬ್ಬಂದಿ, ಸಹಾಯಕ ಸರ್ಕಾರಿ ಅಭಿಯೋಜಕರು ಹಾಗೂ ಪೊಲೀಸ್ ಸಿಬ್ಬಂದಿ ಇದ್ದರು.

ಪ್ರತಿಭಟನೆ ಇಂದು



ಕುಂದಗೋಳ: ತಾಲೂಕು ಅಂಜುಮನ್-ಎ-ಇಸ್ಲಾಂ ಸಂಘದ ವತಿಯಿಂದ ನೂತನ ರಾಜ್ಯ ಸರ್ಕಾರದಲ್ಲಿ ಮುಸ್ಲಿಂ ಸಮಾಜಕ್ಕೆ ಸಮರ್ಪಕ ಪ್ರಾತಿನಿಧ್ಯ ನೀಡುವಂತೆ ಆಗ್ರಹಿಸಿ ಜೂ.8ರಂದು ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ.

ರಾಜ್ಯ ಸಚಿವ ಸಂಪುಟದಲ್ಲಿ ಸಚಿವ ಜಮೀರ್ ಅಹ್ಮದ್ ಖಾನ್ ಸೇರಿದಂತೆ ಮುಸ್ಲಿಂ ಸಮಾಜದ ಕನಿಷ್ಠ ಐವರಿಗೆ ಸಚಿವ ಸ್ಥಾನ ನೀಡಬೇಕೆಂದು ಒತ್ತಾಯಿಸಿ ಈ ಪ್ರತಿಭಟನೆ ನಡೆಸಲು ತೀರ್ಮಾನಿಸಲಾಗಿದೆ. ಈ ಕುರಿತು ಶನಿವಾರ ಸಮಾಜದ ಮುಖಂಡರು ಹಾಗೂ ಸದಸ್ಯರು ಸಭೆ ಸೇರಿ ಚರ್ಚೆ ನಡೆಸಿ, ಅಂತಿಮವಾಗಿ ಪ್ರತಿಭಟನೆ ನಡೆಸುವ ಕುರಿತು ನಿರ್ಣಯ ಕೈಗೊಂಡರು ಎಂದು ತಾಲೂಕು ಸಮಿತಿ ಅಧ್ಯಕ್ಷ ಕಯಿಮ್ ನಾಲಬಂದ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ತ್ರೈಮಾಸಿಕ ಸಮನ್ವಯ ಸಮಿತಿಗಳ ಸಭೆ

ನರಗುಂದ: ತಹಶೀಲ್ದಾರ್ ಕಾರ್ಯಾಲಯದಲ್ಲಿ ತಾಲೂಕಿನ ರಾಷ್ಟ್ರೀಯ ಪಲ್ಸ್ ಪೋಲಿಯೋ ಕಾರ್ಯಕ್ರಮದ ಟಾಸ್ಕ್ ಫೋರ್ಸ್ ಸಮಿತಿ ಸಭೆ ಆರೋಗ್ಯ ಇಲಾಖೆಯ ವಿವಿಧ ಕಾರ್ಯಕ್ರಮಗಳಾದ ತಂಬಾಕು ನಿಯಂತ್ರಣ ಕಾರ್ಯಕ್ರಮ ಫ್ಲೋರೋಸಿಸ್ ನಿಯಂತ್ರಣ ಕಾರ್ಯಕ್ರಮ ರಾಷ್ಟ್ರೀಯ ಬಾಲ್ಯ ಸ್ವಾಸ್ಥ್ಯ ಕಾರ್ಯಕ್ರಮ ಸಾಂಕ್ರಾಮಿಕ ರೋಗಗಳ ನಿಯಂತ್ರಣ ಮತ್ತು ಆಶಾ ಕುಂದುಕೊರತೆಗಳ ನಿವಾರಣಾ ಸಮಿತಿ ಸಭೆ ಕುರಿತು ಅಂತರ್ ಇಲಾಖೆಯೊಂದಿಗೆ ತಾಲೂಕು ಮಟ್ಟದ ತ್ರೈಮಾಸಿಕ ಸಮನ್ವಯ ಸಮಿತಿಗಳ ಸಭೆಯನ್ನು ತಹಶೀಲ್ದಾರ್ ಶ್ರೀಶೈಲ ತಳವಾರ ಅವರ ಅಧ್ಯಕ್ಷತೆಯಲ್ಲಿ ಮತ್ತು ತಾಪಂ ಕಾರ್ಯನಿರ್ವಾಹಕ ಅಧಿಕಾರಿಗಳ ಸಹ ಅಧ್ಯಕ್ಷತೆಯಲ್ಲಿ ಹಾಗೂ ತಾಲೂಕು ಆರೋಗ್ಯಾಧಿಕಾರಿಗಳ ಉಪಸ್ಥಿಯಲ್ಲಿ ಏರ್ಪಡಿಸಲಾಯಿತು.

ಸಭೆಯಲ್ಲಿ ತಾಲೂಕಿನ ವಿವಿಧ ಇಲಾಖೆಗಳ ಅಧಿಕಾರಿಗಳು ಹಾಗೂ ಆರೋಗ್ಯ ಇಲಾಖೆಯ ಅಧಿಕಾರಿಗಳು ಮತ್ತು ಸಿಬ್ಬಂದಿ ಭಾಗವಹಿಸಿದ್ದರು.



ನಾಡು ನುಡಿಗೆ ಕೃಷ್ಣರಾಜ ಒಡೆಯರ ಕೊಡುಗೆ ಅನನ್ಯ

ಗದಗ: ನಾಲ್ವಡಿ ಕೃಷ್ಣರಾಜ ಒಡೆಯರ್ ಆಡಳಿತಾವಧಿಯಲ್ಲಿ ಸಮಾಜದ ಸರ್ವತೋಮುಖಿ ಅಭಿವೃದ್ಧಿಗೆ ಪೂರಕವಾದ ಕಾರ್ಯಗಳು ಜರುಗಿ ಜನಪರ ಅರಸನಾಗಿ ಜನಮಾನಸದಲ್ಲಿ ನೆಲೆ ನಿಂತಿದ್ದಾರೆ ಎಂದು ಜಿಲ್ಲಾ ಕಸಾಪ ಅಧ್ಯಕ್ಷ ವಿವೇಕಾನಂದಗೌಡ ಪಾಟೀಲ ಹೇಳಿದರು.

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ವತಿಯಿಂದ ಏರ್ಪಡಿಸಿದ್ದ ಕನ್ನಡ ಸಾಹಿತ್ಯ ಪರಿಷತ್ತಿನ ಸಂಸ್ಥಾಪಕ ರಾಜರ್ಷಿ ನಾಲ್ಮಡಿ ಕೃಷ್ಣರಾಜ ಒಡೆಯರ್ ಜಯಂತ್ಯುತ್ಸವ ಕಾರ್ಯಕ್ರಮದಲ್ಲಿ ಮಾತನಾಡಿದರು. ಕೃಷಿ, ಶಿಕ್ಷಣ ಮತ್ತು ಕೈಗಾರಿಕೆಗಳ ಅಭಿವೃದ್ಧಿಯ ಹಿನ್ನೆಲೆಯ ಮಹತ್ವದ ಕಾರ್ಯಯೋಜನೆಗಳನ್ನು ರೂಪಿಸಿ, ಜಾರಿಗೊಳಿಸಿದರು. ಐಷಾರಾಮಿ ಬದುಕನ್ನು ತೊರೆದು ಜನಮುಖಿ ಕಾರ್ಯ ಮಾಡಿದ ನಾಲ್ವಡಿಯ ಅವರು ಸದಾ ಸ್ಮರಣೀಯರು. ಕನ್ನಡ ನಾಡು ನುಡಿಗೆ ನಾಲ್ವಡಿ ಕೃಷ್ಣರಾಜ ಒಡೆಯರ ಕೊಡುಗೆ ಅಪಾರವಾಗಿದೆ ಎಂದರು.

ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಅನೇಕ ಪ್ರಥಮಗಳಿಗೆ ಕಾರಣರಾಗಿದ್ದಾರೆ. ರೈತರ ಬದುಕನ್ನು ಹಸನಾಗಿಸಲು ಕೃಷ್ಣರಾಜ ಜಲಾಶಯವನ್ನು ನಿರ್ಮಿಸಿದರು. ವಿದ್ಯುಚ್ಛಕ್ತಿ ಉತ್ಪಾದನೆ, ಶೈಕ್ಷಣಿಕ ಸಂಸ್ಥೆಗಳ ಸ್ಥಾಪನೆ, ಉದ್ಯಮಗಳ ಸ್ಥಾಪನೆ ಮೂಲಕ ಸಮಾಜವನ್ನು ಆರ್ಥಿಕವಾಗಿ, ಶೈಕ್ಷಣಿಕವಾಗಿ ಹಾಗೂ ಸಾಮಾಜಿಕ ಉನ್ನತೀಕರಿಸಲು ಶ್ರಮಿಸಿದರು. ಗ್ರಂಥಕರ್ತರ ನೆರವಿಗಾಗಿ, ಕನ್ನಡ ನಾಡು ನುಡಿಯ ಬೆಳವಣಿಗೆಗಾಗಿ ಕನ್ನಡ ಸಾಹಿತ್ಯ ಪರಿಷತ್ತನ್ನು ಸ್ಥಾಪಿಸಿ ಕನ್ನಡದ ಸೇವೆಯನ್ನು ಮಾಡಿದರು. ಹಿಂದುಳಿದ ವರ್ಗಗಳಿಗೆ ಮೀಸಲಾತಿ, ಸ್ತ್ರೀಶಿಕ್ಷಣ, ಸಾಕ್ಷರತೆ, ರಸ್ತೆ ನಿರ್ಮಾಣ ಹೀಗೆ ಜನೋಪಯೋಗಿ ಕಾಯಕದ ಮೂಲಕ ಕನ್ನಡಿಗರಲ್ಲಿ ನೆಲೆಸಿದ್ದಾರೆ ಎಂದರು.

ಡಿ.ಎಸ್.ಬಾಪುರಿ ಮಾತನಾಡಿ, ಆಡಳಿತದಲ್ಲಿ ಜನರ ಸಹಭಾಗಿತ್ವ ಇರಬೇಕು ಎಂಬ ಉದ್ದೇಶದಿಂದ ಮೈಸೂರು ಸಂಸ್ಥಾನದಲ್ಲಿ ಚಾಮರಾಜ ಒಡೆಯರ್ ಕಾಲದಲ್ಲಿ ಪ್ರಜಾಪ್ರತಿನಿಧಿ ಸಭೆ ಪ್ರಾರಂಭಗೊಂಡಿತು. ನಾಲ್ವಡಿ ಕಾಲದಲ್ಲಿ ಇದು ವಿಸ್ತಾರವಾಗಿ ಬೆಳೆಯಿತು. ಶಿಕ್ಷಣ ಇಲ್ಲದೆಯಾವುದೇ ಸಮಸ್ಯೆಗಳನ್ನು ಪರಿಹರಿಸಲು ಸಾಧ್ಯವಿಲ್ಲ ಎಂಬ ಸತ್ಯವನ್ನು ನಾಲ್ವಡಿ ಕೃಷ್ಣರಾಜರು ಕಂಡುಕೊಂಡಿದ್ದರು. ಈ ಕಾರಣಕ್ಕಾಗಿ ಪ್ರಾಥಮಿಕ ಶಿಕ್ಷಣದಿಂದ ಉನ್ನತ ಶಿಕ್ಷಣದವರೆಗೆ ಅವರು ಹೆಚ್ಚಿನ ಒತ್ತು ನೀಡಿದರು. ಉಚಿತ ಶಿಕ್ಷಣ ಪ್ರಾರಂಭಿಸಿದರು. ಕನ್ನಡ ನಾಡಿನಲ್ಲಿ ಕನ್ನಡ ಭಾಷೆ ಕನ್ನಡ ನೆಲ ಕನ್ನಡ ನುಡಿಯ ಹಿರಿಮೆಯನ್ನು ಎತ್ತಿ ಹಿಡಿಯಲು ಕನ್ನಡ ಸಾಹಿತ್ಯ ಪರಿಷತ್ತಿನಂತಹ ಸಂಸ್ಥೆ ಬೇಕು ಎನ್ನುವ ಚಿಂತನೆ ಮಾಡಿ ಸ್ಥಾಪಿಸಿದ ಸಂಸ್ಥೆ ಒಂದು ಶತಮಾನ ಕಂಡು ಕನ್ನಡಿಗರ ಹೆಮ್ಮೆಯ ದ್ಯೋತಕವಾಗಿದೆ. 38 ವರ್ಷಗಳು ದಕ್ಷ ಆಡಳಿತ ನಡೆಸಿ ರಾಜರ್ಷಿ ಬಿರುದಿಗೆ ಪಾತ್ರರಾದರು ಎಂದರು. ಸಹ ಕಾರ್ಯದರ್ಶಿ ಸತೀಶ ಚನ್ನಪ್ಪಗೌಡರ ನಿರೂಪಿಸಿದರು. ಅಮರೇಶ ರಾಂಪೂರ ಸ್ವಾಗತಿಸಿದರು.



50ಕ್ಕೂ ಹೆಚ್ಚು ವಿವಿಧ ತಳಿಯ ಸಸಿ ನಾಟಿ



ನವಲಗುಂದ: ಪರಿಸರವನ್ನು ರಕ್ಷಿಸುವುದು ಪ್ರತಿಯೊಬ್ಬ ನಾಗರಿಕನ ಆದ್ಯ ಕರ್ತವ್ಯವಾಗಿದೆ. ಗಿಡ-ಮರಗಳನ್ನು ಬೆಳೆಸುವ ಮೂಲಕ ಮುಂದಿನ ಪೀಳಿಗೆಗೆ ಹಸಿರು ಪರಿಸರವನ್ನು ಕೊಡುಗೆಯಾಗಿ ನೀಡಬೇಕಿದೆ ಎಂದು ಬದಾಮಿ ವಲಯ ಅರಣ್ಯಾಧಿಕಾರಿ ಸಿದ್ಧಲಿಂಗ ಪೂಜಾರ ಹೇಳಿದರು.

ಅವರು ತಾಲೂಕಿನ ಅಮರಗೋಳ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಸಾಮಾಜಿಕ ಅರಣ್ಯ ವಲಯ ನವಲಗುಂದ ಇವರ ಸಹಯೋಗದೊಂದಿಗೆ ಹಮ್ಮಿಕೊಳ್ಳಲಾಗಿದ್ದ ವಿಶ್ವ ಪರಿಸರ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದರು.

ಕಾರ್ಯಕ್ರಮದ ಅಂಗವಾಗಿ ಶಾಲಾ ಮೈದಾನದಲ್ಲಿ ಸುಮಾರು 50ಕ್ಕೂ ಹೆಚ್ಚು ವಿವಿಧ ತಳಿಯ ಸಸಿಗಳನ್ನು ನೆಡುವ ಮೂಲಕ ಪರಿಸರ ದಿನವನ್ನು ಹಸಿರು ಸಂಭ್ರಮದೊಂದಿಗೆ ಆಚರಿಸಲಾಯಿತು.

ಮುಖ್ಯ ಉಪನ್ಯಾಸಕರಾಗಿ ಆಗಮಿಸಿದ್ದ ಗದಗ ಸರ್ಕಾರಿ ಕಾಲೇಜಿನ ಉಪನ್ಯಾಸಕ ಕಿರಣ ಕಮ್ಮಾರ ಅವರು ತಿಂಗಳ ಹಕ್ಕಿ ವಿಶೇಷ ಉಪನ್ಯಾಸದಲ್ಲಿ ಮಾತನಾಡಿ, ಪ್ರಕೃತಿಯಲ್ಲಿ ಮಾನವನಷ್ಟೇ ಪಕ್ಷಿ ಮತ್ತು ಪ್ರಾಣಿ ಸಂಕುಲಗಳ ಪಾತ್ರವೂ ಮುಖ್ಯವಾಗಿದೆ. ಜೀವವೈವಿಧ್ಯತೆಯ ಸಮತೋಲನ ಕಾಪಾಡಲು ಕಾಡು ಮತ್ತು ವನ್ಯಜೀವಿಗಳ ಸಂರಕ್ಷಣೆ ಅತ್ಯಗತ್ಯ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶಾಲೆಯ ಎಸ್.ಡಿ.ಎಂಸಿ ಅಧ್ಯಕ್ಷ ನಿಂಗಪ್ಪ ಸಂಕಟಿ ವಹಿಸಿದ್ದರು. ನವಲಗುಂದ ಆರ್.ಎಫ್.ಓ ಸತೀಶ, ಡಿ.ಆರ್.ಎಫ್.ಓಗಳಾದ ಜಯಕುಮಾರ ವಾಲೀಕಾರ ಹಾಗೂ ಮಂಜುನಾಥ ಹಳ್ಳಿಕೇರಿ, ದಸ್ತು ಅರಣ್ಯ ಪಾಲಕ ಪಾರಿಶ ಪರಾಟೆ ದಸ್ತು ಉಪಸ್ಥಿತರಿದ್ದರು. ಶಾಲೆಯ ಪ್ರಧಾನ ಗುರು ಎಂ.ಬಿ. ಪವಾಡಶೆಟ್ಟರ ಪ್ರಾಸ್ತಾವಿಸಿದರು. ಎನ್. ಎಸ್. ಹನಸಿ ಸ್ವಾಗತಿಸಿದರು. ಸಂತೋಷ ಕರೆಪ್ಪನವರ ಅವರು ಸರ್ವರಿಗೂ ಪರಿಸರ ಸಂರಕ್ಷಣೆಯ ಪ್ರತಿಜ್ಞಾವಿಧಿ ಬೋಧಿಸಿದರು. ಬಸವರಾಜಪ್ಪ ನಿರೂಪಿಸಿದರು. ಎಸ್. ಐ. ಪೂಜಾರ ವಂದಿಸಿದರು.

ಕ್ರಿಯಾ ಯೋಜನೆ ತರಬೇತಿ ಕಾರ್ಯಕ್ರಮ



ಗದಗ: ಜಿಲ್ಲೆಗೆ ಹವಾಮಾನ ಬದಲಾವಣೆಯ ಕ್ರಿಯಾ ಯೋಜನೆಯ ಕಾರ್ಯಕ್ಷಮತೆಗಳನ್ನು ಅಳವಡಿಸಿಕೊಳ್ಳುವುದರ ವರದಿಯನ್ನು ತಯಾರಿಸಬೇಕೆಂದು ಪರಿಸರ ನಿರ್ವಹಣೆ ಮತ್ತು ನೀತಿ ಸಂಶೋಧನಾ ಸಂಸ್ಥೆ ಹಿರಿಯ ಸಮಾಲೋಚಕಿ ಡಾ. ಸರಿತಾ ಅಧಿಕಾರಿಗಳಿಗೆ ಸಲಹೆ ನೀಡಿದರು.

ನಗರದ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಕರ್ನಾಟಕ ರಾಜ್ಯ ಹವಾಮಾನ ಬದಲಾವಣೆ ಕುರಿತು ಕ್ರಿಯಾ ಯೋಜನೆ ತರಬೇತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ಹವಾಮಾನ ಬದಲಾವಣೆಯ ಇಲಾಖಾ ಕ್ರಿಯಾ ಯೋಜನೆಯ ಕಾರ್ಯಕ್ಷಮತೆ ಸೂಚಕಗಳ ಅನುಷ್ಠಾನ ಕುರಿತು ಅಧಿಕಾರಿಗಳು ತಿಳಿದುಕೊಳ್ಳುವುದು ಅತ್ಯವಶ್ಯಕವಾಗಿದೆ. ಜಿಲ್ಲೆಗೆ ಈ ಕಾರ್ಯಕ್ಷಮತೆಗಳನ್ನು ಅಳವಡಿಸಿಕೊಳ್ಳುವುದಕ್ಕಾಗಿ, ಸೂಕ್ತ ವರದಿಯನ್ನು ತಯಾರಿಸಲು ತಾವುಗಳು ಶ್ರಮಿಸಬೇಕು. ಇದರ ಜೊತೆಗೆ ಹೊಸ ತಂತ್ರಜ್ಞಾನಗಳ ಮೂಲಕ ತ್ಯಾಜ್ಯ ನಿರ್ವಹಣೆ ಮತ್ತು ತ್ಯಾಜ್ಯದಿಂದ ಇಂಧನ ಉತ್ಪಾದನೆಗೆ ಆದ್ಯತೆ ನೀಡಬೇಕು. ನದಿ, ಕೆರೆಗಳ ನೀರಿನ ಗುಣಮಟ್ಟದ ಕಾಪಾಡುವುದು, ಮಾಲಿನ್ಯ ತಡೆಗಟ್ಟಲು ಪರಿಸರವನ್ನು ಸುಸ್ಥಿರವಾಗಿಡಲು ಮತ್ತು ಹಸಿರು ಇಂಧನಗಳ ಬಳಕೆಯನ್ನು ಹೆಚ್ಚಿಸಲು ಎಲ್ಲರೂ ಕೈಜೋಡಿಸಬೇಕೆಂದು ಅವರು ಹೇಳಿದರು.

ವಿಷಯ ತಜ್ಞರಾದ ಶಶಿಕುಮಾರ್, ಮಂಜುನಾಥ್ ಅಭ್ಯರ್ಥಿಗಳಿಗೆ ಎನ್‌ಆರ್‌ಡಿಎಂಎಸ್ ಕೇಂದ್ರದ ಕುರಿತು ಮಾಹಿತಿ ನೀಡಿದರು. ವಿವಿಧ ಇಲಾಖೆಯ ಜಿಲ್ಲಾ ಮಟ್ಟದ ಅಧಿಕಾರಿಗಳು, ಸಂಘ ಸಂಸ್ಥೆಗಳು, ಶಿಕ್ಷಣ ಸಂಸ್ಥೆಗಳವರು ಇದ್ದರು. ಲತಾ ಎಂ.ಎಚ್. ನಿರೂಪಿಸಿದರು. ಜಗದಾಂಬ ಇದ್ದರು.

ಎರಡು ಬಾರಿಯಾದರೂ ರಕ್ತದಾನ ಮಾಡಿ

ಗದಗ: ರಕ್ತದಾನವು ಕೇವಲ ಮತ್ತೊಬ್ಬರ ಜೀವ ಉಳಿಸುವ ಪುಣ್ಯದ ಕೆಲಸವಲ್ಲ, ಅದು ದಾನಿಯ ಆರೋಗ್ಯಕ್ಕೂ ವರದಾನ. ಪ್ರತಿಯೊಬ್ಬ ಆರೋಗ್ಯವಂತ ವ್ಯಕ್ತಿ ವರ್ಷಕ್ಕೆ ಕನಿಷ್ಠ ಎರಡು ಬಾರಿ ರಕ್ತದಾನ ಮಾಡುವ ಸಂಕಲ್ಪ ತೊಡಬೇಕು ಎಂದು ರಕ್ತ ತಪಾಸಿಗ ಡಾ. ದತ್ತಾತ್ರೇಯ ವೈಕುಂಠೆ ಹೇಳಿದರು.

ನಗರದ ಶಾಸ್ತ್ರಿ ಮಹಿಳಾ ಬಿ.ಎಡ್ ಕಾಲೇಜಿನ ಸಭಾಂಗಣದಲ್ಲಿ ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯ ವಿಜಯಪುರ, ಜೆ.ಡಿ.ಎಸ್ ಶಿಕ್ಷಣ ಸಂಸ್ಥೆ ಹಾಗೂ ಭಾವಸಾರ ವಿಷನ್ ಇಂಡಿಯಾ ಇವುಗಳ ಸಂಯುಕ್ತ ಆಶ್ರಯದಲ್ಲಿ ಬಿ.ಎಡ್ ಪ್ರಶಿಕ್ಷಣಾರ್ಥಿಗಳಿಗಾಗಿ ಆಯೋಜಿಸಿದ್ದ ಪೌರತ್ವ ತರಬೇತಿ ಹಾಗೂ ಉಚಿತ ರಕ್ತ ತಪಾಸಣಾ ಶಿಬಿರವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಪ್ರತಿಯೊಬ್ಬರೂ ತಮ್ಮ ರಕ್ತದ ಗುಂಪಿನ ಬಗ್ಗೆ ಸ್ಪಷ್ಟ ಮಾಹಿತಿ ಹೊಂದಿರಬೇಕು. ಅಪಘಾತ, ಶಸ್ತ್ರಚಿಕಿತ್ಸೆಯಂತಹ ತುರ್ತು ಸಂದರ್ಭಗಳಲ್ಲಿ ಇದು ಜೀವ ಉಳಿಸಲು ನೆರವಾಗುತ್ತದೆ. ಶಾಲಾ ಹಂತದಿಂದಲೇ ಮಕ್ಕಳಲ್ಲಿ ರಕ್ತದಾನದ ಬಗ್ಗೆ ಜಾಗೃತಿ ಮೂಡಿಸಲು ರಕ್ತ ಗುಂಪಿನ ಮಹತ್ವ ಹಾಗೂ ರಕ್ತದಾನದ ಅಗತ್ಯವನ್ನು ಸರ್ಕಾರ ಪಠ್ಯಪುಸ್ತಕಗಳಲ್ಲಿ ಕಡ್ಡಾಯವಾಗಿ ಅಳವಡಿಸಬೇಕು ಎಂದರು. ಅಧ್ಯಕ್ಷತೆ ವಹಿಸಿದ್ದ ಮಹಿಳಾ ಬಿ.ಎಡ್ ಕಾಲೇಜಿನ ಪ್ರಾಚಾರ್ಯೆ ಡಾ. ಎಸ್.ಬಿ. ಹೊನ್ನಗುಡಿ ಮಾತನಾಡಿ, ಶಿಕ್ಷಕಿಯರಾಗುವ ನೀವು ಸಮಾಜಕ್ಕೆ ಮಾದರಿಯಾಗಬೇಕು. ಮೊದಲು ನಿಮ್ಮ ರಕ್ತದ ಗುಂಪನ್ನು ತಿಳಿದುಕೊಳ್ಳಿ, ನಂತರ ಕಾಲಕಾಲಕ್ಕೆ ರಕ್ತದಾನ ಮಾಡುವ ಮನೋಭಾವವನ್ನು ಬೆಳೆಸಿಕೊಳ್ಳಿ. ನಿಮ್ಮ ಒಂದು ಯೂನಿಟ್ ರಕ್ತ ಮೂರು ಜೀವಗಳನ್ನು ಉಳಿಸಬಹುದು ಎಂಬುದನ್ನು ಮರೆಯಬೇಡಿ ಎಂದು ಪ್ರಶಿಕ್ಷಣಾರ್ಥಿಗಳಿಗೆ ಹೇಳಿದರು. ಡಾ.ಹರೀಶ ವೈಕುಂಠೆ, ನಾಗರಾಜ ವಾಡೋನೆ ಭಾಗವಹಿಸಿದ್ದರು. ಶಿಕ್ಷಣ ಸಂಸ್ಥೆಯ ಸಂಯೋಜಕಿ ಡಾ. ಡಿ.ಎಂ. ನದಾಫ, ಉಪನ್ಯಾಸಕರಾದ ವಿ.ಕೆ. ಅರಳಿಮಠ, ಗಂಗಾಧರ, ಆರ್.ಎ. ಕೆರೂರ, ಸತೀಶ, ಈಶ್ವರ, ಎನ್.ಎಂ. ಮಟ್ಟಿ ಉಪಸ್ಥಿತರಿದ್ದರು. ಸೌಭಾಗ್ಯ ಚೂರಿಮಠ ಮಾತನಾಡಿದರು. ಸವಿತಾ ಮತ್ತು ಸಂಗಡಿಗರು ಪ್ರಾರ್ಥಿಸಿದರು ಅನುರಾಧಾ ಬೆಟಗೇರಿ ಹಾಗೂ ಗೌರಮ್ಮ ಮಜ್ಜಿಗುಡ್ಡ ನಿರೂಪಿಸಿದರು. ನೀಲಮ್ಮ ಐದನಾಳ ವಂದಿಸಿದರು.





ಗದಗ: ನಗರಸಭೆ ಸಂಯುಕ್ತ ಪದವಿಪೂರ್ವ ಮಹಾವಿದ್ಯಾಲಯ, ಎನ್.ಎಸ್.ಎಸ್. ಘಟಕ ಹಾಗೂ ಸ್ಕೌಟ್ ಮತ್ತು ಗೈಡ್ಸ್ ಸಹಯೋಗದಲ್ಲಿ ವಿಶ್ವ ಪರಿಸರ ದಿನಾಚರಣೆಯನ್ನು ಸಸಿ ನೆಡುವುದರ ಮೂಲಕ ವಿದ್ಯಾರ್ಥಿಗಳಿಗೆ ಪರಿಸರದ ಬಗ್ಗೆ ಅರಿವು ಮೂಡಿಸಲಾಯಿತು. ಜಿಲ್ಲಾ ಉಪನ್ಯಾಸಕ ಸಂಘದ ಅಧ್ಯಕ್ಷ ಎಸ್.ಎಸ್.ಸೋಮಣ್ಣವರ, ಪ್ರಾಚಾರ್ಯ ಎಸ್.ಎಸ್.ಕುಲಕರ್ಣಿ, ಡಾ.ಸುಜಾತಾ ಮಾಗಡಿ, ಜಯಶ್ರೀ ಅಂಗಡಿ, ರಾಜೇಂದ್ರ ಹಿರೇಮಠ, ಎಸ್.ಬಿ. ಪಾಟೀಲ, ವಿ.ಬಿ. ಕರಮುಡಿ, ಪಿ.ಎಸ್. ಗೊರವರ, ಶಂಕರ ಹಟ್ಟಿ, ಕೆ.ಟಿ. ವಡ್ಡಿನ, ರಮೇಶ ಡಿ., ಅಮನ್ ಗುಳೇದಗುಡ್ಡ, ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಪರಿಸರ ಮಾಲಿನ್ಯ ತಡೆಗೆ ಸಹಕರಿಸಿ



ನರಗುಂದ: ಪಟ್ಟಣದ ಲಯನ್ಸ್ ಇಂಗ್ಲಿಷ್ ಮಾಧ್ಯಮ ಶಾಲೆಯಲ್ಲಿ ವಿಶ್ವಪರಿಸರ ದಿನವನ್ನು ಪರಿಸರ ಜಾಗೃತಿ ಜಾಥಾ ಹಮ್ಮಿಕೊಳ್ಳುವ ಮೂಲಕ ಆಚರಿಸಲಾಯಿತು.

ಪರಿಸರ ಜಾಗೃತಿ ಜಾಥಾಕ್ಕೆ ಲಯನ್ಸ್ ಶಿಕ್ಷಣ ಸಂಸ್ಥೆ ಕಾರ್ಯದರ್ಶಿ ಡಾ.ಪ್ರಭು ನಂದಿ ಸಸಿಗೆ ನೀರೆರೆಯುವ ಮೂಲಕ ಚಾಲನೆ ನೀಡಿ ಮಾತನಾಡಿ, ಪರಿಸರ ಸಂರಕ್ಷಣೆ ನಮ್ಮೆಲ್ಲರ ಹೊಣೆಯಾಗಿದೆ. ಪ್ರತಿಯೊಬ್ಬರೂ ಒಂದೊಂದು ಸಸಿ ನೆಟ್ಟು ಅದು ಮರವಾಗುವವರೆಗೂ ಅದರ ಪೋಷಣೆ ಜವಾಬ್ದಾರಿ ನಿರ್ವಹಿಸಬೇಕು. ತ್ಯಾಜ್ಯವಸ್ತುಗಳನ್ನು ಎಲ್ಲೆಂದರಲ್ಲಿ ಎಸೆದು ಪರಿಸರ ಮಾಲಿನ್ಯಕ್ಕೆ ಕಾರಣವಾಗುವುದನ್ನು ತಪ್ಪಿಸಬೇಕಾಗಿದೆ. ಪರಿಸರ ಮಾಲಿನ್ಯ ತಡೆಗಟ್ಟಲು ಎಲ್ಲರೂ ಕೈಜೋಡಿಸಬೇಕಿದೆ ಎಂದರು.

ಶಿಕ್ಷಕಿ ಸೌಂದರ್ಯ ಪವಾರ ಮಾತನಾಡಿ, ಮನೆಗೊಂದು ಮರ, ಊರಿಗೊಂದು ವನ ನಿರ್ಮಾಣದಲ್ಲಿ ಪ್ರಮುಖ ಪಾತ್ರ ವಹಿಸಬೇಕು. ವಿದ್ಯಾರ್ಥಿಗಳಿಗೆ ಪರಿಸರದ ಬಗ್ಗೆ ಕಾಳಜಿ ಹೊಂದಬೇಕು. ಜಾಗತಿಕ ತಾಪಮಾನ ನಿಯಂತ್ರಿಸುವಲ್ಲಿ ಮರಗಳು ಕಾಮಧೇನುವಾಗಿವೆ. ಪರಿಸರ ಸಂರಕ್ಷಣೆಯಲ್ಲಿ ವಿದ್ಯಾರ್ಥಿಗಳು ಹೆಚ್ಚಿನ ಲಕ್ಷ ವಹಿಸಬೇಕು. ಹೆಚ್ಚೆಚ್ಚು ಸಸಿಗಳನ್ನು ನೆಡಬೇಕೆಂದರು.

ಜಂಟಿ ಕಾರ್ಯದರ್ಶಿ ವಿಜಯಕುಮಾರ ಬೇಲೇರಿ, ನಿರ್ದೇಶಕ ಸಿ.ಎಸ್.ಸಾಲೂಟಗಿಮಠ ಇದ್ದರು. ವಿದ್ಯಾರ್ಥಿಗಳು ಪರಿಸರ ಘೋಷಣೆಗಳೊಂದಿಗೆ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಸಂಚರಿಸಿ ಜಾಗೃತಿ ಜಾಥಾಕ್ಕೈಗೊಂಡರು. ಇದರಲ್ಲಿ ಲಯನ್ಸ್ ಇಂಗ್ಲಿಷ್ ಮಾಧ್ಯಮ ಶಾಲೆ ಹಾಗೂ ಕನ್ನಡ ಮಾಧ್ಯಮ ಶಾಲೆಯ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು. ಮುಖ್ಯೋಪಾಧ್ಯಾಯ ಜಿ.ಬಿ.ಹಿರೇಮಠ ಸ್ವಾಗತಿಸಿದರು. ಎಸ್.ಬಿ.ನದಾಫ್ ನಿರೂಪಿಸಿ, ವಂದಿಸಿದರು.

ಪರಿಸರ ರಕ್ಷಣೆ ಸರ್ವರ ಹೊಣೆ

ಗಜೇಂದ್ರಗಡ: ನಗರದಲ್ಲಿ ಜಯ ಕರ್ನಾಟಕ ಜನಪರ ವೇದಿಕೆ ವತಿಯಿಂದ ಪರಿಸರ ದಿನಾಚರಣೆಯ ನಿಮಿತ್ತ ಗಜೇಂದ್ರಗಡ ತಾಲೂಕು ವತಿಯಿಂದ ಕರ್ನಾಟಕ ಪಬ್ಲಿಕ್ ಪ್ರೌಢಶಾಲೆ, ಸರ್ಕಾರಿ ಬಾಲಕಿಯರ ಪ್ರೌಢಶಾಲೆ, ಸರ್ಕಾರಿ ಪದವಿಪೂರ್ವ ಕಾಲೇಜು ಆವರಣದಲ್ಲಿ ಸಸಿ ನೆಡುವ ಮುಖಾಂತರ ಆಚರಿಸಲಾಯಿತು.

ತಾಲೂಕು ಅಧ್ಯಕ್ಷ ಕಳಕಪ್ಪ ಪೋತ ಮಾತನಾಡಿ, ಪರಿಸರ ರಕ್ಷಣೆ ಕೇವಲ ಸರ್ಕಾರದ ಕೆಲಸವಲ್ಲ, ಇದು ಪ್ರತಿಯೊಬ್ಬ ನಾಗರಿಕನ ಕರ್ತವ್ಯ. ಮರಗಳನ್ನು ಬೆಳೆಸುವುದು, ನೀರನ್ನು ಉಳಿಸುವುದು ಮತ್ತು ಏಕಬಳಕೆಯ ಪ್ಲಾಸ್ಟಿಕ್ ನಿಷೇಧಿಸುವಂತೆ ಸರ್ಕಾರ ಕ್ರಮ ಕೈಗೊಳ್ಳಬೇಕು ಎಂದರು.

ಸರ್ಕಾರಿ ಬಾಲಕರ ಪ್ರೌಢಶಾಲೆಯ ಮುಖ್ಯೋಪಾಧ್ಯಾಯ ಝಾಕೀರಹುಸೇನ ಗೋಡೆಕಾರ, ಸರ್ಕಾರಿ ಪದವಿಪೂರ್ವ ಕಾಲೇಜಿನ ಪ್ರಾಚಾರ್ಯ ರಮೇಶ ಮರಾಠಿ, ಬ್ರಹ್ಮಾನಂದ ಪಟ್ಟಾರ, ಉಮೇಶ್ ಕಲಾಂ ಶೆಟ್ಟಿ, ನಾಗೇಶ ಪೂಜಾರಿ, ಪಂಪಣ್ಣ ವನ್ನಾಲ, ಶಿವಯ್ಯ ಬೂಸ್ನೂರ್ ಮಠ ಸುರೇಶ ಕಮಿಟ್ ಕರ ಶಂಕರ್ ಕಲ್ಬುರ್ಗಿ, ಚಂದ್ರು ಕೊಡಗಲಿ, ನಾಗಪ್ಪ ಹಾಳಕೇರಿ, ಕಾಸಿಂಸಾಬ್ ಮುಚ್ಚಾಲಿ, ಚಂದ್ರಪ್ಪ ಚಿನ್ನೂರು, ಮಂಜುನಾಥ ಗಾಯ್ಕೋಡ, ಮಂಜುಳಾ ವನ್ನಾಲ, ಕಳಕಪ್ಪ ಅಳ್ಕೇರಿ, ಶ್ರೀಕಾಂತ್ ಪಾತ್ರೋಟ್ ಸೇರಿದಂತೆ ಅನೇಕರು ಇದ್ದರು.



ಎಸ್. ಆರ್.ಬೊಮ್ಮಾಯಿ ಜಯಂತ್ಯುತ್ಸವ



ನವಲಗುಂದ: ಕರ್ನಾಟಕ ಏಕೀಕರಣದ ಹೋರಾಟಗಾರ, ನ್ಯಾಯವಾದಿ ಹಾಗೂ ಮಾಜಿ ಮುಖ್ಯಮಂತ್ರಿ ದಿವಂಗತ ಎಸ್. ಆರ್.ಬೊಮ್ಮಾಯಿ ಅವರ ಜಯಂತ್ಯುತ್ಸವದ ಅಂಗವಾಗಿ ನವಲಗುಂದ ವಿಧಾನಸಭಾ ಕ್ಷೇತ್ರದ ಹುಬ್ಬಳ್ಳಿ ತಾಲೂಕು ಹೆಬಸೂರ ಗ್ರಾಮದಲ್ಲಿರುವ ಅವರ ಪ್ರತಿಮೆಗೆ ಬಿಜೆಪಿ ಜಿಲ್ಲಾ ಗ್ರಾಮಾಂತರ ಕಾರ್ಯದರ್ಶಿ ದೇವರಾಜ ದಾಡಿಬಾವಿ ಮಾಲಾರ್ಪಣೆ ಮಾಡಿ ಗೌರವ ನಮನ ಸಲ್ಲಿಸಿ ಎಸ್.ಆರ್. ಬೊಮ್ಮಾಯಿ ಅವರ ರಾಜ್ಯಕ್ಕೆ ನೀಡಿದ ಕೊಡುಗೆ ಸ್ಮರಣೀಯ ಅವರ ಆದರ್ಶ ನಮಗೆ ದಾರಿ ದೀಪ ಎಂದರು.

ಹಿರಿಯರಾದ ಅಶೋಕ ಮಂಡಿಗನಾಳ, ಎಸ್.ವಿ.ಕೊಣ್ಣೂರ, ಕಲ್ಮೇಶ ಉಳ್ಳಾಗಡ್ಡಿ, ಫಕೀರೇಶ ಹಡಪದ, ಬಸವರಾಜ ಹೂಗಾರ, ಸುರೇಶ ಹಡಪದ, ಬಸವರಾಜ ತಳವಾರ, ಬಸವರಾಜ ಕಾಳಿ, ಸಂತೋಷ್ ಕಾಳಿ, ಎಂ.ವೈ. ಹುಬ್ಬಳ್ಳಿ, ನಾಗೇಶ ಮುದುಗೌಡರ್, ಕಾಲೇಜಿನ ಪ್ರಾಂಶುಪಾಲರು ಸೇರಿದಂತೆ ಗ್ರಾಮದ ಗುರುಹಿರಿಯರು ಇದ್ದರು.

ಕೃಷಿ ಸಚಿವ ಸ್ಥಾನ ನೀಡಲು ಆಗ್ರಹ

ನವಲಗುಂದ: ರೈತಪರಹೋರಾಟ, ಕೃಷಿಕರ ಬದುಕಿನ ಪರ ಚಿಂತನೆಯಲ್ಲಿ ರಾಜ್ಯಮಟ್ಟದಲ್ಲಿ ಗುರುತಿಸಿಕೊಂಡ ಶಾಸಕ ಎನ್.ಎಚ್. ಕೋನರಡ್ಡಿ ಅವರನ್ನು ಮುಂಬರುವ ಸಂಪುಟ ವಿಸ್ತರಣೆಯಲ್ಲಿ ಅವರಿಗೆ ಕೃಷಿ ಸಚಿವ ಸ್ಥಾನ ನೀಡಬೇಕು ಎಂದು ನವಲಗುಂದ ತಾಲೂಕು ಕೃಷಿಕ ಸಮಾಜದ ಅಧ್ಯಕ್ಷ ಸೋಮಣ್ಣ ಬಳಿಗೇರ, ಅಣ್ಣಿಗೇರಿ ಕೃಷಿಕ ಸಮಾಜ ಅಧ್ಯಕ್ಷ ಅಮೃತಪ್ಪ ಗುರಿಕಾರ ಆಗ್ರಸಿದರು.

ಅವರು ನವಲಗುಂದ ಪ್ರವಾಸಿ ಮಂದಿರದಲ್ಲಿ ನವಲಗುಂದ ಹಾಗೂ ಅಣ್ಣಿಗೇರಿ ಕೃಷಿಕ ಸಮಾಜದಿಂದ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಮೊದಲು ನವಲಗುಂದ ಕೃಷಿಕ ಸಮಾಜದಲ್ಲಿ ಅಣ್ಣಿಗೇರಿ ಕೃಷಿಕ ಸಮಾಜ ಸ್ಥಾಪಿಸಿ ಎರಡು ಸಮಾಜಕ್ಕೆ ಸ್ವಂತ ಕಟ್ಟಡಕ್ಕೆ 1.5 ಕೋಟಿ ಅನುದಾನ ನೀಡಿದ ರೈತಪರ ಶಾಸಕರಾಗಿದ್ದು, ಉತ್ತರ ಕರ್ನಾಟಕ ಗಟ್ಟಿ ಧ್ವನಿಯಾಗಿರುವ ಅವರಿಗೆ ಸಚಿವ ಸ್ಥಾನ ನೀಡಬೇಕೆಂದರು.

ಅಣ್ಣಿಗೇರಿ ಕೃಷಿಕ ಸಮಾಜ ಅಧ್ಯಕ್ಷ ಎ. ಪಿ. ಗುರಿಕಾರ ಮಾತನಾಡಿ, ಶಾಸಕ ಎನ್.ಎಚ್. ಕೋನರಡ್ಡಿ ಅವರು ಸಚಿವರಾದರೆ ನವಲಗುಂದ ಮತಕ್ಷೇತ್ರ ಮಾದರಿಯಾಗಲಿದೆ ಎಂದರು.

ಮುಖಂಡರಾದ ಆರ್.ಎಚ್. ಕೋನರಡ್ಡಿ, ಸದುಗೌಡ ಬೆಳವಟಗಿ, ನಾಗನಗೌಡ ಪಾಟೀಲ, ಮಲ್ಲಪ್ಪ ಹಾಳದೋಟರ, ವಿರೂಪಾಕ್ಷಪ್ಪ ಲಟ್ಟಿ, ನಿಂಗಪ್ಪ ತಳವಾರ, ದಾವಲಸಾಬ್ ಖುದ್ದಣ್ಣವರ, ಶಂಕ್ರಯ್ಯ ಪೂಜಾರ, ಸಂಗನಗೌಡ ಹಣಸಿ, ಹೇಮರಡ್ಡಿ ಕಳಸರೆಡ್ಡಿ ಇತರರಿದ್ದರು.



ಕಿರುಸುದ್ದಿ

ಲೋಕೋಪಯೋಗಿ ಖಾತೆ ಮುಂದುವರಿಸಿದ್ದಕ್ಕೆ ಸಂತೋಷವಿದೆ: ಜಾರಕಿಹೊಳಿ



ಬೆಳಗಾವಿ: ನಾನು ಪಕ್ಷದ ಹೈಕಮಾಂಡ್ ಅಥವಾ ಮುಖ್ಯಮಂತ್ರಿಗಳ ಬಳಿ ಯಾವುದೇ ನಿರ್ದಿಷ್ಟ ಖಾತೆ ಕೇಳಿರಲಿಲ್ಲ. ಮುಂಚೆ ನನ್ನ ಬಳಿ ಇದ್ದ ಲೋಕೋಪಯೋಗಿ ಇಲಾಖೆಯನ್ನೇ ಅವರೇ ನನಗೆ ವಹಿಸಿಕೊಟ್ಟಿದ್ದಾರೆ ಎಂದು ಸಚಿವ ಸತೀಶ ಜಾರಕಿಹೊಳಿ ಹೇಳಿದರು. ಭಾನುವಾರ ಗೋಕಾಕ ನಗರದ ತಮ್ಮ ಗೃಹ ಕಚೇರಿಯಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ತಾವಾಗಿಯೇ ಯಾವುದೇ ಇಲಾಖೆಗಾಗಿ ಬೇಡಿಕೆ ಇಟ್ಟಿರಲಿಲ್ಲ ಎಂದು ಸ್ಪಷ್ಟಪಡಿಸಿದ ಸಚಿವರು, ಮುಖ್ಯಮಂತ್ರಿಗಳು ಹಾಗೂ ಪಕ್ಷದ ನಾಯಕತ್ವವೇ ಯೋಚಿಸಿ ಈ ಹಿಂದಿನ ಲೋಕೋಪಯೋಗಿ ಖಾತೆಯನ್ನೇ ತಮಗೆ ನೀಡಿದ್ದಾರೆ ಎಂದು ತಿಳಿಸಿದರು. ಕಳೆದ ಮೂರು ವರ್ಷಗಳ ಅವಧಿಯಲ್ಲಿ ಲೋಕೋಪಯೋಗಿ ಇಲಾಖೆಯಲ್ಲಿ ರಾಜ್ಯಾದ್ಯಂತ ಹಲವು ಪ್ರಮುಖ ರಸ್ತೆ, ಸೇತುವೆ ಹಾಗೂ ಮೂಲಸೌಕರ್ಯ ಅಭಿವೃದ್ಧಿ ಕೆಲಸಗಳನ್ನು ಯಶಸ್ವಿಯಾಗಿ ನಿರ್ವಹಿಸಿದ ಸಂಪೂರ್ಣ ತೃಪ್ತಿ ನನಗಿದೆ. ಈಗ ಮತ್ತೊಮ್ಮೆ ಅದೇ ಇಲಾಖೆ ದೊರೆತಿರುವುದು ಸಂತೋಷ ತಂದಿದೆ. ಈ ಹಿಂದೆ ಆರಂಭಿಸಿರುವ ಯೋಜನೆಗಳನ್ನು ಪೂರ್ಣಗೊಳಿಸಲು ಇದು ಸಹಕಾರಿಯಾಗಲಿದೆ ಎಂದು ಹರ್ಷ ವ್ಯಕ್ತಪಡಿಸಿದರು. ಸಚಿವ ಸ್ಥಾನ ಹಂಚಿಕೆಯಲ್ಲಿ ಬೆಳಗಾವಿ ಜಿಲ್ಲೆಗೆ ಅನ್ಯಾಯವಾಗಿಲ್ಲ. ಇನ್ನು ಎರಡನೇ ಪಟ್ಟಿ ಬಾಕಿ ಇದ್ದು, ಅದರಲ್ಲಿ ಜಿಲ್ಲೆಗೆ ಮತ್ತೊಂದು ಸಚಿವ ಸ್ಥಾನ ಸಿಗುವುದು ಖಚಿತ. ಜಿಲ್ಲೆಯ ನಾಯಕರಿಗೆ ಮತ್ತು ಜನರಿಗೆ ಈ ಕುರಿತು ಯಾವುದೇ ಆತಂಕ ಬೇಡ. ಸಚಿವ ಸಂಪುಟದ ಮುಂದಿನ ಪಟ್ಟಿಯಲ್ಲಿ ಬೆಳಗಾವಿ ಜಿಲ್ಲೆಗೆ ಖಂಡಿತವಾಗಿಯೂ ಆದ್ಯತೆ ಸಿಗಲಿದೆ. ದೊಡ್ಡ ಜಿಲ್ಲೆಯಾಗಿರುವ ಬೆಳಗಾವಿಯನ್ನು ಕಡೆಗಣಿಸುವ ಪ್ರಶ್ನೆಯೇ ಇಲ್ಲ. ಮುಂಬರುವ ದಿನಗಳಲ್ಲಿ ಜಿಲ್ಲೆಗೆ ಸೂಕ್ತ ಪ್ರಾತಿನಿಧ್ಯ ಸಿಗಲಿದ್ದು, ಹೈಕಮಾಂಡ್ ಎಲ್ಲಾ ಸಮುದಾಯ ಮತ್ತು ಪ್ರದೇಶಗಳನ್ನು ಸಮಾನವಾಗಿ ಪರಿಗಣಿಸಲಿದೆ ಎಂದು ತಿಳಿಸಿದರು. ಬೆಳಗಾವಿ ಜಿಲ್ಲಾ ರಾಜಕಾರಣದಲ್ಲಿ ತಮ್ಮ ಹಾಗೂ ಶಾಸಕ ಅಶೋಕ ಪಟ್ಟಣ ಅವರ ನಡುವೆ ಯಾವುದೇ ಭಿನ್ನಾಭಿಪ್ರಾಯಗಳಿಲ್ಲ. ನಾವಿಬ್ಬರೂ ಮೊದಲಿನಿಂದಲೂ ಒಟ್ಟಿಗೇ ಇದ್ದೇವೆ. ಜಿಲ್ಲೆಯ ಸಚಿವ ಸ್ಥಾನ ಹಂಚಿಕೆ ಹಾಗೂ ರಾಜಕೀಯ ಬೆಳವಣಿಗೆಗಳ ಬೆನ್ನಲ್ಲೇ ಉಭಯ ನಾಯಕರ ನಡುವೆ ಅಸಮಾಧಾನ ಮೂಡಿದೆ ಎಂಬ ವದಂತಿಗಳಿಗೆ ಸಚಿವರು ತೆರೆ ಎಳೆದ ಅವರು, ನಮ್ಮ ನಡುವೆ ಯಾವುದೇ ರೀತಿಯ ರಾಜಕೀಯ ಮುನಿಸು ಇಲ್ಲ ಎಂದು ಸಚಿವ ಸತೀಶ್ ಜಾರಕಿಹೊಳಿ ಅವರು ಇದೇ ವೇಳೆ ಸ್ಪಷ್ಟಪಡಿಸಿದರು.

ಹಲ್ಲೆಗೊಳಗಾಗಿದ್ದ ವ್ಯಕ್ತಿ ಸಾವು



ಕಲಬುರಗಿ: ಮೊಮ್ಮಗನ ಮುಖವನ್ನು ವಿಡಿಯೋ ಕಾಲ್‌ನಲ್ಲಿ ತೋರಿಸುವಂತೆ ಕೇಳಿದ್ದ ವಿಚಾರವೇ ಎರಡು ಕುಟುಂಬಗಳ ನಡುವೆ ವೈಮನಸ್ಸಿಗೆ ಕಾರಣವಾಗಿ, ಹಲ್ಲೆಗೊಳಗಾದ ವ್ಯಕ್ತಿಯೊಬ್ಬರು ಚಿಕಿತ್ಸೆ ಫಲಿಸದೆ ಮೃತಪಟ್ಟಿರುವ ಘಟನೆ ಕಲಬುರಗಿ ಸಮೀಪದ ಬೇಲೂರ್ ಕ್ರಾಸ್ ಬಳಿ ನಡೆದಿದೆ. ಬೇಲೂರ್ ತಾಂಡ ನಿವಾಸಿ ರಾಜು ರಾಠೋಡ್ (48) ಮೃತಪಟ್ಟವರು. ಮೂರು ದಿನಗಳ ಹಿಂದೆ ನಡೆದ ಹಲ್ಲೆ ಘಟನೆಯಲ್ಲಿ ಗಂಭೀರವಾಗಿ ಗಾಯಗೊಂಡಿದ್ದ ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆದರೆ, ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿದ್ದಾರೆ. ಕುಟುಂಬದ ಮೂಲಗಳ ಪ್ರಕಾರ, ರಾಜು ರಾಠೋಡ್ ಅವರು ಇತ್ತೀಚೆಗೆ ಜನಿಸಿದ ತಮ್ಮ ಮೊಮ್ಮಗನ ಮುಖವನ್ನು ವಿಡಿಯೋ ಕಾಲ್ ಮೂಲಕ ತೋರಿಸುವಂತೆ ಸೊಸೆಯ ಬಳಿ ಕೇಳಿದ್ದರು. ಈ ವಿಚಾರಕ್ಕೆ ಸಂಬಂಧಿಸಿದಂತೆ ಮಾತಿನ ಚಕಮಕಿ ನಡೆದು, ಬಳಿಕ ಎರಡೂ ಕುಟುಂಬಗಳ ನಡುವೆ ವಾಗ್ವಾದ ಉಂಟಾಗಿದೆ ಎನ್ನಲಾಗಿದೆ. ನಂತರ ಸೊಸೆ ಹಾಗೂ ಆಕೆಯ ತವರು ಮನೆಯವರು ರಾಜು ರಾಠೋಡ್ ಅವರನ್ನು ಕರೆಸಿಕೊಂಡು ಹಲ್ಲೆ ನಡೆಸಿದ್ದಾರೆ ಎಂಬ ಆರೋಪ ಕೇಳಿ ಬಂದಿದೆ. ಹಲ್ಲೆಯಿಂದ ತೀವ್ರ ಗಾಯಗೊಂಡಿದ್ದ ರಾಜು ರಾಠೋಡ್ ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿದ್ದರೂ ಚಿಕಿತ್ಸೆ ಫಲಿಸದೆ ಮೃತಪಟ್ಟಿದ್ದಾರೆ. ಈ ಸಂಬಂಧ ಸಬ್ ಅರ್ಬನ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ವಿಲಾಸ್ ಸಂಜಯ್ ಸೇರಿದಂತೆ ಹಲವರ ವಿರುದ್ಧ ದೂರು ದಾಖಲಿಸಲಾಗಿದೆ. ಘಟನೆಗೆ ಸಂಬಂಧಿಸಿದಂತೆ ಪೊಲೀಸರು ತನಿಖೆ ಮುಂದುವರಿಸಿದ್ದಾರೆ.

ಆದಿತ್ಯ ಕುಟುಂಬಕ್ಕೆ ಸಚಿವ ಜೋಶಿ ಸಾಂತ್ವನ

ಧಾರವಾಡ: ಸುಳ್ಳು ಗಾಂಜಾ ಪ್ರಕರಣ ಹಾಗೂ ಪೊಲೀಸರ ಕಿರುಕುಳಕ್ಕೆ ಬೇಸತ್ತು ಆತ್ಮಹತ್ಯೆಗೆ ಶರಣಾದ ವಿದ್ಯಾರ್ಥಿ ಆದಿತ್ಯ ಮ್ಯಾಗೇರಿ ನಿವಾಸಕ್ಕೆ ಭಾನುವಾರ ಕೇಂದ್ರ ಸಚಿವ ಪ್ರಹ್ಲಾದ ಜೋಶಿ ಭೇಟಿ ನೀಡಿ, ಅವರ ಕುಟುಂಬಕ್ಕೆ ಸಾಂತ್ವನ ಹೇಳಿದರು.

ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಸಚಿವ ಪ್ರಹ್ಲಾದ ಜೋಶಿ, ಆದಿತ್ಯ ಗಾಂಜಾ ಸೇವನೆ ಮಾಡದಿದ್ದರೂ, ಪೊಲೀಸರು ಕೇವಲ ರೂ.2 ಸಾವಿರ ಹಣ ನೀಡಲು ಒತ್ತಾಯಿಸಿದ ಕಾರಣ ಮನನೊಂದು ಆತ್ಮಹತ್ಯೆ ಮಾಡಿಕೊಂಡಿದ್ದಕ್ಕೆ ಬೇಸರಿಸಿದರು.

ಪೊಲೀಸರ ಕಿರುಕುಳ ನಾಗರಿಕ ಸಮಾಜ ತಲೆ ತಗ್ಗಿಸುವ ಸಂಗತಿ. ಈ ಘಟನೆ ಪೊಲೀಸ್ ಇಲಾಖೆಗೆ ಎಚ್ಚರಿಕೆಯ ಪಾಠ. ಆದಿತ್ಯ ಮ್ಯಾಗೇರಿ ಪ್ರಕರಣ ತನಿಖೆ ಪೂರ್ಣಗೊಳಿಸುವ ಜತೆ ತಪಿತಸ್ಥರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲು ಒತ್ತಾಯ ಮಾಡಿದರು.

ಪ್ರಕರಣ ನಡೆದು ಒಂದು ತಿಂಗಳು ಕಳೆದರೂ ಸಹ ಆದಿತ್ಯ ಕುಟುಂಬಕ್ಕೆ ರಾಜ್ಯ ಸರ್ಕಾರದಿಂದ ಯಾವುದೇ ಪರಿಹಾರ ಬಂದಿಲ್ಲ, ತಕ್ಷಣವೇ ಜಿಲ್ಲಾಧಿಕಾರಿಗಳು ಸರ್ಕಾರದೊಂದಿಗೆ ಚರ್ಚಿಸಿ, ಪರಿಹಾರ ನೀಡುವ ಕುರಿತು ಗಮನ ಹರಿಸಬೇಕು ಎಂದರು.



> **ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಸಂಪೂರ್ಣ ಹಾಳಾಗಿದೆ. ಹೀಗಾಗಿ ನೂತನ ಮುಖ್ಯಮಂತ್ರಿ ಹದಗೆಟ್ಟ ವ್ಯವಸ್ಥೆ ಸರಿಪಡಿಸಬೇಕು. ಆದಿತ್ಯ ಮ್ಯಾಗೇರಿ ಮತ್ತು ತಡಸಿಕೊಪ್ಪ ಗ್ರಾಮದ ರೈತನ ಮೇಲೆ ಶೂಟೌಟ್ ಮಾಡಿರುವ ಆರೋಪಿಗಳಿಗೆ ಕಠಿಣ ಶಿಕ್ಷೆ ವಿಧಿಸಬೇಕು. ಅಂದಾಗಲೇ ಜನರಿಗೆ ಸರ್ಕಾರ ಮತ್ತು ಪೊಲೀಸ್ ಇಲಾಖೆ ಮೇಲೆ ವಿಶ್ವಾಸ ಬರಲು ಸಾಧ್ಯ.**
> ■ ಪ್ರಹ್ಲಾದ ಜೋಶಿ, ಕೇಂದ್ರ ಸಚಿವರು

ಆದಿತ್ಯ ಮ್ಯಾಗೇರಿ ಕುಟುಂಬಕ್ಕೆ ಪ್ರಧಾನಮಂತ್ರಿ ಆವಾಸ್ ಯೋಜನೆಯಡಿಯಲ್ಲಿ ಒಂದು ಮನೆ ನೀಡುವ ಜೊತೆಗೆ ಆತನ ಸಹೋದರಿ ವಿದ್ಯಾಭ್ಯಾಸದ ಸಂಪೂರ್ಣ ಜವಾಬ್ದಾರಿ ತಾವು ಸೇರಿದಂತೆ ಅರವಿಂದ ಬೆಲ್ಲದ ವಹಿಸಿಕೊಳ್ಳುವುದಾಗಿ ಭರವಸೆ ನೀಡಿದರು.

ಶಾಸಕ ಅರವಿಂದ ಬೆಲ್ಲದ, ಮಾಜಿ ಶಾಸಕಿ ಸೀಮಾ ಮಸೂತಿ, ಬಿಜೆಪಿ ಮುಖಂಡ ಮೋಹನ ರಾಮದುರ್ಗ, ಶಿವಾನಂದ ಕವಳಿ, ಆನಂದ ಯಾವಗಲ್ಲ, ಮಹೇಶ್ವರ ಯಲವಗಿ, ಸಂಜಯ ಕಪಟಕರ, ಮಲ್ಲಿಕಾರ್ಜುನ ಮಠಪತಿ ಸೇರಿ ಅನೇಕರು ಇದ್ದರು.

ಅಜ್ಞಾತ ಸ್ಥಳದಿಂದ ವಿಡಿಯೋ ಬಿಡುಗಡೆ ಮಾಡಿದ ಆದಿತ್ಯರಾಜ್ ಕ್ಯಾಪಿಟಲ್ ಸಂಸ್ಥೆಯ ಮಾಲೀಕ

ಬೆಳಗಾವಿ: ಬಹುಕೋಟಿ ರೂಪಾಯಿ ವಂಚನೆ ಪ್ರಕರಣಕ್ಕೆ ಸಂಬಂಧಿಸಿದಂತೆ ಬೆಳಗಾವಿಯ ಆದಿತ್ಯರಾಜ್ ಕ್ಯಾಪಿಟಲ್ ಸಂಸ್ಥೆಯ ಮೇಲೆ ಅಧಿಕಾರಿಗಳು ದಾಳಿ ನಡೆಸುತ್ತಿದ್ದಂತೆ ತಲೆಮರೆಸಿಕೊಂಡಿದ್ದ ಸಂಸ್ಥೆಯ ಮಾಲೀಕ ಬಲರಾಮ್ ಮಾನೆ ಇದೀಗ ಸಾಮಾಜಿಕ ಜಾಲತಾಣಗಳಲ್ಲಿ ವಿಡಿಯೋ ಬಿಡುಗಡೆ ಮಾಡಿದ್ದಾರೆ.

ಸಾಮಾಜಿಕ ಜಾಲತಾಣಗಳಲ್ಲಿ ಬಿಡುಗಡೆ ಮಾಡಿರುವ ವಿಡಿಯೋದಲ್ಲಿ ಮಾತನಾಡಿರುವ ಬಲರಾಮ್ ಮಾನೆ, ನಾವು ಯಾವುದೇ ನಿಯಮಗಳನ್ನು ಗಾಳಿಗೆ ತೂರಿ ಸಂಸ್ಥೆ ನಡೆಸುತ್ತಿಲ್ಲ, ಎಲ್ಲವೂ ಕಾನೂನು ಪ್ರಕಾರವೇ ನಡೆಯುತ್ತಿದೆ. ಠೇವಣಿದಾರರು ಯಾರೂ ಧೈರ್ಯ ಕಳೆದುಕೊಳ್ಳಬಾರದು. ನಿಮ್ಮ ಬೆವರಿನ ಹಣ ನಮ್ಮ ಬಳಿ ಸುರಕ್ಷಿತವಾಗಿದೆ. ನಾವು ಪ್ರತಿಯೊಬ್ಬರಿಗೂ ಟಿಡಿಎಸ್ ಕಡಿತಗೊಳಿಸಿದ ನಂತರವೇ ಶೇರಿಂಗ್ ಅಮೌಂಟ್ ನೀಡಿದ್ದೇವೆ ಎಂದು ಹೂಡಿಕೆದಾರರಿಗೆ ಭರವಸೆ ನೀಡಿದ್ದಾನೆ. ಅಲ್ಲದೇ ತನ್ನ ಸಂಸ್ಥೆ ಕಾನೂನು ಬದ್ಧವಾಗಿಯೇ ಕಾರ್ಯನಿರ್ವಹಿಸುತ್ತಿದೆ ಎಂದು ಸಮರ್ಥಿಸಿಕೊಂಡಿದ್ದಾರೆ.

ನಾಳೆ ಈ ಪ್ರಕರಣ ಕೋರ್ಟ್ ಮೆಟ್ಟಿಲೇರಿದಾಗ ನಾವು ಖಂಡಿತವಾಗಿ ವಿಜಯ ಸಾಧಿಸುತ್ತೇವೆ. ನಾನು ನಿಮಗಾಗಿಯೇ ಹೋರಾಡುತ್ತಿದ್ದೇನೆ. ಈ ಕಾನೂನು ಸಂಘರ್ಷದಲ್ಲಿ ಗೆದ್ದು ಆದಿತ್ಯರಾಜ್ ಕಂಪನಿ ಮತ್ತೆ ಪುಟಿದೇಳಲಿದೆ. ನಾನು ಶೀಘ್ರದಲ್ಲೇ ಹಿಂತಿರುಗಿ ಬರುತ್ತೇನೆ, ನಾವೆಲ್ಲರೂ ಮತ್ತೆ ಸಿಗೋಣ ಎಂದು ತಿಳಿಸಿದ್ದಾರೆ.

ತಲೆಮರೆಸಿಕೊಂಡಿರುವ ಆರೋಪಿ ಬಲರಾಮ್ ಮಾನೆ ಪತ್ತೆಗಾಗಿ ಪೊಲೀಸರು ತೀವ್ರ ಶೋಧ ನಡೆಸುತ್ತಿದ್ದಾರೆ. ಈ ಕುರಿತು ನಿನ್ನೆಯಷ್ಟೇ ಪ್ರತಿಕ್ರಿಯಿಸಿದ್ದ ಬೆಳಗಾವಿ ನಗರ ಪೊಲೀಸ್ ಆಯುಕ್ತ ಭೂಷಣ್ ಜಿ. ಬೊರಸೆ ಅವರು, ಆರೋಪಿಯ ಬಂಧನಕ್ಕಾಗಿ ಈಗಾಗಲೇ ವಿಶೇಷ ಪೊಲೀಸ್ ತಂಡಗಳನ್ನು ರಚಿಸಲಾಗಿದ್ದು, ಶೀಘ್ರದಲ್ಲಿಯೇ ಬಲರಾಮ್ ಮಾನೆಯನ್ನು ಬಂಧಿಸಲಾಗುವುದು ಎಂದು ಹೇಳಿದ್ದರು.

ಅಗ್ನಿ ಅನಾಹುತದಿಂದ ನಿಶ್ಯಕ್ತರಾಗಿದ್ದವರಿಗೆ ರೆಡ್ ಕ್ರಾಸ್ ಸಂಸ್ಥೆಯಿಂದ ನೆರವಿನ ಹಸ್ತ



ಕಾರವಾರ: ಅಗ್ನಿ ಅನಾಹುತಕ್ಕೆ ಒಳಗಾಗಿ ಎಲ್ಲವನ್ನೂ ಕಳೆದುಕೊಂಡಿದ್ದ ಕುಟುಂಬಕ್ಕೆ ರೆಡ್ ಕ್ರಾಸ್ ವಿಪತ್ತು ನಿರ್ವಹಣಾ ಘಟಕ ಸಹಾಯಹಸ್ತ ಚಾಚಿದೆ.

ಕಿನ್ನರ್ ಗ್ರಾಮದ ನಿರಾಕಾರ ದೇವಸ್ಥಾನದ ಸಮೀಪ ವಾಸವಿದ್ದ ಮುರುಳೀಧರ್ ರಾಣೆ ಹಾಗೂ ದೀಪಕ್ ರಾಣೆ ಸಹೋದರರ ಮನೆ ಆಕಸ್ಮಿಕವಾಗಿ ಬೆಂಕಿ ಅನಾಹುತಕ್ಕೆ ಒಳಗಾಗಿತ್ತು. ಮನೆ ಸೇರಿದಂತೆ ಒಳಗಿದ್ದ ಬಟ್ಟೆ, ಪಾತ್ರೆ ಸೇರಿದಂತೆ ಎಲ್ಲವನ್ನೂ ಕುಟುಂಬ ಕಳೆದುಕೊಂಡು ಅನಾಥರಂತಾಗಿತ್ತು.

ವಿಷಯ ತಿಳಿದು ಕುಟುಂಬವನ್ನು ಭೇಟಿ ಮಾಡಿದ ರೆಡ್ ಕ್ರಾಸ್ ಚೇರ್ಮನ್ ವೀ ಎಮ್ ಹೆಗಡೆ, ವಿಪತ್ತು ನಿರ್ವಹಣಾ ಸಮಿತಿಯ ಜಿಲ್ಲಾ ಮುಖ್ಯಸ್ಥ ಮಾಧವ ನಾಯಕ ನೇತೃತ್ವದ ತಂಡ ದೊಂದಿಗೆ ಭಾರತೀಯ ರೆಡ್ ಕ್ರಾಸ್ ರಾಜ್ಯ ಸಮಿತಿಯ ಮುಖ್ಯಸ್ಥರಾದ ಸದಾನಂದ ನಾಯ್ಕ ಮತ್ತು ಅಜಯ್ ಸಾಹುಕಾರ ಕುಟುಂಬಕ್ಕೆ ತುರ್ತು ಅಗತ್ಯವಿರುವ ತಾಡಪತ್ರಿ, ಪಾತ್ರೆ, ಬೆಡ್ ಶೀಟ್, ಬ್ಲಾಂಕೆಟ್ ಸೇರಿದಂತೆ ವಿವಿಧ ದಿನಬಳಕೆಯ ವಸ್ತುಗಳನ್ನು ಹಸ್ತಾಂತರಿಸಿ ನೆರವಾದರು. ಯಾವುದೇ ಸಂದರ್ಭದಲ್ಲೂ ಇನ್ನಷ್ಟು ನೆರವು ಬೇಕಿದ್ದರೂ ತಾವು ಸಿದ್ಧವಿರುವುದಾಗಿ ಧೈರ್ಯ ತುಂಬಿದರು.

ಈ ವೇಳೆ ಸ್ಥಳೀಯರಾದ ಮಾಜಿ ಗ್ರಾಪಂ ಸದಸ್ಯ ಸಂತೋಷ್ ರಾಣೆ ಹಾಗೂ ಕುಟುಂಬಸ್ಥರಾದ ದೀಪಕ್ ರಾಣೆ, ಮತ್ತುಸುರೇಶ್ ರಾಣೆ, ಪ್ರದೀಪ್ ರಾಣೆ, ದೀಪ್ತಿ ರಾಣೆ, ಸುನೀಲ್ ರಾಣೆ ಇದ್ದರು.

ಉತ್ತಮ ಕಾರ್ಯಗಳ ಜೊತೆಗೆ ಸಂಘಟಿತರಾಗಿ



ಹಳಿಯಾಳ: ಉತ್ತಮ ಕಾರ್ಯಗಳ ಜೊತೆಗೆ ನಾವು ಸಂಘಟಿತರಾಗಬೇಕು. ಸಂಘದ ಪ್ರಾರಂಭ ಯಾರದ್ದೇ ವಿರೋಧ ಅಥವಾ ಸ್ಪರ್ಧೆಗಾಗಿ ಆರಂಭ ಆಗಿಲ್ಲ. ಆತ್ಮವಿಶ್ವಾಸ ತುಂಬಲು ಆರಂಭವಾದ ಮತ್ತು ಆತ್ಮಗೌರವಕ್ಕಾಗಿ ಹಾಗೂ ವ್ಯಕ್ತಿತ್ವ ವಿಕಸನದಡಿಯಲ್ಲಿ ರಾಷ್ಟ್ರೀಯ ಸ್ವಯಂಸೇವಕ ಸಂಘದ ಬುನಾದಿ ನಿಂತಿದೆ ಎಂದು ಆರ್ ಎಸ್‌ಎಸ್‌ನ ಪ್ರಾಂತ ಸಂಯೋಜಕ ನಾಗೇಶ ಚಿನ್ನಾರೆಡ್ಡಿ ಹೇಳಿದರು.

ಕೆಎಲ್‌ಎಸ್ ವಿಡಿಐಟಿ ಹಳಿಯಾಳದ ಸಭಾಭವನದಲ್ಲಿ ನಡೆದ ಪ್ರಮುಖ ನಾಗರಿಕ ಗೋಷ್ಠಿಯನ್ನುದ್ದೇಶಿಸಿಮಾತನಾಡಿದಅವರು, ಪ್ರಶ್ನೆ, ಸಲಹೆಗಳಿಂದ ಅಲ್ಲ ಸಾರ್ವಜನಿಕವಾಗಿ ಸ್ವಯಂಸೇವಕರು ಉದಾಹರಣೆಯಾಗಿ ಕಾರ್ಯನಿರ್ವಹಿಸಬೇಕು. ಹಿಂದೂ ಎನ್ನುವುದು ಕೇವಲ ಧರ್ಮವಲ್ಲ, ಎಲ್ಲರನ್ನೂ ಒಂದುಗೂಡಿಸಿಕೊಂಡು ಎಲ್ಲರಲ್ಲೂ ಸದ್ಭಾವನೆಯ ಆದರ್ಶ ಹೊಂದಿರುವುದಾಗಿದೆ. ಸರ್ವರಲ್ಲೂ ಹಾಗೂ ಸರ್ವ ಉದಾತ್ತ ಗುಣಗಳಲ್ಲೂ ದೇವರನ್ನು ಕಂಡು ಉದಾಹರಣೆಯ ರೀತಿಯಲ್ಲಿ ಆರಾಧಿಸುವವನೇ ಹಿಂದು ಎಂದು ಹೇಳಿದರು.

ಹಳಿಯಾಳ, ದಾಂಡೇಲಿ, ಜೋಯ್ಡಾ ಮತ್ತು ಯಲ್ಲಾಪುರ ತಾಲೂಕಿನ ಪ್ರಮುಖ ನಾಗರಿಕ ಗೋಷ್ಠಿಯನ್ನು ದಾಂಡೇಲಿ ತಾಲೂಕಿನ ರಾಷ್ಟ್ರೀಯ ಸ್ವಯಂಸೇವಕ ಸಂಘ ವಹಿಸಿಕೊಂಡು ಹಳಿಯಾಳದ ಕೆಎಲ್ ಎಸ್ ವಿಡಿಐಟಿಯ ಸಭಾಭವನದಲ್ಲಿ ಆಯೋಜಿಸಿತ್ತು. ಶಿರಸಿ ವಿಭಾಗ ಪ್ರಮುಖ ರಾಮಚಂದ್ರಜಿಯವರು ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಹಳಿಯಾಳ ತಾಲೂಕ ದಾಂಡೇಲಿ, ಯಲ್ಲಾಪುರ ಹಾಗೂ ಜೋಯ್ಡಾ ತಾಲೂಕಿನಿಂದ ಆಗಮಿಸಿದ್ದ ಪ್ರಮುಖ ನಾಗರಿಕರು ಸಂವಾದ ಸಮಯದಲ್ಲಿ ಸಂಘದ ಏಳ್ಗೆಯಲ್ಲಿ ಆಗಬೇಕಿರುವ ಮಹತ್ತರ ಬದಲಾವಣೆಗಳ ಬಗ್ಗೆ ಅಭಿಪ್ರಾಯ ವ್ಯಕ್ತಪಡಿಸಿದರು.

ಕಾರ್ಯಕ್ರಮದ ಅಂತಿಮದಲ್ಲಿ ವಂದನಾರ್ಪಣೆಯ ನಂತರ ದಾಂಡೇಲಿಯ ಕಾವ್ಯಾ ಭಟ್ ರವರಿಂದ ಸುಮಧುರವಾಗಿ ವಂದೇಮಾತರಂ ಗೀತೆಯ ಪ್ರಸ್ತುತಿಯೊಂದಿಗೆ ಕಾರ್ಯಕ್ರಮ ಸಂಪನ್ನವಾಯಿತು.

ಕೋಟ್ಯಂತರ ರೂ.ಮೌಲ್ಯದ ಆಸ್ತಿ ಸರ್ಕಾರದ ಸುಪರ್ದಿಗೆ
ಮೆಸೋನಿಕ್ ಹಾಲ್ ಜಮೀನು ಜಿಲ್ಲಾಡಳಿತದ ವಶ

ಬಳ್ಳಾರಿ: ನಗರದ ಪೋಲಾ ಹೋಟೆಲ್ ಎದುರಿನ ಮೆಸೋನಿಕ್ ಹಾಲ್‌ಗೆ ಸೇರಿದ ಕೋಟ್ಯಂತರ ರೂಪಾಯಿ ಮೌಲ್ಯದ ಜಮೀನನ್ನು ಜಿಲ್ಲಾಡಳಿತ ವಶಕ್ಕೆ ಪಡೆದುಕೊಂಡಿದೆ.

ಈ ಜಾಗದ ಕುರಿತು ಹಲವು ವರ್ಷಗಳಿಂದ ಆಡಳಿತಾತ್ಮಕ ಮತ್ತು ಕಾನೂನು ಪ್ರಕ್ರಿಯೆಗಳು ನಡೆಯುತ್ತಿದ್ದವು. ಸಂಬಂಧಪಟ್ಟ ದಾಖಲೆಗಳು ಹಾಗೂ ಆದೇಶಗಳ ಆಧಾರದ ಮೇಲೆ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಜಾಗವನ್ನು ಸರ್ಕಾರದ ಸುಪರ್ದಿಗೆ ತೆಗೆದುಕೊಂಡರು. ಜಿಲ್ಲಾಡಳಿತದ ಅಧಿಕಾರಿಗಳು, ಕಂದಾಯ ಇಲಾಖೆ ಸಿಬ್ಬಂದಿ ಹಾಗೂ ಪೊಲೀಸ್ ಭದ್ರತೆಯೊಂದಿಗೆ ಕಾರ್ಯಾಚರಣೆ ನಡೆಸಲಾಯಿತು. ಜಾಗವನ್ನು ವಶಕ್ಕೆ ಪಡೆದ ಬಳಿಕ ಸರ್ಕಾರದ ಸ್ವತ್ತಾಗಿದೆ ಎಂಬ ಫಲಕವನ್ನು ಅಳವಡಿಸಲಾಗಿದೆ. ಈ ಸಂದರ್ಭದಲ್ಲಿ ಅಪರ ಜಿಲ್ಲಾಧಿಕಾರಿ ಮಹಮ್ಮದ್ ಎನ್.ಝುಬೇರ್ ಮಾತನಾಡಿ, ಬಳ್ಳಾರಿಯ ಟಿ.ಎಸ್ ಸಂಖ್ಯೆ 307ರಲ್ಲಿರುವ ಒಟ್ಟು 4 ಎಕರೆ 44 ಸೆಂಟ್ಸ್ ವಿಸ್ತೀರ್ಣದ ಜಾಗವನ್ನು ಜಿಲ್ಲಾಧಿಕಾರಿಗಳ ಆದೇಶದನ್ವಯ ಇಂದು ಕಂದಾಯ ಇಲಾಖೆ ಅಧಿಕಾರಿಗಳು ಸರ್ಕಾರದ ಸುಪರ್ದಿಗೆ ಪಡೆದಿದ್ದಾರೆ.

ಈ ಜಮೀನು 1884 ರಿಂದಲೂ ಮೆಸೋನಿಕ್ ಹಾಲ್ ಹೆಸರಿನಲ್ಲಿ ಖಾಸಗಿಯವರ ಬಳಕೆಯಲ್ಲಿ ಇತ್ತು. ಆದರೆ, ಈ ಆಸ್ತಿಗೆ ಸಂಬಂಧಿಸಿದಂತೆ ನಿಯಮಾನುಸಾರ ಯಾವುದೇ ರೀತಿಯ ಸದುಪಯೋಗ ಅಥವಾ ಅಗತ್ಯ ನವೀಕರಣಗಳು ಆಗಿರಲಿಲ್ಲ. ಈ



ಹಿನ್ನೆಲೆಯಲ್ಲಿ ಜಾಗವನ್ನು ಪರಿಶೀಲನೆ ನಡೆಸಿದ ಜಿಲ್ಲಾಧಿಕಾರಿಗಳು, ಇದನ್ನು ಸರ್ಕಾರದ ವಶಕ್ಕೆ ಪಡೆಯುವಂತೆ ಕಂದಾಯ ಇಲಾಖೆಗೆ ಮಹತ್ವದ ಆದೇಶ ಹೊರಡಿಸಿದ್ದರು. ಜಿಲ್ಲಾಧಿಕಾರಿಗಳ ಖಡಕ್ ಆದೇಶದ ಬೆನ್ನಲ್ಲೇ ಅಧಿಕಾರಿಗಳ ತಂಡ, ಶನಿವಾರ ಸ್ಥಳಕ್ಕೆ ಭೇಟಿ ನೀಡಿ ಕಾನೂನಾತ್ಮಕವಾಗಿ ಜಮೀನನ್ನು ಸರ್ಕಾರದ ವಶಕ್ಕೆ ಪಡೆದುಕೊಂಡಿದೆ ಎಂದು ಮಾಹಿತಿ ನೀಡಿದರು. ಕಾರ್ಯಾಚರಣೆಯಲ್ಲಿ ಸಹಾಯಕ ಆಯುಕ್ತ ರಾಜೇಶ್ ಎಚ್.ಡಿ., ಡಿಡಿಎಲ್ ಆರ್ ಪ್ರಮೋದ್, ಬಳ್ಳಾರಿ ತಾಲ್ಲೂಕು ತಹಶೀಲ್ದಾರ್ ಟಿ.ರೇಖಾ, ಕಂದಾಯ ನಿರೀಕ್ಷಕರು, ಮಹಾನಗರಪಾಲಿಕೆ ಅಧಿಕಾರಿಗಳು, ಪೊಲೀಸ್ ಅಧಿಕಾರಿಗಳು, ಇತರರು ಹಾಜರಿದ್ದರು.

ಕಲಬುರಗಿ ಪ್ರಾಣಿ ಸಂಗ್ರಹಾಲಯದಿಂದ
ತಪ್ಪಿಸಿಕೊಂಡ ಚುಕ್ಕೆ ಜಿಂಕೆಗಳು ಸುಕ್ಷಿತವಾಗಿ ಸೆರೆ


ಕಲಬುರಗಿ: ಸತತ ಎರಡುವರೆ ಗಂಟೆಗಳ ಕಾಲ ವಿಶೇಷ ಕಾರ್ಯಾಚರಣೆಯಿಂದಾಗಿ ನಗರದ ಪಬ್ಲಿಕ್ ಗಾರ್ಡನ್ ಸಮೀಪದ ಪ್ರಾಣಿ ಸಂಗ್ರಹಾಲಯದಿಂದ ತಪ್ಪಿಸಿಕೊಂಡಿದ್ದ ಎರಡು ಚುಕ್ಕೆ ಜಿಂಕೆಗಳನ್ನು ಅರಣ್ಯ ಇಲಾಖೆ ಸಿಬ್ಬಂದಿ ಸುರಕ್ಷಿತವಾಗಿ ಸೆರೆ ಹಿಡಿದು ಮೃಗಾಲಯಕ್ಕೆ ಮರಳಿ ತರುವಲ್ಲಿ ಯಶಸ್ವಿಯಾಗಿದ್ದಾರೆ.

ನಗರದ ಕಿರು ಪ್ರಾಣಿ ಸಂಗ್ರಹಾಲಯದ ಗೂಡೆ ಹಾರಿ ಹೊರಬಂದ ಎರಡು ಚುಕ್ಕೆ ಜಿಂಕೆಗಳು, ಒಂದು ಜಿಂಕೆ ಮೃಗಾಲಯದಲ್ಲೇ ಒಂದು ಜಾಗದಿಂದ ಇನ್ನೊಂದು ಜಾಗಕ್ಕೆ ಹಾರಿದೆ ಹೊರತು ಹೊರ ಹೋಗಿಲ್ಲ ಎಂದು ಅಧಿಕಾರಿಗಳು ತಿಳಿಸಿದ್ದು, ಹೊರ ಹಾರಿದ ಎರಡು ಚುಕ್ಕೆ ಜಿಂಕೆಗಳು ನಗರದ ವಿವಿಧ ಪ್ರದೇಶಗಳಲ್ಲಿ ಓಡಾಡಿ ಸ್ಥಳೀಯರಲ್ಲಿ ಆತಂಕ ಮತ್ತು ಕುತೂಹಲ ಉಂಟುಮಾಡಿದ್ದವು.

ಅವುಗಳಲ್ಲಿ ಒಂದು ಚುಕ್ಕೆ ಜಿಂಕೆ ವಿಠ್ಠಲ್ ನಗರದ ಮನೆಯೊಂದರಲ್ಲಿ ನುಗ್ಗಿದ್ದು, ಮತ್ತೊಂದು ಜಿಂಕೆ ಆರ್‌ಟಿಒ ಕಚೇರಿ ಸಮೀಪದ ಪ್ರದೇಶದಲ್ಲಿ ಕಾಣಿಸಿಕೊಂಡಿತ್ತು ತಿಳಿದುಬಂದಿದೆ.

ಮಾಹಿತಿ ತಿಳಿದ ತಕ್ಷಣ ಅರಣ್ಯ ಇಲಾಖೆ ಅಧಿಕಾರಿಗಳು ಹಾಗೂ ಸಿಬ್ಬಂದಿ ಸ್ಥಳಕ್ಕೆ ಧಾವಿಸಿ ಜಿಂಕೆಗಳನ್ನು ಸೆರೆ ಹಿಡಿಯುವ ಕಾರ್ಯಾಚರಣೆ ಆರಂಭಿಸಿದರು. ಜಿಂಕೆಗಳು ನಿರಂತರವಾಗಿ ಓಡಾಡುತ್ತಿದ್ದ ಹಿನ್ನೆಲೆ ಅವುಗಳನ್ನು ಸುರಕ್ಷಿತವಾಗಿ ಹಿಡಿಯಲು ಸಿಬ್ಬಂದಿ ಸಾಕಷ್ಟು ಹರಸಾಹಸಪಟ್ಟರು.





> **ಮೃಗಾಲಯದಲ್ಲಿ ಒಟ್ಟು 5 ಚುಕ್ಕೆ ಜಿಂಕೆಗಳು, 8 ಕೃಷ್ಣ ಮೃಗಗಳಿವೆ. ಅವುಗಳಲ್ಲಿ ಎರಡು ಜಿಂಕೆ ಗೂಡೆ ಹಾರಿ ಹೊರ ಹೋಗಿದ್ದು, ಇಲಾಖೆಯ ಸಿಬ್ಬಂದಿಗಳ ವಿಶೇಷ ಕಾರ್ಯಾಚರಣೆಯಿಂದ ಅವುಗಳನ್ನು ಸುರಕ್ಷಿತವಾಗಿ ಸೆರೆ ಹಿಡಿಯಲಾಗಿದೆ. ಎರಡೂ ಜಿಂಕೆಗಳನ್ನು ಯಾವುದೇ ಗಾಯಗಳಾಗದಂತೆ ಸುರಕ್ಷಿತವಾಗಿ ಹಿಡಿದು ವಾಹನದ ಮೂಲಕ ಮೃಗಾಲಯಕ್ಕೆ ಮರಳಿ ತರಲಾಗಿದ್ದು, ಅವುಗಳ ಆರೋಗ್ಯ ಸ್ಥಿತಿ ಪರಿಶೀಲಿಸಲಾಗಿದೆ.**
> ■ ನಾಗೇಶ್, ರೇಂಜ್ ಫಾರೆಸ್ಟ್ ಅಧಿಕಾರಿ ಕಲಬುರಗಿ ಮೃಗಾಲಯ

ಸುಮಾರು ಎರಡೂವರೆ ಗಂಟೆಗಳ ಕಾಲ ನಡೆದ ವಿಶೇಷ ಕಾರ್ಯಾಚರಣೆಯ ಬಳಿಕ ವಿಠಲ್ ನಗರದ ಮನೆಯೊಳಗೆ ನುಗ್ಗಿದ್ದ ಚುಕ್ಕೆ ಜಿಂಕೆಯನ್ನು ಬಲೆಯ ಮೂಲಕ ಸೆರೆ ಹಿಡಿಯಲಾಯಿತು. ಬಳಿಕ ಆರ್‌ಟಿಒ ಕಚೇರಿ ಸಮೀಪ ಸಂಚರಿಸುತ್ತಿದ್ದ ಮತ್ತೊಂದು ಜಿಂಕೆಯನ್ನೂ ಯಶಸ್ವಿಯಾಗಿ ಸೆರೆ ಹಿಡಿಯಲಾಯಿತು. ಈ ಘಟನೆಯಿಂದ ಕೆಲಕಾಲ ವಿಠ್ಠಲ್ ನಗರ, ಆರ್‌ಟಿಒ ಕಚೇರಿ ಸುತ್ತಮುತ್ತ ಹಾಗೂ ಇತರೆ ಪ್ರದೇಶಗಳಲ್ಲಿ ಜನರು ಜಮಾಯಿಸಿದ್ದು, ಅರಣ್ಯ ಇಲಾಖೆ ಸಿಬ್ಬಂದಿಯ ಸಮಯೋಚಿತ ಕಾರ್ಯಾಚರಣೆಯಿಂದ ಯಾವುದೇ ಅನಾಹುತ ಸಂಭವಿಸದೇ ಜಿಂಕೆಗಳನ್ನು ಸುರಕ್ಷಿತವಾಗಿ ಸೆರೆ ಹಿಡಿಯುವಲ್ಲಿ ಯಶಸ್ಸು ಸಿಕ್ಕಿದೆ.

ಎಚ್‌ಎಲ್‌ಸಿ ಕಾಲುವೆಯಲ್ಲಿ ನೀರು ನಾಯಿಗಳು ಪ್ರತ್ಯಕ್ಷ

ವಿಜಯನಗರ: ಹೊಸಪೇಟೆ ನಗರದ ಜಂಬುನಾಥ ರಸ್ತೆಯ ತುಂಗಭದ್ರಾ ಮೇಲ್ಮಟ್ಟದ ಕಾಲುವೆಯಲ್ಲಿ (ಎಚ್‌ಎಲ್‌ಸಿ) ಭಾನುವಾರ ಬೆಳಿಗ್ಗೆ ನಾಲ್ಕೈದು ನೀರು ನಾಯಿಗಳು ಕಾಣಿಸಿದ್ದು, ಈ ಪೈಕಿ ಒಂದು ನಾಯಿಯನ್ನು ಅರಣ್ಯ ಇಲಾಖೆ ಸಿಬ್ಬಂದಿ ರಕ್ಷಿಸಿದ್ದಾರೆ. ನಾಲ್ಕೈದು ನೀರು ನಾಯಿಗಳು ಕಾಲುವೆಯಲ್ಲಿ ಮತ್ತು ಸುತ್ತಮುತ್ತ ಓಡಾಡುತ್ತಿರುವುದನ್ನು ಗಮನಿಸಿದ ಸ್ಥಳೀಯರು ಅರಣ್ಯ ಇಲಾಖೆ ಅಧಿಕಾರಿಗಳಿಗೆ ಮಾಹಿತಿ ನೀಡಿದರು. ತಕ್ಷಣ ಸ್ಥಳಕ್ಕೆ ಬಂದ ಅರಣ್ಯ ಸಿಬ್ಬಂದಿ ಒಂದು ನೀರು ನಾಯಿಯನ್ನು ಬಲೆ ಬೀಸಿ ಹಿಡಿದರು. ಅದನ್ನು ಗುಂಡಾ ಸಸ್ಯೋದ್ಯಾನ ಸಮೀಪ ಸುರಕ್ಷಿತವಾಗಿ ಬಿಟ್ಟಿದ್ದಾರೆ. ಈ ಭಾಗದಲ್ಲಿ ನೀರುನಾಯಿ ಓಡಾಟ ಸಹಜ. ಅವುಗಳು ಜನರಿಗೆ ತೊಂದರೆ ಕೊಡುವುದಿಲ್ಲ, ಆದರೆ, ಜನರಿಂದ ಅವುಗಳಿಗೆ ತೊಂದರೆ ಆಗಬಾರದು ಎಂಬುದು ನಮ್ಮ ಕಾಳಜಿಯಾಗಿತ್ತು. ಹೀಗಾಗಿ ಒಂದು ನೀರುನಾಯಿಯನ್ನು ಸೆರೆ ಹಿಡಿದು ಸುರಕ್ಷಿತವಾಗಿ ಬಿಟ್ಟಿದ್ದೇವೆ ಎಂದು ಆರ್‌ಎಫ್‌ಒ ಕೌಶಿಕ್ ದಳವಾಯಿ ಮಾಹಿತಿ ನೀಡಿದರು.

ಬಾವಿಗೆ ಬಿದ್ದ ಚಿರತೆ ರಕ್ಷಿಸಿದ ಅರಣ್ಯ ಸಿಬ್ಬಂದಿ



ಭಟ್ಕಳ: ತಾಲೂಕಿನ ಯಲ್ವಡಿಕವೂರಿನ ನಾರಾಯಣ ನಾಯ್ಕ ಅವರ ಮನೆಯ ಆವರಣದಲ್ಲಿರುವ ಬಾವಿಗೆ ಆಕಸ್ಮಿಕವಾಗಿ ಬಿದ್ದಿದ್ದ ಚಿರತೆಯನ್ನು ಅರಣ್ಯ ಇಲಾಖೆ ಹಾಗೂ ವನ್ಯಜೀವಿ ರಕ್ಷಕರ ತಂಡ ಸುರಕ್ಷಿತವಾಗಿ ರಕ್ಷಿಸಿ ಕಾಡಿಗೆ ರವಾನಿಸಿದೆ.

ಭಾನುವಾರ ಬೆಳಗ್ಗೆ ನಾರಾಯಣ ನಾಯ್ಕ ಅವರು ತಮ್ಮ ಮನೆಯ ಆವರಣದಲ್ಲಿ ಇದ್ದಾಗ ಬಾವಿಯಿಂದ ನಿರಂತರವಾಗಿ ಕೂಗುವ ಶಬ್ದ ಕೇಳಿತ್ತು. ಅನುಮಾನಗೊಂಡು ಬಾವಿಯೊಳಗೆ ನೋಡಿದಾಗ ಸುಮಾರು ಎರಡರಿಂದ ಮೂರು ವರ್ಷದ ಗಂಡು ಚಿರತೆಯೊಂದು ಬಾವಿಗೆ ಬಿದ್ದು ಮೇಲಕ್ಕೆ ಬರಲಾಗದೆ ಒದ್ದಾಡುತ್ತಿರುವುದು ಕಂಡುಬಂತು. ಕೂಡಲೇ ಅವರು ಅರಣ್ಯ ಇಲಾಖೆಗೆ ಮಾಹಿತಿ ನೀಡಿದರು. ಮಾಹಿತಿ ಪಡೆದ ಅರಣ್ಯ ಇಲಾಖೆ ಅಧಿಕಾರಿಗಳು ತಕ್ಷಣವೇ ಸ್ಥಳಕ್ಕೆ ಧಾವಿಸಿ ರಕ್ಷಣಾ ಕಾರ್ಯಾಚರಣೆ ಆರಂಭಿಸಿದರು. ಬಳಿಕ ಅದನ್ನು ಸುರಕ್ಷಿತವಾಗಿ ದೂರದ ಅರಣ್ಯ ಪ್ರದೇಶಕ್ಕೆ ಸ್ಥಳಾಂತರಿಸಲಾಗಿದೆ ಎಂದು ಆರ್ ಎಫ್‌ಒ ವಿಶ್ವನಾಥ ನಾಯ್ಕ ತಿಳಿಸಿದ್ದಾರೆ. ಕಾರ್ಯಾಚರಣೆಯಲ್ಲಿ ಡಿಆರ್‌ಎಫ್‌ಒ ಮಾರುತಿ ಸೋರಗಾಂವಿ, ಫಾರೆಸ್ಟರ್‌ಗಳಾದ ಮಹೇಶ ಅಜ್ಜರ, ನಾಗರಾಜ ನಾಯ್ಕ, ಸಂದೀಪ್ ಭಂಡಾರಿ ಹಾಗೂ ಸಿಬ್ಬಂದಿಗಳಾದ ರಾಮಕೃಷ್ಣ ನಾಯ್ಕ, ಮಾದೇವ ನಾಯ್ಕ, ಕುಪ್ಪಯ್ಯ ಗೊಂಡ, ಮಹೇಶ ನಾಯ್ಕ, ಈಶ್ವರ ನಾಯ್ಕ, ವರುಣ್ ಚೌಹಾಣ್ ಸೇರಿದಂತೆ ಹಲವು ಸಿಬ್ಬಂದಿ ಮತ್ತು ವನ್ಯಜೀವಿ ರಕ್ಷಕರು ಭಾಗವಹಿಸಿದ್ದರು.

ಕಿರುಸುದ್ದಿ

ರಿವ್ಯೂ ಬಳಕೆಯಲ್ಲಿ ಎಡವಿದ ಅಫ್ಘಾನ್, ರಾಹುಲ್ ಅದೃಷ್ಟ



ಮುಲ್ಲಾನ್‌ಪುರ್: ಮೊದಲ ದಿನದಾಟದಲ್ಲಿ ಕೆಎಲ್ ರಾಹುಲ್ ಎರಡು ಬಾರಿ ಅದೃಷ್ಟದೇವತೆ ಕೈಹಿಡಿದ ಬಳಿಕ ಶತಕ ದಾಖಲಿಸಿದ್ದರು. ಜಿಯಾವುರ್ ರೆಹಮಾನ್ ಎಸೆದಿದ್ದ 11ನೇ ಓವರ್‌ನಲ್ಲಿ ರಾಹುಲ್ ಕ್ಯಾಚ್‌ಗೆ ಪ್ರವಾಸಿಗರು ಬಲವಾದ ಮನವಿ ಮಾಡಿದ್ದರು. ಆದರೆ ಅಂಪೈರ್ ತಿರಸ್ಕರಿಸಿದ್ದರು. ಈ ವೇಳೆ ಮೌನ ತಾಳಿದ್ದ ರಾಹುಲ್ ಪ್ರತಿಕ್ರಿಯಿಸಿಲ್ಲ, ಆದರೆ ಕೈಯಲ್ಲಿದ್ದ ಬ್ಯಾಟ್‌ನ ಹ್ಯಾಂಡಲ್ ಅಲ್ಲಾಡುತ್ತಿದೆ ಎಂಬ ರೀತಿ ಎರಡು ಬಾರಿ ಅಲುಗಾಡಿಸಿದ್ದರು. ಸ್ಲಿಪ್‌ನಲ್ಲಿದ್ದ ಗುರ್ಬಾಜ್ ತಮ್ಮ ನಾಯಕ ಶಾಹಿದಿಗೆ ಡಿಆರ್‌ಎಸ್‌ಗೆ ಒತ್ತಾಯಿಸಿದರೂ ನಾಯಕ ನಿರಾಕರಿಸಿದ್ದರು. 16ನೇ ಓವರ್‌ನಲ್ಲಿ ಪ್ಯಾಡ್‌ಗೆ ಚೆಂಡು ತಗುಲಿದ್ದರೂ ಅಫ್ಘಾನಿಸ್ತಾನ ಆಟಗಾರರು ಎಲ್‌ಬಿಡಬ್ಲ್ಯು ಮನವಿ ಮಾಡಿಲ್ಲ. ಆದರೆ ಹಾಕ್‌ಐ ಪ್ರಕಾರ ಚೆಂಡು ಸ್ಟಂಪ್‌ಗೆ ತಗುಲುವ ಸಾಧ್ಯತೆಯಿತ್ತು. ಪಂದ್ಯದಲ್ಲಿ ಅಫ್ಘಾನ್ ರಿವ್ಯೂ ಬಳಸಿಕೊಳ್ಳುವಲ್ಲಿ ಎಡವಿದ್ದು, ರಾಹುಲ್ ಅದೃಷ್ಟ ಖುಲಾಯಿಸಿತ್ತು.

ಮೊದಲ ಓವರ್‌ನಲ್ಲೇ ವಿಕೆಟ್: ಮಾನವ್ ವಿನೂತನ ದಾಖಲೆ!

ಮುಲ್ಲಾನ್‌ಪುರ್: ಪದಾರ್ಪಣಾ ಟೆಸ್ಟ್ ಆಡುತ್ತಿರುವ ಎಡಗೈ ಸ್ಪಿನ್ನರ್ ಮಾನವ್ ಸುಥಾರ್ ಮೊದಲ ಓವರ್‌ನಲ್ಲಿಯೇ ವಿಕೆಟ್ ಕಬಳಿಸುವ ಮೂಲಕ ವಿನೂತನ ದಾಖಲೆಯನ್ನು ಬರೆದಿದ್ದಾರೆ. ಅಫ್ಘಾನಿಸ್ತಾನದ ಆರಂಭಿಕ ಬ್ಯಾಟರ್ ಅಬ್ದುಲ್ ಮಲಿಕ್ ಹೊಡೆದ ಚೆಂಡು ಮೊಹಮ್ಮದ್ ಸಿರಾಜ್ ಕೈ ಸೇರಿತ್ತು. ಸುಥಾರ್ ಅವರು ಟಿನು ಯೊಹಾನನ್ ಬಳಿಕ ಈ ದಾಖಲೆ ಬರೆದ ಮೊದಲ ಭಾರತೀಯ ಎನಿಸಿಕೊಂಡಿದ್ದಾರೆ. ಮೋಂಟು ಬ್ಯಾನರ್ಜಿ (1948ರಲ್ಲಿ ವೆಸ್ಟ್ ಇಂಡೀಸ್ ವಿರುದ್ಧ) ಈ ಸಾಧನೆಗೈದ ಮೊದಲ ಭಾರತೀಯರಾಗಿದ್ದರು. ನಂತರ ಮನೋಹರ್ (1958ರಲ್ಲಿ ವೆಸ್ಟ್ ಇಂಡೀಸ್ ವಿರುದ್ಧ), ವಾಮನ್ ಕುಮಾರ್ (1961ರಲ್ಲಿ ಪಾಕಿಸ್ತಾನ ವಿರುದ್ಧ), ಚೇತನ್ ಶರ್ಮಾ (1984ರಲ್ಲಿ ಪಾಕಿಸ್ತಾನ ವಿರುದ್ಧ), ಡಬ್ಲ್ಯುವಿ ರಾಮನ್ (1988ರಲ್ಲಿ ವೆಸ್ಟ್ ಇಂಡೀಸ್), ನೀಲೇಶ್ ಕುಲಕರ್ಣಿ (1997ರಲ್ಲಿ ಶ್ರೀಲಂಕಾ ವಿರುದ್ಧ), ಟಿನು ಯೊಹಾನನ್ (2001ರಲ್ಲಿ ಇಂಗ್ಲೆಂಡ್ ವಿರುದ್ಧ) ಈ ಸಾಧನೆಗೈದಿದ್ದಾರೆ.

ಟಿ20 ವಿಶ್ವಕಪ್: ತಂಡಗಳಿಗೆ ಶುಭಕೋರಿದ ಐಸಿಸಿ ಅಧ್ಯಕ್ಷ

ದುಬೈ: ಐಸಿಸಿ ಮಹಿಳಾ ಟಿ20 ವಿಶ್ವಕಪ್‌ನಲ್ಲಿ ಸ್ಪರ್ಧಿಸುವ ಎಲ್ಲಾ 12 ತಂಡಗಳಿಗೂ ಐಸಿಸಿ ಅಧ್ಯಕ್ಷ ಜಯ್ ಶಾ ಭಾನುವಾರ ಶುಭಕೋರಿದ್ದಾರೆ. ಇಂಗ್ಲೆಂಡ್ ಮತ್ತು ವೇಲ್ಸ್‌ನ ಐತಿಹಾಸಿಕ ಕ್ರೀಡಾಂಗಣದಲ್ಲಿ ಆಯೋಜಿಸುವ ವಿಶ್ವಕಪ್ ದಾಖಲೆಯ ವೀಕ್ಷಣೆಯನ್ನು ಸಾಧಿಸಲಿದ್ದು, ವಿಶಾಲವಾದ ಜಾಗತಿಕ ನೇರಪ್ರಸಾರ ಮಾಡಲಾಗುವುದು. ಲಕ್ಷಗಟ್ಟಲೆ ಅಭಿಮಾನಿಗಳು ಮತ್ತು ವಿಶ್ವದ ಶ್ರೇಷ್ಠ ಕ್ರೀಡಾಪಟುಗಳನ್ನು ಒಂದುಗೂಡಿಸುವ ಪಂದ್ಯಾವಳಿ ಇದಾಗಿರಲಿದೆ ಎಂದು ಜಯ್ ಶಾ ಭರವಸೆ ನೀಡಿದ್ದಾರೆ. ಭಾನುವಾರ ಲಂಡನ್‌ನಲ್ಲಿ ಭಾರತ ತಂಡದ ನಾಯಕಿ ಹರ್ಮನ್‌ಪ್ರೀತ್ ಕೌರ್ ಸಹಿತ ಎಲ್ಲಾ 12 ನಾಯಕಿಯರು ವಿಶ್ವಕಪ್ ಟ್ರೋಫಿಯೊಂದಿಗೆ ಪೋಸ್ ನೀಡಿದರು.

ಅಥ್ಲೆಟಿಕ್ಸ್: ಶೈಲಿಗೆ ಸ್ವರ್ಣ, ಅನಿಮೇಶ್, ತೇಜಸ್‌ಗೆ ಬೆಳ್ಳಿ

ನ್ಯೂ ತೈಪೆ: ತೈವಾನ್‌ನ ನ್ಯೂ ತೈಪೆ ಸಿಟಿ ಅಥ್ಲೆಟಿಕ್ಸ್ ಓಪನ್ 2026ರಲ್ಲಿ ಭಾರತದ ಲಾಂಗ್ ಜಂಪರ್ ಶೈಲಿ ಸಿಂಗ್ ಸ್ವರ್ಣ ಗೆದ್ದರೆ, ಪುರುಷರ 200 ಮೀ. ಓಟದಲ್ಲಿ ಅನಿಮೇಶ್ ಕುಜೂರ್ ರಜತ ಪದಕ ಗೆದ್ದಿದ್ದಾರೆ. ಇಲ್ಲಿ ನಡೆದ ಮಹಿಳೆಯರ ಉದ್ದ ಜಿಗಿತ ಸ್ಪರ್ಧೆಯಲ್ಲಿ ಶೈಲಿ 6.24 ಮೀ. ಜಿಗಿತದೊಂದಿಗೆ ಚಿನ್ನದ ಪದಕಕ್ಕೆ ಮುತ್ತಿಟ್ಟಿದ್ದಾರೆ. ಪುರುಷರ 200 ಮೀ. ಓಟದಲ್ಲಿ 20.47 ಸೆಕೆಂಡುಗಳಲ್ಲಿ ಗುರಿ ಮುಟ್ಟುವ ಮೂಲಕ ಅನಿಮೇಶ್ ಬೆಳ್ಳಿ ಪದಕ ಗೆದ್ದರು. ಪುರುಷರ 110 ಮೀ. ಹರ್ಡಲ್ಸ್ ಸ್ಪರ್ಧೆಯಲ್ಲಿ ಭಾರತದ ತೇಜಸ್ ಶಿರ್ಸೆ 13.58 ಸೆಕೆಂಡುಗಳಲ್ಲಿ ಗುರಿ ತಲುಪುವ ಮೂಲಕ ಬೆಳ್ಳಿ ಪದಕ ಗೆದ್ದರು.







ಮಹಿಳೆಯರ ರಿಲೇ ಸ್ವರ್ಣ: ಮಹಿಳೆಯರ 100 ಮೀ. ರಿಲೇ ಸ್ಪರ್ಧೆಯಲ್ಲಿ ಭಾರತ ತಂಡ 44.07 ಸೆಕೆಂಡಿನಲ್ಲಿ ಕ್ರಮಿಸಿ ಸ್ವರ್ಣ ಪದಕ ಗೆದ್ದುಕೊಂಡಿದೆ.

ಬ್ಯಾಟಿಂಗ್‌ನಲ್ಲೂ ಮಾನವ್ 28 ರನ್ ಕೊಡುಗೆ | ಸುಂದರ್ ಜತೆ 54 ರನ್ ಜೊತೆಯಾಟ

ಸುಥಾರ್ ವಾರ್; ಆಫ್ಘಾನ್ ಮೇಲೆ ಹಿಡಿತ

ಮುಲ್ಲಾನ್‌ಪುರ್: ತಮ್ಮ ಚೊಚ್ಚಲ ಟೆಸ್ಟ್ ಪಂದ್ಯದಲ್ಲೇ ಎಡಗೈ ಸ್ಪಿನ್ನರ್ ಮಾನವ್ ಸುತಾರ್ ಅದ್ಭುತ ಪ್ರದರ್ಶನ ನೀಡಿ ಮೂರು ವಿಕೆಟ್ ಕಬಳಿಸಿದ ಪರಿಣಾಮ, ಅಫ್ಘಾನಿಸ್ತಾನ ವಿರುದ್ಧದ ಏಕೈಕ ಟೆಸ್ಟ್‌ನ ಎರಡನೇ ದಿನದಾಟದ ಅಂತ್ಯಕ್ಕೆ ಭಾರತ ಸಂಪೂರ್ಣ ಮೇಲುಗೈ ಸಾಧಿಸಿದೆ.

ತೀವ್ರ ಬಿಸಿಲಿನ ನಡುವೆ ಭಾರತ ತನ್ನ ಮೊದಲ ಇನ್ನಿಂಗ್ಸ್ ಅನ್ನು 564 ರನ್‌ಗಳಿಗೆ 8 ವಿಕೆಟ್ ಕಳೆದುಕೊಂಡಿದ್ದಾಗ ಡಿಕ್ಲೇರ್ ಮಾಡಿತು. ವಾಷಿಂಗ್ಟನ್ ಸುಂದರ್ ಒತ್ತಡರಹಿತ ಅರ್ಧಶತಕ ಸಿಡಿಸಿದರೆ, ಸುಥಾರ್(41 ಎಸೆತಗಳಲ್ಲಿ 28 ರನ್) ಜೊತೆಗೂಡಿ ಏಳನೇ ವಿಕೆಟ್‌ಗೆ 54 ರನ್‌ಗಳ ಉಪಯುಕ್ತ ಜತೆಯಾಟ ಕಟ್ಟಿದರು. ದಿನದಾಟ ಮುಕ್ತಾಯದ ವೇಳೆಗೆ ಅಫ್ಘಾನಿಸ್ತಾನ 5 ವಿಕೆಟ್ ನಷ್ಟಕ್ಕೆ 113 ರನ್ ಗಳಿಸಿ ಸಂಕಷ್ಟದ ಪರಿಸ್ಥಿತಿಯಲ್ಲಿದೆ. ಸುಥಾರ್ 21ಕ್ಕೆ 3 ವಿಕೆಟ್ ಪಡೆದರೆ, ಕರ್ನಾಟಕ ವೇಗಿ ಪ್ರಸಿದ್ಧ್ ಕೃಷ್ಣ 27ಕ್ಕೆ 2 ವಿಕೆಟ್ ಕಬಳಿಸಿದರು. ಭಾರತ ಈಗಾಗಲೇ 451 ರನ್‌ಗಳ ಮುನ್ನಡೆ ಸಾಧಿಸಿದೆ. ರಾಜಸ್ಥಾನದ ಶ್ರೀಗಂಗಾನಗರದ 23ರ ಹರೆಯದ ಸುತಾರ್ ತಮ್ಮ ಸಾಂಪ್ರದಾಯಿಕ ಬೌಲಿಂಗ್ ಶೈಲಿ ಮತ್ತು ನಿಯಂತ್ರಣ ನೋಡುಗರ ಗಮನ ಸೆಳೆದರು. ಟಿ20 ಕ್ರಿಕೆಟ್ ಪ್ರಭಾವದಿಂದ ಸ್ಪಿನ್ ಬೌಲಿಂಗ್ ಹೆಚ್ಚು ನಿಯಂತ್ರಣದ ಅಸ್ತ್ರವಾಗಿ ಪರಿಣಮಿಸುತ್ತಿರುವ ಈ ಕಾಲಘಟ್ಟದಲ್ಲಿ, ಸುತಾರ್ ತಮ್ಮ ಫ್ಲೈಟ್, ಟರ್ನ್ ಮತ್ತು ನಿಖರತೆಯಿಂದ ಹೊಸ ಚೈತನ್ಯ ಮೂಡಿಸಿದರು. ಸುಂದರ್ ಅರ್ಧ ಶತಕ, ಭಾರತ 564/8 ಡಿಕ್ಲೇರ್: ಇದಕ್ಕೂ ಮುನ್ನ ವಾಷಿಂಗ್ಟನ್ ಸುಂದರ್ 6ನೇ ಟೆಸ್ಟ್ ಅರ್ಧ ಶತಕ ಪೂರ್ಣಗೊಳಿಸಿದ ತಕ್ಷಣ ಗಿಲ್ ಇನ್ನಿಂಗ್ಸ್ ಡಿಕ್ಲೇರ್ ಮಾಡುವ ನಿರ್ಧಾರ ಕೈಗೊಂಡರು.



ಟೆಸ್ಟ್ ಲಯಕ್ಕೆ ಮರಳಿದ ಪಂತ್

ಭಾರತದ ಮೊದಲ ಆಯ್ಕೆಯ ವಿಕೆಟ್‌ಕೀಪರ್ ರಿಷಭ್ ಪಂತ್ ಟೆಸ್ಟ್‌ನಲ್ಲಿ ಬ್ಯಾಟಿಂಗ್ ಲಯ ಕಂಡುಕೊಂಡಿದ್ದಾರೆ. ಇನ್ನೋರ್ವ ವಿಕೆಟ್‌ಕೀಪರ್ ಧ್ರುವ್ ಜ್ಯುರೆಲ್ ಟೆಸ್ಟ್ ತಂಡದಲ್ಲಿದ್ದಾರೆ. ಇನ್ನೋರ್ವ ವಿಕೆಟ್‌ಕೀಪರ್ ಇಶಾನ್ ಕಿಶನ್ ಟೆಸ್ಟ್ ಆಯ್ಕೆಯಾಗಿ ಕಾಯುತ್ತಿದ್ದಾರೆ. ಆದರೆ ಮುಖ್ಯ ಕೋಚ್ ಗೌತಮ್ ಗಂಭೀರ್ ಪಂತ್‌ಗೆ ಅವಕಾಶ ನೀಡಿದ್ದು, ಅಫ್ಘಾನಿಸ್ತಾನ ವಿರುದ್ಧ ಪಂತ್ 81 ರನ್ ಗಳಿಸಿದ್ದಾರೆ. 121 ಎಸೆತಗಳನ್ನು ಎದುರಿಸಿದ ಪಂತ್ 6 ಬೌಂಡರಿ ಮತ್ತು 3 ಸಿಕ್ಸರ್‌ಗಳನ್ನು ಬಾರಿಸಿದ್ದರು. ಉಪನಾಯಕ ಪಟ್ಟ ಕಳೆದುಕೊಂಡ ಪಂತ್ ಯಾವುದೇ ಒತ್ತಡವಿಲ್ಲದೆ ಬ್ಯಾಟ್ ಬೀಸಿದ್ದಾರೆ. 194 ನಿಮಿಷಗಳ ಕಾಲ ಕ್ರೀಸ್‌ನಲ್ಲಿ ಸಮಯ ಕಳೆದ ಪಂತ್, ಎರಡು ಸೆಷನ್ ಬ್ಯಾಟ್ ಮಾಡಿದ್ದಾರೆ. ಹೊಡೆಬಡಿ ಆಟಕ್ಕೆ ಹೆಸರುವಾಸಿ ಪಂತ್ ಮೊದಲ 21 ಎಸೆತಗಳಲ್ಲಿ ಯಾವುದೇ ಬೌಂಡರಿ-ಸಿಕ್ಸರ್ ಹೊಡೆಯದೆ ತಮ್ಮ ಹೊಡೆಬಡಿ ಆಟದ ಪ್ರಲೋಭನೆಯನ್ನು ನಿಯಂತ್ರಿಸಿದರು.

ಸಲೀಮ್ 140ಕ್ಕೆ 6 ವಿಕೆಟ್


145 ಕಿ.ಮೀ. ವೇಗದಲ್ಲಿ ಚೆಂಡು ಎಸೆಯಬಲ್ಲ ಆಫ್ಘಾನ್ ವೇಗಿ ಮೊಹಮ್ಮದ್ ಸಲೀಮ್ ತಮ್ಮ ಕ್ರಿಕೆಟ್ ವೃತ್ತಿಜೀವನದಲ್ಲಿ ಅದ್ಭುತ ಕಂಬ್ಯಾಕ್ ಮಾಡಿದ್ದಾರೆ. 16ನೇ ವಯಸ್ಸಿನಲ್ಲಿ ಅವಕಾಶಗಳು ಸಿಗುತ್ತಿಲ್ಲ ಎಂಬ ಕಾರಣಕ್ಕೆ ಸ್ಪರ್ಧಾತ್ಮಕ ಕ್ರಿಕೆಟ್‌ನಿಂದ ದೂರ ಉಳಿದಿದ್ದ ಸಲೀಮ್ ಅತ್ಯುತ್ತಮ ಬೌಲಿಂಗ್ ಪ್ರದರ್ಶನ ನೀಡಿದ್ದು, ಪ್ರಮುಖ ವಿಕೆಟ್‌ಗಳನ್ನು ಕಬಳಿಸಿದ್ದಾರೆ.


ಸ್ಕೋರ್ ವಿವರ

ಭಾರತ ಪ್ರಥಮ ಇನ್ನಿಂಗ್ಸ್	564/8ಡಿ.
ಗಿಲ್ ಸಿ ಅಫ್ಸರ್ ಬಿ ಸಲೀಮ್	126
ಪಂತ್ ಸಿ ಒಮರ್ ಬಿ ಶಾಹಿದಿ	81
ಜ್ಯುರೆಲ್ ಬಿ ಸಲೀಮ್	19
ಸುಂದರ್ ಔಟಾಗದೆ	52
ಸುಥಾರ್ ಸಿ ಅಫ್ಸರ್ ಬಿ ಸಲೀಮ್	28
ಸಿರಾಜ್ ಬಿ ಸಲೀಮ್	22
ಕುಲ್ದೀಪ್ ಔಟಾಗದೆ	9
ಇತರೆ	22
ಬೌಲಿಂಗ್ ವಿವರ	
ರೆಹಮಾನ್	24-2-91-1
ಒಮರ್‌ಝೂಯಿ	22-5-67-0
ಸಲೀಮ್	27-3-140-6
ಖರೋಟೆ	23-0-115-0
ಮಲಿಕ್	7-0-43-0
ಶಾಹಿದಿ	24-1-91-1
ಅಫ್ಘಾನಿಸ್ತಾನ ಪ್ರಥಮ ಇನ್ನಿಂಗ್ಸ್	113/5
ಮಲಿಕ್ ಸಿ ಸಿರಾಜ್ ಬಿ ಸುಥಾರ್	16
ಅಟಲ್ ಬಿ ಪ್ರಸಿದ್ಧ	17
ಗುರ್ಬಾಜ್ ಸಿ ಸಾಯಿ ಬಿ ಸುಥಾರ್	12
ಶಾ ಔಟಾಗದೆ	43
ಶಾಹಿದಿ ಎಲ್‌ಬಿ ಪ್ರಸಿದ್ಧ	20
ಅಫ್ಸರ್ ಸಿ ಆ್ಯಂಡ್ ಬಿ ಸುಥಾರ್	3
ಇತರೆ	2
ಬೌಲಿಂಗ್ ವಿವರ	
ಸಿರಾಜ್	6-1-24-0
ಪ್ರಸಿದ್ಧ	7-0-27-2
ಸುಥಾರ್	15.5-7-21-3
ಕುಲ್ದೀಪ್	7-0-29-0
ಸುಂದರ್	4-0-12-0

ಜೂನಿಯರ್ ಫೆಡ್ ಕಪ್‌ನಿಂದ ಎರಡು ವಿಭಿನ್ನ ಹಾದಿಯವರೆಗೆ

ಡಿಎಸ್‌ಪಿ ಸಾತ್ವಿಕಾ ಮಣಿಸಿದ್ದ ಖ್ವಾಲಿನ್ಸ್ಕಾ





ಹೊಸದಿಲ್ಲಿ: ಫ್ರೆಂಚ್ ಓಪನ್ 2026ರ ಮಹಿಳಾ ವಿಭಾಗದ ರನ್ನರ್‌ಅಪ್ ಪೋಲೆಂಡ್‌ನ ಮಾಯಾ ಖ್ವಾಲಿನ್ಸ್ಕಾ ಅವರು ತೆಲಂಗಾಣ ಡಿಎಸ್‌ಪಿ ಸಾತ್ವಿಕಾ ಸಾಮಾ ಅವರನ್ನು ಸೋಲಿಸಿದ್ದ ಸ್ವಾರಸ್ಯಕರ ಘಟನೆ 2016ರಲ್ಲಿ ನಡೆದಿತ್ತು. ಪ್ರಸ್ತುತ ಸಾತ್ವಿಕಾ ತೆಲಂಗಾಣದಲ್ಲಿ ಜಿಲ್ಲಾ ಪೊಲೀಸ್ ಉಪ ವರಿಷ್ಠೆಯಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಭವಿಷ್ಯದ ಇಬ್ಬರು ಪ್ರತಿಭೆಗಳು ಒಂದೇ ವೇದಿಕೆಯಲ್ಲಿ ಮುಖಾಮುಖಿ ಆಗಿದ್ದು, ಇಂದು ಇಬ್ಬರೂ ಸಂಪೂರ್ಣ ವಿಭಿನ್ನ ದಾರಿಗಳನ್ನು ಹಿಡಿದು ತಮ್ಮ ಛಾಪು ಮೂಡಿಸುತ್ತಿದ್ದಾರೆ. ಇನ್ನೊಂದು ಕಡೆ ಮಾಯಾ ಫ್ರೆಂಚ್ ಓಪನ್ ಫೈನಲ್ ಪ್ರವೇಶಿಸಿದ ಮೊದಲ ಅರ್ಹತಾ ಸುತ್ತಿನ ಆಟಗಾರ್ತಿ ಮತ್ತು ಗ್ರ್ಯಾಂಡ್ ಸ್ಲಾಮ್‌ವೊಂದರ ಫೈನಲ್ ಪ್ರವೇಶಿಸಿದ ದ್ವಿತೀಯ ಅರ್ಹತಾ ಸುತ್ತಿನ ಆಟಗಾರ್ತಿ ಎಂಬ ದಾಖಲೆ ಬರೆದಿದ್ದಾರೆ. 2016ರಲ್ಲಿ ಹಂಗೇರಿಯ ಬುಡಾಪೆಸ್ಟ್‌ನಲ್ಲಿ ನಡೆದಿದ್ದ ಜೂನಿಯರ್ ಬಿಲ್ಲಿ ಜೀನ್ ಕಿಂಗ್ ಕಪ್ ಫೈನಲ್‌ನಲ್ಲಿ (ಅಂದಿನ ಜೂನಿಯರ್ ಫೆಡ್ ಕಪ್) ಇವರಿಬ್ಬರೂ ಮುಖಾಮುಖಿ ಆಗಿದ್ದರು. ಆದರೆ ಭಾರತೀಯ ಆಟಗಾರ್ತಿ ಸಾತ್ವಿಕಾ ಪಂದ್ಯ ಸೋತಿದ್ದರು.

ಆವೆಮಣ್ಣಿನಲ್ಲಿ ಐತಿಹಾಸಿಕ ಸಾಧನೆ

ಇತ್ತೀಚೆಗೆ ಮಾಯಾ ಟೆನಿಸ್ ಜಗತ್ತಿನಲ್ಲಿ ಸಂಚಲನ ಮೂಡಿಸಿದರು. ಎಲ್ಲ ಅಡೆತಡೆಗಳನ್ನು ಮೀರಿ, ಅರ್ಹತಾ ಸುತ್ತುಗಳಿಂದ ಆರಂಭಿಸಿ ಫ್ರೆಂಚ್ ಓಪನ್ ಮಹಿಳಾ ಸಿಂಗಲ್ಸ್ ಫೈನಲ್‌ವರೆಗೆ ತಲುಪಿದ ಮೊದಲ ಆಟಗಾರ್ತಿ ಎಂಬ ಇತಿಹಾಸ ನಿರ್ಮಿಸಿದರು. ರೊಲಾಂಡ್ ಗ್ಯಾರೋಸ್‌ನ ಆವೆಮಣ್ಣಿನ ಅಂಗಣದಲ್ಲಿ ಅವರು ತೋರಿದ ಅಚಲ ಹೋರಾಟದ ಮನೋಭಾವ ಟೆನಿಸ್ ಇತಿಹಾಸದಲ್ಲಿ ಅವರಿಗೆ ವಿಶೇಷ ಸ್ಥಾನವನ್ನು ತಂದುಕೊಟ್ಟಿದೆ.

ಅಂಗಣದ ಚಾಂಪಿಯನ್, ಸಮಾಜದ ನಾಯಕಿ

ಇನ್ನೊಂದೆಡೆ, ಸಾತ್ವಿಕಾ ಸಾಮಾ ಜೀವನ ಪಥವೂ ಅಷ್ಟೇ ಪ್ರೇರಣಾದಾಯಕ. ಜೂನಿಯರ್ ಹಂತದ ನಂತರ ಅವರು ವೃತ್ತಿಪರ ಟೆನಿಸ್‌ನಲ್ಲಿ ಉತ್ತಮ ಸಾಧನೆ ಮಾಡಿ, 20ನೇ ವಯಸ್ಸಿನಲ್ಲಿ ಡಬ್ಲ್ಯುಟಿಎ ಸಿಂಗಲ್ಸ್ ಶ್ರೇಯಾಂಕದಲ್ಲಿ 809ನೇ ಸ್ಥಾನಕ್ಕೇರಿದ್ದರು. 2019ರ ದಕ್ಷಿಣ ಏಷ್ಯನ್ ಕ್ರೀಡಾಕೂಟದಲ್ಲಿ ಭಾರತದ ಪರ ಮಹಿಳಾ ಸಿಂಗಲ್ಸ್ ಸ್ವರ್ಣ ಪದಕ ಗೆದ್ದು ತಮ್ಮ ಕ್ರೀಡಾ ಜೀವನದ ಅತ್ಯುನ್ನತ ಸಾಧನೆಯನ್ನು ದಾಖಲಿಸಿದರು. ಇಂದು, 26 ವರ್ಷದ ಸಾತ್ವಿಕಾ ಸಾಮಾ ಇನ್ನೂ ಸೇವೆಯಲ್ಲಿದ್ದಾರೆ. ಆದರೆ ವಿಭಿನ್ನ ಸಮವಸ್ತ್ರದಲ್ಲಿ. ಅವರು ಸಾರ್ವಜನಿಕ ಸೇವೆಗೆ ಪ್ರವೇಶಿಸಿ, ಪ್ರಸ್ತುತ ತೆಲಂಗಾಣದಲ್ಲಿ ಜಿಲ್ಲಾ ಪೊಲೀಸ್ ಉಪ ವರಿಷ್ಠೆ (ಡಿಎಸ್‌ಪಿ) ಆಗಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ.

ಸ್ಯಾಫ್ ಮಹಿಳಾ ಫುಟ್‌ಬಾಲ್ ಚಾಂಪಿಯನ್‌ಶಿಪ್ 2026

ಭಾರತ ವನಿತೆಯರಿಗೆ 6ನೇ ಕಪ್

ಮಡಗಾಂವ್: ಭಾರತ ಮಹಿಳಾ ಫುಟ್‌ಬಾಲ್ ತಂಡವು ಸ್ಯಾಫ್ ಮಹಿಳಾ ಚಾಂಪಿಯನ್‌ಶಿಪ್ ಪ್ರಶಸ್ತಿಯನ್ನು ಆರನೇ ಬಾರಿ ತನ್ನದಾಗಿಸಿಕೊಂಡಿದ್ದು, ಏಳು ವರ್ಷಗಳ ಬಳಿಕ ಮತ್ತೆ ಚಾಂಪಿಯನ್ ಪಟ್ಟ ಅಲಂಕರಿಸಿದೆ. ಶನಿವಾರ ನಡೆದ ಫೈನಲ್‌ನಲ್ಲಿ ಬಾಂಗ್ಲಾದೇಶವನ್ನು 3-1 ಗೋಲುಗಳಿಂದ ಮಣಿಸಿ ಆತಿಥೇಯರು ಭರ್ಜರಿ ಜಯ ಸಾಧಿಸಿದರು.

ಭಾರತದ ಪರವಾಗಿ ಪ್ಯಾರಿ ಷಾಕ್ಸಾ (42ನೇ ನಿಮಿಷ), ಸ್ಯಾನ್‌ಫಿಡಾ ನೊಂಗ್ರಮ್ (46ನೇ ನಿಮಿಷ) ಮತ್ತು ಲಿಂಡಾ ಕೋಮ್ ಸೆರ್ಟೋ (82ನೇ ನಿಮಿಷ) ಗೋಲು ಗಳಿಸಿದರು. ಹಾಲಿ ಚಾಂಪಿಯನ್ ಬಾಂಗ್ಲಾದೇಶದ ಪರ ರಿತು ಪೋರ್ಣಾ ಚಕ್ಮಾ (45+2ನೇ ನಿಮಿಷ) ಏಕೈಕ ಗೋಲು ದಾಖಲಿಸಿದರು. ಗುಂಪು ಹಂತದಲ್ಲಿಯೂ ಇದೇ ಎದುರಾಳಿಯನ್ನು 3-0 ಅಂತರದಿಂದ ಸೋಲಿಸಿದ್ದ ಭಾರತ, ಟೂರ್ನಿಯುದ್ದಕ್ಕೂ ಸಂಪೂರ್ಣ ಪ್ರಾಬಲ್ಯ ಮೆರೆದಿತು. ಎಲ್ಲಾ ಪಂದ್ಯಗಳಲ್ಲೂ ಗೆಲುವು ಸಾಧಿಸಿದ ಭಾರತ 18 ಗೋಲುಗಳನ್ನು ಬಾರಿಸಿದ್ದು, ಕೇವಲ ಒಂದು ಗೋಲು ಮಾತ್ರ ಬಿಟ್ಟುಕೊಟ್ಟಿತು. ಆರಂಭಿಕ ಪಂದ್ಯದಲ್ಲಿ ಮಾಲ್ಡೀವ್ಸ್ ವಿರುದ್ಧ 11-0 ಅಂತರದ ಭರ್ಜರಿ ಜಯ ದಾಖಲಿಸಿದ್ದ ಭಾರತ, ಬಳಿಕ ಬಾಂಗ್ಲಾದೇಶವನ್ನು 3-0 ಅಂತರದಿಂದ ಮಣಿಸಿ ಬಿ ಗುಂಪಿನಲ್ಲಿ ಅಗ್ರಸ್ಥಾನ ಪಡೆದಿತ್ತು. ಟೂರ್ನಿಯಲ್ಲಿ ಭಾರತದ ಯಶಸ್ಸಿಗೆ ಪ್ರಮುಖ ಪಾತ್ರ ವಹಿಸಿದ ಅವೇಕಾ ಸಿಂಗ್ ನಾಲ್ಕು ಗೋಲುಗಳೊಂದಿಗೆ ಅಗ್ರ ಸ್ಕೋರರ್ ಪ್ರಶಸ್ತಿ ಪಡೆದರು. ಸ್ಯಾನ್‌ಫಿಡಾ ನೊಂಗ್ರಮ್ ಅತ್ಯಂತ ಮೌಲ್ಯಯುತ ಆಟಗಾರ್ತಿ ಪ್ರಶಸ್ತಿಗೆ ಭಾಜನರಾದರೆ, ಪಂಥೋಯ್ ಚಾನು ಎಲಾಂಗ್‌ಬಾಮ್ ಅತ್ಯುತ್ತಮ ಗೋಲ್‌ಕೀಪರ್ ಪ್ರಶಸ್ತಿ ಪಡೆದರು.



7 ವರ್ಷಗಳ ಬಳಿಕ ಪ್ರಶಸ್ತಿ

ಸತತ ಐದು ಬಾರಿ ಪ್ರಶಸ್ತಿ ಗೆದ್ದಿದ್ದ ಭಾರತ ಕಳೆದ ಎರಡು ಆವೃತ್ತಿಗಳಲ್ಲಿ ಫೈನಲ್ ತಲುಪಲೂ ವಿಫಲವಾಗಿತ್ತು. 2022 ಹಾಗೂ 2024ರಲ್ಲಿ ಬಾಂಗ್ಲಾದೇಶ ಪ್ರಶಸ್ತಿ ಗೆದ್ದಿತ್ತು. ಭಾರತ ಕೊನೆಯದಾಗಿ 2019ರಲ್ಲಿ ಚಾಂಪಿಯನ್ ಆಗಿತ್ತು. ಅದಕ್ಕೂ ಮುನ್ನ 2010, 2012, 2014, 2016ರಲ್ಲೂ ಭಾರತ ವನಿತೆಯರೇ ಚಾಂಪಿಯನ್ ಆಗಿದ್ದರು. ಭಾರತದ ಐತಿಹಾಸಿಕ ಗೆಲುವಿಗೆ ಸಂಭ್ರಮ ವ್ಯಕ್ತಪಡಿಸಿದ ಪ್ರಧಾನಿ ನರೇಂದ್ರ ಮೋದಿ, ಭಾರತ ತಂಡವನ್ನು ಅಭಿನಂದಿಸಿದ್ದಾರೆ.

ನಿವೃತ್ತಿ ಘೋಷಿಸಿದ ಗ್ರೇಸ್!



ಇದೇ ಸಂಭ್ರಮದ ಸಮಯದಲ್ಲಿ ಅನುಭವಿ ಆಟಗಾರ್ತಿ ಗ್ರೇಸ್ ಡಾಂಗ್‌ಮೆಯಿ ಅಂತಾರಾಷ್ಟ್ರೀಯ ಫುಟ್ಬಾಲ್‌ನಿಂದ ನಿವೃತ್ತಿ ಘೋಷಿಸಿದರು. 2013ರಲ್ಲಿ ಪದಾರ್ಪಣೆ ಮಾಡಿದ್ದ ಗ್ರೇಸ್, 24 ಅಂತಾರಾಷ್ಟ್ರೀಯ ಗೋಲ್‌ಗಳನ್ನು ಸ್ಕೋರ್ ಮಾಡಿದ್ದಾರೆ. 3 ಸ್ಯಾಫ್ ಮಹಿಳಾ ಚಾಂಪಿಯನ್ ಮತ್ತು 2 ದಕ್ಷಿಣ ಏಷ್ಯಾ ಸ್ವರ್ಣ ಗೆದ್ದ ತಂಡಗಳ ಸದಸ್ಯೆಯಾಗಿದ್ದರು.




ನಾರ್ವೆ ಚೆಸ್ 2026 ಚಾಂಪಿಯನ್ಸ್

ನಾರ್ವೆ ಚೆಸ್ ಟ್ರೋಫಿಯೊಂದಿಗೆ ಪುರುಷರ ವಿಭಾಗದ ಚಾಂಪಿಯನ್ ಪ್ರಜ್ಞಾನಂದ (ಭಾರತ) ಮತ್ತು ಮಹಿಳಾ ವಿಭಾಗದ ಚಾಂಪಿಯನ್ ಬಿಬಿಸಾರ ಅಸ್ಸಾವುಬಯೇವ (ಕಜಕಿಸ್ತಾನ).

ಪದಬಂಧ

ರಾಜಾ ಸಂಗಮೇಶ ಹಿರೇಮಠ

6008



6007 ಉತ್ತರ

ಎಡದಿಂದ ಬಲಕ್ಕೆ:
2.ಮೆಲ್ಲುಸಿರು 4.ಹರ
5.ಚತುರ 6.ತರುಣಾತಪ
9.ಕಿರುಗೆಜ್ಜೆ 10.ದೇವದಾಸ
13.ದಶಾವತಾರ
15.ಜಹಜು 17.ಜೋಕೆ
18.ಕಾಸದಾರ

ಮೇಲಿನಿಂದ ಕೆಳಕ್ಕೆ :
1.ಮಂಚ 2.ಮೆರವಣಿಗೆ
3.ಸಿರಿತನ 4.ಹರಿತ
7.ಪರಿಸರ 8.ಬಾಕಿದಾರ
11.ವಜ್ರಪಂಜರ
12.ಮಂದಹಾಸ
14.ತಾಳಿಕೆ 16.ಜುಟ್ಟು

ಎಡದಿಂದ ಬಲಕ್ಕೆ
1.ಪತ್ರಿಕೆಯಲ್ಲಿನ ಉದ್ದನೆಯ ಸಾಲು (3)
4.ದಾಖಲೆ ಮಾಡು-ನೋಂದಾಯಿಸು (3)
6.ಕೀಳುಮಟ್ಟದ ಕಾವ್ಯ ರಚಿಸುವವನು (3)
8.ಹಾಸಿಗೆ-ಚಾಪೆ ಮುಂತಾದವು (4)
9.ಮಸಾಲೆ ಬೆರೆತ ಬೇಯಿಸಿದ ಅಕ್ಕಿ (4)
11.ಮೇರಿ ನಡುವೆ ಇರುವ ಸಂಯುಕ್ತ ಸಂಸ್ಥಾನ (4)
13.ಬ್ರಿಟಿಷರು ಸ್ವಾತಂತ್ರ್ಯ ಯೋಧರಿಗೆ ನೀಡುತ್ತಿದ್ದ ಕಠಿಣ ಶಿಕ್ಷೆ (4)
15.ಕುರು ಸಾಮ್ರಾಜ್ಯದ ಪ್ರಧಾನಮಂತ್ರಿ ತಿರುಗಿದ್ದಾನೆ (3)
17.ಅಂದವಾಗಿ ಕಾಣುತ್ತಿರುವ ಪಲ್ಲಕ್ಕಿ (3)
18.ಈತ ವಿದ್ಯೆ ಕಲಿಸುವವನು (3)

ಮೇಲಿನಿಂದ ಕೆಳಕ್ಕೆ
2.ಕೈಯಲ್ಲಿ ಹಿಡಿದಿರುವ ಕತ್ತಿಯಿದು (4)
3.ಬದುಕು-ಕಾರ್ಯಗಳಿಗೆ ಬರುವ ಅಡೆತಡೆಗಳು (3)
5.ಹೇಳಿಕೊಳ್ಳಲಾಗದ ತೊಂದರೆ-ಹಿಂಸೆ (4)
6.ಹೂವುಗಳಿಂದ ತುಂಬಿದ ಸ್ಥಳ (5)
7.ಹಾಸ್ಯದ ಮೂಲಕ ವಿಡಂಬನೆ ಮಾಡುವ ಕಬ್ಬಿಗ (5)
8.ದೇವರಮೂರ್ತಿಗೆ ಮಾಡುವ ಪೂಜೆ ತಲೆಕೆಳಗಾಗಿದೆ (3)
10.ಮಿತಿಮೀರುತ್ತಿರುವ ಸೊಕ್ಕು (3)
12.ಮೋಡದ ಘರ್ಜನೆಯಾದ ರಾವಣಸುತ (4)
14.ಕಪ್ಪುಗೊರಲದ ಮತ್ತೊಂದು ಹೆಸರು (4)
16.ಎರಡರಷ್ಟು-ಇಮ್ಮಡಿಯಿದು (3)

ಮನಸ್ಸಿಗೆ ಹಿಡಿ-ತಪಾಸಣೆಯ ಕನ್ನಡಿ

ದೇಹಕ್ಕೆ ಹೇಗೆ ಶಿಕ್ಷಣ ಮುಖ್ಯವೋ ಹಾಗೆ ಮನಸ್ಸಿಗೂ ಅವಶ್ಯ, ದೇಹಕ್ಕೆ ಹೇಗೆ ವ್ಯಾಯಾಮ ಅಗತ್ಯವೋ ಹಾಗೆ ಮನಸ್ಸಿಗೂ ಅವಶ್ಯ

ಆಪ್ತ ಸಲಹೆ
ಉದಯಶಂಕರ ಪದ್ಯಾಣ
ಆಪ್ತ ಸಮಾಲೋಚಕರು

ನಿಯಮಿತ ಕಾಲದಲ್ಲಿ ಮಾನಸಿಕ ಆರೋಗ್ಯವನ್ನು ಪರೀಕ್ಷಿಸಿ ಸಲಹೆ ಪಡೆದುಕೊಂಡು ಅಗತ್ಯದ ಬದಲಾವಣೆಗಳನ್ನು ಮಾಡಿಕೊಂಡರೆ ಒಳ್ಳೆಯದು.

ದೈಹಿಕ ಆರೋಗ್ಯಕ್ಕಾಗಿ ವಾರ್ಷಿಕವಾಗಿ ವೈದ್ಯಕೀಯ ಪರೀಕ್ಷೆಗಳನ್ನು ಮಾಡುವಂತೆ ಭಾವನೆಗಳನ್ನು ಮತ್ತು ಮನಸ್ಸಿನ ಯೋಚನೆಗಳನ್ನು ದೃಢ ಮಾಡಿಕೊಳ್ಳಲು ಬೇಕಾಗುವ ಸಲಹೆ ಸೂಚನೆಗಳನ್ನು ಪಡೆದುಕೊಂಡರೆ ಉತ್ತಮ .

ಇದರಿಂದ ನಮ್ಮ ಆರೋಗ್ಯ, ನಮ್ಮ ಕುಟುಂಬದವರೊಂದಿಗೆ ನಮ್ಮ ಸಂಬಂಧ ಸಾಮಾಜಿಕವಾಗಿ ನಮ್ಮ ವ್ಯಕ್ತಿತ್ವ ಸುಗಮವಾಗಿ ಬೆಳೆಯಲು ಸಾಧ್ಯವಿದೆ. ಆದರೆ ಈ ತರಹ ಸಲಹೆ ಸೂಚನೆಗಳನ್ನು ನಾವು ಮುಂಚಿತವಾಗಿ ಯಾಕೆ ಪಡೆದುಕೊಳ್ಳುತ್ತಿಲ್ಲ?

ಆಪ್ತ ಸಲಹೆಯಿಂದ ಮಾಡಿದ ಬದಲಾವಣೆಗಳಿಂದ ನನ್ನ ಹಿತಾಸಕ್ತಿಗೆ ತೊಂದರೆಯಾಗುತ್ತದೆ ಎಂದು ತಪ್ಪು ತಿಳಿವಳಿಕೆಯಿಂದ ಹಲವಾರು ಜನರು ಆಪ್ತ ಸಲಹೆಗೆ ಒಪ್ಪುವುದಿಲ್ಲ. ಮತ್ತು ಮೊದಲು ತೆಗೆದುಕೊಂಡ ಆಪ್ತ ಸಹಾಯದ ಬಗ್ಗೆ ಅಷ್ಟು ಫಲಪ್ರದವಾಗದ ಅನುಭವಗಳು ಇದ್ದರೆ ಅವನು ಮತ್ತೆ ಆಪ್ತ ಸಲಹೆಯನ್ನು ತೆಗೆದುಕೊಳ್ಳುವಲ್ಲಿ ಆಸಕ್ತಿ ತೋರಿಸುವುದಿಲ್ಲ. ಇದರಲ್ಲಿ ಅಡ್ಡಿಪಡುವ ಮುಖ್ಯ ಕಾರಣವೆಂದರೆ ಮಾನಸಿಕ ಅನಾರೋಗ್ಯದ ಬಗ್ಗೆ ಇರುವ ಕಳಂಕ ಅಥವಾ ಅಸ್ಪೃಶ್ಯತೆಯ ಭಾವ. ಈ ಹಿಂಜರಿಕೆಯನ್ನು ಮಾಡದೆ ನಾವು ಮಾನಸಿಕ ಆರೋಗ್ಯದ ಬಗ್ಗೆ ಸಲಹೆಗಳನ್ನು ತೆಗೆದುಕೊಳ್ಳುವುದು ಅಗತ್ಯ. ತೊಂದರೆಗಳು ಸಣ್ಣಪುಟ್ಟವಾದರೂ ಅವುಗಳನ್ನು ಮೊದಲ ಹಂತದಲ್ಲಿ ಸರಿಪಡಿಸುವುದು ಮುಖ್ಯ.ಇದರಿಂದಾಗಿ ಅವು ಮುಂದೆ ದೊಡ್ಡ ತೊಂದರೆಯಾಗದೆ ಇರಲಿಕ್ಕೆ ಸಾಧ್ಯವಿದೆ.

ಇಂದಿನ ಅವಿಭಕ್ತ ಕುಟುಂಬ, ಮೊಬೈಲ್ ನ ಆಕರ್ಷಣೆ ಮತ್ತು ನಗರ ಜೀವನದ ಸ್ವಾಭಾವಿಕ ತೊಂದರೆಗಳ ಪರಿಣಾಮವಾಗಿ ಆತಂಕ ಮತ್ತು ಒತ್ತಡಗಳು ಜೀವನದ ಅವಿಭಾಜ್ಯ ಅಂಗವಾಗಿಬಿಟ್ಟಿವೆ.

ಮಾನಸಿಕ ಆರೋಗ್ಯಕ್ಕಾಗಿ ಸಲಹೆ ಸೂಚನೆಗಳನ್ನು ಪಡೆಯುವವರನ್ನು ಹುಚ್ಚರೆಂದೇನೂ ತಿಳಿಯಬೇಕಾಗಿಲ್ಲ. ಒಂದರ್ಥದಲ್ಲಿ ನಾವೆಲ್ಲರೂ ಹುಚ್ಚರು, ಕೆಲವರು ಹೆಚ್ಚು ಮತ್ತೆ ಕೆಲವರು ಕಡಿಮೆ ಎಂದಷ್ಟೇ ಎಂಬ ಅರಿವಿರಬೇಕು. ಎಂತವನೇ ಆದರೂ ಮನುಷ್ಯನಿಗೆ ಕೋಪ ತಾಪಗಳಿರುವುದು ಬೇಸರ ದುಮ್ಮಾನ ಗಳಿರುವುದು, ಸ್ವಲ್ಪಮಟ್ಟಿನ ಆತಂಕ ಮತ್ತು ಖಿನ್ನತೆ ಇರುವುದು ಸಹಜ. ಕೆಲವರಿಗೆ ಮಾತ್ರ ಅದು ಬಹಳ ಬೇಗನೆ ದುಷ್ಪರಿಣಾಮಗಳನ್ನು ಉಂಟುಮಾಡಬಹುದು. ಇಷ್ಟೆಲ್ಲಾ ಸೌಲಭ್ಯಗಳಿದ್ದರೂ ಮಾನಸಿಕ ಆರೋಗ್ಯವನ್ನು ಉತ್ತಮಪಡಿಸುವ ಬಗ್ಗೆ ಹೆಚ್ಚಿನವರು ಗಮನ ಕೊಡುವುದಿಲ್ಲ. ಈಗ ತುರ್ತಾಗಿ ಇದರ ಬಗ್ಗೆ ನಾವು ಗಮನಹರಿಸಿ ನಮ್ಮ ದೈಹಿಕ ಆರೋಗ್ಯದೊಂದಿಗೆ ಮಾನಸಿಕ ಆರೋಗ್ಯದ ಸ್ಥಿತಿಯ ಬಗ್ಗೆ ಪರೀಕ್ಷೆ ಮಾಡಿಕೊಳ್ಳಲೇಬೇಕು. ಇದಕ್ಕೆ ನಮ್ಮಲ್ಲಿ ಒಂದು ನಿರ್ದಿಷ್ಟ ಛಲ ಬೇಕು. ನನ್ನ ಜೀವನವನ್ನು ನಾನು ಇನ್ನೂ ಸುಗಮಗೊಳಿಸಬೇಕು, ನನ್ನನ್ನು ನಾನು ಇನ್ನೂ ಹೆಚ್ಚು ತಿಳಿದುಕೊಳ್ಳಬೇಕು,ಆಗ ಮಾತ್ರ ನಾನು ನನ್ನ ಜೀವನದಲ್ಲಿ ಹೆಚ್ಚಿನ ಸಂತೋಷವನ್ನು ಕಾಣಬಹುದು ಎಂದೆಲ್ಲಾ ಧನಾತ್ಮಕವಾಗಿ ಯೋಚನೆ ಮಾಡುವುದನ್ನು ಅಭ್ಯಾಸ ಮಾಡಬೇಕು.

ಇವತ್ತಿನ ಧಾವಂತದ ಜೀವನದಲ್ಲಿ, ಬೇರೆ ಬೇರೆ ಸಂಸ್ಥೆಗಳಲ್ಲಿ ಕೆಲಸ ಮಾಡುವ ಸಂದರ್ಭದಲ್ಲಿ ಇದಕ್ಕೆ ಬೇಕಾದ ಆಪ್ತ ಸಲಹೆಗಳು ನಾವು ಕೆಲಸ ಮಾಡುವ ಪರಿಸರದಲ್ಲಿ ಲಭ್ಯವಿರುತ್ತದೆ. ಆಯಾಯ ಸಂಸ್ಥೆಗಳು ಇದನ್ನು ವ್ಯವಸ್ಥೆ ಮಾಡಿರುತ್ತಾರೆ.

ಕೆಲವು ಸಂಸ್ಥೆಗಳು ನಮ್ಮ ಸ್ವಾಟ್ ಅನಾಲಿಸಿಸ್‌ನಂತಹ ಪ್ರಕ್ರಿಯೆಗಳಿಂದ ತಮ್ಮನ್ನು ತಾವು ತಿಳಿದುಕೊಳ್ಳುವದರಲ್ಲಿ ಸಹಾಯ ಮಾಡುತ್ತಾರೆ. ಇದೇ ರೀತಿಯಲ್ಲಿ ಸೈಕೋಮೆಟ್ರಿಕ್ ಟೆಸ್ಟ್ ಎನ್ನುವ ಪರೀಕ್ಷೆ ಕೂಡ ನಮ್ಮ ಪ್ರಕೃತಿದತ್ತವಾದ ಸಾಮರ್ಥ್ಯ ಮತ್ತು ನೆಲೆಯನ್ನು ಕಂಡುಕೊಳ್ಳಲು ಸಹಾಯ ಮಾಡುತ್ತದೆ. ಇಂತಹ ಸೌಲಭ್ಯ ಇಲ್ಲದವರು ಸುಲಭವಾಗಿ ಲಭ್ಯವಿರುವ ಆಪ್ತ ಸಮಾಲೋಚನೆಯ ಸಹಾಯವಾಣಿಯೊಂದಿಗೆ ಸಹಾಯ ಪಡೆಯಕೊಳ್ಳಬಹುದು.

ಪುರಂದರ ದಾಸರ ಜನಪ್ರಿಯ ಕೀರ್ತನೆ
''ಸ್ನಾನವ ಮಾಡಿರೋ ಜ್ಞಾನತೀರ್ಥದಲ್ಲಿ?'' ನೀವೆಲ್ಲ ಕೇಳಿರಬಹುದು. ಅದರಲ್ಲಿನ ಒಂದು ಸಾಲು ಈ ರೀತಿ ಇದೆ
''ತನ್ನೊಳು ತಾನೇ ತಿಳಿದರೊಂದು ಸ್ನಾನ''.

ಅಂದರೆ ಧ್ಯಾನ ಪೂಜೆ ಮತ್ತುಸೇವೆಯ ಮೂಲಕ ನಮ್ಮನ್ನು ನಾವೇ ಅರಿತುಕೊಂಡು ಸುಧಾರಿಸುವುದು ಸನಾತನ ಮಾರ್ಗ.

ಅದಕ್ಕಾಗಿರುವ ಇನ್ನೊಂದು ಸದ್ಯದ ಸುಲಭದ ದಾರಿ ಆಪ್ತ ಸಲಹೆ. ಇದರ ಮೂಲಕವೂ ನಮ್ಮನ್ನು ನಾವು ಇನ್ನೊಬ್ಬರ ಸಹಾಯದಿಂದ ಅರಿತು ಬೆಳಗಬಹುದು. ಜೀವನದಲ್ಲಿ ನಾವು ನಿರಂತರವಾದ ಗುಣಾತ್ಮಕವಾದ ಬದಲಾವಣೆಗಳನ್ನು ಮಾಡದಿದ್ದರೆ ನಮ್ಮ ಜೀವನ ಅಧೋಗತಿಗೆ ಹೋಗುವ ಸಾಧ್ಯತೆ ಇದೆ. ನಮ್ಮ ಜೀವನದ ಗುಣಮಟ್ಟ ತಗ್ಗುವ ಸಾಧ್ಯತೆಗಳಿವೆ. ಇನ್ನೊಂದು ಸನ್ನಿವೇಶದಲ್ಲಿ ಪ್ರಾಯಕ್ಕೆ ಬಂದ ಮಕ್ಕಳು ಮದುವೆ ಮಾಡಿಕೊಳ್ಳಲು ತಯಾರಿರುವುದಿಲ್ಲ. ಮದುವೆಯಿಂದ ತಮ್ಮ ಸ್ವಾತಂತ್ರ್ಯ ಕಳೆದುಹೋಗುತ್ತದೆ ಎಂಬ ಕಪೋಲ ಕಲ್ಪಿತ ಯೋಚನೆಯಲ್ಲಿ ಇರುತ್ತಾರೆ.

ಅವರ ಮನಸ್ಸಿನಾಳದಲ್ಲಿ ತನಗೆ ಮದುವೆ ಬೇಡ ಎಂದು ಇರುವುದಿಲ್ಲ. ಇಲ್ಲಿಯೂ ಮನೆಯವರೆಲ್ಲ ಸೇರಿ ಆಪ್ತ ಸಮಾಲೋಚನೆ ಮಾಡಿಕೊಂಡರೆ ಸಹಾಯವಾಗಬಹುದು.

ಇಂದಿನ ಸಂದರ್ಭದಲ್ಲಿ ಎಷ್ಟೋ ಕುಟುಂಬಗಳು ಆಪ್ತ ಸಲಹೆಯ ಮೂಲಕ ತಮ್ಮ ತೊಂದರೆಗಳಿಗೆ ಸಮಾಧಾನ ಪಡೆದುಕೊಂಡು ಸುಖ ಜೀವನವನ್ನು ನಡೆಸುತ್ತಿದ್ದಾರೆ.

ದೇಹಕ್ಕೆ ಹೇಗೆ ಶಿಕ್ಷಣ ಮುಖ್ಯ ಮನಸ್ಸಿಗೂ ಶಿಕ್ಷಣ ಅಗತ್ಯ. ದೇಹಕ್ಕೆ ಹೇಗೆ ವ್ಯಾಯಾಮ ಅಗತ್ಯವು ಹಾಗೆ ಮನಸ್ಸಿಗೂ ಬೇಕು.

ಎಲ್ಲಾ ದೃಷ್ಟಿಯಿಂದ ಮಾನಸಿಕ ಆರೋಗ್ಯವನ್ನೇ ದೃಷ್ಟಿಯಲ್ಲಿ ಇಟ್ಟುಕೊಂಡು ನಿರ್ದಿಷ್ಟ ಅವಧಿಯಲ್ಲಿ ನಮ್ಮ ಜೀವನ ಕ್ರಮವನ್ನು ಆಪ್ತ ಸಲಹಾಕಾರದೊಂದಿಗೆ ಸಮಾಲೋಚಿಸುವುದು ಉಪಯೋಗಿ ಪ್ರಕ್ರಿಯೆ.

ಕಿರುಸುದ್ದಿ

ಕಾಮಧೇನು ಕಲ್ಪವೃಕ್ಷ ಪೂಜೆ

• **ಮುಂಡರಗಿ:** ಪಟ್ಟಣದ ಶ್ರೀ ಕನ್ನಿಕಾಪರಮೇಶ್ವರಿ, ನಗರೇಶ್ವರ ದೇವಸ್ಥಾನದಲ್ಲಿ ಅಧಿಕ ಮಾಸದ ಪ್ರಯುಕ್ತ ವಾಸವಿ ಮಹಿಳಾ ಮಂಡಳದ ವತಿಯಿಂದ ಕಾಮಧೇನು ಕಲ್ಪವೃಕ್ಷ ಪೂಜಾ ಕಾರ್ಯಕ್ರಮವನ್ನು ವಿಶೇಷವಾಗಿ ನಡೆಸಲಾಯಿತು.

33ದಂಪತಿ ಧಾನ್ಯಗಳಿಂದ ಕೂಡಿದ ಬಾಗಿನವನ್ನು ಬಳಿಪೂಜೆ ನೆರವೇರಿಸಲಾಯಿತು. ಕಾಮಧೇನು ಕಲ್ಪವೃಕ್ಷ ಪೂಜೆಯೊಂದಿಗೆ ಉಡಕ್ಕಿ ಕಾರ್ಯಕ್ರಮವನ್ನು ಮತ್ತು 102ನೇ ಪಲ್ಲಕ್ಕಿ ಸೇವೆ ಸೇರಿ ವಿವಿಧ ಪೂಜಾ ಕಾರ್ಯಗಳು ನಡೆದವು. ವಿಶ್ವನಾಥಭಟ್ ಜೋಶಿ, ವಿನೂತಾ ಜೋಶಿ ಪೂಜಾ ಕೈಂಕರ್ಯ ನಡೆಸಿಕೊಟ್ಟರು. ವಾಸವಿ ಮಹಿಳಾ ಮಂಡಳದ ಅಧ್ಯಕ್ಷೆ ಸ್ವಾತಿ ಅಳವಂಡಿ, ಕಾಮಾಕ್ಷಿ ಹೆಗ್ಗಡಾಳ, ಸೀತಾ ಕಾಲವಾಡ, ಮೀನಾಕ್ಷಮಣಿ ಇಲ್ಲೂರ, ಉಷಾರಾಣಿ ಹೆಗ್ಗಡಾಳ, ಸುರೇಖಾ ಹೆಗ್ಗಡಾಳ, ಭಾಗ್ಯಲಕ್ಷ್ಮೀ ಗುಡ್ಡದ, ಅನಸೂಯಾ ಹೊನ್ನಳ್ಳಿ, ಶೃತಿ ಹೆಗ್ಗಡಾಳ, ಭಾರತಿ ನಾರಾಯಣಕೇರಿ, ಶುಭ ಅಳವಂಡಿ, ರೇಖಾ ಅಳವಂಡಿ, ವೀಣಾ ಜವಳಗೇರಿ, ನಂದಿನಿ ಹೆಮ್ಮಾದ್ರಿ, ಶರಣಮ್ಮ ಕಾಲವಾಡ, ವಿಜಯಲಕ್ಷ್ಮೀ ತಾವರಗೇರಿ, ಸುನಂದಾ ತಾವರಗೇರಿ, ಅರ್ಯವೈಶ್ಯ ಸಮಾಜದ ಅಧ್ಯಕ್ಷ ಗುರುರಾಜ ಕಾಲವಾಡ, ಉಪಾಧ್ಯಕ್ಷ ಗೋವಿಂದರಾಜ ಹೆಗ್ಗಡಾಳ, ಸಾಯಿನಾಥ ಅಳವಂಡಿ, ಮಂಜುನಾಥ ಗುಡ್ಡದ, ಪಾಂಡುರಂಗ ಅಳವಂಡಿ, ಪ್ರಶಾಂತ ತಾವರಗೇರಿ, ಜಗನ್ನಾಥ ಅಳವಂಡಿ, ರಾಜಕುಮಾರ ಹೆಗ್ಗಡಾಳ, ವಾಸು ಇಲ್ಲೂರ ಇತರರಿದ್ದರು.

ಅರ್ಜಿ ಆಹ್ವಾನ

• **ಗದಗ:** ಜಿಲ್ಲೆಗೆ ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಲೆಮಾರಿ ಅಭಿವೃದ್ಧಿ ನಿಗಮದಿಂದ ವಸತಿ ಯೋಜನೆಯಡಿ ಒಟ್ಟು 225 ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಅರ್ಜಿ ಸಲ್ಲಿಸಲು ಜೂ. 20 ಕೊನೆಯ ದಿನವಾಗಿದೆ. ಅರ್ಜಿ ಫಾರ್ಮ್, ನಿವೇಶನ ಹೊಂದಿರುವ ಬಗ್ಗೆ ಹಕ್ಕುಪತ್ರ/ಪೂರಕ ದಾಖಲಾತಿ ಪ್ರತಿ, ಜಾತಿ ಮತ್ತು ಆದಾಯ ಪ್ರಮಾಣ ಪತ್ರ, ಆಧಾರ್‌ಕಾರ್ಡ್, ಇತ್ತೀಚಿನ ಭಾವಚಿತ್ರ, ಪಡಿತರಚೀಟಿ, ಮತದಾರರ ಗುರುತಿನ ಚೀಟಿ, ಬ್ಯಾಂಕ್ ಪಾಸ್‌ಬುಕ್ ಪ್ರತಿ, ದಾಖಲೆಗಳನ್ನು ಹೊಂದಿರಬೇಕು. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಲೆಮಾರಿ ಸಮುದಾಯದವರು ನಿವೇಶನ ಹೊಂದಿರುವ ಜಿಲ್ಲೆಯ ಸಂಬಂಧಪಟ್ಟ ತಾಲೂಕಿನ ಸಹಾಯಕ ನಿರ್ದೇಶಕರು ಸಮಾಜ ಕಲ್ಯಾಣ ಇಲಾಖೆ ಅರ್ಜಿ ನಮೂನೆ ಪಡೆಯಬೇಕು ಮತ್ತು ನಿಗದಿತ ದಿನಾಂಕದೊಳಗಾಗಿ ಅವಶ್ಯಕ ದಾಖಲೆಗಳೊಂದಿಗೆ ಮರಳಿ ಅರ್ಜಿಯನ್ನು ತಮ್ಮ ತಾಲೂಕಿನ ಸಹಾಯಕ ನಿರ್ದೇಶಕರು ಸಮಾಜ ಕಲ್ಯಾಣ ಇಲಾಖೆಗೆ ಸಲ್ಲಿಸಬೇಕು ಎಂದು ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕಿ ಡಾ.ನಂದಾ ಹಣಬರಟ್ಟಿ ತಿಳಿಸಿದ್ದಾರೆ.

ನೇರ ಸಂದರ್ಶನ

• **ಗದಗ:** ಜಿಲ್ಲಾ ಉದ್ಯೋಗ ವಿನಿಮಯ ಕಚೇರಿ ವತಿಯಿಂದ ಜೂ.11ರಂದು ಬೆಳಗ್ಗೆ 10ಕ್ಕೆ ನಗರದ ವಿವೇಕಾನಂದ ನಗರ 4ನೇ ಅಡ್ಡ ರಸ್ತೆ ಸಾಯಿ ಬಾಬಾ ದೇವಸ್ಥಾನ ಹಿಂದುಗಡೆ ಕೆ.ಎಚ್.ಬಿ ಕಾಲೋನಿಯಲ್ಲಿ ನೇರ ಸಂದರ್ಶನ ಹಮ್ಮಿಕೊಳ್ಳಲಾಗಿದೆ.

ನೇರ ಸಂದರ್ಶನದಲ್ಲಿ ಸ್ವತಂತ್ರ ಮೈಕ್ರೋಫಿನ್ ಪ್ರೈವೇಟ್ ಲಿಮಿಟೆಡ್ ಸಂಸ್ಥೆಯು ಭಾಗವಹಿಸಲಿದೆ. ಎಸ್.ಎಸ್.ಎಲ್.ಸಿ, ಪಿ.ಯು.ಸಿ, ಐಟಿಐ ಮತ್ತು ಯಾವುದೇ ಪದವಿ ಹೊಂದಿರಬೇಕು. 18 ರಿಂದ 30 ವಯಸ್ಸಿನೊಳಗಿರಬೇಕು. ಶಿರಹಟ್ಟಿ, ಮುಂಡರಗಿ, ಗದಗ, ಅಣ್ಣಿಗೇರಿ, ರೋಣ, ಗಜೇಂದ್ರಗಡದಲ್ಲಿ ಹುದ್ದೆಗಳು ಖಾಲಿ ಇವೆ. ಕಡ್ಡಾಯವಾಗಿ ಚಾಲನಾ ಪರವಾನಿಗಿ ಹಾಗೂ ದ್ವಿಚಕ್ರ ವಾಹನ ಹೊಂದಿರಬೇಕು.

ನೇರ ಸಂದರ್ಶನದಲ್ಲಿ ಪಾಲ್ಗೊಳ್ಳುವ ಅಭ್ಯರ್ಥಿಗಳು ತಮ್ಮ ವಿದ್ಯಾರ್ಹತೆಯ ಅಂಕಪಟ್ಟಿಗಳ ರೆಸ್ಯೂಮ್ ಪ್ರತಿಗಳು, 2 ರೆಸ್ಯೂಮ್(ಬಯೋಡಾಟಾ)ಪ್ರತಿಗಳು ಮತ್ತು ಆಧಾರ್ ಕಾರ್ಡ್ ಝರಾಕ್ಸ್‌ನೊಂದಿಗೆ ಭಾಗವಹಿಸಬಹುದು. ನೇರ ಸಂದರ್ಶನದಲ್ಲಿ ಭಾಗವಹಿಸಿದ ಅಭ್ಯರ್ಥಿಗಳಿಗೆ ನೋಂದಣಿ ಕಡ್ಡಾಯವಾಗಿದೆ ಹಾಗೂ ಯುವನಿಧಿ ಯೋಜನೆಯ ಫಲಾನುಭವಿಗಳು ಈ ನೇರ ಸಂದರ್ಶನದಲ್ಲಿ ಕಡ್ಡಾಯವಾಗಿ ಪಾಲ್ಗೊಳ್ಳಬೇಕು ಎಂದು ಜಿಲ್ಲಾ ಉದ್ಯೋಗಾಧಿಕಾರಿ ಬಸವರಾಜ ಪಿ.ಎನ್. ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅರ್ಜಿ ಆಹ್ವಾನ

• **ಗದಗ:** ಜಿಲ್ಲೆಯಲ್ಲಿ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವತಿಯಿಂದ ಮೊರಾರ್ಜಿ ದೇಸಾಯಿ, ಕಿತ್ತೂರು ರಾಣಿ ಚೆನ್ನಮ್ಮ, ಇಂದಿರಾಗಾಂಧಿ, ಡಾ.ಬಿ.ಆರ್.ಅಂಬೇಡ್ಕರ್, ಅಟಲ್ ಬಿಹಾರಿ ವಾಜಪೇಯಿ ವಸತಿ ಶಾಲೆ ಮತ್ತು ಕಾಲೇಜುಗಳಲ್ಲಿ ಖಾಲಿ ಇರುವ ಹುದ್ದೆಗಳಿಗೆ ಎದುರಾಗಿ ಅತಿಥಿ ಶಿಕ್ಷಕರು ಮತ್ತು ಉಪನ್ಯಾಸಕರನ್ನು ತಾತ್ಕಾಲಿಕವಾಗಿ ನೇಮಕ ಮಾಡಿಕೊಳ್ಳಲು ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ಜೂ.15 ಕೊನೆಯ ದಿನಾಂಕವಾಗಿದೆ. ಅತಿಥಿ ಉಪನ್ಯಾಸಕರ ಹುದ್ದೆಗೆ ಸಂಬಂಧಿಸಿದ ವಿಷಯದಲ್ಲಿ ಸ್ನಾತಕೋತ್ತರ ಪದವಿ, ಬಿ.ಇಡಿ ಶಿಕ್ಷಣ ಪಡೆದಿರಬೇಕು ಹಾಗೂ ಅತಿಥಿ ಶಿಕ್ಷಕರ ಹುದ್ದೆಗೆ ಸಂಬಂಧಿಸಿದ ವಿಷಯದಲ್ಲಿ ಪದವಿ, ಬಿ.ಇಡಿ, ಟಿ.ಇ.ಟಿ ಕಡ್ಡಾಯವಾಗಿ ಉತ್ತೀರ್ಣರಾಗಿರಬೇಕು. ಅತಿಥಿ ಉಪನ್ಯಾಸಕರ ಹುದ್ದೆಗೆ ಸ್ನಾತಕೋತ್ತರ ಪದವಿಯಲ್ಲಿ ಶೇ.50ರಷ್ಟು, ಬಿ.ಇಡಿ ಪದವಿಯಲ್ಲಿ ಶೇ.25ರಷ್ಟು, ತರಗತಿ ಪ್ರಾತ್ಯಕ್ಷಿಕೆ ಶೇ.15ರಷ್ಟು, ಕಾರ್ಯಾನುಭವಕ್ಕೆ ಪ್ರತಿ ವರ್ಷಕ್ಕೆ 1 ಅಂಕಗಳಂತೆ (ಆಯಾ ವರ್ಷದ ವಿಷಯಗಳ ಉತ್ತೀರ್ಣತೆಯ ಫಲಿತಾಂಶದ ಮೇಲೆ ಶೇಕಡಾವಾರು) ಗರಿಷ್ಠ 10 ವರ್ಷಗಳ ಕಾರ್ಯಾನುಭವಕ್ಕೆ 10 ಅಂಕಗಳ ಮಿತಿ ನಿಗದಿಗೊಳಿಸಿದೆ. ಅತಿಥಿ ಶಿಕ್ಷಕರ ಹುದ್ದೆಗೆ ಪದವಿಯಲ್ಲಿ ಶೇ.50ರಷ್ಟು ಬಿ.ಇಡಿ ಪದವಿಯಲ್ಲಿ ಶೇ.20ರಷ್ಟು, ಟಿ.ಇ.ಟಿ ಶೇ.15ರಷ್ಟು, ತರಗತಿ ಪ್ರಾತ್ಯಕ್ಷಿಕೆ ಶೇ.10ರಷ್ಟು, ಕಾರ್ಯಾನುಭವಕ್ಕೆ ಪ್ರತಿ ವರ್ಷಕ್ಕೆ 1 ಅಂಕಗಳಂತೆ (ಆಯಾ ವರ್ಷದ ವಿಷಯಗಳ ಉತ್ತೀರ್ಣತೆಯ ಫಲಿತಾಂಶದ ಮೇಲೆ ಶೇಕಡಾವಾರು) ಗರಿಷ್ಠ 5 ವರ್ಷಗಳ ಕಾರ್ಯಾನುಭವಕ್ಕೆ 5 ಅಂಕಗಳ ಮಿತಿ ನಿಗದಿಗೊಳಿಸಿದೆ. ಆಸಕ್ತ ಅಭ್ಯರ್ಥಿಗಳು ಅಗತ್ಯ ದಾಖಲೆಗಳೊಂದಿಗೆ ಗದಗ ಜಿಲ್ಲೆಯಲ್ಲಿ ಆಯ್ಕೆ ಬಯಸುವ ವಸತಿ ಶಾಲೆ/ಕಾಲೇಜಿನಲ್ಲಿ (ಒಂದಕ್ಕಿಂತ ಹೆಚ್ಚು ಶಾಲೆ/ಕಾಲೇಜಿಗೆ ಆಯ್ಕೆ ಬಯಸುವವರು ಪ್ರತ್ಯೇಕ ಅರ್ಜಿ) ಅರ್ಜಿ ಸಲ್ಲಿಸಬಹುದು ಎಂದು ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕಿ ನಂದಾ ಹಣಬರಟ್ಟಿ ತಿಳಿಸಿದ್ದಾರೆ.



ಮುಂಡರಗಿ: ಪಟ್ಟಣದ ಶ್ರೀ ಕನ್ನಿಕಾಪರಮೇಶ್ವರಿ, ನಗರೇಶ್ವರ ದೇವಸ್ಥಾನದಲ್ಲಿ ಅಧಿಕ ಮಾಸದ ಪ್ರಯುಕ್ತ ವಾಸವಿ ಮಹಿಳಾ ಮಂಡಳದ ವತಿಯಿಂದ ಕಾಮಧೇನು ಕಲ್ಪವೃಕ್ಷ ಪೂಜಾ ಕಾರ್ಯಕ್ರಮವನ್ನು ವಿಶೇಷವಾಗಿ ನಡೆಸಲಾಯಿತು.

ಜಿ.ಎಸ್.ಪಾಟೀಲರಿಗೆ ಸಚಿವ ಸ್ಥಾನ ನೀಡಿ



• **ರೋಣ:** ಶಾಸಕ ಜಿ.ಎಸ್.ಪಾಟೀಲರಿಗೆ ಈ ಬಾರಿ ಸಚಿವ ಸ್ಥಾನ ನೀಡದಿದ್ದರೆ ರೋಣ ತಾಲೂಕಿನ ಮುಸ್ಲಿಂಮರು ಕಾಂಗ್ರೆಸ್ಸಿನಿಂದ ದೂರ ಉಳಿಯಲಿದ್ದಾರೆ ಎಂದು ಅಂಜುಮನ್ ಸಂಸ್ಥೆ ಅಧ್ಯಕ್ಷ ಬಾವಾಸಾಬ ಬೆಟಗೇರಿ ಹೇಳಿದರು. ಅವರು ಭಾನುವಾರ ಅಂಜುಮನ್ ಸಂಸ್ಥೆಯ ಕಾರ್ಯಾಲಯದಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿ, ಈ ಕೂಡಲೇ ಜಿ.ಎಸ್.ಪಾಟೀಲರಿಗೆ ಸಚಿವ ಸ್ಥಾನ ನೀಡುವ ಮೂಲಕ ಸಾಮಾಜಿಕ ನ್ಯಾಯ ಒದಗಿಸಬೇಕು. ಇಲ್ಲದಿದ್ದರೆ ತಾಲೂಕಿನ ಮುಸ್ಲಿಂ ಸಮಾಜ ಮುಂಬರುವ ಎಲ್ಲ ಚುನಾವಣೆಗಳ ಮತದಾನದಿಂದ ದೂರ ಸರಿಯಲಿದೆ ಎಂದು ಎಚ್ಚರಿಸಿದರು. ಈ ಹಿಂದೆ ವಿವಿಧ ಅಭಿವೃದ್ಧಿ ಕಾರ್ಯಗಳಿಗೆ ಚಾಲನೆ ಹಾಗೂ ಗ್ಯಾರಂಟಿ ಫಲಾನುಭವಿಗಳ ರೋಣ ಮತಕ್ಷೇತ್ರದ ಸಮಾವೇಶಕ್ಕೆ ಅಂದಿನ ಸಿಎಂ ಸಿದ್ದರಾಮಯ್ಯ ಹಾಗೂ ಇಂದಿನ ಸಿಎಂ ಡಿ.ಕೆ.ಶಿವಕುಮಾರ ಆಗಮಿಸಿ ಶಾಸಕ ಜಿ.ಎಸ್.ಪಾಟೀಲ ಮಂತ್ರಿ ಸ್ಥಾನಕ್ಕೆ ಅರ್ಹರಾಗಿದ್ದು, ಅವರಿಗೆ ಸಚಿವ ಸಂಪುಟದಲ್ಲಿ ಅವಕಾಶ ಕಲ್ಪಿಸಲಾಗುವುದು ಎಂದಿದ್ದರು. ಈಗ ಇಬ್ಬರು ನಾಯಕರು ಸಾವಿರಾರು ಜನರ ಮುಂದೆ ಕೊಟ್ಟಿರುವ ಮಾತನ್ನು ಉಳಿಸಿಕೊಳ್ಳಬೇಕು ಎಂದು ಆಗ್ರಹಿಸಿದರು. ಅಬ್ದುಲ್‌ರೆಹಮಾನ್ ಗದಗ, ಖಲೀಲ ರಾಮದುರ್ಗ, ಮುಸ್ತಫಾ ಬೇಪಾರಿ, ದಸ್ತಗೀರ ಗಡವಾಲೆ, ಬಾಷಾಸಾಬ ಚಿನ್ನೂರ, ಜಾವೀದ ಮುಲ್ಲಾ, ಮಲೀಕ ಯಲಿಗಾರ, ಮೆಹಬೂಬಸಾಬ ಬಿಲ್ಲುಖಾನ್, ಅಬ್ದುಲ್‌ಸಾಬ ಹೊಸೂರ, ಮಕ್ತುಂಸಾಬ ಮುಲ್ಲಾ ಇತರರಿದ್ದರು.



ಗಜೇಂದ್ರಗಡ: ಸಮೀಪದ ಪುರ್ತಗೇರಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ವಿಶ್ವ ಪರಿಸರ ದಿನ ಆಚರಿಸಲಾಯಿತು. ಮುಖ್ಯ ಶಿಕ್ಷಕಿ ಆರ್.ಡಿ. ಹಿರೇಹಾಳ, ಶಾಲಾ ಮೇಲುಸ್ತುವಾರಿ ಸಮಿತಿ ಅಧ್ಯಕ್ಷ ಮಂಜುನಾಥ ನಲವಡೆ, ಆರ್.ಜಿ. ಮ್ಯಾಕಲ್, ಆರ್.ಕೆ. ಹುನಗುಂದ, ಎನ್.ಎ. ರೊಡ್ಡಾ, ಎಚ್.ಕೆ. ಮಾತಿನವರ, ಕೆ.ಎಲ್. ಬಾರಕೇರ ಇತರರಿದ್ದರು.

ರಸಗೊಬ್ಬರ ವಿತರಣೆಯಲ್ಲಿ ಅಕ್ರಮ ಸಹಿಸಲ್ಲ | ಜಿಲ್ಲಾಧಿಕಾರಿ ಎಚ್ಚರಿಕೆ

ಕೃತಕ ಅಭಾವ ಸೃಷ್ಟಿಸಿದರೆ ಕ್ರಮ

• **ಗದಗ:** ಪ್ರಸಕ್ತ ಸಾಲಿನ ಮುಂಗಾರು ಹಂಗಾಮು ಆರಂಭವಾಗುತ್ತಿದ್ದು, ಯಾವುದೇ ರಸಗೊಬ್ಬರ ಮಾರಾಟಗಾರರು ನಿಗದಿಗಿಂತ ಹೆಚ್ಚಿನ ದರ ವಸೂಲಿ ಮಾಡಿದರೆ ಅಥವಾ ಕೃತಕ ಅಭಾವ ಸೃಷ್ಟಿಸಲು ಯತ್ನಿಸಿದರೆ ಅಂಥವರ ವಿರುದ್ಧ ಕಾನೂನು ಅಡಿ ಕಠಿಣ ಕ್ರಮ ಜರುಗಿಸಲಾಗುವುದು ಎಂದು ಜಿಲ್ಲಾಧಿಕಾರಿ ಸಿ.ಎನ್. ಶ್ರೀಧರ್ ಎಚ್ಚರಿಸಿದರು.



ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಮುಂಗಾರು ಹಂಗಾಮಿನ ಕುರಿತು ಜರುಗಿದ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿ, ಜಿಲ್ಲೆಯ ರೈತರು ಕೃಷಿ ಭೂಮಿಯಲ್ಲಿ ರಸಗೊಬ್ಬರಗಳನ್ನು ಅತಿಯಾಗಿ ಬಳಸದೇ ಮಣ್ಣಿನ ಆರೋಗ್ಯ ದೃಷ್ಟಿಯಿಂದ ಅಗತ್ಯಕ್ಕೆ ತಕ್ಕಂತೆ ಬಳಸಬೇಕು. ಇತ್ತೀಚಿನ ದಿನಗಳಲ್ಲಿ ಮಣ್ಣಿನ ಪರೀಕ್ಷೆ ಮಾಡಿಸದೆ ರಸಗೊಬ್ಬರಗಳನ್ನು ವಿಶೇಷವಾಗಿ ಯೂರಿಯಾ ಮತ್ತು ಡಿ.ಎ.ಪಿ ಗೊಬ್ಬರಗಳನ್ನು ಅತಿಯಾಗಿ ಬಳಸುತ್ತಿರುವುದು ಕಂಡುಬರುತ್ತಿದೆ. ಮಣ್ಣಿನ ಫಲವತ್ತತೆ ಕ್ಷೀಣಿಸುವುದಲ್ಲದೇ ಅನಗತ್ಯವಾಗಿ ಕೃಷಿ ವೆಚ್ಚವೂ ಹೆಚ್ಚಾಗುತ್ತಿದೆ. ರೈತರು ತಮ್ಮ ಜಮೀನಿನ ಮಣ್ಣು ಪರೀಕ್ಷಾ ವರದಿಯ ಆಧಾರದ ಮೇಲೆ ಕೃಷಿ ಅಧಿಕಾರಿಗಳ ಸಲಹೆಯಂತೆ ಶಿಫಾರಸು ಮಾಡಿದ ಪ್ರಮಾಣದಲ್ಲಿಯೇ ರಸಗೊಬ್ಬರಗಳನ್ನು ನೀಡಬೇಕು ಎಂದರು.

ಜಂಟಿ ಕೃಷಿ ನಿರ್ದೇಶಕಿ ಚೇತನಾ ಪಾಟೀಲ ಮಾತನಾಡಿ, ಜಿಲ್ಲೆಯಲ್ಲಿ ಜನವರಿಯಿಂದ ಜೂನ್ ವರೆಗೆ ವಾಡಿಕೆ ಮಳೆ 118.9 ಮಿ.ಮೀ ಇದ್ದು, 150.4 ಮಿ.ಮೀ ಮಳೆ ಆಗಿರುತ್ತದೆ. ಹೆಸರು, ಮೆಕ್ಕೆಜೋಳ, ಹತ್ತಿ, ಸೂರ್ಯಕಾಂತಿ, ಶೇಂಗಾ ಬೆಳೆಗಳು ಮುಂಗಾರು ಹಂಗಾಮಿನ ಪ್ರಮುಖ ಬೆಳೆಗಳಾಗಿವೆ. ಎಲ್ಲ ವರ್ಗದ ರೈತರಿಗೆ ಗರಿಷ್ಠ 2 ಹೆಕ್ಟೇರ್ ಅಥವಾ ಅವರ ಹಿಡುವಳಿ ವಿಸ್ತೀರ್ಣಕ್ಕೆ ಸೀಮಿತಗೊಳಿಸಿ ಬಿತ್ತನೆ ಬೀಜಗಳನ್ನು ರಿಯಾಯತಿ ದರದಲ್ಲಿ ವಿತರಿಸಲಾಗುವುದು ಎಂದರು. ಡಿಡಿಎಲ್ ಆರ್ ರುದ್ರಣ್ಣಗೌಡ, ಉಪ ಕೃಷಿ ನಿರ್ದೇಶಕರು, ನೈಸರ್ಗಿಕ ಕೃಷಿ ಅಳವಡಿಸಿರುವ ರೈತರು, ಸ್ಥಳೀಯ ನೈಸರ್ಗಿಕ ಕೃಷಿ ಸಂಸ್ಥೆಗಳು, ವಿವಿಧ ಇಲಾಖೆಯ ಅಧಿಕಾರಿಗಳು ಇದ್ದರು.

6,7536 ಮೆಟ್ರಿಕ್ ಟನ್ ರಸಗೊಬ್ಬರ ಬೇಡಿಕೆ

ಜಿಲ್ಲೆಯಲ್ಲಿ 67536 ಮೆಟ್ರಿಕ್ ಟನ್ ರಸಗೊಬ್ಬರದ ಬೇಡಿಕೆ ಇದ್ದು, ಜೂನ್ ಅಂತ್ಯಕ್ಕೆ 32833 ಮೆಟ್ರಿಕ್ ಟನ್ ರಸಗೊಬ್ಬರದ ಬೇಡಿಕೆಯಿದೆ. ಏಪ್ರಿಲ್‌ದಿಂದ ಇಲ್ಲಿಯವರೆಗೆ 21055 ಮೆಟ್ರಿಕ್ ಟನ್ ರಸಗೊಬ್ಬರ ಸರಬರಾಜಾಗಿದ್ದು, ಆರಂಭಿಕ ಶಿಲ್ಕು 16647 ಮೆ.ಟನ್ ಸೇರಿ 37702 ಮೆಟ್ರಿಕ್ ಟನ್ ರಸಗೊಬ್ಬರ ಪೂರೈಕೆಯಿದೆ. ಏಪ್ರಿಲ್‌ದಿಂದ ಇಲ್ಲಿಯವರೆಗೆ 23037 ಮೆಟ್ರಿಕ್ ಟನ್ ರಸಗೊಬ್ಬರ ಮಾರಾಟವಾಗಿದೆ. ಮಾರಾಟ ಮಳಿಗೆಯಲ್ಲಿ 13842 ಮೆಟ್ರಿಕ್ ಟನ್, ಕೆಎಸ್‌ಎಸ್‌ಸಿ - 1533.02 ಮೆಟ್ರಿಕ್ ಟನ್, ಕೆಎಸ್‌ಎಂಎಫ್‌ದಲ್ಲಿ - 951 ಮೆಟ್ರಿಕ್ ಟನ್ ರಸಗೊಬ್ಬರ ದಾಸ್ತಾನಿದೆ ಎಂದು ಜಂಟಿ ಕೃಷಿ ನಿರ್ದೇಶಕಿ ಚೇತನಾ ಪಾಟೀಲ ತಿಳಿಸಿದರು.

ಜಿಲ್ಲೆಯಲ್ಲಿ ಅಗತ್ಯವಿರುವಷ್ಟು ರಸಗೊಬ್ಬರಗಳ ದಾಸ್ತಾನು ಲಭ್ಯವಿದೆ. ರೈತರು ಯಾವುದೇ ಆತಂಕಕ್ಕೆ ಒಳಗಾಗದೇ ಜಾಗರೂಕತೆಯಿಂದ ರಸಗೊಬ್ಬರವನ್ನು ಖರೀದಿಸಿ ಸಮರ್ಪಕವಾಗಿ ಬಳಸಿ ಉತ್ತಮ ಇಳುವರಿ ಪಡೆಯಬೇಕು.

■ **ಸಿ.ಎನ್. ಶ್ರೀಧರ್, ಜಿಲ್ಲಾಧಿಕಾರಿ**

- ಮುಂಗಾರು ಹಂಗಾಮಿಗೆ ಬಿತ್ತನೆಯಾಗಬಹುದಾದ ಪ್ರದೇಶ 305975 ಹೆಕ್ಟೇರ್
- 67598 ಕ್ವಿಂಟಲ್ ಬಿತ್ತನೆ ಬೀಜದ ಅವಶ್ಯಕತೆ
- ಬೀಜ ಬದಲಾವಣೆ ಅನುಪಾತದನ್ವಯ 11624 ಕ್ವಿಂಟಲ್ ಬಿತ್ತನೆ ಬೀಜ ಅಗತ್ಯ
- 11706 ಕ್ವಿಂ. ಬಿತ್ತನೆ ಬೀಜದ ಬೇಡಿಕೆಯಿದ್ದು 11706 ಕ್ವಿಂ. ಬಿತ್ತನೆ ಬೀಜ ದಾಸ್ತಾನು
- 1337.8 ಕ್ವಿಂಟಲ್ ಬೀಜ ವಿತರಣೆಯಾಗಿದ್ದು 10368.2 ಕ್ವಿಂಟಲ್ ಉಳಿಕೆಯಾಗಿದೆ ಎಂದು ಮ,ಆಹಿತಿ ನೀಡಿದ ಜಂಟಿ ಕೃಷಿ ನಿರ್ದೇಶಕಿ ಚೇತನಾ ಪಾಟೀಲ

ನೈಸರ್ಗಿಕ ಪದ್ಧತಿ ಅಳವಡಿಸಿಕೊಳ್ಳಿ

ಕೇವಲ ರಾಸಾಯನಿಕ ಗೊಬ್ಬರಗಳನ್ನೇ ಅವಲಂಬಿಸದೆ ತೇವಾಂಶ ಉಳಿಸಿಕೊಳ್ಳಲು ಮತ್ತು ಮಣ್ಣಿನ ಜೈವಿಕ ಗುಣಮಟ್ಟವನ್ನು ಹೆಚ್ಚಿಸಲು ಕೊಟ್ಟಿಗೆ ಗೊಬ್ಬರ, ಕಾಂಪೋಸ್ಟ್, ಹಸಿರು ಗೊಬ್ಬರ ಹಾಗೂ ಜೀವಾಮೃತದಂತಹ ನೈಸರ್ಗಿಕ ಪದ್ಧತಿಗಳನ್ನು ಅಳವಡಿಸಿಕೊಳ್ಳಬೇಕು. ಸಾಂಪ್ರದಾಯಿಕ ಮೂಟೆ ಯೂರಿಯಾ ಗೊಬ್ಬರದ ಬದಲಾಗಿ ದ್ರವರೂಪದ ನ್ಯಾನೋ ಯೂರಿಯಾವನ್ನು ಬಳಸುವುದರಿಂದ ಬೆಳೆಗೆ ಸಾರಜನಕದ ಲಭ್ಯತೆ ಹೆಚ್ಚುತ್ತದೆ ಮತ್ತು ಪರಿಸರ ಮಾಲಿನ್ಯವನ್ನು ತಡೆಗಟ್ಟಬಹುದು ಎಂದು ಜಿಲ್ಲಾಧಿಕಾರಿ ಸಿ.ಎನ್. ಶ್ರೀಧರ್ ಸಲಹೆ ನೀಡಿದರು.

ನೆರೆ ರಾಷ್ಟ್ರದ ಪ್ರಯಾಣಿಕರಿಂದ ಪೋಲಿಯೋ ಸಾಧ್ಯತೆ



• **ನರಗುಂದ:** ತಹಶೀಲ್ದಾರ್ ಶ್ರೀಶೈಲ ತಳವಾರ ಅವರ ಅಧ್ಯಕ್ಷತೆಯಲ್ಲಿ ತಹಶೀಲ್ದಾರ್ ಕಾರ್ಯಾಲಯದಲ್ಲಿ ತಾಲೂಕು ಮಟ್ಟದ ಪಲ್ಸ್ ಪೋಲಿಯೋ ಟಾಸ್ಕ್‌ಫೋರ್ಸ್ ಸಮಿತಿ ಹಾಗೂ ತಾಲೂಕಿನ ವಿವಿಧ ಇಲಾಖೆಗಳ ತಾಲೂಕು ಮಟ್ಟದ ಅಧಿಕಾರಿಗಳ ಸಭೆ ನಡೆಯಿತು.

ತಾಲೂಕು ಆರೋಗ್ಯಾಧಿಕಾರಿ ಡಾ. ಆರ್.ಸಿ.ಕೊರವನವರ ಮಾತನಾಡಿ, 1995 ರಿಂದ ಪ್ರಾರಂಭವಾದ ರಾಷ್ಟ್ರೀಯ ಪಲ್ಸ್ ಪೋಲಿಯೋ ಅಭಿಯಾನ ಯಶಸ್ವಿಯಾಗಿ ಸಾಗಿಬಂದಿದೆ. ದೇಶದಲ್ಲಿ 2011 ರಿಂದ ಯಾವುದೇ ಪೋಲಿಯೋ ಪ್ರಕರಣ ಕಂಡುಬಂದಿಲ್ಲ. ಪೋಲಿಯೋ ಮುಕ್ತ ರಾಷ್ಟ್ರವೆಂದು ಭಾರತವನ್ನು 2014 ರಲ್ಲಿ ವಿಶ್ವ ಆರೋಗ್ಯ ಸಂಸ್ಥೆ ಘೋಷಿಸಿದೆ. ಈ ಸಾಧನೆಗೆ ಎಲ್ಲ ಇಲಾಖೆಗಳ ಸಹಕಾರ ಮತ್ತು ಸಾರ್ವಜನಿಕರು ಪಲ್ಸ್ ಪೋಲಿಯೋ ಅಭಿಯಾನಕ್ಕೆ ಉತ್ತಮವಾಗಿ ಸ್ಪಂದನೆ ನೀಡಿದ್ದು ಕೂಡಾ ಪ್ರಮುಖವಾಗಿದೆ ಎಂದರು.

ಪಾಕಿಸ್ತಾನ, ಅಫ್ಘಾನಿಸ್ತಾನ ಹಾಗೂ ಅರಬ್ ದೇಶಗಳಲ್ಲಿ ಪೋಲಿಯೋ ಪ್ರಕರಣಗಳು ಈಗಲೂ ಕಂಡುಬರುತ್ತಿವೆ. ಅಲ್ಲಿಂದ ಬರುವ ಪ್ರಯಾಣಿಕರಿಂದ ಈ ಪೋಲಿಯೋ ಪ್ರಕರಣಗಳು ಬರುವ ಸಾಧ್ಯತೆಯಿದೆ. ಹೀಗಾಗಿ ಪೋಲಿಯೋ ಅಭಿಯಾನವನ್ನು ಮುಂದುವರೆಸಲಾಗುತ್ತಿದೆ. ಅದರಂತೆ ಈ ವರ್ಷದ ರಾಷ್ಟ್ರೀಯ ಪಲ್ಸ್ ಪೋಲಿಯೋ ಅಭಿಯಾನವು ಜೂ.28 ರಿಂದ ಪ್ರಾರಂಭವಾಗಿ ಜುಲೈ 1 ರವರೆಗೆ 4 ದಿನಗಳು ನಡೆಯುತ್ತದೆ ಎಂದರು. ತಾಲೂಕಿನ 0 ದಿಂದ 5 ವರ್ಷದೊಳಗಿನ ಮಕ್ಕಳ ಗುರಿ -9416 ಇದೆ. ಅಭಿಯಾನದಲ್ಲಿ ಭಾಗವಹಿಸುವ ತಂಡಗಳು 81, ಒಟ್ಟು ಸದಸ್ಯರು -162, ಮೇಲ್ವಿಚಾರಕರು 16 ಹಾಗೂ 4 ವೈದ್ಯಾಧಿಕಾರಿಗಳು ಪಲ್ಸ್ ಪೋಲಿಯೋ ಮೇಲ್ವಿಚಾರಣೆ ನಡೆಸುತ್ತಾರೆ. ಕೊಣ್ಣೂರ ಮತ್ತು ನರಗುಂದ ಬಸ್ ನಿಲ್ದಾಣಗಳಲ್ಲಿ ತಲಾ 1 ಪೋಲಿಯೋ ಬೂತ್ ಮಾಡಲಾಗಿದೆ ಮತ್ತು ತಾಲೂಕಿನಲ್ಲಿ 1 ಸಂಚಾರಿ ತಂಡವನ್ನು ರಚಿಸಲಾಗಿದೆ. 0-5 ವರ್ಷದಲೊಗಿನ ಎಲ್ಲ ಮಕ್ಕಳಿಗೆ ಈ ಹಿಂದೆ ಎಷ್ಟೇ ಬಾರಿ ಲಸಿಕೆ ನೀಡಿದ್ದರು ಕೂಡಾ ತಪ್ಪದೇ ಲಸಿಕೆ ಕೊಡಿಸಬೇಕು ಎಂದರು. ತಾಪಂ ಇಒ ಶ್ರೀಧರ ಚಿನಗುಂಡಿ ಮಾತನಾಡಿದರು. ಶಿರಸ್ತೇದಾರ ಕೆ.ಆರ್. ಆರೇರ, ಡಾ.ಪಂಕಜಾ ಮೈತ್ರಿ, ಡಾ.ಸಂತೋಷ ಕರೇಭರಮಣ್ಣವರ, ಬಿ.ಎಂ. ಬಡಿಗೇರ, ಎಂ.ಜಿ. ಮುಂಡೇವಾಡಿ, ಆರ್.ಆರ್. ಮಳಗಿ, ಪೂಜಾ ಶಿಂಧೆ, ಎನ್.ವೈ. ಬೇವಿನಗಿಡದ, ಜಿ.ಎಂ. ನರಗುಂದ, ವಿ.ಆರ್. ಗಿರಿತಿಮ್ಮಣ್ಣವರ, ರಾಘವೇಂದ್ರ ಸಜ್ಜನ, ಡಿ.ಕೆ. ಹಳೇಮನಿ, ಎಂ.ಪಿ.ಶಿಗ್ಲಾವಂಕರ, ರೇಖಾ ಹಿರೇಹೊಳಿ, ಎಸ್.ಬಿ. ಕುರಹಟ್ಟಿ, ಬಸವರಾಜ ಕೌಜಗೇರಿ, ಸಂತೋಷ ಅಂಬಿಗೇರ ಇದ್ದರು. ಈರಣ್ಣ ಗೂಳಣ್ಣವರ ನಿರೂಪಿಸಿ, ಸ್ವಾಗತಿಸಿದರು. ಸಿ.ಎಫ್. ಕುಂಬಾರ ವಂದಿಸಿದರು.

ಆಯುರ್ವೇದ ಚಿಕಿತ್ಸೆ ಜೀವನ ಪದ್ಧತಿ: ಸಚಿವ ಜೋಶಿ

• **ನರಗುಂದ:** ಸ್ವಯಂ ಸಂಜೀವಿನಿ ಚಿಕಿತ್ಸಾಲಯಕ್ಕೆ ರಚನಾತ್ಮಕ ವ್ಯವಸ್ಥೆ ರೂಪಿಸಲು ಬಿವಿಜಿ ಸಂಸ್ಥೆಯೊಂದಿಗೆ ಸೇರಿಕೊಂಡು ಆಯುರ್ವೇದ ಚಿಕಿತ್ಸೆ ಹಾಗೂ ಔಷಧಿ ನೀಡುವ ಉದ್ದೇಶ ಹೊಂದಲಾಗಿದೆ. ಆಯುರ್ವೇದಕ್ಕೆ ಯಾವುದೇ ಜಾತಿ, ಕುಲ ಎಂಬುದು ಇಲ್ಲ, ಇದೊಂದು ಪ್ರಾಚೀನ ಪರಂಪರೆ ಮತ್ತು ಜೀವನ ಪದ್ಧತಿಯಾಗಿದೆ ಎಂದು ಕೇಂದ್ರ ಸಚಿವ ಪ್ರಹ್ಲಾದ ಜೋಶಿ ಅಭಿಪ್ರಾಯ ವ್ಯಕ್ತಪಡಿಸಿದರು.

ತಾಲೂಕಿನ ವಾಸನ ಗ್ರಾಮದ ಸ್ವಯಂ ಸಂಜೀವಿನಿ ಆಶ್ರಮದ ಆವರಣದಲ್ಲಿ ಜರುಗಿದ ಭಾರತ ವಿಕಾಸ ಗ್ರುಪ್ ಇಂಡಿಯಾ ಲಿ.ನ ಅಂಗ ಸಂಸ್ಥೆಯಾದ ಬಿವಿಜಿ ವೆಲ್ ನೆಸ್ ಸೆಂಟರ್ ಹಾಗೂ ಸ್ವಯಂ ಸಂಜೀವಿನಿ ಚಿಕಿತ್ಸಾಲಯದ ಪ್ರಾರಂಭೋತ್ಸವ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಪಾರಂಪರಿಕ ವೈದ್ಯ ಡಾ.ಮಳಲಿ ಅವರು ಅನೇಕ ರೋಗಗಳಿಗೆ ಔಷಧ ನೀಡಿದ್ದಾರೆ. ದೇಶ ವಿದೇಶಗಳಿಂದ ಸಾಕಷ್ಟು ಜನರು ವಾಸನ ಗ್ರಾಮಕ್ಕೆ ಬಂದು ಔಷಧಿ ಪಡೆದಿದ್ದಾರೆ. ಆಯುರ್ವೇದ ಔಷಧಿಗೆ ಸೈಡ್ ಎಫೆಕ್ಟ್ ಇಲ್ಲ ಎಂದರು.

ಕೊಪ್ಪಳ ಗವಿಮಠ ಶ್ರೀಗಳು ಮಾತನಾಡಿ, ಋಷಿಮುನಿಗಳ ಸಂಶೋಧನೆಯಿಂದ ಸುಖ ಎಂಬುದು ಆರೋಗ್ಯದಲ್ಲಿದೆ. ಜೀವನದಲ್ಲಿ ಶ್ರೀಮಂತ, ಬಡವ ಮತ್ತು ಸೋಲು ಗೆಲುವು ಸಹಜ. ಹೊಗಳಿಕೆ, ತೆಗಳಿಕೆಗಳಿಗೆ ತಲೆ ಕೆಡಿಸಿಕೊಳ್ಳದೇ ಆರೋಗ್ಯಕರ ಶರೀರದೊಂದಿಗೆ ಜೀವನ ಸಾಗಿಸಬೇಕು ಎಂದರು.

ಕೇರಳ ಮಹಾಪೀಠಂ ಸಹಸ್ರಾರ ಯೋಗೀಶ್ವರ ಸ್ವಾಮೀಜಿ ಮಾತನಾಡಿ, ಆಯುರ್ವೇದ ಔಷಧಿಗೆ ಐತಿಹಾಸಿಕ ಪರಂಪರೆಯಿದೆ. ತಂದೆ, ತಾಯಿ, ದೇವಸ್ಥಾನ ಮತ್ತು ದೇಶದ ಮೇಲೆ ಅಭಿಮಾನ ಎಲ್ಲರಲ್ಲೂ ಹೆಚ್ಚಾಗಿ ಮೂಡಿ ಬರಲಿ ಎಂದರು.

ಪಾರಂಪರೀಕ ವೈದ್ಯ ಡಾ.ಹನುಮಂತ ಮಳಲಿ ಮಾತನಾಡಿ, ನಮ್ಮ ಚಿಕಿತ್ಸಾಲಯದಲ್ಲಿ ಔಷಧಿ ಪಡೆದು ಗುಣಮುಖರಾದ ಅನೇಕರು ಇಲ್ಲಿಗೆ ಆಗಮಿಸಿದ್ದಾರೆ. ದೇಶ ವಿದೇಶದಿಂದ ಜನರು ಇಲ್ಲಿಗೆ ಬಂದು ಔಷಧಿ ಪಡೆದಿದ್ದಾರೆ. ಕ್ಯಾನ್ಸರ್ ವಾಸಿಯಾದ 10 ಸಾವಿರ ಜನರ ದಾಖಲೆಯಿದೆ. ರಾಜ್ಯಾದ್ಯಂತ 40 ಚಿಕಿತ್ಸಾ ಕೇಂದ್ರಗಳನ್ನು ತೆರೆಯಲಿದ್ದೇವೆ ಎಂದರು.

ಉಚ್ಚ ನ್ಯಾಯಾಲಯದ ನ್ಯಾಯಮೂರ್ತಿ ಸಂಜೀವಕುಮಾರ ಹಂಚಾಟೆ, ಮಾಜಿ ಶಾಸಕ ಬಿ.ಆರ್. ಯಾವಗಲ್ಲ, ಬಿವಿಜಿ ಸಂಸ್ಥೆಯ ಸಿಇಒ ಹನುಮಂತರಾವ ಗಾಯಕವಾಡ ಮಾತನಾಡಿದರು. ಶಾಸಕ ಸಿ.ಸಿ. ಪಾಟೀಲ, ಬಿವಿಜಿ ಲೈಫ್ ಸೈನ್ಸ್ ನಿರ್ದೇಶಕ ಡಾ.ಜಯಶ್ರೀ ದ್ರಾವಿಡ್, ಸಂಜಯ ಡೋಂಗರೆ, ಡಾ.ರವಿಕುಮಾರ, ಡಾ.ವಿದ್ಯಾ ಹಾಗೂ ತಾಲೂಕು ಗ್ಯಾರಂಟಿ ಸಮಿತಿ ಅಧ್ಯಕ್ಷ ವಿವೇಕ ಯಾವಗಲ್ಲ, ಬಿಜೆಪಿ ಮುಖಂಡ ಉಮೇಶಗೌಡ ಪಾಟೀಲ ಹಲವರಿದ್ದರು.



ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಬೆಳಗ್ಗೆ ಹೆಚ್ಚುವರಿ ಬಸ್ ಬಿಡಿ: ಲಮಾಣಿ

• **ಲಕ್ಷ್ಮೇಶ್ವರ:** ಕ್ಷೇತ್ರಕ್ಕೆ ನೂತನ ಬಸಗಳ ಅವಶ್ಯಕತೆ ಬಹಳವಿದೆ. ಅದಕ್ಕಾಗಿ ಹೆಚ್ಚಿನ ಬಸ್‌ಗಳು ಇನ್ನೂ ಬರಬೇಕು ಎಂದು ಶಾಸಕ ಡಾ. ಚಂದ್ರು ಲಮಾಣಿ ಹೇಳಿದರು.

ಅವರು ಪಟ್ಟಣದ ಬಸ್ ನಿಲ್ದಾಣದಲ್ಲಿ ಎರಡು ನೂತನ ಬಸಗಳಿಗೆ ಪೂಜೆ ಸಲ್ಲಿಸಿ ಚಾಲನೆ ನೀಡಿ ಮಾತನಾಡಿ, ಈಗಾಗಲೇ ಬಂದ ನೂತನ ಬಸ್‌ಗಳು ಹೆಚ್ಚಾಗಿ ಗ್ರಾಮೀಣ ಭಾಗಕ್ಕೆ ಬಿಡಬೇಕು. ಬೆಳಗ್ಗೆ ಶಾಲಾ ಕಾಲೇಜು ವಿದ್ಯಾರ್ಥಿಗಳಿಗೆ ಅನುಕೂಲವಾಗಲು ಬೆಳಗ್ಗೆ 8 ರಿಂದ ಪಂಪ್ ಸರ್ಕಲ್ ದಿಂದ ಬಸ್ ನಿಲ್ದಾಣ ಎಂಜಿನಿಯರಿಂಗ್ ಕಾಲೇಜು ಹೀಗೆ ಬೆಳಗ್ಗೆ ಹೆಚ್ಚಿನ ಸಂಖ್ಯೆಯಲ್ಲಿ ಬಸ್ ನಿಲ್ದಾಣಕ್ಕೆ ಬರುವ ವ್ಯವಸ್ಥೆಯನ್ನು ವಿದ್ಯಾರ್ಥಿಗಳಿಗಾಗಿ ಮಾಡಿಕೊಡಬೇಕು. ಎಸಿ ಬಸ್‌ಗಳ ಬೇಡಿಕೆ ಇಟ್ಟಿದ್ದು, ಅದೂ ಕಾರ್ಯ ರೂಪಕ್ಕೆ ಬರುತ್ತದೆ ಎಂದರು.

ತಾಲೂಕು ಪಂಚ ಗ್ಯಾರಂಟಿ ಸಮಿತಿ ಅಧ್ಯಕ್ಷ ನಾಗರಾಜ ಮಡಿವಾಳರ ಮಾತನಾಡಿ, ಶಕ್ತಿ ಯೋಜನೆಯಿಂದ ಹೆಣ್ಣುಮಕ್ಕಳಿಗೆ ಅನುಕೂಲವಾಗಿದ್ದು, ವಿದ್ಯಾರ್ಥಿಗಳಿಗೆ ತೊಂದರೆ ಆಗದ ಹಾಗೆ ನೋಡಿಕೊಳ್ಳಬೇಕು. ಶಾಲಾ, ಕಾಲೇಜು ವಿದ್ಯಾರ್ಥಿಗಳಿಗೆ ಅನುಕೂಲಕ್ಕಾಗಿ ಬಸ್‌ಗಳ ವ್ಯವಸ್ಥೆ ಮಾಡಲಾಗುವುದು ಎಂದರು.

ಈ ಸಂದರ್ಭದಲ್ಲಿ ಘಟಕ ವ್ಯವಸ್ಥಾಪಕಿ ಸವಿತಾ ಆದಿ, ಎಸ್‌ಪಿ ಬಳಿಗಾರ, ಶಿವರಾಜ ಗೌಡ ಪಾಟೀಲ್, ಬಸವರಾಜ ಚಕ್ರ ಸಾಲಿ, ಗಿರೀಶ ಚೌರಡ್ಡಿ, ಗೀತಾ ಭೀರಣ್ಣವರ, ಶಶಿಕಲಾ ಬಡಿಗೇರ, ಕಲ್ಲಪ್ಪ ಗಂಗಣ್ಣವರ, ಮಂಜುನಾಥ ಶೇರಸೂರಿ, ಮಲ್ಲೇಶಪ್ಪ ಬಸಾಪುರ ಸೋಮಣ್ಣ ಬಂಗಿ, ಯಲ್ಲಪ್ಪ ಹಂಜಗಿ, ಹರೀಶ ಲಕ್ಷ್ಮೇಶ್ವರ, ರಮಜಾನ್ ಸಾಬ್ ನದಾಪ, ಗಂಗಾಧರ ಮೆಣಸಿನಕಾಯಿ, ಪ್ರವೀಣ ಬೋಮಲೆ, ರಮೇಶ ಹಾಳದೋಟದ ಸೇರಿದಂತೆ ಗ್ಯಾರಂಟಿ ಸಮಿತಿ ಸದಸ್ಯರು, ಬಸ್ ಚಾಲಕರು, ನಿರ್ವಾಹಕರು, ಡಿಪೋ ಸಿಬ್ಬಂದಿ ಸೇರಿದಂತೆ ಇತರರಿದ್ದರು.



ಪರಿಸರವನ್ನು ಪ್ರತಿಯೊಬ್ಬರೂ ಉಳಿಸಿ, ಬೆಳೆಸಲಿ: ಎಂ.ಎ.ಫಣಿಬಂಧ

• **ಗಜೇಂದ್ರಗಡ:** ನಗರದ ರೋಣ ರಸ್ತೆಯಲ್ಲಿನ ಶ್ರೀ ತುಳಜಾಭವಾನಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ವಿಶ್ವ ಪರಿಸರ ದಿನವನ್ನು ಆಚರಣೆ ಮಾಡಲಾಯಿತು.

ಸಸಿ ನಡೆವ ಮೂಲಕ ಕಾರ್ಯಕ್ರಮ ಉದ್ಘಾಟಿಸಿದ ರೋಣ ಪ್ರಭಾರ ಬಿಇಒ ಎಂ.ಎ.ಫಣಿಬಂಧ ಮಾತನಾಡಿ, ಪರಿಸರವನ್ನು ಪ್ರತಿಯೊಬ್ಬರೂ ಉಳಿಸಿ ಬೆಳೆಸುವ ಪ್ರವೃತಿ ಬೆಳೆಸಿಕೊಳ್ಳಬೇಕು. ನಮ್ಮ ಸುತ್ತಮುತ್ತಲಿನ ಗಿಡಮರಗಳ, ಪ್ರಾಣಿ ಪಕ್ಷಿಗಳು ಮಾತ್ರವಲ್ಲದೆ ಮಾನವನಿಗೆ ಅತ್ಯಗತ್ಯವಾಗಿ ಬೇಕಾದ ಶುದ್ಧ ಗಾಳಿ, ನೀರು ಮುಂತಾದವುಗಳನ್ನು ಪರಿಸರದಿಂದ ನಾವು ಪಡೆದುಕೊಳ್ಳುತ್ತೇವೆ. ಅವುಗಳನ್ನು ಹಾಳು ಮಾಡದೆ ನಮ್ಮ ಮುಂದಿನ ಪೀಳಿಗೆಯ ಸಂರಕ್ಷಣೆ ಗಮನದಲ್ಲಿಟ್ಟುಕೊಂಡು ಸಂರಕ್ಷಣೆಗೆ ಮುಂದಾಗಬೇಕಿದೆ ಎಂದರು.

ದಕ್ಷಿಣ ವಲಯದ ಸಿ.ಆರ್.ಪಿ ಆರ್.ಜಿ.ಮ್ಯಾಕಲ್ ಮಾತನಾಡಿ, ಅನಾದಿ ಕಾಲದಲ್ಲಿ ನಮ್ಮ ಹಿರಿಯರು ಗಾಳಿ, ಬೆಳಕು, ಪರಿಸರವನ್ನು ಪೂಜಿಸಿ ಆರಾಧಿಸುತ್ತಿದ್ದರು, ಪ್ರಸ್ತುತ ಮಾನವನ ಸ್ವಾರ್ಥದಿಂದ ಪ್ರಕೃತಿಯ ಮೇಲೆ ದೌರ್ಜನ್ಯ ನಡೆಯುತ್ತಿದ್ದು, ಅದು ನಿತ್ಯದ ಬದುಕಿನ ಮೇಲೆ ಅಪಾರ ಪ್ರಭಾವ ಬೀರುತ್ತಿದೆ. ಈಗಾಗಲೇ ಅರಣ್ಯ ನಾಶದಿಂದ ಶುದ್ಧ ಗಾಳಿ ಸಿಗದಂತಾಗಿದೆ. ಇಂದಿನ ಯುವ ಪೀಳಿಗೆಯು ಪರಿಸರ ರಕ್ಷಣೆಯಲ್ಲಿ ಮುಂದಾಗಬೇಕಿದೆ ಎಂದರು.

ಸರ್ವೋದಯ ಮಹಿಳಾ ಕಾಲೇಜಿನ ಅಧ್ಯಕ್ಷ ಲೋಕಪ್ಪ ರಾಠೋಡ ಅಧ್ಯಕ್ಷತೆ ವಹಿಸಿದ್ದರು. ಮುಖ್ಯಶಿಕ್ಷಕಿ ರೇಖಾ ಮಾನೆ, ಸಹಶಿಕ್ಷಕಿಯರಾದ ಮಂಜುಳಾ ಭಜಂತ್ರಿ, ಸುನಿತಾ ಹವಾಲ್ದಾರ, ವೀರಮ್ಮ ಹೂಗಾರ, ಭಾಗ್ಯ ಆದಾಪೂರ, ದೀಪಾ ಗಜಕೋಶ, ಉಮಾ ಯಂಕಚಿ, ವೈ.ಎಲ್.ನಧಾಪ, ರುದ್ರಪ್ಪ ಚವ್ಹಾಣ, ಲಕ್ಷ್ಮಿ ಗಣವಾರಿ, ದಿವ್ಯಾ ಚವ್ಹಾಣ ಸೇರಿದಂತೆ ಅನೇಕರು ಇದ್ದರು.



ಲಂಡಿ ಹಳ್ಳ ಸ್ವಚ್ಛಗೊಳಿಸದಿದ್ದರೆ ಹೋರಾಟ



• **ಲಕ್ಷ್ಮೇಶ್ವರ:** ಪಟ್ಟಣದ ಕೆಂಚಲಾಪುರ ಓಣಿ, ಭಜಂತ್ರಿ ಓಣಿ, ಬನಶಂಕರಿ ಬಡಾವಣೆ ಹಳ್ಳದಕೇರಿ ಹತ್ತಿ ಇರುವ ಲಂಡಿ ಹಳ್ಳದಲ್ಲಿ ಕಳೆದ ಹಲವು ವರ್ಷಗಳಿಂದ ಗಿಡಮರಗಳ ಬೆಳೆದು ನೀರು ಹೋಗಲಾರದ ಪರಸ್ಥಿತಿ ನಿರ್ಮಾಣವಾಗಿದ್ದು, ವಾರದೊಳಗೆ ಈ ಗಿಡಗಂಟೆಗಳಬ್ಬು ತಗೆದು ಸ್ವಚ್ಛತೆ ಮಾಡದೆ ಹೋದರೆ ಪುರಸಭೆ ಅಧಿಕಾರಿಗಳ ವಿರುದ್ದ ಈ ಭಾಗದ ಜನರು ಹಾಗೂ ರೈತರು ಕೂಡಿಕೊಂಡು ಎತ್ತು ಚಕ್ಕಡಿ ಕಟ್ಟಿಕೊಂಡು ಪಾಳಾ ಬದಾಮಿ ರಾಜ್ಯ ಹೆದ್ದಾರಿಯಲ್ಲಿ ರಸ್ತೆ ತಡೆ ನಡೆಸಿ ಸಂಗೊಳ್ಳಿ ರಾಯಣ್ಣನ ವೃತ್ತದ ಮುಂದೆ ಹೋರಾಟ ಹಮ್ಮಿಕೊಳ್ಳಲಾಗುವುದೆಂದು ಮುಖಂಡ ಮಂಜುನಾಥ ಮಾಗಡಿ ಹೇಳಿದರು.

ಈ ಹಿಂದೆ ಹಲವು ಬಾರಿ ಹತ್ತಿರ ಇರುವ ಮನೆಗಳಿಗೆ ನೀರು ನುಗ್ಗಿ ಮನೆಯಲ್ಲಿದ್ದ ವಸ್ತುಗಳು ಹಾಳಾಗಿ ಹೋಗಿದ್ದು, ದನಕರಗಳು ಮತ್ತು ಮನುಷ್ಯರು ನೀರಲ್ಲಿ ತೇಲಿ ಹೋಗಿದ್ದ ಉದಾಹರಣೆಗಳೂ ಬಹಳಷ್ಟಿದೆ. ಈ ಬಗ್ಗೆ ಎಷ್ಟೇ ಇಲ್ಲಿನ ನಿವಾಸಿಗಳು ಪುರಸಭೆ ಹಾಗೂ ಜನಪ್ರತಿನಿಧಿಗಳಿಗೆ ಸಾಕಷ್ಟು ಬಾರಿ ಮನವಿ ಸಲ್ಲಿಸಿ ಸಮಸ್ಯೆ ಪರಿಹಾರಕ್ಕೆ ಒತ್ತಾಯಿಸಿದರೂ ಅಧಿಕಾರಿಗಳು ಗಮನ ಹರಿಸಿಲ್ಲ ಎಂದು ಆರೋಪಿಸಿದ್ದಾರೆ.

ವಿಶ್ವ ಪರಿಸರ ದಿನಾಚರಣೆ

• **ಮುಂಡರಗಿ:** ರೋಟರಿ ಶಿಕ್ಷಣ ಸಂಸ್ಥೆಯ ಶ್ರೀ ವ್ಹಿ ಜಿ ಲಿಂಬಿಕಾಯಿ ಪ್ರಾಥಮಿಕ ಹಾಗೂ ಪ್ರೌಢಶಾಲೆಯಲ್ಲಿ ವಿಶ್ವ ಪರಿಸರ ದಿನಾಚರಣೆಯನ್ನು ಹಮ್ಮಿಕೊಳ್ಳಲಾಗಿತ್ತು.

ಸಂಸ್ಥೆಯ ಗೌರವ ಕಾರ್ಯದರ್ಶಿ ಕೆ.ಎಫ್. ಅಂಗಡಿ ಅಧ್ಯಕ್ಷತೆ ವಹಿಸಿ ಮಾತನಾಡಿ, ಮಕ್ಕಳು ಪ್ರತಿಯೊಬ್ಬರೂ ಮುಂದಿನ ಪೀಳಿಗೆಗೆ ಉತ್ತಮ ಪರಿಸರವನ್ನು ನಿರ್ಮಾಣ ಮಾಡುವ ಅಭೂತಪೂರ್ವ ಜವಾಬ್ದಾರಿಯನ್ನು ವಹಿಸಿಕೊಳ್ಳಬೇಕಾದ ಅನಿವಾರ್ಯತೆಯಿದೆ. ಆದ್ದರಿಂದ ಎಲ್ಲಾ ಮಕ್ಕಳು ಯಾವುದಾದರೂ ಒಂದು ಸಸಿಯನ್ನು ನೆಟ್ಟು ಅದನ್ನು ದೊಡ್ಡದಾಗುವವರೆಗೆ ಪೋಷಣೆ ಮಾಡಬೇಕು. ಮುಂಡರಗಿ ಭಾಗದಲ್ಲಿ ಜನಿಸಿದ ನಾವೇ ಪುಣ್ಯವಂತರು ಏಕೆಂದರೆ ನಮ್ಮ ಹತ್ತಿರದ ಕಪ್ಪತ್ತಗಿರಿ ಆರೋಗ್ಯದ ಉತ್ತಮ ವಾಯುವಿನ ಗಿರಿಯಾಗಿದೆ. ಮಕ್ಕಳು ತಿಂಗಳಿಗೊಮ್ಮೆಯಾದರೂ ಕಪ್ಪತ್ತಗಿರಿಯ ದರ್ಶನ ಮಾಡಿದರೆ ಉತ್ತಮ ಆರೋಗ್ಯವನ್ನು ಪಡೆಯಬಹುದು ಎಂದರು.ಶಾಲೆಯ ಗುರುಮಾತೆ ಪ್ರತಿಭಾ ಪಾಟೀಲ್ ಮಾತನಾಡಿ, ಇಂದು ರಾಸಾಯನಿಕಗಳ ಅತಿಯಾದ ಬಳಕೆಯಿಂದ ಪರಿಸರ ಹಾಳಾಗುತ್ತದೆ ಎಂದರು. ಶಿಕ್ಷಕ ಟಿ.ಬಿ. ಕಳಕರಡ್ಡಿ ಗುರುಗಳು ಮಾತನಾಡಿ, ಪರಿಸರ ಎಂದರೆ ಕೇವಲ ಗಾಳಿ ಅಲ್ಲ ಅದು ಮಣ್ಣು ನೀರು ಮುಂತಾದ ನಮ್ಮ ಸುತ್ತಲಿನ ಜೈವಿಕ, ಅಜೈವಿಕ ಘಟಕಗಳನ್ನು ಒಳಗೊಂಡ ಪ್ರಕ್ರಿಯೆ. ಅದನ್ನು ಸಂರಕ್ಷಿಸಿದಲ್ಲಿ ಮಾತ್ರ ಮುಂದಿನ ಪೀಳಿಗೆ ಯಾವುದೇ ಅಪಾಯವಿಲ್ಲದೆ ಬದುಕಬಹುದೆಂದರು.ಪ್ರಾಥಮಿಕ ವಿಭಾಗದ ಮುಖ್ಯೋಪಾಧ್ಯಾಯ ಸಿ.ವಿ. ಪಾಟೀಲ್ ವಂದಿಸಿದರು.ಪ್ರೌಢ ವಿಭಾಗದ ಮುಖ್ಯೋಪಾಧ್ಯಾಯ ಎಂ.ಬಿ. ನಾಗರಹಳ್ಳಿ ನಿರೂಪಿಸಿದರು.



ಪರಿಸರ ದುರ್ಬಳಕೆಯಿಂದ ಜಗತ್ತು ವಿನಾಶ



• **ಗಜೇಂದ್ರಗಡ:** ಮಾನವ ಆಧುನಿಕ ಪರಿಸರವನ್ನು ದುರ್ಬಳಕೆ ಬಳಕೆ ಮಾಡುವ ಮೂಲಕ ಜಗತ್ತಿನಲ್ಲಿ ಜಗತ್ತು ವಿನಾಶದತ್ತ ಸಾಗುತ್ತಿದೆ ಎಂದು ಮುಖ್ಯ ಶಿಕ್ಷಕ ಎಸ್.ಎಂ. ಬಡಿಗೇರ ಕಳವಳ ವ್ಯಕ್ತಪಡಿಸಿದರು.

ಪಟ್ಟಣದ ಸರ್ಕಾರಿ ಮಾದರಿ ಹೆಣ್ಣು ಮಕ್ಕಳ ಶಾಲೆಯಲ್ಲಿ ನಡೆದ ವಿಶ್ವ ಪರಿಸರ ದಿನಾಚರಣೆ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ನೈಸರ್ಗಿಕ ಸಂಪನ್ಮೂಲಗಳಾದ ಗಾಳಿ, ನೀರು, ಮಣ್ಣು, ಪ್ರಾಣಿ, ಸಸ್ಯ ಸಂಕುಲ ಮೊದಲಾದವುಗಳನ್ನು ಸಂರಕ್ಷಣೆ ಮಾಡುವ ಮೂಲಕ ಮುಂದಿನ ಪೀಳಿಗೆಗೆ ಉಳಿಸಬೇಕು. ಆದ್ದರಿಂದ ಪರಿಸರ ಸಂರಕ್ಷಣೆ ನಮ್ಮೆಲ್ಲರ ಕರ್ತವ್ಯ ಎಂಬ ಪ್ರಜ್ಞೆ ಪ್ರತಿಯೊಬ್ಬ ನಾಗರಿಕನಲ್ಲೂ ಇರಬೇಕು. ಅದರಲ್ಲೂ ಪ್ರಮುಖವಾಗಿ ಯುವಪೀಳಿಗೆ ಪರಿಸರದ ಕಾಳಜಿ ಮಾಡದೆ ಜಗತ್ತನ್ನು ಸರ್ವನಾಶದತ್ತ ಒಯ್ಯುತ್ತಿದೆ. ಪ್ರತಿಯೊಬ್ಬರೂ ಗಿಡಮರ ಬೆಳೆಸುವ ಮೂಲಕ ಪರಿಸರ ಸಮತೋಲನ ಕಾಪಾಡಬೇಕು ಎಂದರು.

ಬಿ.ಎಂ. ಹಿರೇಮಠ, ರಾಜೀವ ಬಿನವಾಡಿ, ಮಂಜುನಾಥ ಕಮ್ಮಾರ, ಎಸ್.ಎಚ್. ಬಾಗವಾನ, ಡಿ.ಎಂ. ಬಡಿಗೇರ, ಕೆ.ಎಚ್. ಕೊತಬಾಳ, ಸಿ.ಕೆ. ಹಾರೋಗೇರಿ, ಶಾರದಾ ಒನಕೇರಿ ಇತರರಿದ್ದರು.

ಪರಿಸರ ರಕ್ಷಣೆ ಸರ್ವರ ಹೊಣೆ

• **ನರಗುಂದ:** ತಾಲೂಕಿನ ಕುರ್ಲಗೇರಿ ಗ್ರಾಮದಲ್ಲಿ ತಾಲೂಕು ಪಂಚಾಯತ್ ಹಾಗೂ ಬನಹಟ್ಟಿ ಗ್ರಾಮ ಪಂಚಾಯಿತಿ ಸಂಯುಕ್ತ ಆಶ್ರಯದಲ್ಲಿ ಜರುಗಿದ ಪರಿಸರ ದಿನಾಚರಣೆಯನ್ನು ಕುಡಿಯುವ ನೀರಿನ ಟ್ಯಾಂಕ್ ಆವರಣದಲ್ಲಿ ತಾಪಂ ಇಒ ಶ್ರೀಧರ್ ಚಿನಗುಂಡಿ ಅವರು 10 ಸಸಿಗಳನ್ನು ನೆಟ್ಟು ನೀರುಣಿಸುವ ಮೂಲಕ ಪರಿಸರ ದಿನಾಚರಣೆಗೆ ಚಾಲನೆ ನೀಡಿದರು.

ನಂತರ ಮಾತನಾಡಿದ ಅವರು, ಪರಿಸರ ದಿನವನ್ನು ಕೇವಲ ಆಚರಿಸಿದರೆ ಸಾಲದು, ಪರಿಸರಸಂರಕ್ಷಣೆಯನ್ನು ನಮ್ಮ ಜೀವನದ ಅವಿಭಾಜ್ಯ ಅಂಗವನ್ನಾಗಿ ರೂಢಿಸಿಕೊಳ್ಳಬೇಕು. ಸಾರ್ವಜನಿಕರ ಸಹಕಾರವಿಲ್ಲದೆ ಪರಿಸರ ರಕ್ಷಣೆ ಸಾಧ್ಯವಿಲ್ಲ. ಇಂದು ನೆಟ್ಟಿರುವ ಸಸಿಗಳು ಬೆಳೆದು ಗ್ರಾಮಸ್ಥರು ಹಾಗೂ ಪ್ರಾಣಿ-ಪಕ್ಷಿಗಳಿಗೆ ನೆರಳು ನೀಡುವವರೆಗೂ ಅವುಗಳ ಸಂರಕ್ಷಣೆಯಲ್ಲಿ ಸಾರ್ವಜನಿಕರ ಪಾತ್ರ ಮಹತ್ವದ್ದಾಗಿದೆ ಎಂದರು.

ಬನಹಟ್ಟಿ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಮಂಜುನಾಥ ಗಣಿ ಮಾತನಾಡಿ, ಕುಡಿಯುವ ನೀರಿನ ಟ್ಯಾಂಕ್ ಆವರಣವನ್ನು ಸ್ವಚ್ಛಗೊಳಿಸಿ ನೈರ್ಮಲ್ಯ ಕಾಪಾಡುವಂತೆ ಗ್ರಾಮಸ್ಥರು ಸಲ್ಲಿಸಿದ ಮನವಿ ಸ್ವೀಕರಿಸಿದ 15 ದಿನಗಳೊಳಗೆ ಸ್ಥಳವನ್ನು ಸ್ವಚ್ಛಗೊಳಿಸಲಾಗಿದ್ದು, ಇಂದು ಅದೇ ಸ್ಥಳದಲ್ಲಿ ಪರಿಸರ ದಿನಾಚರಣೆ ನಡೆಸುತ್ತಿರುವುದು ಸಂತಸದ ಸಂಗತಿ ಎಂದರು. ಬನಹಟ್ಟಿ ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ಎಚ್.ಡಿ. ಪೂಜಾರ, ನಾಗಯ್ಯ ಹಿರೇಮಠ, ವಿರೂಪಾಕ್ಷಪ್ಪ ಶಾನವಾಡ, ಶಿವರುದ್ರಪ್ಪ ಸುಳ್ಳದ, ಗ್ರಾಪಂ ಕಾರ್ಯದರ್ಶಿ ಮಾಳಪ್ಪ ಪೀಜಾರ, ಬಿಲ್ ಕಲೆಕ್ಟರ್ ಶಿವನಪ್ಪ ಕಲ್ಲಾಪೂರ ಸೇರಿದಂತೆ ಗ್ರಾಮಸ್ಥರು ಉಪಸ್ಥಿತರಿದ್ದರು.



ಶಿವಂ ಅಸೋಸಿಯೇಟ್ಸ್ ಹೂಡಿಕೆದಾರರಿಗೆ ಡಿಐಜಿಪಿ ಖಡಕ್ ಎಚ್ಚರಿಕೆ

ಮತ್ತೆ ಹಣ ಹಾಕಿ ಮೋಸ ಹೋಗಬೇಡಿ

ಬೆಳಗಾವಿ: ಶಿವಂ ಅಸೋಸಿಯೇಟ್ಸ್ ಖಾತೆಯನ್ನು ಪೊಲೀಸರು ಫ್ರೀಜ್ ಮಾಡಿದ್ದರೂ ಜನ ಇಂದಿಗೂ ಹಣ ಜಮಾ ಮಾಡುತ್ತಿರುವುದಕ್ಕೆ ಬೆಳಗಾವಿ ಡಿಐಜಿಪಿ ಡಾ.ಭೀಮಾಶಂಕರ್ ಗುಳೇದ ತೀವ್ರ ಆತಂಕ ವ್ಯಕ್ತಡಿಸಿದ್ದಾರೆ. ಸಾರ್ವಜನಿಕರು ದುರಾಸೆಗೆ ಬಿದ್ದು ಇಂತಹ ಕಾನೂನು ಬಾಹಿರ ಕಂಪನಿಗಳನ್ನು ನಂಬಿ ಮತ್ತೊಮ್ಮೆ ಹಣ ಹಾಕಿ ಮೋಸ ಹೋಗಬಾರದು, ಯಾರಾದರೂ ಆಮಿಷ ಒಡ್ಡಿದರೆ ತಕ್ಷಣ ಪೊಲೀಸ್ ಠಾಣೆಗೆ ದೂರು ನೀಡಬೇಕೆಂದು ಖಡಕ್ ಎಚ್ಚರಿಕೆ ನೀಡಿದ್ದಾರೆ.

ನಗರದ ಸರ್ಕಿಟ್ ಹೌಸ್‌ನಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಶಿವಂ ಅಸೋಸಿಯೇಟ್ಸ್ ಸಂಸ್ಥೆಯ ಶಿವಾನಂದ ನೀಲಣ್ಣವರ ಹಾಗೂ ಆದಿತ್ಯರಾಜ್ ಕ್ಯಾಪಿಟಲ್ ಸಂಸ್ಥೆಗೆ ಸಾರ್ವಜನಿಕರಿಂದ ಠೇವಣಿ ಸಂಗ್ರಹಿಸಲು ಆರ್‌ಬಿಐ ಯಾವುದೇ ಬ್ಯಾಂಕಿಂಗ್ ಲೈಸೆನ್ಸ್ ಅಥವಾ ಅಧಿಕಾರ ನೀಡಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ.

ಭಾರತದಲ್ಲಿ ವಾರ್ಷಿಕ ಶೇ.36ರಿಂದ ಶೇ.60ರಷ್ಟು ಲಾಭ ನೀಡುವ ಯಾವುದೇ ಯೋಜನೆಗಳಿಲ್ಲ, ಆರೋಪಿಗಳು ನಿಯಮಬಾಹಿರವಾಗಿ ಸಾರ್ವಜನಿಕರನ್ನು ದುರಾಸೆಗೆ ನೂಕಿ ಹಣ ವಸೂಲಿ ಮಾಡುತ್ತಿದ್ದರು. ಸದ್ಯ ಪೊಲೀಸರು ಪ್ರಕರಣ ದಾಖಲಿಸಿಕೊಂಡು ಬ್ಯಾಂಕ್ ಖಾತೆಗಳನ್ನು ಡೆಬಿಟ್ ಫ್ರೀಜ್ ಮಾಡಿದ್ದರೂ, ಜನ ಇಂದಿಗೂ ಆ ಖಾತೆಗಳಿಗೆ ಹಣ ಜಮಾ ಮಾಡುತ್ತಿರುವುದು ಮತ್ತು ಸಾಮಾಜಿಕ ಜಾಲತಾಣಗಳಲ್ಲಿ ಸುಳ್ಳು ಸುದ್ದಿ ಹರಡುತ್ತಿರುವುದು ಆತಂಕಕಾರಿ ಎಂದರು.

ತನಿಖೆಯ ಪ್ರಾಥಮಿಕ ಹಂತದಲ್ಲಿ ಶಿವಂ ಅಸೋಸಿಯೇಟ್ಸ್ ಬರೋಬ್ಬರಿ 2,400 ಕೋಟಿ ರೂಪಾಯಿ ಹಣ ಸಂಗ್ರಹಿಸಿರುವುದು ಬೆಳಕಿಗೆ ಬಂದಿದೆ. ಆರೋಪಿ ಶಿವಾನಂದ ಯಾವುದೇ ಕೃಷಿ ಅಥವಾ ಅಧಿಕೃತ ವ್ಯವಹಾರದಲ್ಲಿ ಹಣ ತೊಡಗಿಸಿರಲಿಲ್ಲ,



ಬದಲಿಗೆ ಹೊಸ ಠೇವಣಿದಾರರ ಹಣವನ್ನು ಹಳಬರಿಗೆ ಬಡ್ಡಿ ರೂಪದಲ್ಲಿ ಹಂಚುತ್ತಿದ್ದ. ಸಂಗ್ರಹವಾದ ಮೊತ್ತದಲ್ಲಿ 540 ಕೋಟಿ ರೂಪಾಯಿಯನ್ನು ಸ್ಟ್ಯಾಕ್ ಮಾರ್ಕೆಟ್‌ನಲ್ಲಿ ಹೂಡಿಕೆ ಮಾಡಿ, ಅದರಲ್ಲಿ 170 ಕೋಟಿ ರೂಪಾಯಿ ಕಳೆದುಕೊಂಡು ಕೈ ಸುಟ್ಟುಕೊಂಡಿದ್ದಾನೆ.

ಒಟ್ಟು ಹಣದಲ್ಲಿ ಸದ್ಯ 660 ಕೋಟಿ ರೂಪಾಯಿ ವ್ಯತ್ಯಾಸ ಕಂಡುಬಂದಿದ್ದು, ಅದರಲ್ಲಿ 390 ಕೋಟಿ ರೂಪಾಯಿ ಬೇರೆ ಮೂಲಗಳಿಂದ ಸಿಗುವ ಸಾಧ್ಯತೆಯಿದೆ. ಈ ಯೋಜನೆಯು ಇನ್ನು ಕೆಲವೇ ದಿನಗಳಲ್ಲಿ ಸಂಪೂರ್ಣ ಮುಳುಗಡೆಯಾಗುವ ದೊಡ್ಡ ಅನಾಹುತವನ್ನು ಪೊಲೀಸರು ಮುಂಚಿತವಾಗಿಯೇ ತಪ್ಪಿಸಿದ್ದಾರೆ ಎಂದರು.

ಶಿವಂ ಅಸೋಷಿಯೇಟ್ಸ್ ಸಂಸ್ಥೆಯು ಕರ್ನಾಟಕ ಮತ್ತು ಮಹಾರಾಷ್ಟ್ರದಾದ್ಯಂತ ಸುಮಾರು 40,700 ಗ್ರಾಹಕರನ್ನು ಹೊಂದಿದ್ದು, ಮಹಾರಾಷ್ಟ್ರ ಪೊಲೀಸರೊಂದಿಗೂ ಮಾಹಿತಿ ಹಂಚಿಕೊಳ್ಳಲಾಗಿದೆ. ಕಂಪನಿ ಖಾತೆಯಿಂದ ಕಾನೂನು ಬಾಹಿರವಾಗಿ ವೈಯಕ್ತಿಕ ಖಾತೆಗೆ ವರ್ಗಾಯಿಸಲಾಗಿದ್ದ 55 ಕೋಟಿ ರೂಪಾಯಿ, 5 ಐಷಾರಾಮಿ ಕಾರುಗಳು ಹಾಗೂ 250 ಗ್ರಾಂ ಚಿನ್ನವನ್ನು ವಶಪಡಿಸಿಕೊಳ್ಳಲಾಗಿದೆ. ಕೆಪಿಐಡಿ ಕಾಯ್ದೆಯಡಿ ವಿಶೇಷ ಅಧಿಕಾರಿಯನ್ನು ನೇಮಿಸಿ ಜಪ್ತಿ ಮಾಡಿದ ಆಸ್ತಿಯನ್ನು ಸಾರ್ವಜನಿಕರಿಗೆ ಮರಳಿಸುವ ಪ್ರಕ್ರಿಯೆ ನಡೆಯಲಿದೆ.

ಇನ್ನು ಅನಿಯಂತ್ರಿತ ಕಂಪನಿಯಲ್ಲಿ ಹಣ ಹೂಡಿ ಅಕ್ರಮವಾಗಿ ಹೆಚ್ಚಿನ ಲಾಭ ಪಡೆದ ಗ್ರಾಹಕರಿಗೂ ನೋಟಿಸ್ ನೀಡಲಾಗುವುದು ಹಾಗೂ ಆದಿತ್ಯರಾಜ್ ಕ್ಯಾಪಿಟಲ್ ಸಂಸ್ಥೆಯ ಪ್ರಕರಣವನ್ನು ಸಿಐಡಿ ತನಿಖೆಗೆ ಒಪ್ಪಿಸಲಾಗಿದೆ ಎಂದು ಡಿಐಜಿಪಿ ತಿಳಿಸಿದರು.

ಮಹಾರಾಷ್ಟ್ರ ಲಿಂಕ್ ಹಾಗೂ ಹಣ ಮರುಪಾವತಿ ಹೇಗೆ?

ಈ ವಂಚನೆಯ ಜಾಲ ಪಕ್ಕದ ಮಹಾರಾಷ್ಟ್ರ ರಾಜ್ಯದಲ್ಲೂ ಭಾರೀ ಪ್ರಮಾಣದಲ್ಲಿ ಹರಡಿದ್ದು, ಅಲ್ಲಿ ಅತಿ ಹೆಚ್ಚು ಹೂಡಿಕೆ ಮಾಡಲಾಗಿದೆ. ಹೀಗಾಗಿ ಮಹಾರಾಷ್ಟ್ರ ಪೊಲೀಸರ ಸಹಕಾರದೊಂದಿಗೆ ತನಿಖೆಯನ್ನು ತೀವ್ರಗೊಳಿಸಲಾಗಿದೆ. ಕಂಪನಿ ಸಂಪೂರ್ಣವಾಗಿ ಮುಳುಗುವ ಮುನ್ನವೇ ದಾಳಿ ನಡೆಸಿ ಕಾನೂನು ಕ್ರಮ ಕೈಗೊಳ್ಳಲಾಗಿದೆ. ಈ ಹಿಂದೆ ಹೂಡಿಕೆದಾರರಿಗೆ ನಿಯಮ ಬಾಹಿರವಾಗಿ ಹೋಗಿರುವ 400 ಕೋಟಿ ರೂ. ಹೆಚ್ಚುವರಿ ಹಣವನ್ನು ವಾಪಸ್ ಪಡೆದು ಬಾಕಿ ಉಳಿದಿರುವ ಹೂಡಿಕೆದಾರರಿಗೆ ಹಂಚಲು ಸಿಐಡಿ ನಿರ್ಧರಿಸಿದೆ. ಸದ್ಯ ರಿಕವರಿ ಮಾಡಲಾಗುವ ಹಣವನ್ನು 'ಬಡ್ಸ್' ಕಾಯ್ದೆ ಮುಖ್ಯಸ್ಥರಾದ ಆದಿತ್ಯ ಆಮ್ಲಾನ್ ಬಿಸ್ವಾಸ್ ಅವರಿಗೆ ಹಸ್ತಾಂತರಿಸಲಾಗುವುದು. ತದನಂತರ ಅವರು ಕಾನೂನು ಪ್ರಕ್ರಿಯೆಗಳ ಮೂಲಕ ಸಾರ್ವಜನಿಕರಿಗೆ ಹಣವನ್ನು ವಾಪಸ್ ಮಾಡಲಿದ್ದಾರೆ ಎಂದು ಅಧಿಕಾರಿಗಳು ಭರವಸೆ ನೀಡಿದ್ದಾರೆ.

ಮರಾಠ ಸಮುದಾಯಕ್ಕೆ ಸಚಿವ ಸ್ಥಾನ ನಿಶ್ಚಿತ: ಎಂಬಿಪಾ



ವಿಜಯಪುರ: ನೂತನ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ ಅವರ ನೂತನ ಸಚಿವ ಸಂಪುಟದಲ್ಲಿ ಮರಾಠಾ ಸಮುದಾಯದ ಒಬ್ಬರಿಗಾದರೂ ಸಚಿವ ಸ್ಥಾನ ನಿಶ್ಚಿತವಾಗಿ ದೊರೆಯುವ ವಿಶ್ವಾಸವಿದೆ ಎಂದು ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ ಹೇಳಿದರು.

ವಿಜಯಪುರ ನಗರದ ಕೆಕೆಎಂಪಿ ಸಮುದಾಯ ಭವನದಲ್ಲಿ ಕರ್ನಾಟಕ ಕ್ಷತ್ರಿಯ ಮರಾಠ ಪರಿಷತ್ ವತಿಯಿಂದ ಭಾನುವಾರ ಹಮ್ಮಿಕೊಂಡಿದ್ದ ಜಿಲ್ಲಾ ಮರಾಠ ಸಮುದಾಯದ ಸಮಾವೇಶ ಹಾಗೂ ಶಿವಾಜಿ ಮಹಾರಾಜರ 399ನೇ ಜಯಂತ್ಯುತ್ಸವ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಸ್ವಾಭಿಮಾನಿಗಳಾದ ಮರಾಠ ಸಮುದಾಯಕ್ಕೆ ನೂತನ ಸಚಿವ ಸಂಪುಟದಲ್ಲಿ ಶ್ರೀನಿವಾಸ ಮಾನೆ ಅಥವಾ ಸಂತೋಷ ಲಾಡ್ ಅವರಿಗೆ ದೊರೆಯುವುದರಲ್ಲಿ ಎರಡು ಮಾತಿಲ್ಲ, ವಿಜಯಪುರ ಜಿಲ್ಲೆಯ ರಾಜಕಾರಣಕ್ಕೆ ಮರಾಠ ಸಮುದಾಯದ ಮುಖಂಡರು ಸಾಕಷ್ಟು ಕೊಡುಗೆ ನೀಡಿದ್ದಾರೆ ಎಂದರು.

ಮಾಜಿ ಸಚಿವ ಶಿವಾನಂದ ಪಾಟೀಲ ಮಾತನಾಡಿ, ಛತ್ರಪತಿ ಶಿವಾಜಿ ಮಹಾರಾಜರು ತಂದೆ, ತಾಯಿ, ಸಮಾಜ, ದೇಶಕ್ಕೆ ಆದರ್ಶಪ್ರಾಯರಾಗಿದ್ದರು. ಅವರ ನಡೆ ನುಡಿ ಅತ್ಯಂತ ಸರಳವಾಗಿತ್ತು. ಮಹಿಳೆಯರಿಗೆ ಕೊಡುವ ಗೌರವ ಅವರಿಂದ ನಾವು ಕಲಿಯಬೇಕು. ಮಹಾರಾಜರಾಗಿದ್ದರೂ ಕೂಡ ಅವರಲ್ಲಿ ತಾನೊಬ್ಬ ಮಹಾರಾಜ ಎಂಬ ಅಹಂ ಇರಲಿಲ್ಲ, ಬದಲಾಗಿ ತಾನೊಬ್ಬ ಸಾಮಾನ್ಯ ವ್ಯಕ್ತಿ ಎಂಬ ಸರಳತೆ ಇತ್ತು ಎಂದು ಹೇಳಿದರು.

ಕಾರ್ಯಕ್ರಮದ ಸಾನ್ನಿಧ್ಯ ವಹಿಸಿದ್ದ ಬೆಂಗಳೂರಿನ ಗೋಸಾಯಿ ಮಠದ ಮಂಜುನಾಥ ಭಾರತಿ ಸ್ವಾಮೀಜಿ ಮಾತನಾಡಿ, ರಾಜ್ಯದಲ್ಲಿ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ ನೇತೃತ್ವದ ಕಾಂಗ್ರೆಸ್ ಸರ್ಕಾರದಲ್ಲಿ ಶ್ರೀನಿವಾಸ ಮಾನೆ ಹಾಗೂ ಸಂತೋಷ ಲಾಡ್ ಇಬ್ಬರಿಗೂ ಸಚಿವ ಸ್ಥಾನ ದೊರೆಯಬೇಕು. ರಾಜ್ಯದ 40 ವಿಧಾನಸಭಾ ಕ್ಷೇತ್ರಗಳಲ್ಲಿ ಮರಾಠ ಸಮುದಾಯದ ನಿರ್ಣಾಯಕ ಪಾತ್ರವಿದೆ ಎಂದರು.

ಕಾರ್ಯಕ್ರಮದಲ್ಲಿ ಪ್ರಾಚಾರ್ಯ ಮಂಜುನಾಥ ಜನಗೊಂಡ ಅವರು ಉಪನ್ಯಾಸ ನೀಡಿದರು. ಹೆಚ್ಚು ಅಂಕಗಳನ್ನು ಪಡೆದುಕೊಂಡ ಮರಾಠ ಸಮುದಾಯದ ವಿದ್ಯಾರ್ಥಿಗಳಿಗೆ ಕರ್ನಾಟಕ ಕ್ಷತ್ರಿಯ ಮರಾಠ ಪರಿಷತ್ ನಿಂದ ಶಿಷ್ಯವೇತನ ನೀಡಿ ಗೌರವಿಸಲಾಯಿತು.

ಕರ್ನಾಟಕ ಕ್ಷತ್ರಿಯ ಮರಾಠ ಪರಿಷತ್ತಿನ ರಾಜ್ಯಾಧ್ಯಕ್ಷ ಸುರೇಶರಾವ ಸಾಠೆ ಅಧ್ಯಕ್ಷತೆಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಎಸ್.ಆರ್. ಸಿಂಧ್ಯಾ, ಟಿ.ಆರ್. ಸುನೀಲ ಚವ್ಹಾಣ, ಟಿ.ಆರ್.ವೆಂಕಟರಾವ್ ಚವ್ಹಾಣ, ರಾಜ್ಯಸಭಾ ಸದಸ್ಯ ನಾರಾಯಣಸಾ ಬಾಂಡಗೆ, ಉಮೇಶ ಕಾರಜೋಳ, ವಿಜಯಕುಮಾರ ಘಾಟಗೆ, ವಿಜಯಕುಮಾರ ಚವ್ಹಾಣ, ಶಂಕರ ಕನಸೆ, ಬಾಬುರಾವ ತರಸೆ, ಜ್ಯೋತಿಬಾ ಚವ್ಹಾಣ, ಸುಧಾಕರ ಘಟಗೆ, ಜ್ಯೋತಿರಾಮ ಪವಾರ, ಜಿಲ್ಲಾಧ್ಯಕ್ಷ ಭೀಮಾಶಂಕರ ಶಿವಾಳ್ಕರ, ರಾಮು ಜಾಧವ, ರಾಮು ಜಗತಾಪ, ರಮೇಶ ಗಾಯಕವಾಡ, ಬಾಳಾಸಾಹೇಬ ಚಿನಕೇಕರ, ರಾಮಣ್ಣ ಭೋಸಲೆ ಇತರರು ಇದ್ದರು.

ಮರಮ್ ಕ್ವಾರಿಯಲ್ಲಿ ದುರಂತ: ಮೂವರ ಸಾವು

ವಡಗೇರಾ: ತಾಲೂಕಿನ ಬಸವನಗರ ಗ್ರಾಮದಲ್ಲಿ ಮರಮ್ ಕ್ವಾರಿ ತೆಗ್ಗಿನಲ್ಲಿ ಕಾಲು ಜಾರಿ ನೀರಿನಲ್ಲಿ ಮುಳುಗಿ ಇಬ್ಬರು ಬಾಲಕಿಯರು ಹಾಗೂ ಅವರನ್ನು ರಕ್ಷಿಸಲು ಮುಂದಾದ ಮಹಿಳೆಯೊಬ್ಬರು ಮೃತಪಟ್ಟ ಘಟನೆ ಭಾನುವಾರ ಸಂಜೆ ನಡೆದಿದೆ. ಗುಂಡಮ್ಮ (35), ಸುಜಾತ (9), ಶಿವಲೀಲಾ (10) ಮೃತ ದುರ್ದೈವಿಗಳಾಗಿದ್ದಾರೆ. ಭಾನುವಾರ ರಜೆ ಇದ್ದ ಕಾರಣ ಬಾಲಕಿಯರು ಬಟ್ಟೆ ತೊಳೆಯಲು ತೆರಳಿದಾಗ ಈ ದುರ್ಘಟನೆ ಸಂಭವಿಸಿದೆ. ಕಾಲು ಜಾರಿ ಆ ಇಬ್ಬರು ಬಾಲಕಿಯರು ನೀರಿನಲ್ಲಿ ಮುಳುಗುವುದನ್ನು ನೋಡಿದ ಗುಂಡಮ್ಮ ಅವರನ್ನು ರಕ್ಷಿಸಲು ಹೋದಾಗ ಅವರು ಸಹ ಮುಳುಗಿ ಜೀವ ಕಳೆದುಕೊಂಡಿದ್ದಾರೆ. **ಏನಿದು ಘಟನೆ?:** ಗ್ರಾಮದಲ್ಲಿ ಸಮರ್ಪಕವಾಗಿ ನೀರು ಪೂರೈಕೆಯಾಗದ ಹಿನ್ನೆಲೆಯಲ್ಲಿ ಬಟ್ಟೆ ತೊಳೆಯಲು ಈ ಮೂವರು, ಮರಮ್ ಕ್ವಾರಿ ಬಳಿ ತೆರಳಿದ್ದರು. ಈ ವೇಳೆ ಬಾಲಕಿಯರಾದ ಸುಜಾತ ಮತ್ತು ಶಿವಲೀಲಾ ಕಾಲು ಜಾರಿ ಆಳವಾದ ನೀರಿನ ತೆಗ್ಗಿಗೆ ಬಿದ್ದಿದ್ದಾರೆ. ಅವರನ್ನು ರಕ್ಷಿಸಲು ಗುಂಡಮ್ಮ ನೀರಿಗೆ ಧುಮುಕಿದರೂ, ಮೂವರೂ ನೀರಿನಲ್ಲಿ ಮುಳುಗಿ ಮೃತಪಟ್ಟಿದ್ದಾರೆ ಎನ್ನಲಾಗಿದೆ. ಪ್ರಾಥಮಿಕ ಮಾಹಿತಿಯ ಪ್ರಕಾರ, ಮರಮ್ ಕ್ವಾರಿಯ ತೆಗ್ಗಿನಲ್ಲಿ ನೀರು ಆಳವಾಗಿದ್ದು, ಕಾಲು ಜಾರಿದ್ದರಿಂದ ಈ ದುರ್ಘಟನೆ ಸಂಭವಿಸಿದೆ. ಗ್ರಾಮದಲ್ಲಿ ಸಮರ್ಪಕ ಕುಡಿಯುವ ಹಾಗೂ ಬಳಕೆಯ ನೀರಿನ ವ್ಯವಸ್ಥೆ ಇಲ್ಲದಿರುವುದು ಕೂಡ ಪರೋಕ್ಷವಾಗಿ ದುರಂತಕ್ಕೆ ಕಾರಣವಾಗಿದೆ ಎಂದು ಗ್ರಾಮಸ್ಥರು ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ. ಒಂದೇ ಗ್ರಾಮದ ಮೂವರು ಸಾವನ್ನಪ್ಪಿರುವ ಹಿನ್ನೆಲೆಯಲ್ಲಿ ಬಸವನಗರ ಗ್ರಾಮದಲ್ಲಿ ಶೋಕದ ಛಾಯೆ ಆವರಿಸಿದೆ. ಕುಟುಂಬಸ್ಥರ ಆಕ್ರಂದನ ಮುಗಿಲು ಮುಟ್ಟಿದೆ.

ಶಾಸಕರ ಭೇಟಿ

ಮೃತದೇಹಗಳ ಶವಪರೀಕ್ಷೆಗಾಗಿ ಇಲ್ಲಿನ ಮುದ್ನಾಳ ಸಮೀಪದ ಆಸ್ಪತ್ರೆಗೆ ಮೂರು ಜನರ ಮೃತದೇಹಗಳನ್ನು ತರಲಾಗಿದ್ದು, ಸುದ್ದಿ ತಿಳಿದ ಶಾಸಕ ಚನ್ನಾರೆಡ್ಡಿ ಪಾಟೀಲ್ ತುನ್ನೂರ ಅವರು ಅಲ್ಲಿಗೆ ಭೇಟಿ ನೀಡಿದ್ದಾರೆ. ಪೊಲೀಸ್ ಅಧಿಕಾರಿ ಮತ್ತು ವಿವಿಧ ಅಧಿಕಾರಿಗಳೊಂದಿಗೆ ಮಾತನಾಡಿದ ಶಾಸಕರು, ಈ ಘಟನೆ ಕಾರಣವೇನು? ಕ್ವಾರಿ ಸುತ್ತಲು ರಕ್ಷಣೆ ಇಲ್ಲವೆಂದ ಮೇಲೆ ಜನರನ್ನು ಅಲ್ಲಿ ಹೋಗುವುದು ತಡೆಯಬೇಕಾಗಿತ್ತು ಎಂದು ವಿಷಾದಿಸಿದರು.

ಕಿರುಸುದ್ದಿ

ಸಚಿವ ಸ್ಥಾನ ನೀಡುವುದು ಹೈಕಮಾಂಡ್ ನಿರ್ಣಯ: ಮಂಕಾಳ ವೈದ್ಯ

ಭಟ್ಕಳ: ನನಗೆ ಸಚಿವ ಸ್ಥಾನ ನೀಡುವ ಬಗ್ಗೆ ಕಾಂಗ್ರೆಸ್ ಹೈಕಮಾಂಡ್ ನಿರ್ಧಾರ ಮಾಡಲಿದೆ. ಎಲ್ಲವೂ ದೇವರ ಇಚ್ಛೆಯಂತೆ ಆಗುತ್ತದೆ ಎಂದು ಮಾಜಿ ಸಚಿವ ಮಂಕಾಳ ಎಸ್ ವೈದ್ಯ ಹೇಳಿದರು.



ಅವರು ಶಿರಾಲಿಯಲ್ಲಿ ಪರಿಸರ ದಿನಾಚರಣೆ ಪ್ರಯುಕ್ತ ಗಿಡ ನೆಟ್ಟ ಬಳಿಕ ಪತ್ರಕರ್ತರು ಕೇಳಿದ ಪ್ರಶ್ನೆಗೆ ಉತ್ತರಿಸಿದ ಅವರು, ಕ್ಷೇತ್ರದಲ್ಲಿ ಮಳೆಗಾಲದ ಪೂರ್ವ ತಯಾರಿ ಬಗ್ಗೆಯೂ ಮಾತನಾಡಿದ ಅವರು, ಈಗಾಗಲೇ ಜಿಲ್ಲಾಡಳಿತ ಮತ್ತು ತಾಲೂಕು ಆಡಳಿತಕ್ಕೆ ಮಳೆಗಾಲ ಪೂರ್ವ ಮಾಡುವ ಕೆಲಸವನ್ನು ಮಾಡಬೇಕು. ಜನತೆಗೆ ಏನೂ ಸಮಸ್ಯೆ ಆದರೂ ತಕ್ಷಣ ಸ್ಪಂದಿಸಬೇಕು ಎಂದು ಸೂಚಿಸಿದ್ದೇನೆ. ಈ ಬಗ್ಗೆ ಅಧಿಕಾರಿಗಳ ಸಭೆಯನ್ನೂ ನಡೆಸಿ ವಿವರಿಸಲಾಗಿದೆ. ತಹಸೀಲ್ದಾರ್ ನೇತೃತ್ವದ ತಂಡ ಮಳೆಗಾಲದಲ್ಲಿ ಸಂಭವಿಸುವ ಸಮಸ್ಯೆ ಎದುರಿಸಲು ಸನ್ನದ್ಧವಾಗಿದೆ. ದೇವರ ದಯೆಯಿಂದ ಏನೂ ಆಗುವುದಿಲ್ಲ, ಆದರೂ ಸಹ ಎಲ್ಲಾ ರೀತಿಯ ಸಿದ್ಧತೆ ಮಾಡಿಕೊಂಡಿದ್ದೇವೆ ಎಂದರು.

ಸಿಇಟಿಯಲ್ಲಿ ವಿದ್ಯಾನಿಕೇತನ ಅಭೂತಪೂರ್ವ ಸಾಧನೆ


ಹುಬ್ಬಳ್ಳಿ: ಚೌಗಲಾ ಶಿಕ್ಷಣ ಸಂಸ್ಥೆಯ ವಿದ್ಯಾನಿಕೇತನ ಪದವಿ ಪೂರ್ವ ವಿಜ್ಞಾನ ಮಹಾವಿದ್ಯಾಲಯದ ವಿದ್ಯಾರ್ಥಿಗಳು ಕರ್ನಾಟಕ ಸಿಇಟಿ ಪರೀಕ್ಷೆಯಲ್ಲಿ ಗುಣಾತ್ಮಕ ಮತ್ತು ಪರಿಮಾಣಾತ್ಮಕ ಫಲಿತಾಂಶ ನೀಡಿದ್ದಾರೆ.

ಎಂಜನಿಯರಿಂಗ್ ವಿಭಾಗದಲ್ಲಿ ರ್‍ಯಾಂಕ್ ಪಡೆದ ವಿದ್ಯಾರ್ಥಿಗಳು: ಸ್ಥವನ್ ಇನಾಮದಾರ (64), ಅಭಿಷೇಕ ಮ ಚೆನ್ನಗೊಂಡ (157), ಅಮೃತಾ ಉಮಚಗಿ (299), ಅಭಿಷೇಕ ಶ ಟಕ್ಕಳಕಿ (444), ನಂದೀಶ ಎಸ್ ದ್ಯಾಮನ್ನವರ (598), ಹೃದಯ ಅ ಮಹಾಜನ (893), ವಿಶ್ವೇಶ್ವರ ಕುಂಬಾರ (916), ಪ್ರದೀಪ ಎಸ್ ಕುರ್ತಕೋಟಿ (937), ಪಾರ್ಥ ಪಾಟೀಲ್ (1012), ಶ್ರದ್ಧಾ ಎಸ್ ದೇಸಾಯಿ (1052), ನಿಖಿತಾ ಎಮ್ ಗುಂಡಲೂರ (1168), ಪ್ರೀತಮ್ ಬಿ ವಡ್ಡರ (1314), ಅನ್ನನ್ಯಾ ವ್ಹಿ ಅಂಗಡಿ (1360), ಶ್ರೇಯಸ್‌ಗೌಡ ಬಿ ಜನಕಟ್ಟಿ (1823), ಅನೂಪ ಪಿ ಕಟಾವಕರ (1956) ರ್‍ಯಾಂಕ್ ಪಡೆದಿದ್ದಾರೆ.

ವೇಟರ್‌ನರಿ ವಿಭಾಗದಲ್ಲಿ ರ್‍ಯಾಂಕ್ ಪಡೆದ ವಿದ್ಯಾರ್ಥಿಗಳು: ನಿಖಿತಾ ಎಮ್ ಗುಂಡಲೂರ (101), ಮಲಿಕ್‌ರೇಹನ್ ಎಮ್ ರಾಟಿಮನಿ (165), ವಿದ್ಯಾಶ್ರೀ ಎಮ್ ಗುಜಮಗಡಿ (554), ಕೆ. ಪ್ರಜ್ವಲ್ (1156), ವಿಜಯ ಎನ್ ಗಂಗಾವತಿ (1378), ಶ್ರೇಯಸ್ ಬಿ ಪತ್ತಾರ (1946).

ಬಿಎಸ್ಸಿ ನರ್ಸಿಂಗ್ ವಿಭಾಗದಲ್ಲಿ ರ್‍ಯಾಂಕ್ ಪಡೆದ ವಿದ್ಯಾರ್ಥಿಗಳು: ನಿಖಿತಾ ಎಮ್ ಗುಂಡಲೂರ (101),ಮಲಿಕ್‌ರೇಹನ್ ಎಮ್ ರಾಟಿಮನಿ (165), ಕೆ. ಪ್ರಜ್ವಲ್ (1160), ವಿಜಯ ಎನ್ ಗಂಗಾವತಿ (1382), ಅನ್ನನಾ ಎ ದಂಡಿನ (1560), ಶ್ರೇಯಸ್ ಬಿ ಪತ್ತಾರ (1951).

ಅಗ್ರಿಕಲ್ಚರ್ ವಿಭಾಗದಲ್ಲಿ ರ್‍ಯಾಂಕ್ ಪಡೆದ ವಿದ್ಯಾರ್ಥಿಗಳು: ನಿಖಿತಾ ಎಮ್ ಗುಂಡಲೂರ (185),ಮಲಿಕ್‌ರೇಹನ್ ಎಮ್ ರಾಟಿಮನಿ (385),ವಿಜಯ ಎನ್ ಗಂಗಾವತಿ (659), ನಯನಾ ಅರಬಂಧ (733), ಶ್ರದ್ಧಾ ಎಸ್ ದೇಸಾಯಿ (766), ಅದನ ಅ ಯಾದವಾಡ (919), ಶಾಂತಲಾ ಸಿಂಧೂರ (1065), ಕೆ ಪ್ರಜ್ವಲ್ (1151), ಆಸ್ತಾ ಡಿ ಪಾಟೀಲ್ (1266), ರಾಕೇಶ ಉಪ್ಪಾರ (1369), ಪೂರ್ಣಿಮಾ ಎಮ್ ಕಾಂಬ್ಳೆ (1421), ಹೃದಯ ಅ ಮಹಾಜನ (1615),ಧನುಷ (1661), ಸೂರಜ ಎನ್ ಕಿಲಿಮುಟ್ಟಿ (1708), ಸೃಷ್ಟಿ ಎಸ್ ಸೋಮರೆಡ್ಡಿ (1964).



ಬಿಎನ್‌ವೈಎಸ್ ವಿಭಾಗದಲ್ಲಿ ರ್‍ಯಾಂಕ್ ಪಡೆದ ವಿದ್ಯಾರ್ಥಿಗಳು: ನಿಖಿತಾ ಎಮ್ ಗುಂಡಲೂರ (36),ಮಲಿಕ್‌ರೇಹನ್ ಎಮ್ ರಾಟಿಮನಿ (208),ಆಸ್ತಾ ಡಿ ಪಾಟೀಲ್ (1026),ವಿಜಯ ಎನ್ ಗಂಗಾವತಿ (1043),ಶ್ರೇಯಸ್ ಬಿ ಪತ್ತಾರ (1228), ನಯನಾ ಅರಬಂಧ (1319), ಮಂಜುನಾಥ ಟಿ ಎಮ್ (1377),ರಾಕೇಶ ಉಪ್ಪಾರ (1480),ಶಾಂತಲಾ ಸಿಂಧೂರ (1513), ಸೃಷ್ಟಿ ಎಸ್ ಸೋಮರೆಡ್ಡಿ (1655), ಪೂರ್ಣಿಮಾ ಎಮ್ ಕಾಂಬ್ಳೆ (1734),ಧನುಷ (1866).

ಬಿ. ಫಾರ್ಮಸಿ ವಿಭಾಗದಲ್ಲಿ ರ್‍ಯಾಂಕ್ ಪಡೆದ ವಿದ್ಯಾರ್ಥಿಗಳು: ನಿಖಿತಾ ಎಮ್ ಗುಂಡಲೂರ (124),ಮಲಿಕ್‌ರೇಹನ್ ಎಮ್ ರಾಟಿಮನಿ (312), ಸ್ಥವನ್ ಇನಾಮದಾರ (476),ಅಭಿಷೇಕ ಮ ಚೆನ್ನಗೊಂಡ (892),ಅಮೃತಾ ಉಮಚಗಿ (1554), ಕೆ.ಪ್ರಜ್ವಲ್ (1662),ವಿಜಯ ಎನ್ ಗಂಗಾವತಿ (1872),

ಈ ವಿದ್ಯಾರ್ಥಿಗಳ ಸಾಧನೆಗೆ ಮಹಾವಿದ್ಯಾಲಯದ ಪ್ರಾಚಾರ್ಯರು, ಕಾರ್ಯಾಧ್ಯಕ್ಷರು, ಕಾರ್ಯದರ್ಶಿಗಳು, ನಿರ್ದೇಶಕ ಮಂಡಳಿ ಹಾಗೂ ಬೋಧಕ-ಬೋಧಕೇತರ ಸಿಬ್ಬಂದಿ, ವಿದ್ಯಾರ್ಥಿಗಳು ಅಭಿನಂದನೆ ಸಲ್ಲಿಸಿದ್ದಾರೆ.

ಎಕ್ಸಲಂಟ್ ವಿದ್ಯಾರ್ಥಿಗಳ ಅಮೋಘ ಸಾಧನೆ

ವಿಜಯಪುರ: ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ವತಿಯಿಂದ 2025-26 ನೇ ಸಾಲಿಗೆ ನಡೆಸಿದ ಕರ್ನಾಟಕ ಸಾಮಾನ್ಯ ಅರ್ಹತಾ ಪರೀಕ್ಷೆಯ ಫಲಿತಾಂಶ ಪ್ರಕಟಗೊಂಡಿದ್ದು, ಈ ಬಾರಿ ವಿಜಯಪುರ ನಗರದ ಪ್ರತಿಷ್ಠಿತ ಶಿಕ್ಷಣ ಸಂಸ್ಥೆ ಎಕ್ಸಲಂಟ್ ವಿಜ್ಞಾನ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿಗಳು ಅತ್ಯುತ್ತಮ ರ್‍ಯಾಂಕ್‌ಗಳನ್ನು ಪಡೆದುಕೊಳ್ಳುವ ಮೂಲಕ ಐತಿಹಾಸಿಕ ಸಾಧನೆಗೆ ಸಾಕ್ಷಿಯಾಗಿದ್ದಾರೆ.

ವಿದ್ಯಾರ್ಥಿನಿ ಅನುಷಾ ಹೊಸುರ ಕೆ-ಸಿಇಟಿ ಅಗ್ರಿಯಲ್ಲಿ ರಾಜ್ಯಕ್ಕೆ 3ನೇ ಸ್ಥಾನ ಹಾಗೂ ವೆಟರನರಿ ಸೈನ್ಸ್‌ನಲ್ಲಿ ರಾಜ್ಯಕ್ಕೆ 4ನೇ ಸ್ಥಾನ ಪಡೆದುಕೊಂಡರೆ, ನಿಖಿಲ್ ಕಿತ್ತೂರ ಅಗ್ರಿಯಲ್ಲಿ ರಾಜ್ಯಕ್ಕೆ 13ನೇ ಸ್ಥಾನ ಹಾಗೂ ವೆಟರನರಿ ಸೈನ್ಸ್‌ನಲ್ಲಿ 20ನೇ ಸ್ಥಾನ ಪಡೆದುಕೊಳ್ಳುವ ಮೂಲಕ ಜಿಲ್ಲೆಗೆ ಕೀರ್ತಿ ತಂದಿದ್ದಾರೆ.

ಸಲ್ಮಾನ್ ಗೋಡಿಹಾಳ (ಎಂಜಿನಿಯರಿಂಗ್ -1048, ಬಿ.ಎಸ್.ಸಿ ಅಗ್ರಿ-232, ವೆಟರ್‌ನರಿ-291), ಪ್ರತೀಕ ಪಿ ಚವ್ಹಾಣ (ಎಂಜಿನಿಯರಿಂಗ್ -1437, ಬಿ.ಎಸ್.ಸಿ ಅಗ್ರಿ-264, ವೆಟರ್‌ನರಿ -1541), ಚೇತನ್ ಮಠದ (ಬಿ.ಎಸ್.ಸಿ ಅಗ್ರಿ-54, ವೆಟರ್‌ನರಿ -141), ಸಂಕೇತ ಐ ಬಿರಾದಾರ (ಎಂಜಿನಿಯರಿಂಗ್-2440), ಅನುಷ್ಕಾ ಮಹಿಶಾಳೆ (ಎಂಜಿನಿಯರಿಂಗ್-2727, ಬಿ.ಎಸ್.ಸಿ ಅಗ್ರಿ-552, ವೆಟರ್ನರಿ-209), ರುಮೇಜಾ ಶೇಖ್ (ಎಂಜಿನಿಯರಿಂಗ್-3220, ಬಿ.ಎಸ್.ಸಿ ಅಗ್ರಿ-560, ವೆಟರ್‌ನರಿ -787), ಮಂಜುನಾಥ ಹೊನವಾಡ (ಎಂಜಿನಿಯರಿಂಗ್-3519), ಆಕಾಶ ಗೊರನಾಳ (ಎಂಜಿನಿಯರಿಂಗ್-3588), ಶೈಲೇಶ ಕುಲಕರ್ಣಿ (ಎಂಜಿನಿಯರಿಂಗ್-3680), ರಜತ ಎನ್ (ಎಂಜಿನಿಯರಿಂಗ್-3685), ರವಿ ಹಳ್ಳೂರ (ಎಂಜಿನಿಯರಿಂಗ್-4107, ಬಿ.ಎಸ್.ಸಿ ಅಗ್ರಿ -1887, ವೆಟರ್‌ನರಿ - 1856), ನಿಖಿಲ್ ಕಿತ್ತೂರ (ಇಂಜಿನಿಯರಿಂಗ್-4314), ಅಮೋಘ ಬೊಂಬಳೇಕರ್ (ಎಂಜಿನಿಯರಿಂಗ್-4517, ಬಿ.ಎಸ್.ಸಿ ಅಗ್ರಿ-2907, ವೆಟರ್ನರಿ-935), ಅನುಷಾ ಹೊಸುರ (ಎಂಜಿನಿಯರಿಂಗ್-4648), ಮಲ್ಲಿಕಾರ್ಜುನ ಹೂಗಾರ (ಎಂಜಿನಿಯರಿಂಗ್ -4865 ಬಿ.ಎಸ್.ಸಿ ಅಗ್ರಿ-1232, ವೆಟರ್‌ನರಿ -437), ಸಹನಾ ಮಾವಿನಗಿಡದ (ಎಂಜಿನಿಯರಿಂಗ್-5043), ಮಲ್ಲಿಕಾರ್ಜುನ ಮುಚ್ಚಂಡಿ (ಎಂಜಿನಿಯರಿಂಗ್-5145), ಅನುಷಾ ಎಡವಣ್ಣವರ (ಎಂಜಿನಿಯರಿಂಗ್-5312), ನಿವೇಶ ಮೋಗಲಿ (ಎಂಜಿನಿಯರಿಂಗ್-5409), ರುಚಿತಾ ಘಟನಟ್ಟಿ (ಎಂಜಿನಿಯರಿಂಗ್-5502), ಚನ್ನವೀರೇಶಕುಂಬಾರ (ಎಂಜಿನಿಯರಿಂಗ್-5761) ಬಸವ ಗೊಳಸಂಗಿ (ಎಂಜಿನಿಯರಿಂಗ್-5993) ಪಡೆದಿದ್ದಾರೆ.

ವಿದ್ಯಾರ್ಥಿಗಳ ಈ ಸಾಧನೆಗೆ ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷರಾದ ಬಸವರಾಜ ಕೌಲಗಿ, ಪ್ರಾಂಶುಪಾಲರಾದ ಮಂಜುನಾಥ ಮಜುನಗೊಂಡ, ಶೈಕ್ಷಣಿಕ ಸಂಯೋಜಕ ಮಂಜುನಾಥ ತುಮ್ಮರಮಟ್ಟಿ ಸೇರಿದಂತೆ ಆಡಳಿತ ಮಂಡಳಿಯ ಸರ್ವ ಸದಸ್ಯರು ಹಾಗೂ ಎಲ್ಲ ಬೋಧಕ ಬೋಧಕೇತರ ಸಿಬ್ಬಂದಿ ಹರ್ಷ ವ್ಯಕ್ತಪಡಿಸಿದ್ದಾರೆ.

ಅನುಷಾ ಹೊಸುರ್ ಅಗ್ರಿಯಲ್ಲಿ ರಾಜ್ಯಕ್ಕೆ 3ನೇ, ವೆಟರ್‌ನರಿಯಲ್ಲಿ 4ನೇ ರ್‍ಯಾಂಕ್



> ನಾನು ರೈತಾಪಿ ಕುಟುಂಬದಿಂದ ಬಂದಿದ್ದು ಚಿಕ್ಕವಳಿದ್ದಾಗಿನಿಂದ ಒಳ್ಳೆಯ ಕಾಲೇಜಿನಲ್ಲಿ ಕಲಿಯಬೇಕು ಎಂದು ಆಸೆ ಪಟ್ಟಿದ್ದೆ. ಇಲ್ಲಿಗೆ ಬಂದ ನಂತರ ಏನಾದರೂ ಸರಿ ಒಳ್ಳೆಯ ರ್‍ಯಾಂಕ್ ಪಡೆದುಕೊಂಡು ಅಪ್ಪ ಅಮ್ಮನ ಶ್ರಮ ಸಾರ್ಥಕ ಮಾಡಬೇಕು ಎಂದು ಯತ್ನಿಸುತ್ತಿದ್ದೆ. ನನ್ನ ಕನಸು ನನಸು ಮಾಡುವಲ್ಲಿ ಇಂದು ನಮ್ಮ ಕಾಲೇಜಿನ ಎಲ್ಲ ಬೋಧಕ ಬೋಧಕೇತರ ಸಿಬ್ಬಂದಿ ಹಾಗೂ ಹಾಸ್ಟೆಲ್ ವಾರ್ಡನ್‌ಗಳು ನೆರವಾಗಿದ್ದು ಅವರಿಗೆಲ್ಲರಿಗೂ ನಾನು ಚಿರಋಣಿಯಾಗಿದ್ದೇನೆ. ನನ್ನ ಈ ರ್‍ಯಾಂಕ್‌ನ್ನು ನನ್ನ ಹೆತ್ತವರಿಗೆ ಅರ್ಪಿಸುತ್ತೇನೆ.
>
> ■ **ಅನುಷಾ ಹೊಸುರ** ವಿದ್ಯಾರ್ಥಿನಿ

ಇಬ್ಬರ ಪ್ರಾಣ ಉಳಿಸಿದ ಬೆಕ್ಕು!

ಬಾಗಲಕೋಟೆ: ಜಿಲ್ಲೆಯಲ್ಲಿ ಮುಂಗಾರು ಮಳೆ ಸುರಿಯುತ್ತಿಲ್ಲವೆಂದು ರೈತರು ಆತಂಕದಲ್ಲಿದ್ದ ಸಂದರ್ಭದಲ್ಲಿ ಶನಿವಾರ ರಾತ್ರಿ ಜಿಲ್ಲೆಯಾದ್ಯಂತ ಭಾರೀ ಮಳೆಯಾಗಿದೆ. ಬಾಗಲಕೋಟೆ ನಗರದ ಹಣ್ಣಿನ ವ್ಯಾಪಾರಿ ತಂದೆ ಮತ್ತು ಮಗನ ಜೀವವನ್ನು ಬೆಕ್ಕು ಉಳಿಸಿದ ಘಟನೆ ನಡೆದಿದೆ.

ಮನೆ ಮೇಲ್ಚಾವಣಿ ಕುಸಿತ

ಜಿಲ್ಲೆಯಾದ್ಯಂತ ಸುರಿದ ಮಳೆಯಿಂದ ಅಲ್ಲಲ್ಲಿ ಮನೆಗಳ ಮೇಲ್ಚಾವಣಿ ಕುಸಿದರೆ, ಗಿಡಗಳು ನೆಲಕ್ಕೆ ಉರುಳಿದೆ. ನಗರದ ವಲ್ಲಭಭಾಯಿ ವೃತ್ತದ ಸಮೀಪ ಇರುವ ಮಾವಿನ ಹಣ್ಣಿನ ವ್ಯಾಪಾರಿ ಶಬ್ಬೀರಿ ಭಾಗವಾನ ಅವರ ಮನೆಯ ಮೇಲ್ಚಾವಣಿ ಕುಸಿದಿದ್ದು ಯಾರಿಗೂ ಅಪಾಯ ಸಂಭವಿಸಿಲ್ಲ. ಶಬ್ಬೀರವರ ಮನೆಯ ಮೇಲ್ಚಾವಣಿಯ ಕಟ್ಟಿಗೆ, ಮಣ್ಣು ನಿತ್ಯವಾಸ ಮಾಡುವ ಮನೆಯ ಸಾಮಾಗ್ರಿ, ಮಾವಿನ ಹಣ್ಣುಗಳ ಮೇಲೆ ಸಂಪೂರ್ಣ ಕುಸಿದಿದೆ.

ಶಬ್ಬೀರಿ ಭಾಗವಾನ ಮನೆಯಲ್ಲಿ ಕಾರ್ಯಕ್ರಮ ನಿಮಿತ್ತ ವಿಜಯಪುರಕ್ಕೆ ತೆರಳಿ ನಂತರ ಮಧ್ಯಾಹ್ನ 4ಗಂಟೆಗೆ ಬಾಗಲಕೋಟೆಯ ಮನೆಗೆ ಸೇರಿಕೊಂಡಿದ್ದಾರೆ. ನಂತರ ರಾತ್ರಿ ಸುರಿದ ಮಳೆಯಿಂದ ಮಣ್ಣಿನ ತುಕಡಿಗಳು ಒಂದೊಂದು ಬೀಳುತ್ತಿದ್ದಂತೆ ಬೆಕ್ಕು ಹೊರ ಹೋಗಿದೆ. ಹೊರ ಓಡಿದ ಬೆಕ್ಕನ್ನು ಹಿಡಿದು ಏನಾದರೂ ತಿನಿಸಬೇಕು ಎಂದು ತಂದೆ ಮತ್ತು ಮಗ ಹೊರಗೆ ಬರುತ್ತಿದ್ದಂತೆ ದಪ್ಪೆಂದು ಮನೆಯ ಮೇಲ್ಚಾವಣಿ ಕುಸಿದಿದೆ. ಈ ಘಟನೆಯಲ್ಲಿ ಇಬ್ಬರೂ ಪ್ರಾಣಾಪಾಯದಿಂದ ಪಾರಾಗಿದ್ದಾರೆ.

ಮಳೆ ಬೀಳುವ ಸಂದರ್ಭದಲ್ಲಿ ಮನೆಯಿಂದ ಬೆಕ್ಕು ಹೊರಗಡೆ ಓಡಿ ಹೋಗದೇ ಇದ್ದರೆ ಇವತ್ತು ನಮ್ಮ ಮನೆಯ ಮೇಲ್ಚಾವಣಿ ನಮ್ಮ ಮೇಲೆ ಕುಸಿಯುತ್ತಿತ್ತು. ಬೆಕ್ಕು ಓಡಿದ ನಂತರ ಅದನ್ನು ಹಿಡಿಯಲು ಹೋದೆವು ಹೊರಗಡೆ ಬರುತ್ತಿದ್ದಂತೆ ಮನೆ ಕುಸಿದಿದೆ. ಸಾಕಿದ ಬೆಕ್ಕಿನಿಂದಲೇ ನಮ್ಮ ಜೀವ ಉಳಿಯಿತು ಎಂದು ಶಬ್ಬೀರ ಭಾಗವಾನ್ ತಿಳಿಸಿದ್ದಾರೆ.

ಮನೆ ಕುಸಿತ ಸ್ಥಳಕ್ಕೆ ಪೂಜಾರ ಭೇಟಿ: ಶನಿವಾರ ಸುರಿದ ಭಾರೀ ಮಳೆಗೆ ನಗರದ ವಲ್ಲಭಾಯಿ ಚೌಕ್ ಹತ್ತಿರ ಬೀದಿ ಬದಿ ಹಣ್ಣಿನ ವ್ಯಾಪಾರಿ ಶಬ್ಬೀರ್ ಬಾಗವಾನ್ ಮನೆ ಕುಸಿತ ಸ್ಥಳಕ್ಕೆ ವಿಧಾನ ಪರಿಪರಿಷತ್ ಶಾಸಕ ಪಿ.ಎಚ್.ಪೂಜಾರ ಭೇಟಿ ನೀಡಿ ಸಂಬಂಧಪಟ್ಟ ಅಧಿಕಾರಿಗಳಿಗೆ ಮಾತನಾಡಿ ಬಡ ವ್ಯಾಪಾರಿಗೆ ಅನುಕೂಲ ಕಲ್ಪಿಸಲು ಅಧಿಕಾರಿಗಳಿಗೆ ತಿಳಿಸಿದರು.

ಈ ಸಂದರ್ಭದಲ್ಲಿ ಬೀದಿ ಬದಿ ವ್ಯಾಪಾರಿ ಸಂಘದ ಅಧ್ಯಕ್ಷ ಆಂಜನೇಯ ಕಾಗಿ, ಬಾಗಲಕೋಟ್ ಯೂನಿಯನ್ ಮಾರ್ಕೆಟ್ ಆಫ್ ಅಸೋಸಿಯೇಷನ್ ಅಧ್ಯಕ್ಷ ರವಿ ಕುಮಟಗಿ, ಪ್ರಧಾನ ಕಾರ್ಯದರ್ಶಿ ವಿರುಪಾಕ್ಷ ಅಮೃತಕರ, ಶ್ರೀನಿವಾಸ್ ಬಳ್ಳಾರಿ, ಮಕ್ತುಮಸಾಬ ದೊಡ್ಡಮನಿ, ಶೌಕತ ವಾಳದ ಇದ್ದರು.

ಸಿಇಟಿ ಅರ್ಹತಾ ಪರೀಕ್ಷೆಯಲ್ಲಿ ಉತ್ತಮ ಸಾಧನೆ



ಬೀಳಗಿ: ಸ್ಥಳೀಯ ಸ್ವಾಮಿ ವಿವೇಕಾನಂದ ವಿಜ್ಞಾನ ಮತ್ತು ವಾಣಿಜ್ಯ ಮಹಾವಿದ್ಯಾಲಯದ 25 ವಿದ್ಯಾರ್ಥಿಗಳು ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಓಉಅ) ನಡೆಸಿದ ಪ್ರತಿಷ್ಠಿತ ಸಿಇಟಿ (ಓಇಉಖ)-2026ರ ಪರೀಕ್ಷೆಯಲ್ಲಿ ರಾಜ್ಯಮಟ್ಟದಲ್ಲಿ ಉತ್ತಮ ಫಲಿತಾಂಶ ಗಳಿಸಿ ಸಂಸ್ಥೆಯ ಕೀರ್ತಿ ಹೆಚ್ಚಿಸಿದ್ದಾರೆ.

ಕೀರ್ತಿ ಬಳೂತಿ, ಗಿರೀಶ ಮಠಪತಿ, ಸಹನಾ ಬೂದಿಹಾಳ, ನಿಂಗಮ್ಮ ಬಿಸ್ಟಗೊಂಡ, ಭಾಗವ್ವ ಮಹಾಲಿಂಗಪೂರ, ಕಾವೇರಿ ಚೌಧರಿ, ಪವಿತ್ರಾ ನಾಯ್ಕರ, ಭಾಗ್ಯಶ್ರೀ ಮುಳವಾಡ, ಪ್ರೀತಿ ಕುಂಬಾರ, ಮಧು ಮುದಕನ್ನವರ, ಸೃಷ್ಟಿ ಸಂಕಾನಟ್ಟಿ, ಕೀರ್ತಿ ಸಣ್ಣೇಲಿ, ಮಧು ಶಹಾಪೂರ, ಸ್ನೇಹಾ ಹಳ್ಳಿ, ಪಲ್ಲವಿ ಮಾಳಗೊಂಡ, ವಿಕ್ರಮ ಮಾದರ, ಶಿವರಾಜ ಬೆನಕೊಪ್ಪ, ಪ್ರತಿಭಾ ಕರೆಪ್ಪಗೋಳ, ಶ್ವೇತಾ ರಡ್ಡಿಒಂಟಿ, ಲಕ್ಷ್ಮೀ ಮೇಟಿ, ಶ್ರೀಕಾಂತ ಕೊಟಗೊಂಡ, ಸೃಷ್ಟಿ ನಾಗರೆಡ್ಡಿ, ಕಾರ್ತಿಕ ಬಡಗೌಡರ, ರಾಧಾ ಬೆಳ್ಳುಬ್ಬಿ, ಸಹನಾ ಸಜ್ಜನ ಸಿಇಟಿ (ಓಇಉಖ)-2026ರ ಪರೀಕ್ಷೆಯಲ್ಲಿ ಉತ್ತೀರ್ಣಗೊಂಡು ಹಲವಾರು ವೃತ್ತಿಪರ ಕೋರ್ಸ್‌ಗಳಿಗೆ ಅರ್ಹತೆ ಪಡೆದುಕೊಂಡಿದ್ದಾರೆ.

ಈ ವಿದ್ಯಾರ್ಥಿಗಳಿಗೆ ಸಂಸ್ಥೆಯ ಸಂಸ್ಥಾಪಕ ಎಂ.ಎನ್. ಪಾಟೀಲ, ಆಡಳಿತಾಧಿಕಾರಿ ವ್ಹಿ. ಎಸ್. ಮೇಟಿ, ಆಡಳಿತ ಮಂಡಳಿ, ಪ್ರಾಚಾರ್ಯ ಜಿ.ಆರ್.ಪಾಟೀಲ, ಎಮ್.ಬಿ. ವೆಂಕಟಾಪೂರ ಮತ್ತು ಉಪನ್ಯಾಸಕ ವೃಂದದವರು ಅಭಿನಂದನೆ ಸಲ್ಲಿಸಿದ್ದಾರೆ.

ವಿದ್ಯುತ್ ಸ್ಪರ್ಶ: ರೈತ ಸಾವು

ಹಾವೇರಿ: ಹೊಲದಲ್ಲಿ ಬೋರ್‌ವೆಲ್ ಸ್ಟಾರ್ಟ್ ಮಾಡಲು ಹೋಗಿದ್ದ ರೈತರೊಬ್ಬರಿಗೆ ಆಕಸ್ಮಿಕ ವಿದ್ಯುತ್ ತಗುಲಿದ ಪರಿಣಾಮ ರೈತ ಜಮೀನಿನಲ್ಲಿಯೇ ಮೃತಪಟ್ಟ ಘಟನೆ ತಾಲೂಕಿನ ಹಾವನೂರು ಗ್ರಾಮದಲ್ಲಿ ನಡೆದಿದೆ.

ಗುಡ್ಡಪ್ಪ ಶಿದ್ದಪ್ಪ ಮುನ್ನೇನಿ (62) ಮೃತ ದುರ್ದೈವಿ. ಮೃತಪಟ್ಟ ರೈತ ತನ್ನ ಹೆಂಡತಿಯೊಂದಿಗೆ ಜಮೀನಿನಲ್ಲಿ ಬಿತ್ತನೆ ಮಾಡಿದ್ದ ಮೆಕ್ಕೆಜೋಳಕ್ಕೆ ನೀರು ಹಾಯಿಸಲೆಂದು ಹೋದಾಗ ಘಟನೆ ಸಂಭವಿಸಿದೆ. ಕೂಡಲೇ ಆತನನ್ನು ಗುತ್ತಲ ಸರ್ಕಾರಿ ಆಸ್ಪತ್ರೆಗೆ ಕರೆದೊಯ್ದಾಗ ವೈದ್ಯರು ಪರೀಕ್ಷಿಸಿ ಮೃತಪಟ್ಟಿರುವ ಬಗ್ಗೆ ತಿಳಿಸಿದ್ದಾರೆ ಎಂದು ಮೃತರ ಮಗ ಗೋಣಿಬಸಪ್ಪ ಮುನ್ನೇನಿ ಪೊಲೀಸರಿಗೆ ನೀಡಿದ ದೂರಿನಲ್ಲಿ ತಿಳಿಸಿದ್ದಾರೆ. ಗುತ್ತಲ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಪಡಿತರ ಅಕ್ಕಿ ಜಪ್ತಿ

ವಿಜಯನಗರ: ಗದಗಿನಿಂದ ಮಂಡ್ಯ-ತುಮಕೂರು ಕಡೆಗೆ ಅನಧಿಕೃತವಾಗಿ ಸಾಗಿಸುತ್ತಿದ್ದ ಬೃಹತ್ ಪ್ರಮಾಣದ ಪಡಿತರ ಅಕ್ಕಿಯನ್ನು ಅಧಿಕಾರಿಗಳು ಭಾನುವಾರ ವಶಪಡಿಸಿಕೊಂಡಿದ್ದಾರೆ. ಖಚಿತ ಮಾಹಿತಿ ಮೇರೆಗೆ ಆಹಾರ ಇಲಾಖೆ ಹಾಗೂ ಪೊಲೀಸ್ ಅಧಿಕಾರಿಗಳು ಹೊಸಪೇಟೆ ತಾಲೂಕಿನ ಮರಿಯಮ್ಮನಹಳ್ಳಿ ಬಳಿ ಗೂಡ್ಸ್ ವಾಹನವನ್ನು ತಡೆದು ತಪಾಸಣೆ ನಡೆಸಿದಾಗ ಅಕ್ರಮವಾಗಿ ಪಡಿತರ ಸಾಗಿಸುತ್ತಿರುವುದು ಬೆಳಕಿಗೆ ಬಂದಿದೆ. ವಾಹನದಲ್ಲಿದ್ದ ಅಂದಾಜು 60,41,000 ರೂ. ಮೌಲ್ಯದ 260.35 ಕ್ವಿಂಟಲ್ ಅಕ್ಕಿಯನ್ನು ಹಾಗೂ ವಾಹನವನ್ನು ವಶಕ್ಕೆ ಪಡೆಯಲಾಗಿದೆ. ಈ ಕುರಿತು ಮರಿಯಮ್ಮನಹಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. Printed at M/s Elegant Offset Printers, Pvt.Ltd, Plot no 33/1& 15/1(eastern part) MT Sagar Industrial Estate, Hubballi -580030, Published at Joshi Chambers, 2nd Floor, Near R.M.Joshi Petrol pump, Lamington Road, Hubballi-580020, Ph: 0836-2350942, Editor: P.S.Prakash, Group Editor: Vinayak S. Bhat

ಕಿರುಸುದ್ದಿ

ವಿಜೃಂಭಣೆಯ ಶ್ರೀಗಂಗಾ ಪರಮೇಶ್ವರಿ ಜಾತ್ರೆ

ಮುಂಡಗೋಡ: ಪಟ್ಟಣದ ನ್ಯಾಸರ್ಗಿ ರಸ್ತೆಯಲ್ಲಿರುವ ಶ್ರೀಗಂಗಾ ಪರಮೇಶ್ವರಿ ದೇವಸ್ಥಾನದ 15ನೇ ವರ್ಷದ ಜಾತ್ರಾ ಮಹೋತ್ಸವ ವಿಜೃಂಭಣೆಯಿಂದ ಜರುಗಿತು. ಮಲ್ಲಿಗೆ, ಸೇವಂತಿ, ಗುಲಾಬಿ, ಸುಗಂಧ ಪುಷ್ಪ, ಚೆಂಡು ಹೂವು, ತುಳಸಿ ನಾನಾಬಗೆಯ ಹೂವಿನ ಹಾರಗಳಿಂದ ದೇವಿಯನ್ನು ಅಲಂಕಾರ ಮಾಡಲಾಗಿತ್ತು.



ದೇವಸ್ಥಾನದಲ್ಲಿ ಬೆಳಗ್ಗೆ 9 ಗಂಟೆಗೆ ಗಣಹೋಮ, ದುರ್ಗಾ ಹೋಮ, ಅಭಿಷೇಕ, ಪಂಚಾಮೃತಾಭಿಷೇಕ, ಸಹಸ್ರ ಕುಂಕುಮಾರ್ಚನೆ, ಪಲಪುಷ್ಪ ಸಮರ್ಪಣೆ ಹಾಗೂ ಮಹಾ ಮಂಗಳಾರತಿ ಕೈಂಕರ್ಯ ನಡೆದವು. ಶ್ರೀಗಂಗಾ ಪರಮೇಶ್ವರಿ ದೇವಸ್ಥಾನದ ಟ್ರಸ್ಟ್ ಕಮಿಟಿಯವರು ಮಧ್ಯಾಹ್ನ ಭಕ್ತಾದಿಗಳಿಗೆ ಅನ್ನಪ್ರಸಾದ ವ್ಯವಸ್ಥೆ ಮಾಡಿದ್ದರು. ನೂರಾರು ಸಂಖ್ಯೆಯಲ್ಲಿ ಭಕ್ತರು ದೇವಿಯ ದರ್ಶನ ಪಡೆದು ಪುನೀತರಾದರು.

ಮಕ್ಕಳ ಸಂಸ್ಕಾರ ಕೇಂದ್ರ ಉದ್ಘಾಟನೆ



ಗೋಕರ್ಣ: ಇಲ್ಲಿನ ಸೇವಾ ಭಾರತಿವತಿಯಿಂದ ಬಂಗ್ಲೆಗುಡ್ಡೆಯಲ್ಲಿ ಮಕ್ಕಳ ಸಂಸ್ಕಾರ ಕೇಂದ್ರ ಪ್ರಾರಂಭವಾಯಿತು. ಸೇವಾ ಭಾರತಿಯ ವಿಭಾಗ ಸಂಯೋಜಕರಾದ ಮೋಹನ್ ಗುನಗ ಉದ್ಘಾಟಿಸಿ ಮಾತನಾಡಿದ ಅವರು, ಮಕ್ಕಳಲ್ಲಿ ಸಂಸ್ಕಾರ, ದೇಶಭಕ್ತಿ ಹಾಗೂ ಉತ್ತಮ ವ್ಯಕ್ತಿತ್ವ ನಿರ್ಮಾಣಕ್ಕೆ ಇಂತಹ ಕೇಂದ್ರಗಳು ಅತ್ಯಂತ ಅಗತ್ಯವೆಂದು ತಿಳಿಸಿದರು.ಈ ಸಂಸ್ಕಾರ ಕೇಂದ್ರದಲ್ಲಿ ಪ್ರತಿನಿತ್ಯ ಮಕ್ಕಳಿಗೆ ರಾಮಾಯಣ, ಮಹಾಭಾರತ ಹಾಗೂ ಇತರ ಪೌರಾಣಿಕ ಕಥೆಗಳು, ಸ್ವಾತಂತ್ರ್ಯ ಹೋರಾಟಗಾರರ ಜೀವನಗಾಥೆಗಳು, ಸ್ತೋತ್ರ ಪಾಠಗಳು ಹಾಗೂ ಶಾಲೆಯ ಮನೆಪಾಠ ಗಳಿಗೆ ಅಗತ್ಯ ಮಾರ್ಗದರ್ಶನ ನೀಡಲಾಗುತ್ತದೆ ಎಂದರು. ಈ ವೇಳೆ ಸೇವಾ ಭಾರತಿಯ ನಿರ್ದೇಶಕರಾದ ರೂಪಶ್ರೀ ಕೂರ್ಸೆ,ರಾಜೀವ್ ಬೈಲಕೇರಿ, ಪ್ರಶಾಂತ್, ಗಣಪತಿ ಬಟ್ಟು ಹಾಗೂ ಬಂಗ್ಲೆಗುಡ್ಡೆ ಶಾಲೆಯ ಶಿಕ್ಷಕರು ಉಪಸ್ಥಿತರಿದ್ದರು.ಗ್ರಾಮದ ಮಕ್ಕಳಲ್ಲಿ ಉತ್ತಮ ಸಂಸ್ಕಾರ, ಶಿಸ್ತು, ಶಿಕ್ಷಣದ ಆಸಕ್ತಿ ಹಾಗೂ ರಾಷ್ಟ್ರಭಕ್ತಿಯ ಮನೋಭಾವ ಬೆಳೆಸುವ ಉದ್ದೇಶದಿಂದ ಆರಂಭಗೊಂಡಿರುವ ಈ ಸಂಸ್ಕಾರ ಕೇಂದ್ರದಲ್ಲಿ ಪ್ರತಿನಿತ್ಯ ನಿಯಮಿತವಾಗಿ ತರಗತಿಗಳು ನಡೆಯಲಿದೆ.

ನಾಳೆ ಕಾಫಿ, ಕಾಳುಮೆಣಸು ಕಾರ್ಯಾಗಾರ

ಸಿದ್ದಾಪುರ: ತಾಲೂಕಿನ ಹಾರ್ಸಿಕಟ್ಟಾ ವ್ಯವಸಾಯ ಸೇವಾ ಸಹಕಾರಿ ಸಂಘದಲ್ಲಿ ಜೂ.9ರಂದು ಮಧ್ಯಾಹ್ನ 3.30ಕ್ಕೆ ಕಾಫಿ ಮತ್ತು ಕಾಳುಮೆಣಸು ಮಾಹಿತಿ ಕಾರ್ಯಾಗಾರ ನಡೆಯಲಿದೆ.

ಸಂಘದ ಅಧ್ಯಕ್ಷ ಅನಂತ ಹೆಗಡೆ ಅಧ್ಯಕ್ಷತೆವಹಿಸಲಿದ್ದಾರೆ. ಭಾರತೀಯ ಸಾಂಬಾರು ಮಂಡಳಿ ನಿರ್ದೇಶಕ ಪ್ರಸನ್ನ ಕೆರೆಕೈ ಉಪಸ್ಥಿತರಿರುತ್ತಾರೆ. ಕೃಷಿ ತಜ್ಞ ಕಿಶೋರ ಹೆಗಡೆ ಬೆಳ್ಳೇಕೇರಿ ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಲಿದ್ದಾರೆ.

ಅಡಕೆ ತೋಟದಲ್ಲಿ ಕಾಫಿ ಬೆಳೆ ಬೆಳೆಯುವ ವಿಧಾನ, ಕಾಳು ಮೆಣಸು ಬೆಳೆಯ ಸೂಕ್ಷ್ಮ ತಳಿಗಳು, ಗಿಡಗಳ ನಿರ್ವಹಣೆ ಮತ್ತು ಪೋಷಕಾಂಶ ನಿರ್ವಹಣೆ, ರೋಗ ಮತ್ತು ಕೀಟ ನಿಯಂತ್ರಣ, ಉತ್ಪಾದನೆ ಮತ್ತು ಆದಾಯ ಹೆಚ್ಚಿಸುವ ಕ್ರಮಗಳ ಕುರಿತು ಮಾಹಿತಿ ನೀಡಲಾಗುತ್ತಿದ್ದು ನಂತರ ರೈತರೊಂದಿಗೆ ಸಂವಾದ ನಡೆಯಲಿದೆ ಎಂದು ಸಂಘದ ಪ್ರಕಟಣೆ ತಿಳಿಸಿದೆ.



ಕುಮಟಾ: ಕರ್ನಾಟಕ ಚುಟುಕು ಸಾಹಿತ್ಯ ಪರಿಷತ್, ಕುಮಟಾ ಘಟಕದ 5ನೇ ವರ್ಷದ ಸವಿನೆನಪಿನ ಅಂಗವಾಗಿ ಹಾಗೂ ಕ್ರಿಶಾ ಚಾರಿಟೆಬಲ್ ಟ್ರಸ್ಟ್, ಹೆಗಡೆ ಇವರ ಸಹಯೋಗದಲ್ಲಿ ಆಯೋಜಿಸಲಾಗುತ್ತಿರುವ ಉಕ ಜಿಲ್ಲಾ ಮಟ್ಟದ 9ನೇ ಹಾಗೂ ಕುಮಟಾ ತಾಲೂಕು ಮಟ್ಟದ 5ನೇ ಚುಟುಕು ಸಾಹಿತ್ಯ ಸಮ್ಮೇಳನದ ಆಮಂತ್ರಣ ಪತ್ರಿಕೆಯನ್ನು ಭಾನುವಾರ ಟ್ರಸ್ಟ್ ಸಂಸ್ಥಾಪಕರಾದ ಮುಕುಂದ ರಾಮರಾಯ ನಾಯ್ಕ ಅವರ ನಿವಾಸದಲ್ಲಿ ಬಿಡುಗಡೆಗೊಳಿಸಲಾಯಿತು.



ಸಿದ್ದಾಪುರ: ತಾಲೂಕಿನ ಮುತ್ತಳ್ಳಿ ಸಹಿಪ್ರಾ ಶಾಲೆಯಲ್ಲಿ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯಿಂದ ವಿಶ್ವಪರಿಸರ ದಿನಾಚರಣೆ ಹಾಗೂ ಪರಿಸರ ಕುರಿತು ಮಾಹಿತಿ ಕಾರ್ಯಕ್ರಮ ನಡೆಯಿತು. ಮುತ್ತಳ್ಳಿ ಒಕ್ಕೂಟದ ಅಧ್ಯಕ್ಷ ಗಣಪತಿ ಗೌಡ, ಎಸ್‌ಡಿಎಂಸಿ ಅಧ್ಯಕ್ಷ ಅನಂತ ಗೌಡ, ಜಿಲ್ಲಾ ಜನಜಾಗೃತಿ ವೇದಿಕೆ ಉಪಾಧ್ಯಕ್ಷ ರಮೇಶ ಹಾರ್ಸಿಮನೆ, ಶಾಲಾ ಮುಖ್ಯಾಧ್ಯಾಪಕ ಗಣೇಶ ಶೇಟ್, ಶಿಕ್ಷಕರಾದ ಗಿರೀಶ ನಾಯ್ಕ, ತ್ರಿವೇಣಿ ನಾಯ್ಕ, ಉದಯ, ಹೇಮಾವತಿ, ಎಸ್‌ಡಿಎಂಸಿ ಪದಾಧಿಕಾರಿಗಳು ಇದ್ದರು.

ಪರಿಸರ ಪ್ರಜ್ಞೆಯಿಂದ ಮಾತ್ರ ಪರಿಸರ ರಕ್ಷಣೆ ಸಾಧ್ಯ

ಹೊನ್ನಾವರ: ತಾಲೂಕಿನ ಕರ್ಕಿ ಚೆನ್ನಕೇಶವ ಪ್ರೌಢಶಾಲೆಯಲ್ಲಿ ವಿಶ್ವ ಪರಿಸರ ದಿನಾಚರಣೆಯನ್ನು ಆಚರಿಸಲಾಯಿತು. ಕಾರ್ಯಕ್ರಮ ಉದ್ಘಾಟಿಸಿದ ನ್ಯೂ ಇಂಗ್ಲಿಷ್ ಸ್ಕೂಲ್ ನಿವೃತ್ತ ಮುಖ್ಯಾಧ್ಯಾಪಕ ಜಿ.ಟಿ.ಹೆಬ್ಬಾರ ಮಾತನಾಡಿ, ಆಧುನಿಕ ಅಭಿವೃದ್ಧಿಯ ದಾವಂತದಲ್ಲಿ ಮನುಷ್ಯ ಪರಿಸರದ ತತ್ವವನ್ನು ಪಾಲಿಸದೆ ಇರುವುದರಿಂದ ಪರಿಸರ ನಾಶವಾಗುತ್ತಿದೆ. ಸ್ಥಳೀಯ, ರಾಷ್ಟ್ರ ಮತ್ತು ವಿಶ್ವ ಮಟ್ಟದಲ್ಲಿ ಆಯಾ ಹಂತದಲ್ಲಿ ಯಾವುದೇ ಕಾರ್ಯಕ್ರಮ ಹಮ್ಮಿಕೊಂಡರು, ಇತ್ತೀಚಿನ ಯುವ ಸಮಾಜದ ಕಾಳಜಿ ಕೆಳಮಟ್ಟದ್ದಾಗಿದೆ. ಸಕಾರಾತ್ಮಕ ಪರಿಸರ ಪ್ರಜ್ಞೆಯಿಂದ ಮಾತ್ರ ಪರಿಸರ ರಕ್ಷಣೆ ಸಾಧ್ಯ ಎಂದರು.ಚೆನ್ನಕೇಶವ ವಿದ್ಯಾಸಂಸ್ಥೆಯ ಉಪಾಧ್ಯಕ್ಷ ಎಮ್. ಕೆ.ಭಟ್ ಸೂರಿ ಮಾತನಾಡಿ, ವಿದ್ಯಾರ್ಥಿಗಳು ತಮ್ಮ ಸುತ್ತಲಿನ ಪರಿಸರವನ್ನು ಸ್ವಚ್ಛ ಇಟ್ಟುಕೊಳ್ಳುತ್ತಾ ಸ್ವಚ್ಛತೆ ಅರಿವನ್ನು ಪಡೆದುಕೊಳ್ಳ ಬೇಕು ಎಂದರು.ಶಾಲೆಯ ಎಲ್ಲ ವಿದ್ಯಾರ್ಥಿಗಳಿಗೆ ಉಚಿತವಾಗಿ ಪಟ್ಟಿಯನ್ನು ವಿತರಿಸಿ ಮಾತನಾಡಿದ ಶಾಲೆಯ ಪೂರ್ವ ವಿದ್ಯಾರ್ಥಿ ಅಬ್ದುಲ್ ಅಬೂಬಕರ್ ಸಾಬ್ ಮಾತನಾಡಿದರು.

ತಾಪಂ ಮಾಜಿ ಸದಸ್ಯ ತುಕಾರಾಂ ನಾಯ್ಕ, ಶಾಲೆಯ ಮುಖ್ಯ ಅಧ್ಯಾಪಕ ಎಲ್. ಎಂ. ಹೆಗಡೆ ಮಾತನಾಡಿದರು. ಆರ್‌ಎನ್‌ಎಸ್ ಮೋಟರ್ಸ್ ಕರ್ಕಿ ಇವರು ವಿದ್ಯಾರ್ಥಿಗಳಿಗೆ ಗಿಡ ನೀಡುವ ಮೂಲಕ ಪರಿಸರ ಜಾಗೃತಿ ಮೂಡಿಸಿದರು. ಕಾರ್ಯಕ್ರಮದಲ್ಲಿ ಹುಸೇನ್ ಸಾಬ್ ಪೂರ್ವ ವಿದ್ಯಾರ್ಥಿಗಳು ಉಪಸ್ಥಿತರಿದ್ದರು. ಶ್ರೀಕಾಂತ್ ಹಿಟ್ನಳ್ಳಿ ಸ್ವಾಗತಿಸಿದರು. ಸೀಮಾ ಭಟ್ಟ ವಂದಿಸಿದರು. ಮುಕ್ತಾ ನಾಯ್ಕ ನಿರೂಪಿಸಿದರು.



ಹೊನ್ನಾವರ: ತಾಲೂಕಿನ ಕರ್ಕಿ ಚೆನ್ನಕೇಶವ ಪ್ರೌಢಶಾಲೆಯಲ್ಲಿ ವಿಶ್ವ ಪರಿಸರ ದಿನಾಚರಣೆಯನ್ನು ಆಚರಿಸಲಾಯಿತು. ನ್ಯೂ ಇಂಗ್ಲಿಷ್ ಸ್ಕೂಲ್ ನಿವೃತ್ತ ಮುಖ್ಯಾಧ್ಯಾಪಕ ಜಿ.ಟಿ.ಹೆಬ್ಬಾರ ಕಾರ್ಯಕ್ರಮ ಉದ್ಘಾಟಿಸಿದರು.

ಸಸಿ ನೆಟ್ಟು ನದಿಗಳ ಸಂರಕ್ಷಣೆ ಪ್ರತಿಜ್ಞೆ | ಸ್ವರ್ಣವಲ್ಲಿ ಶ್ರೀಗಳಿಂದ ಚಾಲನೆ

ಜೂ.10ಕ್ಕೆ ವೃಕ್ಷಾರೋಪಣ ಅಭಿಯಾನ

ಯಲ್ಲಾಪುರ: ಬೇಡ್ತಿ ವರದಾ ನದಿ ಜೋಡಣೆ, ಅಘನಾಶಿನಿ, ಶರಾವತಿ ಯೋಜನೆ ವಿರುದ್ಧ ಪ್ರತಿರೋಧಗಳು ನಮ್ಮಿಂದ ನಡೆಯುತ್ತಲೇ ಇದೆ. ಬೇಡ್ತಿ ಅಘನಾಶಿನಿ ನದಿ ಉಳಿಸಿ ಹಲವು ಬಗೆಯ ಜಾಗೃತಿ ಅಭಿಯಾನಗಳನ್ನು ಮಾಡಿದ್ದು ಈಗ ಬೇಡ್ತಿ ಅಘನಾಶಿನಿ ನದಿ ಉಳಿಸಿ ಚಳುವಳಿ ತೀವ್ರಗೊಳಿಸಲು ಸಸಿ ನೆಟ್ಟು ನದಿಗಳ ಸಂರಕ್ಷಣೆ ಪ್ರತಿಜ್ಞೆ ಮಾಡುವ ಅಭಿಯಾನವನ್ನು ತಾಲೂಕಿನಲ್ಲಿ ಆರಂಭಿಸಲಾಗುತ್ತಿದೆ ಎಂದು ಬೇಡ್ತಿ ಅಘನಾಶಿನಿ ಕೊಳ್ಳ ಸಂರಕ್ಷಣಾ ಸಮಿತಿ ತಿಳಿಸಿದೆ.

ಈ ಕುರಿತು ಸಮಿತಿ ಪ್ರಕಟಣೆ ನೀಡಿದ್ದು ಈ ನಿಟ್ಟಿನಲ್ಲಿ ಬೇಡ್ತಿ ನದಿ ಸೇತುವೆ ಹೊಲೆಹುಲಿಯಪ್ಪ ಬಳಿ ಜೂ.10ರಂದು ಬುಧವಾರ ಸಂಜೆ 4 ಗಂಟೆಗೆ ಸೋಂದಾ ಸ್ವರ್ಣವಲ್ಲೀ ಗಂಗಾಧರೇಂದ್ರ ಸರಸ್ವತೀ ಸ್ವಾಮೀಜಿಗಳ ಉಪಸ್ಥಿತಿಯಲ್ಲಿ ಗಿಡ ನೆಟ್ಟು ಪ್ರತಿಜ್ಞೆ ಮಾಡುವ ಹಸಿರು ಸಮಾರಂಭ ಹಮ್ಮಿಕೊಂಡಿದೆ. ಶ್ರೀಗಳು ತಾಲೂಕಿನ ವೃಕ್ಷಾರೋಪಣ ಜಾಗೃತಿ ಅಭಿಯಾನಕ್ಕೆ ಚಾಲನೆ ನೀಡಿ ಹಸಿರು ಸಮಾರಂಭದ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಲಿದ್ದಾರೆ.



ಪ್ರತಿಜ್ಞೆ ಅಭಿಯಾನ

ಬೇಡ್ತಿ ನದಿಯ ಅಕ್ಕಪಕ್ಕದ ಪ್ರದೇಶ, ಮಂಚಿಕೇರಿ, ಸೂರೆಮನೆ, ಉಮ್ಮಚಗಿ, ಮಾಗೋಡ, ಹೆಗ್ಗಾರ, ಕಲ್ಲೇಶ್ವರ ಭಾಗಗಳಲ್ಲಿ ಗಿಡ ನೆಟ್ಟು ಪ್ರತಿಜ್ಞೆ ಮಾಡುವ ಜಾಗೃತಿ ಅಭಿಯಾನ ಹಮ್ಮಿಕೊಂಡಿದೆ ಎಂದು ತಿಳಿಸಿದೆ.

ಈ ಕಾರ್ಯಕ್ರಮದಲ್ಲಿ ಸ್ಥಳಿಯ ಶಾಸಕ ಶಿವರಾಮ ಹೆಬ್ಬಾರ್, ವಿಧಾನ ಪರಿಷತ್ ಸದಸ್ಯ ಶಾಂತಾರಾಮ ಸಿದ್ದಿ ಸೇರಿದಂತೆ ವಿವಿಧ ಸ್ಥರದ ಜನಪ್ರತಿಗಳನ್ನು ಹಾಗೂ ಅರಣ್ಯ ಇಲಾಖೆಯ ಅಧಿಕಾರಿಗಳನ್ನು ಸಭೆಗೆ ಆಹ್ವಾನಿಸಲಾಗಿದೆ. ಬೇಡ್ತಿ (ಗಂಗಾವಳಿ) ಅಘನಾಶಿನಿ ಕಣಿವೆಗಳ ರೈತರು, ಪರಿಸರಕಾರ್ಯಕರ್ತರು, ಸೀಮಾ ಪರಿಷತ್‌ಗಳು, ಮಾತೃಮಂಡಳಿಗಳು, ಭಾರತೀಯ ಕಿಸಾನ್ ಸಂಘದ ಕಾರ್ಯಕರ್ತರು, ಸಹಕಾರಿ ಸಂಘಗಳು ಶ್ರೀ ಕ್ಷೇತ್ರ ಧ.ಗ್ರಾ.ಯೋಜನೆಯವರು, ವಿವಿಧಸ್ವ-ಸಹಾಯಸಂಘಗಳವರು, ಸಂಘಸಂಸ್ಥೆಗಳ ಮುಖ್ಯಸ್ಥರು, ವಿವಿಧ ಸ್ಥರದ ಮುಖಂಡರುಗಳು, ವನವಾಸಿಗಳು, ಸಾರ್ವಜನಿಕರು ಈ ಸಮಾರಂಭದಲ್ಲಿ ಪಾಲ್ಗೊಳ್ಳುವಂತೆ ಕೊಳ್ಳ ಸಂರಕ್ಷಣಾ ಸಮಿತಿ ತಿಳಿಸಿದೆ.

ಪಡಿತರ ಅಕ್ರಮ ಸಾಗಾಟ: ಕ್ರಮ ಕೈಗೊಳ್ಳಿ

ಅಂಕೋಲಾ: ತಾಲೂಕಿನಲ್ಲಿ ಅನ್ನಭಾಗ, ಅಕ್ಕಿ ಕಳ್ಳ ಸಾಗಾಟ ಆಗದಂತೆ ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಳ್ಳಬೇಕು ಅನ್ನಭಾಗ್ಯ ಅಕ್ಕಿಯನ್ನು ಮಾರಾಟ ಮಾಡದಂತೆ ಪ್ರತಿಯೊಂದು ಪಡಿತರ ಅಂಗಡಿಗಳಲ್ಲಿ ಸೂಚನಾ ಪತ್ರಗಳನ್ನು ಅಂಟಿಸಬೇಕು ಎಂದು ತಾಪಂ ಕಾರ್ಯನಿರ್ವಹಣಾಧಿಕಾರಿ ರಾಮು ಗುನಗಿ ಅವರು ತಾಲೂಕು ಪಂಚಾಯತ್ ಪ್ರಗತಿ ಪರಿಶೀಲನಾ ಸಭೆಯಲ್ಲಿ ಆಹಾರ ನಿರೀಕ್ಷಕರಿಗೆ ಸೂಚಿಸಿದರು.

ಅಕ್ರಮ ಅನ್ನಭಾಗ್ಯ ಅಕ್ಕಿ ಸಾಗಾಟ ತಡೆಯಲು ಆರ್‌ಟಿಒ ಪೊಲೀಸ್ ,ತಹಶೀಲ್ದಾರ್, ಆಹಾರ ನಿರೀಕ್ಷಕರನ್ನು ಒಳಗೊಂಡ ತಂಡವಿದೆ ತಾಲೂಕಿನಲ್ಲಿ ಈಗಾಗಲೆ ಅನ್ನಭಾಗ್ಯ ಅಕ್ಕಿ ಅಕ್ರಮ ಸಾಗಾಟದ ಸಂದರ್ಭದಲ್ಲಿ ದಾಳಿ ನಡೆಸಿ ಪೊಲೀಸ್ ಪ್ರಕರಣ ದಾಖಲಿಸಲಾಗಿದೆ ಎಂದು ಆಹಾರ ನಿರೀಕ್ಷಕರು ತಿಳಿಸಿದರು, ಪಡಿತರ ಅಂಗಡಿಗಳಿಂದ ಅಕ್ಕಿ ಮಾರಾಟ ಮಾಡಲಾಗುತ್ತಿಲ್ಲ ಪಡಿತರ ಚೀಟಿದಾರರು ಅಕ್ಕಿ ಮಾರಾಟ ಮಾಡುತ್ತಿದ್ದಾರೆ ಎಂದು ಆಹಾರ ನಿರೀಕ್ಷಕರು ತಿಳಿಸಿದರು.

ಅನ್ನಭಾಗ್ಯ ಅಕ್ಕಿ ಅಕ್ರಮ ಸಾಗಾಟ ಈಗಲೂ ಮುಂದುವರಿದಿದೆ ಟನ್ ಗಟ್ಟಲೆ ಅಕ್ಕಿ ಸಾಗಾಟ ಮಾಡುವಾಗ ಹಿಡಿಯಲಾಗಿದೆಇದನ್ನು ಗಂಭೀರವಾಗಿ ಪರಿಗಣಿಸಬೇಕು ಎಂಬ ಮಾತುಗಳು ಸಭೆಯಲ್ಲಿ ಕೇಳಿಬಂತು. ಪಟ್ಟಣದಲ್ಲಿ ವಾಹನ ನಿಲುಗಡೆ ಮತ್ತು ಸಂಚಾರ ವ್ಯವಸ್ಥೆ ತೀರಾ ಹದಗೆಟ್ಟಿದೆ. ಸಂಚಾರಿ ನಿಯಮಗಳ ಪಾಲನೆಯಾಗುತ್ತಿಲ್ಲ



ಬೇಕಾಬಿಟ್ಟ ವಾಹನಗಳನ್ನು ಓಡಿಸಲಾಗುತ್ತಿದೆ ಎಂಬ ಆರೋಪ ಕೇಳಿಬಂತು.ಅಂಕೋಲಾ ಗಂಗಾವಳಿ ಗೋಕರ್ಣ ರಸ್ತೆಯಲ್ಲಿ ವಾಹನ ಸಂಚಾರ ಹೆಚ್ಚಾಗಿದ್ದು ಪಿ.ಎಂ. ಹೈಸ್ಕೂಲ್ ಎದುರಿನ ರಸ್ತೆಯಲ್ಲಿ ಶಾಲಾ ಮಕ್ಕಳಿಗೆ ಅಪಾಯ ಆಗುವ ರೀತಿಯಲ್ಲಿ ಅತಿವೇಗದಲ್ಲಿ ವಾಹನಗಳನ್ನು ಚಲಾಯಿಸಲಾಗುತ್ತದೆ ಎಂದು ಸಭೆಯ ಗಮನಕ್ಕೆ ತರಲಾಯಿತು.ಅಂಕೋಲಾ ಮಂಜ ಗುಣಿ ರಸ್ತೆಯಲ್ಲಿ ಶೈಕ್ಷಣಿಕ ಸಂಸ್ಥೆಗಳು ಇರುವ ಕಡೆ ವೇಗ ನಿಯಂತ್ರಕಗಳ ನಿರ್ಮಾಣಕ್ಕೆ ಕ್ರಮ ಕೈಗೊಳ್ಳುವಂತೆ ಸಭೆಯಲ್ಲಿ ಸೂಚಿಸಿದರು.ಮಳೆಗಾಲ ಆರಂಭವಾಗುತ್ತಲೇ ತಾಲೂಕಿನಲ್ಲಿ ಕೃಷಿ ಚಟುವಟಿಕೆಗಳು ಆರಂಭವಾಗಲಿದ್ದು ಸಾಕಷ್ಟು ಪ್ರಮಾಣದಲ್ಲಿ ಭತ್ತದ ಬೀಜ ಸಂಗ್ರಹ ಇಡಲಾಗಿದೆ ತಾಲೂಕು ವ್ಯಾಪ್ತಿಯಲ್ಲಿ ಹೈಬ್ರಿಡ್ ತಳಿ ಬೆಳೆಯಲು ರೈತರು ಹೆಚ್ಚಿನ ಆಸಕ್ತಿ ತೋರುತ್ತಿದ್ದಾರೆ ಎಂದು ಕೃಷಿ ಇಲಾಖೆಯ ಸಹಾಯಕ ನಿರ್ದೇಶಕರು ತಿಳಿಸಿದರು.ತಾಪಂ ಪಂಚಾಯತ್ ಆಡಳಿತಾಧಿಕಾರಿ ಲತಾ ನಾಯಕ ಸಭೆಯ ಅಧ್ಯಕ್ಷತೆ ವಹಿಸಿದ್ದರು.



ಹೊನ್ನಾವರ: ವಿಶ್ವಸಂಸ್ಥೆಯ ವಿಶ್ವಮಾಹಾಸಾಗರ ದಿನದ ಅಂಗವಾಗಿ ತಾಲೂಕಿನ ಕಾಸರಕೋಡ ಟೊಂಕಾ ಮರಳು ತೀರದಲ್ಲಿ ಭಾನುವಾರ ಸಮುದ್ರ ಪೂಜಾ ಆರತಿಯು ಶ್ರೀಜೈನ ಒಟಕೇಶ್ವರ ಯುವ ಸಮಿತಿ ಮತ್ತು ಕೊಂಕಣ ಖಾರ್ವಿ ವಾಡಾ ಟೊಂಕಾರವರ ಸಂಯುಕ್ತ ಆಶ್ರಯದಲ್ಲಿ ನಡೆಯಿತು. ಟೊಂಕಾ ವಾಡೆಯ ಮೀನುಗಾರ ಮುಖಂಡರಾದ ಗಣಪತಿ ಈಶ್ವರ ತಂಡೇಲ್, ರಾಜು, ರಮೇಶ, ನರಸಿಂಹ, ಮಂಜಾ, ಸಚಿನ್, ಡಾ ಪ್ರಕಾಶ ಮೇಸ್ತ, ಮೀನುಗಾರ ಮಹಿಳೆಯರಾದ ಪಾರ್ವತಿ ದತ್ತಾ ತಾಂಡೇಲ್, ಸುನೀತಾ ತಾಂಡೇಲ್, ಅಪೇಕ್ಷಾ ಹಾಗೂ ಸ್ಥಳೀಯರು ಇದ್ದರು.

ಸಂತ್ರಸ್ತರಿಗೆ ಶಾಸಕ ಹೆಬ್ಬಾರ್ ಧನಸಹಾಯ

ಯಲ್ಲಾಪುರ: ಪಟ್ಟಣದಸಸ್ಯೋದ್ಯಾನದಲ್ಲಿ ಅರಣ್ಯ ಇಲಾಖೆಯು ಹಮ್ಮಿಕೊಂಡಿದ್ದ ವಿಶೇಷ ಕಾರ್ಯಕ್ರಮದಲ್ಲಿ ಕಾಡುಪ್ರಾಣಿಗಳ ದಾಳಿಯಿಂದ ತೀವ್ರವಾಗಿ ಗಾಯಗೊಂಡು ಅಂಗವೈಕಲ್ಯ ಅನುಭವಿಸುತ್ತಿರುವಸಂತ್ರಸ್ತರಿಗೆ ಹಾಗೂ ಕರ್ತವ್ಯದ ವೇಳೆ ಮೃತಪಟ್ಟ ನೌಕರರ ಕುಟುಂಬಕ್ಕೆ ಶಾಸಕ ಶಿವರಾಮ ಹೆಬ್ಬಾರ್ ಅವರು ಒಟ್ಟು 40 ಲಕ್ಷ ರೂಪಾಯಿಗೂ ಅಧಿಕ ಮೊತ್ತದ ಧನಸಹಾಯ ಹಾಗೂ ಮಾಸಾಶನದ ಆದೇಶ ಪ್ರತಿ ವಿತರಿಸಿದರು.

ಚಂದಗುಳಿ ಗ್ರಾಮ ವ್ಯಾಪ್ತಿಯ ದೇಸಾಯಿ ಮನೆ ನಿವಾಸಿ ರಾಮಕೃಷ್ಣ ಸುಬ್ರಾಯ ಭಟ್ ಅವರು ಕರಡಿ ದಾಳಿಯಿಂದಾಗಿ ಅಂಗವೈಕಲ್ಯ ಹೊಂದಿದ್ದಕ್ಕೆ 10 ಲಕ್ಷ ರೂ ದಯಾತ್ಮಕ ಧನ ಹಾಗೂ ಪ್ರತಿ ತಿಂಗಳು 4,000 ರೂ ಮಾಸಾಶನದ ಆದೇಶ ಪ್ರತಿ ನೀಡಲಾಯಿತು. ಕಿರವ ವಲಯ ವ್ಯಾಪ್ತಿಯ ಮಂಗ್ಯಾನ ತಾವರಗೇರಿ ನಿವಾಸಿ ಬಾಬು ಗಂಗು ಕೊಕ್ಕರೆ ಅವರು ಕಾಡು ಹಂದಿ ದಾಳಿಯಿಂದ ಅಂಗವೈಕಲ್ಯಕ್ಕೆ ಒಳಗಾಗಿದ್ದಕ್ಕೆ 10 ಲಕ್ಷ ರೂ ದಯಾತ್ಮಕ ಧನ ಹಾಗೂ ಪ್ರತಿ ತಿಂಗಳು 4,000 ರೂ ಮಾಸಾಶನದ ಆದೇಶ ಪ್ರತಿಯನ್ನು ಹಸ್ತಾಂತರಿಸಲಾಯಿತು.

ಅದೇ ರೀತಿ, ಕರಡಿ ದಾಳಿಯಿಂದ ತೀವ್ರ ಗಾಯಗೊಂಡು ಅಂಗವೈಕಲ್ಯ ಹೊಂದಿದ ಯಲ್ಲಾಪುರ ವಲಯದ ಚಿಮಣೆಮಾಳ ನಿವಾಸಿ ಗೋದಿ ಜಾನು ಜಂಗಳೆ, ಮುಂಡಗೋಡ ವಲಯದ ಅಂದಲಗಿ ಗ್ರಾಮದ ದ್ಯಾಮಣ್ಣ ನಾಗಪ್ಪ ಬೆಂಡಿಗೇರಿ ಹಾಗೂ ಚವಡಳ್ಳಿ ಗ್ರಾಮದ ನಾಗುಬಾಯಿ ಜಾನು ವರಕ ಇವರುಗಳಿಗೆ ತಲಾ 5 ಲಕ್ಷ ರೂ ದಯಾತ್ಮಕ ಧನದ ಇಲಾಖಾ ಆದೇಶ ಪ್ರತಿಗಳನ್ನು ವಿತರಿಸಲಾಯಿತು. ಇನ್ನು ಇಡಗುಂದಿ ವಲಯ ವ್ಯಾಪ್ತಿಯ ವಜ್ರಳ್ಳಿ ಗ್ರಾಮದ ನಿವಾಸಿ, ದಿನಗೂಲಿ ನೌಕರರಾಗಿದ್ದ ಜೂಜೆ ಲೂಯಿಸ್ ಸಿದ್ದಿ ಅವರು ಕಾಡಿನ ಬೆಂಕಿ ನಂದಿಸುವ ಭರದಲ್ಲಿ ಹೈವೋಲ್ಟೇಜ್ ವಿದ್ಯುತ್ ತಂತಿ ಸ್ಪರ್ಶಿಸಿ ಮರಣ ಹೊಂದಿದ್ದರಿಂದ, ಅವರ ಕುಟುಂಬಕ್ಕೆ ವಿಶೇಷ ಅನುಕಂಪದ ಆಧಾರದ ಮೇಲೆ 5 ಲಕ್ಷ ರೂ ಪರಿಹಾರ ಧನದ ಆದೇಶ ಪ್ರತಿಯನ್ನು ಶಾಸಕರು ಹಸ್ತಾಂತರಿಸಿ ಸಾಂತ್ವನ ಹೇಳಿದರು.

ಈ ಸಂದರ್ಭದಲ್ಲಿ ಉಪ ಅರಣ್ಯ ಸಂರಕ್ಷಣಾಧಿಕಾರಿ ಅಜೀಜ್ ಶೇಖ, ಪ್ರಮುಖರಾದ ಡಾ ಸತೀಶ ಭಟ್ಟ ಹಾಗೂ ಎ ಸಿ.ಎಫ್ ಹಿಮವತಿ ಭಟ್ ಅರಣ್ಯ ಇಲಾಖೆಯ ಅಧಿಕಾರಿಗಳು ಮತ್ತು ಸಿಬ್ಬಂದಿ ಉಪಸ್ಥಿತರಿದ್ದರು.



ಉಪವಾಸದಿಂದ ಮಾನಸಿಕ ಆರೋಗ್ಯ ಶುದ್ಧೀಕರಣ

ಭಟ್ಕಳ: ಉಪವಾಸವು ದೈಹಿಕ ಆರೋಗ್ಯದ ಜೊತೆಗೆ ಮಾನಸಿಕ ಶುದ್ಧೀಕರಣಕ್ಕೂ ಸಹಕಾರಿ ಯಾಗುತ್ತದೆ. ಏಕಾದಶಿಯಂದು ಉಪವಾಸ ವ್ರತ ಆಚರಿಸುವುದರಿಂದ ದೇಹದಲ್ಲಿ ರಕ್ತ ಶುದ್ಧೀಕರಣದ ಜೊತೆಗೆ ರಕ್ತದ ಹರಿವು ಉತ್ತಮವಾಗಿರುತ್ತದೆ ಎಂದು ಗೋಕರ್ಣ ಪರ್ತಗಾಳಿ ಜೀವೋತ್ತಮ ಮಠದ ಪರಮಪೂಜ್ಯ ಶ್ರೀಮದ್ ವಿದ್ಯಾಧೀಶ ತೀರ್ಥ ಶ್ರೀಪಾದ ವಡೇರ ಸ್ವಾಮೀಜಿ ಹೇಳಿದರು.

ಅವರು ಭಾನುವಾರ ಭಟ್ಕಳದ ಶ್ರೀ ಗುರು ರಾಘವೇಂದ್ರ ಮಠದಲ್ಲಿ ಜಿಎಸ್‌ಎಸ್ ಹಾಗೂ ಉಡುಪಿ ಜಿಲ್ಲಾ ಬ್ಲಡ್ ಬ್ಯಾಂಕ್ ವತಿಯಿಂದ ಆಯೋಜಿಸಲಾಗಿದ್ದ ರಕ್ತದಾನ ಶಿಬಿರವನ್ನು ಉದ್ಘಾಟಿಸಿ ಆಶೀರ್ವಚನ ನೀಡಿದರು. ರಕ್ತದಾನ ಶಿಬಿರದ ಕುರಿತು ಮಾಹಿತಿ ಪಡೆದ ಶ್ರೀಗಳು, ರಕ್ತ ಸಂಗ್ರಹಿಸುವಾಗ ಅನುಸರಿಸುವ ಮಾನದಂಡಗಳ ಬಗ್ಗೆ ವಿಚಾರಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಅವರು, ಪ್ರತಿ ಹದಿನೈದು ದಿನಗಳಿಗೊಮ್ಮೆ ಬರುವ ಏಕಾದಶಿ ಉಪವಾಸವನ್ನು ಶ್ರದ್ಧಾಭಕ್ತಿಯಿಂದ ಆಚರಿಸಿದರೆ ದೇಹವು ಸದೃಢವಾಗಿರುತ್ತದೆ. ಉಪವಾಸದಿಂದ ದೇಹದ ಅಂಗಾಂಗಗಳ ಶುದ್ಧೀಕರಣವಾಗುವುದರ ಜೊತೆಗೆ ಮನಸ್ಸು ಸಹ ಪರಿಶುದ್ಧವಾಗುತ್ತದೆ ಎಂದು



ತಿಳಿಸಿದರು.ಬೆಳಗ್ಗೆ 9 ಗಂಟೆಗೆ ಆರಂಭಗೊಂಡ ರಕ್ತದಾನ ಶಿಬಿರ ಮಧ್ಯಾಹ್ನ 12 ಗಂಟೆಯವರೆಗೆ ನಡೆಯಿತು. ಸಮಾಜ ಬಾಂಧವರು ಉತ್ಸಾಹದಿಂದ ಭಾಗವಹಿಸಿ ಒಟ್ಟು 66 ಯೂನಿಟ್ ರಕ್ತ ದಾನ ಮಾಡುವ ಮೂಲಕ ರಕ್ತದಾನ ಸೇವೆಗೆ ಉತ್ತಮ ಸಹಕಾರ ನೀಡಿದರು. ಕಾರ್ಯಕ್ರಮದಲ್ಲಿ ಉದ್ಯಮಿಗಳಾದ ಪ್ರದೀಪ್ ಜಿ. ಪೈ, ರಾಜೇಶ್ ನಾಯಕ, ವಡೇರ ಮಠದ ಅಧ್ಯಕ್ಷ ನರೇಂದ್ರ ನಾಯಕ, ಜಿಎಸ್‌ಎಸ್ ಅಧ್ಯಕ್ಷ ಗಿರಿಧರ ನಾಯಕ, ಡಾ. ಸವಿತಾ ಕಾಮತ್, ಅರವಿಂದ ಪೈ, ಶಿರಾಲಿ ಪವನ ಪ್ರಭು, ಅರ್ಚಕ ಸಂತೋಷ ಆಚಾರ್ಯ ಹಾಗೂ ಉಡುಪಿ ಬ್ಲಡ್ ಬ್ಯಾಂಕ್‌ನ ಡಾ. ವೀಣಾ ಉಪಸ್ಥಿತರಿದ್ದರು.

ಹಳಿಯಾಳ ಬಿಜೆಪಿ ಮಂಡಲ ಸಭೆ

ಹಳಿಯಾಳ: ನಗರದ ಸ್ವರಾಜ್ ಟ್ರ್ಯಾಕ್ಟರ್ ಶೋರೂಮ್‌ನಲ್ಲಿ ಹಳಿಯಾಳ ಬಿಜೆಪಿ ಮಂಡಲದ ಮಂಡಲ ಕಾರ್ಯಕಾರಿಣಿ ಸಭೆ ನಡೆಸಲಾಯಿತು.

ಭಾರತ ಮಾತೆಯ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ಸಭೆಗೆ ಚಾಲನೆ ನೀಡಲಾಯಿತು. ಮಂಡಲ ಅಧ್ಯಕ್ಷ ವಿಠ್ಠಲ ಸಿದ್ದನ್ನವರರವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಮಾಜಿ ಶಾಸಕ ಸುನಿಲ್ ಹೆಗಡೆ ಹಾಗೂ ಮಂಡಲ ಪ್ರಭಾರಿ ನಿತ್ಯಾನಂದ ಗಾಂವ್ಕರ್ ಮಾತನಾಡಿ, ಪಕ್ಷ ಸಂಘಟನೆ ಬಲಗೊಳಿಸುವ ನಿಟ್ಟಿನಲ್ಲಿ ಪದಾಧಿಕಾರಿಗಳಿಗೆ ಮಾರ್ಗದರ್ಶನ ನೀಡಿದರು. ಮಾಜಿ ವಿಧಾನ ಪರಿಷತ್ ಸದಸ್ಯ ಎಸ್.ಎಲ್.ಘೋಟ್ನೇಕರ, ಬಸ್ಸಣ್ಣಾ ಕುರುಬಗಟ್ಟಿ, ಸಂತೋಷ್ ಘಟಕಾಂಬಳೆ, ವಿ ಎಮ್.ಪಾಟೀಲ್, ಗಣಪತಿ



ಕರಂಜೇಕರ, ಅನಿಲ್ ಮುತ್ನಾಳ, ಜಯಲಕ್ಷ್ಮಿ ಚೌವ್ಹಾಣ್ ಉಪಸ್ಥಿತರಿದ್ದರು.ಪರಿಸರ ದಿನಾಚರಣೆ ಪ್ರಯುಕ್ತ ಸಸಿ ನೆಟ್ಟು ಪರಿಸರ ದಿನ ಆಚರಿಸಲಾಯಿತು.ಸಭೆಯ ಅಪೇಕ್ಷಿತರಾದ ಮಂಡಲ ಪದಾಧಿಕಾರಿಗಳು, ಜಿಲ್ಲಾ ಪದಾಧಿಕಾರಿಗಳು, ಮೋರ್ಚಾ ಅಧ್ಯಕ್ಷರು ಹಾಗೂ ಪ್ರಧಾನ ಕಾರ್ಯದರ್ಶಿಗಳು, ಮಹಾಶಕ್ತಿ ಕೇಂದ್ರ ಅಧ್ಯಕ್ಷರು ಹಾಗೂ ತಂಡದವರು ಉಪಸ್ಥಿತರಿದ್ದರು.

ಕಾಲದ ಗಡಿಯಾರ ಕೃತಿ ಬಿಡುಗಡೆ

ಭಟ್ಕಳ : ಮುರುಡೇಶ್ವರದ ಮಹಿಮಾ ಇವೆಂಟ್ ಹಾಲ್ ನಲ್ಲಿ ಮುರುಡೇಶ್ವರದ ನಿವಾಸಿ ಹಾಗೂ ಲೇಖಕಿ ಸೀಮಾ ನಾಯ್ಕ ಅವರ ಚೊಚ್ಚಲ ಕಾದಂಬರಿ ಕಾಲದ ಗಡಿಯಾರ ಕೃತಿ ಬಿಡುಗಡೆಗೊಂಡಿತು.ಕೃತಿಯನ್ನು ಶಿರಸಿ ಸರ್ಕಾರಿ ಪ್ರೌಢಶಾಲೆ ಬಂಡಲದ ಮುಖ್ಯೋಪಾಧ್ಯಾಯ ರಾಜೇಶ್ ಹೆಚ್. ನಾಯಕ್ ಅವರು ಲೋಕಾರ್ಪಣೆಗೊಳಿಸಿದರು. ಕಾರ್ಯಕ್ರಮದಲ್ಲಿ ಅಲ್ಲಾಸ್ ಪದವಿಪೂರ್ವ ಕಾಲೇಜಿನ ಕನ್ನಡ ಉಪನ್ಯಾಸಕ ಡಾ. ಡಿ.ವಿ. ಪ್ರಕಾಶ್ ಹಾಗೂ ಕವಿ-ಸಾಹಿತಿಗಳಾದ ರವೀಂದ್ರ ನಾಯಕ್ ಸಣ್ಣಕ್ಕಿಬೆಟ್ಟು ಮಾತನಾಡಿದರು. ಸಮಾರಂಭದಲ್ಲಿ ಸಾಹಿತ್ಯಾಸಕ್ತರು, ಗಣ್ಯರು, ಸ್ನೇಹಿತರು ಹಾಗೂ ಕುಟುಂಬದ ಸದಸ್ಯರು ಉಪಸ್ಥಿತರಿದ್ದು, ಲೇಖಕಿ ಸೀಮಾ ನಾಯ್ಕ ಅವರ ಸಾಹಿತ್ಯ ಪಯಣಕ್ಕೆ ಶುಭ ಹಾರೈಸಿದರು.



ಗಿಡ-ಮರ ಉಳಿಸಿ ಹಸಿರೀಕರಣಕ್ಕೆ ಸಂಕಲ್ಪ ಮಾಡಿ: ಜೋಗಳೇಕರ್

ಅಂಕೋಲಾ: ಜಾಗತಿಕ ತಾಪಮಾನದಲ್ಲಿ ದಿನೇದಿನ ಏರಿಕೆ ಕಂಡುಬರುತ್ತಿರುವುದು ಕಳವಳಕಾರಿ ಸಂಗತಿಯಾಗಿದ್ದು, ಹೆಚ್ಚು ಹೆಚ್ಚು ಗಿಡಮರಗಳನ್ನು ಬೆಳೆಸಿ ಭೂಮಿಯ ಹಸಿರೀಕರಣ ಮಾಡುವ ಮೂಲಕ ಮನುಕುಲ ಮತ್ತು ಸಕಲ ಜೀವರಾಶಿಗಳ ಉಳಿವಿಗೆ ಪ್ರತಿಯೊಬ್ಬರೂ ಸಂಕಲ್ಪ ಮಾಡಬೇಕಿದೆ ಎಂದು ತಾಲೂಕು ಕಾನೂನು ಸೇವಾ ಸಮಿತಿಯ ಅಧ್ಯಕ್ಷೆಸಿವಿಲ್ ಮತ್ತು ಜೆ.ಎಂ.ಎಫ್.ಸಿ ಹಿರಿಯ ನ್ಯಾಯಾಧೀಶೆ ಪ್ರಿಯಾ ಜೋಗಳೇಕರ್ ಹೇಳಿದರು.

ತಾಲೂಕು ಕಾನೂನು ಸೇವಾ ಸಮಿತಿ ಅಂಕೋಲಾ, ವಕೀಲರ ಸಂಘ, ಅರಣ್ಯ ಇಲಾಖೆ ಅಂಕೋಲಾ ವಲಯ, ಸೆಕೆಂಡರಿ ಸ್ಕೂಲ್ ಭಾವಿಕೇರಿ, ಪ್ರಾಥಮಿಕ ಗ್ರಾಮೀಣ ಸಹಕಾರಿ ಸಂಘ ಭಾವಿಕೇರಿ, ಯುವಕ ಮಂಡಲ ಭಾವಿಕೇರಿ ಇವರ ಸಂಯುಕ್ತ ಆಶ್ರಯದಲ್ಲಿ ಭಾವಿಕೇರಿಯ ಸೆಕೆಂಡರಿ ಸ್ಕೂಲ್ ಆವರಣದಲ್ಲಿ ನಡೆದ ವಿಶ್ವ ಪರಿಸರ ದಿನಾಚರಣೆಯಲ್ಲಿ ಗಿಡಗಳನ್ನು ನೆಟ್ಟು ಮಾತನಾಡಿದ ಅವರು ಹೆಚ್ಚಿನ ಪ್ರಮಾಣದಲ್ಲಿ ಅರಣ್ಯ ಸಂಪತ್ತು ಹೊಂದಿರುವ ಉತ್ತರ ಕನ್ನಡ ಜಿಲ್ಲೆಯಲ್ಲಿ ತಾಪಮಾನ ಏರಿಕೆಯಿಂದ ಉಸಿರುಗಟ್ಟುವ ವಾತಾವರಣ ನಿರ್ಮಾಣ ಆಗಿದ್ದು ಅರಣ್ಯ ಸಂರಕ್ಷಣೆಯತ್ತ ಗಂಭೀರವಾಗಿ ಚಿಂತನೆ ನಡೆಸಬೇಕಿದೆ, ಮೂಲಭೂತ ಹಕ್ಕುಗಳನ್ನು ಪಡೆಯುವ ಜೊತೆಗೆ ಮೂಲಭೂತ ಕರ್ತವ್ಯಗಳನ್ನು ನಿಭಾಯಿಸುವ ಅಗತ್ಯತೆ ಇದ್ದು ಮರಗಳನ್ನು ಕಡಿಯುವುದು ಕಾನೂನಿನ ಪ್ರಕಾರ ಅಪರಾಧವಾಗಿದೆ ಎಂದು ತಿಳಿಸಿದರು.

ಕಾನೂನು ಸೇವಾ ಸಮಿತಿಯ ಸದಸ್ಯ ಕಾರ್ಯದರ್ಶಿ ನ್ಯಾಯಾಧೀಶೆ ಸುನೀತಾ ಮಾತನಾಡಿ, ಪರಿಸರ ಮನುಷ್ಯ ಸಂಕುಲಕ್ಕೆ ತೀರಾ ಅಗತ್ಯವಾಗಿದ್ದು ಪ್ರತಿದಿನವೂ ಪರಿಸರ ದಿನಾಚರಣೆ ನಡೆಯಬೇಕು ಮನೆ ಸುತ್ತ ಮುತ್ತಲಿನ ಪ್ರದೇಶಗಳಲ್ಲಿ ಗಿಡಮರ ಬೆಳೆಸಿ ಪರಿಸರ ಹಸೀರಿಕರಣಕ್ಕೆ



ಕೊಡುಗೆ ನೀಡಬೇಕು ಪ್ಲಾಸ್ಟಿಕ್ ಬಳಕೆ ಕಡಿಮೆ ಮಾಡಿ ತ್ಯಾಜ್ಯಗಳ ಸಮರ್ಪಕ ನಿರ್ವಹಣೆ ಮಾಡಬೇಕು ಎಂದರು.

ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಜಯೇಶ್ ಮಾತನಾಡಿ, ದೈನಂದಿನ ಅವಶ್ಯಕತೆಗಳು ಹೆಚ್ಚಾಗಿ ಅಭಿವೃದ್ಧಿ ಯೋಜನೆಗಳಿಗೆ ಸಾವಿರಾರು ಹೆಕ್ಟರ್ ಅರಣ್ಯ ಪ್ರದೇಶದ ಬಳಕೆಯಿಂದ ಅರಣ್ಯ ವ್ಯಾಪ್ತಿ ಕಡಿಮೆಯಾಗುತ್ತಿದ್ದು ಅರಣ್ಯೇತರ ಪ್ರದೇಶಗಳಲ್ಲೂ ಹೆಚ್ಚಿನ ಗಿಡ ಮರಗಳನ್ನು ಬೆಳೆಸಬೇಕಿದೆ ಎಂದರು. ಸಮುದ್ರದಲ್ಲಿ ಪ್ಲಾಸ್ಟಿಕ್ ಕಸ ರಾಶಿಯಾಗಿ ತುಂಬಿಕೊಂಡಿದ್ದು ಬಹಳಷ್ಟು ಕಡಲ ಜೀವಿಗಳ ಹೊಟ್ಟೆಯಲ್ಲಿ ಪ್ಲಾಸ್ಟಿಕ್ ಕಂಡು ಬಂದಿರುವುದು ಆತಂಕಕಾರಿ ಸಂಗತಿಯಾಗಿದೆ ಎಂದು ಅವರು ತಿಳಿಸಿದರು.ಸಹಾಯಕ ಸರ್ಕಾರಿ ಅಭಿಯೋಜಕಿ ಶಿಲ್ಪಾ ನಾಯ್ಕ, ವಲಯ ಅರಣ್ಯಾಧಿಕಾರಿ ಪ್ರಮೋದ ನಾಯಕ ಮಾತನಾಡಿದರು. ವಕೀಲರ ಸಂಘದ ಅಧ್ಯಕ್ಷೆ ಪ್ರತಿಭಾ ನಾಯ್ಕ, ವಕೀಲ ಉಮೇಶ ನಾಯ್ಕ, ವಿನೋದ ಶಾನಭಾಗ, ಮನೀಷ ಆನಂದಗಿರಿ, ಮಾಧ್ಯಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಗಣಪತಿ ನಾಯಕ, ಯುವಕ ಮಂಡಲದ ಅಧ್ಯಕ್ಷ ಹರೀಶ ನಾಯಕ ಉಪಸ್ಥಿತರಿದ್ದರು.ಮುಖ್ಯಾಧ್ಯಾಪಕಿ ವೀಣಾ ಕೇಣಿಕರ್ ಸ್ವಾಗತಿಸಿದರು. ಶಿಕ್ಷಕ ರಾಜು ನಾಯಕ ನಿರ್ವಹಿಸಿದರು.

ಉತ್ತಮ ಆರೋಗ್ಯಕ್ಕೆ ಯೋಗ ಸಹಕಾರಿ: ಹೆಬ್ಬಾರ್

ಯಲ್ಲಾಪುರ: ಇವತ್ತಿನ ಆಹಾರ ಪದ್ಧತಿ, ವಾತಾವರಣದಲ್ಲಿ ಆಗಿರುವ ಬದಲಾವಣೆ, ಹಾಗೂ ಹತ್ತು ಹಲವು ಕಾರಣಗಳಿಂದ ಬದುಕುವುದಕ್ಕಾಗಿ ಯೋಗ ಮಾಡುವ ಪರಿಸ್ಥಿತಿ ಎದುರಾಗಿದೆ. ಹಿಂದೆ ನಮ್ಮ ಆಹಾರ, ಪರಿಸರವೇ ಯೋಗದ ರೀತಿಯಲ್ಲಿ ಕಾರ್ಯನಿರ್ವಹಿಸುತ್ತಿತ್ತು. ಈಗ ಆರೋಗ್ಯಕ್ಕಾಗಿ ಎಲ್ಲರೂ ಸಹ ಯೋಗವನ್ನು ಮಾಡುವುದನ್ನು ನಾವು ಕಾಣುತ್ತಿದ್ದೇವೆ ಎಂದು ಶಾಸಕ ಶಿವರಾಮ ಹೆಬ್ಬಾರ್ ಹೇಳಿದರು.

ಪಟ್ಟಣದ ಈಶ್ವರಿ ವಿಶ್ವವಿದ್ಯಾಲಯದಲ್ಲಿ ರಾಜ್ಯಮಟ್ಟದ ಯೋಗಾಸನ ಸ್ಪರ್ಧೆಯನ್ನುಉದ್ಘಾಟಿಸಿ ಮಾತನಾಡಿದ ಅವರು, ಯೋಗ ಜೀವನದ ಒಂದು ಭಾಗವಾಗುವ ಅನಿವಾರ್ಯತೆಯಾಗಿದೆ. ಮಕ್ಕಳು ಸಹ ಹೆಚ್ಚಿನ ಸಂಖ್ಯೆಯಲ್ಲಿ ಯೋಗದ ಕುರಿತು ಆಸಕ್ತಿ ತೋರುತ್ತಿರುವುದು ಸಂತಸದ ಸಂಗತಿ. ಶಾಲೆಗಳಲ್ಲಿಯೂ ಸಹ ಯೋಗವನ್ನುಅಭ್ಯಾಸದ ಒಂದು ಭಾಗವಾಗಿಸಿದಲ್ಲಿ, ಮಕ್ಕಳು ಸಹ ತಮ್ಮ ಆರೋಗ್ಯ ಕಾಯ್ದುಕೊಳ್ಳಲು ಸಹಕಾರಿಯಾಗಲಿದೆ ಎಂದರು. ಸಂಕಲ್ಪ ಸಂಸ್ಥೆಯ ಅಧ್ಯಕ್ಷ ಪ್ರಮೋದ ಹೆಗಡೆ ಮಾತನಾಡಿದರು. ಅಧ್ಯಕ್ಷತೆವಹಿಸಿದ್ದ ರಾಜ್ಯಯೋಗ ಅಸೋಸಿಯೇಷನ್ ಅಧ್ಯಕ್ಷ ಡಾ. ಪಿ.ಎನ್. ಗಣೇಶ ಕುಮಾರ, ಈಶ್ವರೀ ವಿಶ್ವವಿದ್ಯಾಲಯದ ಉಸ್ತುವಾರಿಗಳಾದ ಬಿ.ಕೆ.ಲೀಲಕ್ಕ ಮಾತನಾಡಿದರು. ಯೋಗ ಫೆಡರೇಶನ ಜಿಲ್ಲಾಧ್ಯಕ್ಷ ಅನಿಲಕರಿ ಪ್ರಸ್ತಾವಿಕವಾಗಿ ಮಾತನಾಡಿದರು. ಈ ಸಂದರ್ಭದಲ್ಲಿ



ರಾಷ್ಟ್ರೀಯಮಟ್ಟದಲ್ಲಿ ಸಾಧನೆ ಮಾಡಿದ ಯೋಗ ಪಟುಗಳಾದ ಯೋಗ ಅಸೋಸಿಯೇಷನ್ ಚೇರಮನ್. ಎನ್. ಕೃಷ್ಣಮೂರ್ತಿ, ಅಂತಾರಾಷ್ಟ್ರೀಯ ಯೋಗಪಟು ವಿನಾಯಕ ಕುಣಗಿ, ಎಂ.ಆರ್. ಜಾಹ್ನವಿ ಅವರನ್ನು ಸನ್ಮಾನಿಸಿ ಗೌರವಿಸಲಾಯಿತು.

ವೇದಿಕೆಯಲ್ಲಿ ಕ್ಷೇತ್ರಶಿಕ್ಷಣಾಧಿಕಾರಿ ರೇಖಾ ನಾಯ್ಕ, ಮಾತೃ ಮಂಡಳಿ ಅಧ್ಯಕ್ಷೆ ಆಶಾಬಗನ ಗದ್ದೆ, ತಾಲೂಕು ಶಿಕ್ಷಕರ ಸಂಘದ ಅಧ್ಯಕ್ಷ ಆರ್.ಆರ್. ಭಟ್, ಸಹ್ಯಾದ್ರಿ ಸಹಕಾರಿ ಸಂಘದ ಅಧ್ಯಕ್ಷ ಉಮೇಶ ಭಾಗ್ವತ್, ಅಡಿಕೆ ವರ್ತಕರ ಸಂಘದ ಅಧ್ಯಕ್ಷ ರವಿ ಹೆಗಡೆ, ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಸಂಜೀವ ಕುಮಾರ ಹೊಸ್ಕೇರಿ ಉಪಸ್ಥಿತರಿದ್ದರು. ವಿದ್ಯಾರ್ಥಿಗಳು ಯೋಗ ಗೀತೆ ಪ್ರಸ್ತುತಪಡಿಸಿದರು. ಶಿಕ್ಷಕಿ ರೇಖಾ ಭಟ್ಟ ಪ್ರಾರ್ಥಿಸಿದರು. ಸ್ವಾಗತ ಸಮಿತಿ ಅಧ್ಯಕ್ಷ ಎಂ.ಆರ್. ಹೆಗಡೆ ಕುಂಬ್ರಿಗುಡ್ಡೆ ಸ್ವಾಗತಿಸಿದರು. ಸಣ್ಣಪ್ಪ ಭಾಗ್ವತ್ ಹಾಗೂ ಶ್ರೀಧರ ಭಟ್ಟನಿರೂಪಿಸಿದರು. ಕಾರ್ಯಾಧ್ಯಕ್ಷ ಶಂಕರ ಭಟ್ತಾರಿ ಮಕ್ಕಿ ವಂದಿಸಿದರು.

ವಿಡಿಐಟಿಯಲ್ಲಿ ವಿಶ್ವ ಪರಿಸರ ದಿನಾಚರಣೆ

ಹಳಿಯಾಳ : ವಿಶ್ವ ಪರಿಸರ ದಿನಾಚರಣೆಯನ್ನು ಪಟ್ಟಣದ ಕೆಎಲ್‌ಎಸ್ ವಿಡಿಐಟಿ ಮಹಾ ವಿದ್ಯಾಲಯದಲ್ಲಿ ಜೂನ್ 5ರಂದು ಆಚರಿಸಲಾಯಿತು. ಪರಿಸರ ದಿನಾಚರಣೆಯ ಅಂಗವಾಗಿ ಸ್ವಚ್ಛ ಭಾರತ ಅಭಿಯಾನ ಹಾಗೂ ವನ ಮಹೋತ್ಸವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಮಹಾವಿದ್ಯಾಲಯದ ವಿವಿಧ ವಿಭಾಗದ ವಿದ್ಯಾರ್ಥಿಗಳು ವಿದ್ಯಾಲಯದ ಆವರಣವನ್ನು ಸ್ವಚ್ಛ ಗೊಳಿಸಿ, ವೃಕ್ಷಾ ರೋಪಣ ಮಾಡಿ ಹಸಿರು ಪರಿಸರ ನಿರ್ಮಾಣಕ್ಕೆ ಕೈ ಜೋಡಿಸಿದರು. ಮಹಾವಿದ್ಯಾಲಯವು ಪ್ರತಿ ವರ್ಷವೂ ವನ ಮಹೋತ್ಸವದ ಮೂಲಕ ಹಸಿರು ಪರಿಸರ ನಿರ್ಮಿಸುತ್ತಿದ್ದು, ಪ್ಲಾಸ್ಟಿಕ್ ಮುಕ್ತ ಕ್ಯಾಂಪಸ್ ವಿಡಿಐಟಿ ಆಗಿದೆ ಎಂದು ಪ್ರಾಚಾರ್ಯ ಡಾ. ವಿ ಎ ಕುಲಕರ್ಣಿ ಹೇಳಿದ್ದಾರೆ. ನೀರಿನ ಸಮರ್ಪಕ ನಿರ್ವಹಣೆಗೆ ಇಂಗು ಗುಂಡಿ ಮತ್ತು ಮಳೆ ಕೊಯ್ಲನ್ನು ಅಳವಡಿಸಿದೆ. ತ್ಯಾಜ್ಯ ವಿಂಗಡಿಸಿ ಸ್ವಚ್ಛ ಪರಿಸರ ಕಾಪಾಡುವಲ್ಲಿ ಯಶಸ್ವಿಯಾಗಿದೆ ಎಂದರು. ಇಕೋ ಕ್ಲಬ್ ವತಿಯಿಂದ ಆಯೋಜಿಸಿದ್ದ ಈ ಕಾರ್ಯಕ್ರಮದಲ್ಲಿ ಬೋಧಕ, ಬೋಧಕೇತರ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಭಾಗವಹಿಸಿದ್ದರು. ಪ್ರೊ. ರಾಕೇಶ್ ಪಾಟೀಲ್ ಸಂಯೋಜಿಸಿದ್ದರು.



ಹೊಸದಿಗಂತ
ರಾಷ್ಟ್ರ ಜಾಗೃತಿಯ ದೈನಿಕ
11

ಕಿರುಸುದ್ದಿ



ಹಾವೇರಿ: ವಿಶ್ವಪರಿಸರ ದಿನಾಚರಣೆ ಅಂಗವಾಗಿ ಹಾವೇರಿ ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಚೇರಿ ಆವರಣದಲ್ಲಿ ಸಸಿಗಳನ್ನು ನೆಡಲಾಯಿತು. ಪ್ರಾದೇಶಿಕ ಸಾರಿಗೆ ಅಧಿಕಾರಿ ಕುಮಾರಿ ವಿನಯ ಕಾಟೋಕರ್ ಆರ್. ಅವರು ಮಾತನಾಡಿ, ಪರಿಸರ ಸಂರಕ್ಷಣೆ ನಮ್ಮೆಲ್ಲರ ಕರ್ತವ್ಯವಾಗಿದ್ದು ಎಲ್ಲರೂ ಹೆಚ್ಚು ಹೆಚ್ಚು ಗಿಡಗಳನ್ನು ನೆಟ್ಟು ಪಾಲನೆ ಪೋಷಣೆ ಮಾಡಿದಲ್ಲಿ ಜಾಗತಿಕ ತಾಪಮಾನ ತಡೆಯಬಹುದಾಗಿದೆ. ವಾಯು ಮಾಲಿನ್ಯ ನಿಯಂತ್ರಣಕ್ಕೂ ಸಹ ಇದು ಸಹಕಾರಿಯಾಗಲಿದೆ ಎಂದರು. ಈ ಸಂದರ್ಭದಲ್ಲಿ ಕಚೇರಿಯ ಮೋಟಾರ್ ವಾಹನ ನಿರೀಕ್ಷಕರು ಇತರರು ಉಪಸ್ಥಿತರಿದ್ದರು.

ಅಕ್ರಮ ಮರಳು ದಂಧೆ ಕಡಿವಾಣಕ್ಕೆ ಮನವಿ



ರಟ್ಟೀಹಳ್ಳಿ: ಅಕ್ರಮ ಮರಳು ದಂಧೆಗೆ ಕಡಿವಾಣ ಹಾಕುವಂತೆ ತಾಲೂಕು ದಂಡಾಧಿಕಾರಿಗಳಿಗೆ ಹಾಗೂ ಪೊಲೀಸ್ ಠಾಣೆಗೆ ಕರವೇ ಸ್ವಾಭಿಮಾನಿ ಬಳಗದ ವತಿಯಿಂದ ಮನವಿ ಸಲ್ಲಿಸಿದರು. ಈ ಸಂದರ್ಭದಲ್ಲಿ ಜಿಲ್ಲಾಧ್ಯಕ್ಷ ಯಲ್ಲಪ್ಪ ಮರಾಠೆ, ರಾಜ್ಯಕಾರ್ಯಧ್ಯಕ್ಷ ಯೊಸುಫ್ಲೆ ಕಲಗಾರ, ರಟ್ಟೀಹಳ್ಳಿ ತಾಲೂಕ ಅಧ್ಯಕ್ಷರಾದ ರಾಮಚಂದ್ರಪ್ಪ ಹಿಂಡಸಗಟ್ಟಿ, ಹಿರೇಕೆರೂರು ತಾಲೂಕ್ಅಧ್ಯಕ್ಷ ದೇವರಾಜ ಈಳಗೇರ, ಜಿಲ್ಲಾಗೌರವ ಅಧ್ಯಕ್ಷ ಪ್ರಕಾಶ್ದೊಂಬರ, ಸುರೇಶ್ಸುಂಕದ, ನಾಗರಾಜ್ ಈಳಗೇರ, ಖಲಂದರ್ಹಿತ್ತಲಮನಿ, ಕಾಂತೇಶ ಈಳಗೇರ ಉಪಸ್ಥಿತರಿದ್ದರು.

ವಿದ್ಯುತ್ ಅವಘಡ: ಮೇವು, ಅಡಕೆ ಮರ ಭಸ್ಮ

ಹಾವೇರಿ: ವಿದ್ಯುತ್ ಶಾರ್ಟ್‌ಸರ್ಕ್ಯೂಟ್‌ನಿಂದಾಗಿ ಸುಮಾರು 1.10ಲಕ್ಷ ರೂ.ಮೌಲ್ಯದ ಮೇವಿನ ಬಣವಿ, ಅಡಕೆ ಮರಗಳು ಸುಟ್ಟು ಭಸ್ಮವಾಗಿರುವ ಘಟನೆ ರಾಣೇಬೆನ್ನೂರ ತಾಲೂಕು ಹೆಡಿಯಾಲ ಗ್ರಾಮದಲ್ಲಿ ನಡೆದಿದೆ. ಹೆಡಿಯಾಲ ಗ್ರಾಮದ ರಾಮನಗೌಡ ಮಾಳಗಿಮನಿಗೌಡ್ರ ಎಂಬುವವರಿಗೆ ಸೇರಿ ಜಮೀನಿನಲ್ಲಿ ಘಟನೆ ಸಂಭವಿಸಿದೆ. ಜಮೀನಿನಲ್ಲಿ ಹೈನುಗಾರಿಕೆ ಮಾಡುವ ಸಲುವಾಗಿ ಫಾರ್ಮ್‌ಹೌಸ್‌ನ್ನು ನಿರ್ಮಿಸಿಕೊಂಡಿದ್ದು, ನಾಲ್ಕು ಟ್ರ್ಯಾಕ್ಟರ್ ಭತ್ತದ ಹುಲ್ಲಿನ ಬಣವೆಯನ್ನು ಒಟ್ಟಲಾಗಿದೆ. ಮೇವಿನ ಬಣವೆ ಪಕ್ಕದಲ್ಲಿರುವ ವಿದ್ಯುತ್ ಕಂಬ ಹಳೆಯದಾಗಿದ್ದು, ಬಾಗಿಕೊಂಡಿದೆ. ಕಂಬದಲ್ಲಿನ ವೈಯರ್‌ಗಳು ಗಾಳಿಗೆ ಒಂದಕ್ಕೊಂದು ತಗುಲಿದ್ದು, ಶಾರ್ಟ್‌ಸರ್ಕ್ಯೂಟ್ ಆಗಿದೆ. ಮೇವಿನ ಬಣವಿ, 10ಅಡಕೆ ಮರಗಳು, ಒಂದು ತಾಡಪಲ್ ಸುಟ್ಟು ಭಸ್ಮವಾಗಿದೆ ಎಂದು ಪೊಲೀಸರ ದೂರಿನಲ್ಲಿ ತಿಳಿಸಿದೆ. ಹಲಗೇರಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ವ್ಯಕ್ತಿ ಆತ್ಮಹತ್ಯೆ

ಹಾವೇರಿ: ವಿಷ ಸೇವಿಸಿ ಅಸ್ವಸ್ಥಗೊಂಡಿದ್ದ ವ್ಯಕ್ತಿಯೊಬ್ಬರು ಚಿಕಿತ್ಸೆ ಫಲಿಸದೆ ಸಾವನ್ನಪ್ಪಿರುವ ಘಟನೆ ತಾಲೂಕಿನ ಬೆನಕನಹಳ್ಳಿ ಗ್ರಾಮದಲ್ಲಿ ನಡೆದಿದೆ. ಬಸವಣ್ಣೆಪ್ಪ ದುರುಗಪ್ಪ ಗಂಗಾಳಿ (60) ಮೃತ ವ್ಯಕ್ತಿ. ಈತ ಮದ್ಯ ವ್ಯಸನಿಯಾಗಿದ್ದು ಕುಡಿಯಬೇಡ ಎಂದು ಎಷ್ಟೇ ಬುದ್ದಿವಾದ ಹೇಳಿದ್ದರೂ ಕೂಡ ಕೇಳುತ್ತಿರಲಿಲ್ಲ. ಮದ್ಯ ಸೇವನೆಯ ಅಮಲಿನಲ್ಲಿ ವಿಷ ಸೇವಿಸಿ ಅಸ್ವಸ್ಥಗೊಂಡಿದ್ದಾರೆ. ಕೂಡಲೇ ಚಿಕಿತ್ಸೆಗೆಂದು ಜಿಲ್ಲಾಸ್ಪತ್ರೆಗೆ ದಾಖಲಿಸಿದ್ದು, ಉಪಚಾರ ಫಲಿಸದೆ ಮೃತಪಟ್ಟಿದ್ದಾರೆ ಎಂದು ಮೃತನ ಪತ್ನಿ ಹನುಮವ್ವ ಗಂಗಾಳಿ ಪೊಲೀಸರಿಗೆ ನೀಡಿದ ದೂರಿನಲ್ಲಿ ತಿಳಿಸಿದ್ದಾರೆ. ಹಾವೇರಿ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಹಾವು ಕಚ್ಚಿ ವ್ಯಕ್ತಿ ಸಾವು

ಹಾವೇರಿ: ಜಮೀನಿನಲ್ಲಿ ಕಸ ಕೀಳುವಾಗ ಹಾವು ಕಚ್ಚಿದ್ದರಿಂದ ವ್ಯಕ್ತಿಯೊಬ್ಬರು ಸಾವನ್ನಪ್ಪಿರುವ ಘಟನೆ ಬ್ಯಾಡಗಿ ತಾಲೂಕು ಕಲ್ಲೇದೇವರ ಗ್ರಾಮದಲ್ಲಿ ನಡೆದಿದೆ. ಪುಟ್ಟನಗೌಡ ಬಸನಗೌಡ ಇದೇಗೌಡ್ರ (50) ಮೃ ವ್ಯಕ್ತಿ. ಈತ ಗ್ರಾಮದ ರೈತರೊಬ್ಬರ ಜಮೀನಿನಲ್ಲಿ ಕಸ ಕೀಳುವಾಗ ಹಾವು ಕಚ್ಚಿದೆ. ಕೂಡಲೇ ಉಪಚಾರಕ್ಕೆಂದು ಜಿಲ್ಲಾಸ್ಪತ್ರೆಗೆ ಕರೆದುಕೊಂಡು ಬಂದಾಗ ಉಪಚಾರ ಫಲಿಸದೆ ಮೃತಪಟ್ಟಿದ್ದಾರೆ ಎಂದು ಮೃತರ ಪತ್ನಿ ಕುಸುಮಾ ಇದೇಗೌಡ್ರ ಪೊಲೀಸರ ದೂರಿನಲ್ಲಿ ತಿಳಿಸಿದ್ದಾರೆ. ಬ್ಯಾಡಗಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ಹಾವೇರಿ: ಬಸವೇಶ್ವರ ನಗರದ ಸರ್ಕಾರಿ ಪದವಿಪೂರ್ವ ಕಾಲೇಜಿನಲ್ಲಿ ಮಹಿಳಾ ಸಿಬ್ಬಂದಿ ಹಸಿರು ಸೀರೆ ತೊಟ್ಟು ಗಿಡಗಳನ್ನು ನೆಡುವುದರ ಮೂಲಕ ವಿಶ್ವಪರಿಸರ ದಿನವನ್ನು ಅರ್ಥಪೂರ್ಣವಾಗಿ ಆಚರಿಸಿದರು.

ಜೂನ್ ಪಡಿತರ ಆಹಾರ ಧಾನ್ಯ ವಿತರಣೆ

ಹಾವೇರಿ: ಪಡಿತರ ಆಹಾರ ಧಾನ್ಯವನ್ನು ಅನ್ನಭಾಗ್ಯ ವರ್ಗದಡಿ ಮೇ ಹಾಗೂ ಜೂನ್ ಎರಡು ಮಾಹೆಗಳಿಗೆ ಸಂಬಂಧಿಸಿದಂತೆ ಜಿಲ್ಲೆಯ ಒಟ್ಟು 465 ನ್ಯಾಯಬೆಲೆ ಅಂಗಡಿಗಳಿಗೆ ಆಹಾರಧಾನ್ಯವನ್ನು ವಿತರಣೆ ಮಾಡಲಾಗಿದೆ ಎಂದು ಜಿಲ್ಲಾಧಿಕಾರಿ ಡಾ.ವಿಜಯಮಹಾಂತೇಶ ದಾನಮ್ಮನವರ ಅವರು ತಿಳಿಸಿದ್ದಾರೆ.

ಅಂತ್ಯೋದಯ ಪಡಿತರ ಚೀಟಿ (ಪ್ರತಿ ಫಲಾನುಭವಿಗೆ ಏಕ ಸದಸ್ಯ, ದ್ವಿ ಸದಸ್ಯ, ತ್ರಿ ಸದಸ್ಯ ಎಎವೈ ಪಡಿತರ ಚೀಟಿಗಳನ್ನು ಹೊರತುಪಡಿಸಿ ನಾಲ್ಕು ಮತ್ತು ನಾಲ್ಕಕ್ಕಿಂತ ಹೆಚ್ಚಿನ ಸದಸ್ಯರುಳ್ಳ ಎಎವೈ ಪಡಿತರ ಚೀಟಿ ಪ್ರತಿ ಫಲಾನುಭವಿಗೆ ಕೇಂದ್ರ ಎನ್ ಎಫ್‌ಎಸ್‌ಎ ಹಂಚಿಕೆಯ 35 ಕೆಜಿ ಅಕ್ಕಿ ಹೊರತುಪಡಿಸಿ 10 ಕೆ.ಜಿ ಅಕ್ಕಿ ವಿತರಣೆ ಮಾಡಲಾಗುತ್ತದೆ.

ಆದ್ಯತಾ (ಬಿಪಿಎಲ್) ಪಡಿತರ ಚೀಟಿಯ ಪ್ರತಿ ಸದಸ್ಯರಿಗೆ) ರಾಜ್ಯ ಮತ್ತು ಕೇಂದ್ರ ವರ್ಗದಡಿಯ ಪಡಿತರ ಕಾರ್ಡುಗಳಿಗೆ 10 ಕೆ.ಜಿ ಅಕ್ಕಿ ವಿತರಣೆ ಮಾಡಲಾಗುತ್ತದೆ.

ಜೂನ್-2026ನೇ ಮಾಹೆಯಲ್ಲಿ ರಾಜ್ಯ ವ್ಯಾಪ್ತಿ ಅಂದರೆ, ಅನ್ನಭಾಗ್ಯ ಯೋಜನೆಯಡಿ ಮೇ ಮತ್ತು ಜೂನ್-2026 ಎರಡೂ ಮಾಹೆಗಳ ಪಡಿತರ ಆಹಾರಧಾನ್ಯವನ್ನು ವಿತರಿಸಲಾಗುತ್ತಿದ್ದು, ಎಲ್ಲ ಅರ್ಹ ಫಲಾನುಭವಿಗಳು ತಮ್ಮ ವ್ಯಾಪ್ತಿಯ ನ್ಯಾಯಬೆಲೆ ಅಂಗಡಿಗಳಲ್ಲಿ ಎರಡೂ ಮಾಹೆಗಳಿಗೆ ಸಂಬಂಧಿಸಿದಂತೆ ಒಂದೇ ಬೆರಳಚ್ಚು ನೀಡಿ ಪಡಿತರ ಪಡೆಯಬೇಕು ಎಂದು ತಿಳಿಸಿದ್ದಾರೆ.



ಹಾನಗಲ್ಲ: ವಿಶ್ವಪರಿಸರ ದಿನಾಚರಣೆಯ ದಿನದ ಅಂಗವಾಗಿ ಶುಕ್ರವಾರ ತಾಲೂಕಿನ ಗುಡಗುಡಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಮಕ್ಕಳು ಸಸಿ ನೆಡುವ ಮೂಲಕ ವಿಶ್ವಪರಿಸರ ದಿನಾಚರಣೆಯನ್ನು ಆಚರಿಸಿದರು. ಈ ಸಂಧರ್ಭದಲ್ಲಿ ಶಾಲಾಭಿವೃದ್ಧಿ ಸಮಿತಿ ಅಧ್ಯಕ್ಷ ರಾಜು ನಗರ, ರಮೇಶ ಪಾಟೀಲ, ಕರಬಸಯ್ಯ ಕುಲಕರ್ಣಿ, ನಿರಂಜನ ಪಾಟೀಲ, ಸಿದ್ದಯ್ಯ ಕುಲಕರ್ಣಿ, ನಾಗನಗೌಡ ಪಾಟೀಲ, ರಮೇಶ ಯಳವಟ್ಟಿ, ಮುಖ್ಯ ಶಿಕ್ಷಕ ಅನಿಲಕುಮಾರ ಗೋಣೆಣ್ಣನವರ, ಅಮೃತ ಹಿರೇಮಠ, ರೂಪಾ, ಗೀತಾ ಇದ್ದರು.

ವಿವಿಧ ಬೇಡಿಕೆ ಈಡೇರಿಕೆಗೆ ಒತ್ತಾಯ

- ನಿಗದಿತ ದರಕ್ಕೆ ರಸಗೊಬ್ಬರ ಮಾರಾಟ ಮಾಡಿ
- ತಕ್ಷಣವೇ ಯುಟಿಪಿ ಕಾಲುವೆ ಪೂರ್ಣಗೊಳಿಸಿ



ಹಾವೇರಿ: ನಿಗದಿತ ದರಕ್ಕೆ ರಸಗೊಬ್ಬರ ಮಾರಾಟ, ಲಿಂಕ್ ಇಲ್ಲದೆ ರಸಗೊಬ್ಬರ ಪೂರೈಕೆ ಮಾಡುವುದು ಸೇರಿದಂತೆ ರೈತರ ವಿವಿಧ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ತಾಲೂಕಾ ಘಟಕದ ರೈತ ಮುಖಂಡರು ಶನಿವಾರ ನಗರದ ತಹಶೀಲ್ದಾರ ಕಚೇರಿಯಲ್ಲಿ ತಾಲೂಕಾ ದಂಡಾಧಿಕಾರಿ ಶರಣಮ್ಮ ಮುಖಾಂತರ ಸರ್ಕಾರಕ್ಕೆ ಮನವಿ ಸಲ್ಲಿಸಿದರು.

ಈ ವೇಳೆ ಮಾತನಾಡಿದ ರೈತರು, ಮುಂಗಾರು ಬಿತ್ತನೆ ಚುರುಕಾಗಿರುವ ಹಿನ್ನೆಲೆಯಲ್ಲಿ ಡಿಎಪಿ ಕಾಂಪ್ಲೆಕ್ಸ್ ಗೊಬ್ಬರಕ್ಕೆ ನಿಗದಿತ ದರಕ್ಕಿಂತ ಹೆಚ್ಚಾಗಿ ಅಂಗಡಿಯವರು ವಸೂಲಿ ಮಾಡುತ್ತಿದ್ದು, ಇದನ್ನು ತಡೆಯುವಲ್ಲಿ ತಾಲೂಕಾಡಳಿತವಿಫಲವಾಗಿದೆ. ತಕ್ಷಣವೇನಿಗದಿತದರಕ್ಕೆ ರಸಗೊಬ್ಬರ ಮಾರಾಟ ಮಾಡಬೇಕು. ಖಾಸಗಿ ಗೊಬ್ಬರ ವಿತರಕರು ರೈತರಿಗೆ ಡಿಎಪಿ ಅಥವಾ ಯೂರಿಯಾ ನೀಡುವಾಗ ಅದರ ಜೊತೆಗೆ ಕಡ್ಡಾಯವಾಗಿ ಬೇಡದ ಲಿಕ್ವಿಡ್ ಟಾನಿಕ್ ಅಥವಾ ಜೈವಿಕ ಪೌಡರ್‌ಗಳನ್ನು ಖರೀದಿಸಲೇಬೇಕೆಂದು ಒತ್ತಾಯಿಸುತ್ತಿದ್ದಾರೆ. ರೈತರಿಗೆ ಯಾವುದೇ ಲಿಂಕ್ ಇಲ್ಲದೆ ರಸಗೊಬ್ಬರ ಪೂರೈಸಲು ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸಿದರು.

ಅದೇ ರೀತಿ ಗೋವಿನಜೋಳ ಬಿತ್ತನೆ ಬೀಜಕ್ಕೆ ಏಕರೂಪ ದರ ನಿಗದಿ ಮಾಡಬೇಕು. ಕಳಪೆ ಮತ್ತು ನಕಲಿ ಬೀಜ ಮಾರಾಟ ಮಾಡುವವರ ಸೂಕ್ತ ಕ್ರಮ ಕೈಗೊಳ್ಳಬೇಕು. ಎಫ್‌ಐಡಿ ಮೂಲಕ ಬೀಜ, ಗೊಬ್ಬರ ಕೊಡುವುದನ್ನು ರದ್ದು ಮಾಡಿ ನೇರವಾಗಿ ರೈತರಿಗೆ ಯೂರಿಯಾ ಗೊಬ್ಬರ ಕೊಡಲು ಕ್ರಮ ಕೈಗೊಳ್ಳಬೇಕು.

ಯುಟಿಪಿ ಮೂಲಕ ರೈತರ ಜಮೀನುಗಳಿಗೆ ನೀರು ಹಾಯಿಸುವ ಕಾಲುವೆಗಳು ಪೂರ್ಣಗೊಂಡಿಲ್ಲ ಇದಕ್ಕೆ ಅಧಿಕಾರಿಗಳ ನಿರ್ಲಕ್ಷ್ಯವೇ ಕಾರಣ. ತಕ್ಷಣವೇ ಯುಟಿಪಿ ಕಾಲುವೆ ಪೂರ್ಣಗೊಳಿಸಬೇಕು. ರೈತರಿಗೆ ನೀರಾವರಿ ಮಾಡಲು ಅನಾನುಕೂಲ ಆಗುತ್ತಿದ್ದು, ವಿದ್ಯುತ್ ಖಾಸಗೀಕರಣ ಮಾಡುವುದನ್ನು ಕೈಬಿಡಬೇಕು. ಗ್ರಾಮೀಣ ಭಾಗಗಳಲ್ಲಿ ವಿದ್ಯುತ್ ಕಂಬಗಳು ಮತ್ತು ತಂತಿಗಳು ದಶಕಗಳಷ್ಟು ಹಳೆಯದಾಗಿದ್ದು, ಪದೇ ಪದೇ ಲೋ-ವೋಲ್ಟೇಜ್ ಸಮಸ್ಯೆಯಿಂದ ಮೋಟಾರ್‌ಗಳು ಸುಟ್ಟು ಹೋಗುತ್ತಿವೆ. ತಕ್ಷಣವೇ ವಿದ್ಯುತ್ ಕಂಬ ತಂತಿಗಳನ್ನು ದುರಸ್ತಿ ಮಾಡಬೇಕೆಂದು ಆಗ್ರಹಿಸಿ ಮನವಿ ಸಲ್ಲಿಸಿದರು.

ಈ ಸಂದರ್ಭದಲ್ಲಿ ರೈತ ಸಂಘದ ತಾಲೂಕಾಧ್ಯಕ್ಷ ದಿಳ್ಳೆಪ್ಪ ಮಣ್ಣೂರ, ಜಿಲ್ಲಾ ಕಾರ್ಯಾಧ್ಯಕ್ಷ ಶಿವಬಸಪ್ಪ ಗೋವಿ, ಗೌರವಾಧ್ಯಕ್ಷಸುರೇಶಚಲವಾದಿ, ತಾಲೂಕಾ ಪ್ರಧಾನ ಕಾರ್ಯದರ್ಶಿ ಶಿವಯೋಗಿ ಹೊಸಗೌಡ್ರ, ರಾಜು ತರ್ಲಗಟ್ಟ, ಮಂಜುನಾಥ ಕದಂ, ಕರಬಸಪ್ಪ ನಾಗಮ್ಮನವರ, ಮಂಜಪ್ಪ ಸೊಟಾರೆ, ದೇವರಾಜ ಪಾಟೀಲ, ಸಿದ್ದಪ್ಪ ಮರೆಣ್ಣನವರ, ಹರೀಶ ಕಡೇಮನಿ, ನಾಗಪ್ಪ ಓಲೇಕಾರ ಸೇರಿದಂತೆ ಅನೇಕ ರೈತರು ಉಪಸ್ಥಿತರಿದ್ದರು.

ಕ್ರಮ ಕೈಗೊಳ್ಳಿ

ಬಿತ್ತನೆ ಬೀಜದ ಅಸಲಿತನವನ್ನು ಪತ್ತೆಹಚ್ಚಲು ಅನುಕೂಲವಾಗುವಂತೆ ಪ್ರತಿ ಬೀಜದ ಚೀಲದ ಮೇಲೂ ಬಾರ್‌ಕೋಡಿಂಗ್ ಅಥವಾ ಕ್ಯೂಆರ್ ಕೋಡ್ ವ್ಯವಸ್ಥೆ ಮಾಡಬೇಕು. ಬಫರ್ ಸ್ಟಾಕ್‌ನಲ್ಲಿರುವ ಗೊಬ್ಬರವನ್ನು ರೈತರಿಗೆ ಸಮರ್ಪಕವಾಗಿ ವಿತರಿಸಲು ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸಿದರು.

ಪರಿಹಾರ ಹಣ ಶೀಘ್ರ ನೀಡಿ: ಪಾಟೀಲ



ರಾಣೇಬೆನ್ನೂರ: ಕಳೆದ ತಿಂಗಳು ಸುರಿದ ಅಕಾಲಿಕ ಮಳೆಯಿಂದ ತಾಲೂಕಿನ ಮೆಡ್ಲೇರಿ ಹೋಬಳಿಯ ಬತ್ತ, ತೆಂಗು ಹಾಗೂ ಅಡಕೆ ಬೆಳೆಗಳು ಭಾರೀ ಹಾನಿಗೊಳಗಾದ ಹಿನ್ನೆಲೆಯಲ್ಲಿ ರೈತರಿಗೆ ತಕ್ಷಣ ಪರಿಹಾರ ನೀಡುವಂತೆ ಮನವಿ ಮಾಡಿದರೂ ಜಿಲ್ಲಾಡಳಿತ ಹಾಗೂ ಸರ್ಕಾರದಿಂದ ಇದುವರೆಗೆ ಸಮರ್ಪಕ ಸ್ಪಂದನೆ ಸಿಕ್ಕಿಲ್ಲವೆಂದು ಜಿಪಂ ಮಾಜಿ ಸದಸ್ಯ ಹಾಗೂ ಬಿಜೆಪಿ ಮುಖಂಡ ಸಂತೋಷ ಪಾಟೀಲ ಆರೋಪ ಮಾಡಿದರು.

ನಗರದ ಬಿಜೆಪಿ ಕಚೇರಿಯಲ್ಲಿ ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕಟಾವಿಗೆ ಸಿದ್ಧವಾಗಿದ್ದ ಸಾವಿರಾರು ಎಕರೆ ಬತ್ತ ಬೆಳೆ ಸಂಪೂರ್ಣ ನಾಶವಾಗಿದೆ. ನೂರಾರು ಎಕರೆಯಷ್ಟು ಅಡಕೆ ಹಾಗೂ ತೆಂಗು ಬೆಳೆ ಕೈಗೆ ಸಿಗದಂತಾಗಿದೆ. ರೈತರು ಎಕರೆಗೆ ಸುಮಾರು 40 ಸಾವಿರ ವೆಚ್ಚ ಮಾಡಿದ್ದಾರೆ. ಈ ಮೊತ್ತವನ್ನು ಮುಂಗಡ ಪರಿಹಾರವಾಗಿ ನೀಡುವಂತೆ ಸರ್ಕಾರಕ್ಕೆ ಮನವಿ ಮಾಡಿದ್ದೇವೆ. ಆದರೆ ಈ ಬಗ್ಗೆ ಯಾವುದೇ ಸ್ಪಷ್ಟ ಮಾಹಿತಿ ದೊರಕುತ್ತಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಈ ತಿಂಗಳ ಅಂತ್ಯದೊಳಗೆ ಪರಿಹಾರ ಹಣವನ್ನು ರೈತರ ಖಾತೆಗೆ ಜಮಾ ಮಾಡದಿದ್ದರೆ ಜೂ.30ರಂದು ಬಿಜೆಪಿ ಕಚೇರಿಯಲ್ಲಿ ಸಾವಿರಾರು ರೈತರೊಂದಿಗೆ ಸರ್ಕಾರದ ಪುಣ್ಯತಿಥಿ ನೆರವೇರಿಸಲಾಗುವುದು ಎಂದು ಎಚ್ಚರಿಸಿದರು.

ನಂತರ ನಗರದ ಹೊರವಲಯದ ಕೂನಬೇವು ಪ್ಲಾಟ್ ಬಳಿಯ ಗದಗ-ಹೊನ್ನಾಳ್ಳಿ ರಾಜ್ಯ ಹೆದ್ದಾರಿ ಅಂಡರ ಬ್ರಿಡ್ಜ್ ಮಳೆ ನೀರು ತುಂಬಿಕೊಂಡು ಸುತ್ತಮುತ್ತಲಿನ ಹೊಲಗಳಿಗೆ ನೀರು ತುಂಬಿ ರೈತರು ಬಿತ್ತನೆ ಮಾಡಿದ ಬೆಳೆ ಹಾಳಾಗಿರುವ ಪ್ರದೇಶಕ್ಕೆ ಭೇಟಿ ನೀಡಿ ಸಮಸ್ಯೆ ಪರಿಹಾರಕ್ಕೆ ಸಂಬಂಧಪಟ್ಟ ಅಧಿಕಾರಿಗಳಿಗೆ ಆಗ್ರಹಿಸಿದರು.

ಪ್ರಭುಗೌಡ ಚನ್ನಗೌಡ, ಹನುಮಂತರಾಜ ಚನ್ನಗೌಡ್ರ, ಯುವರಾಜ ಬಾರಟಕ್ಕಿ, ಚಂದ್ರಪ್ಪ ಭತ್ತದ, ವಿಜಯಕುಮಾರ ಜ್ಯೋತಿ, ಬಸವರಾಜ ಬಣಕಾರ, ಗುಡ್ಡೇಶ ನಿಟ್ಟೂರು, ಮಲ್ಲನಗೌಡ ನರಸಗೊಂಡರ, ಬಸವನಗೌಡ ಪಾಟೀಲ, ರಾಜೇಂದ್ರ ಜಂಬಗಿ, ದೇವೇಂದ್ರಣ್ಣ ಉಜ್ಜನಗೌಡ್ರ, ವಿಜಯಕುಮಾರಹೆಡಿಯಾಲ, ಚಂದ್ರಶೇಖರ ಗೋಣಿಬಸಮ್ಮನವರ, ಸಿದ್ದು ಉಜ್ಜನಗೌಡ್ರ, ಅಭಿಷೇಕ ಪಟ್ಟಣಶೆಟ್ಟಿ, ಕಿರಣ ಬುಳ್ಳನಗೌಡ್ರ, ಸಿದ್ದು ರೊಡ್ಡನವರ, ಕರಸಬಪ್ಪ ನರಸಗೊಂಡರ, ಬಸಪ್ಪ ನೆಲೋಗಲ್ಲ, ಮಲ್ಲಪ್ಪ ನರಸಗೊಂಡರ, ಕುರುವತ್ತೆಪ್ಪ ಗೂಣೆಮ್ಮನವರ, ಕುಮಾರ ನರಸಗೊಂಡರ, ಮಹಾಂತೇಶ ಕೂನಬೇವು, ಬಸವರಾಜ ಕಾಳಮ್ಮನವರ, ಶಿವು ನರಸಗೊಂಡರ, ವಿಜಯಕುಮಾರ ಹೆಡಿಯಾಲ, ಯಲ್ಲಪ್ಪ ಮುದೋಳಕರ, ಶೇಖಪ್ಪ ನರಸಗೊಂಡರ, ಅಣ್ಣಪ್ಪ ತಿಮ್ಮೆನಹಳ್ಳಿ, ಮಲ್ಲಕಪ್ಪ ಹೊನ್ನಾಳಿ ಮತ್ತಿತರರಿದ್ದರು.

ಜಿಲ್ಲಾಸ್ಪತ್ರೆ ಆವರಣದಲ್ಲಿ ನಿಲ್ಲಿಸಿದ್ದ ಸ್ಕೂಟಿ ಕಳ್ಳತನ

ಹಾವೇರಿ: ನಗರದ ಜಿಲ್ಲಾಸ್ಪತ್ರೆ ಆವರಣದಲ್ಲಿ ನಿಲ್ಲಿಸಿದ್ದ ಸ್ಟಾಫ್ ನರ್ಸ್‌ರೊಬ್ಬರ ಸ್ಕೂಟಿಯನ್ನು ಕಳ್ಳರು ಕಳುವು ಮಾಡಿರುವ ಘಟನೆ ನಡೆದಿದೆ. ಹಾವೇರಿಯ ಶಿವಲಿಂಗನಗರ ಮೂರನೇ ಕ್ರಾಸ್‌ನಲ್ಲಿ ವಾಸವಿರುವ ವಿನೋದಾ ಬೂದಗಟ್ಟಿ ಎಂಬುವವರಿಗೆ ಸೇರಿದ ಸುಮಾರು 15 ಸಾವಿರ ರೂ.ಮೊತ್ತದ ಸ್ಕೂಟಿಯನ್ನು ಕಳ್ಳತನ ಮಾಡಲಾಗಿದೆ. ಹಾವೇರಿ ಶಹರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸಸಿಗಳು ಬೆಳೆಯುವಂತೆ ಪೋಷಿಸಿ

ಹಾವೇರಿ: ಸಸಿಗಳನ್ನು ಹಚ್ಚಿ ಅವುಗಳು ನಾಶವಾಗದಂತೆ ನೀರು, ಪೋಷಕಾಂಶಗಳನ್ನು ಒದಗಿಸಿ ಅಗತ್ಯ ರಕ್ಷಣೆ ಮಾಡಬೇಕು. ನಮ್ಮ ಬಡಾವಣೆಯ ಪ್ರತಿಯೋರ್ವರು ಒಂದೊಂದು ಗಿಡದ ಜವಾಬ್ದಾರಿ ತೆಗದುಕೊಂಡು ಬೆಳೆಸಿದರೆ, ಖಂಡಿತವಾಗಿಯೂ ಹಾವೇರಿಯಲ್ಲಿ ನಮ್ಮದು ಮಾದರಿ ಬಡಾವಣೆಯಾಗುತ್ತದೆ, ಆ ನಿಟ್ಟಿನಲ್ಲಿ ಎಲ್ಲರೂ ಕಾಳಜಿ ವಹಿಸೋಣ ಎಂದು ಸುಭಾಸ್ ಪಾಟೀಲ ಅಭಿಪ್ರಾಯಪಟ್ಟರು.

ನಗರದ ಶ್ರೀ ಕಂಠಪ್ಪ ಬಡಾವಣೆಯಲ್ಲಿ ಶನಿವಾರ ಬೆಳಗ್ಗೆ ಸಹಮತ ಸಂಸ್ಥೆ ಹಾಗೂ ಶ್ರೀಕಂಠಪ್ಪ ಬಡಾವಣೆ ನಾಗರೀಕ ಹಿತರಕ್ಷಣಾ ಸಮಿತಿಗಳು ಆಯೋಜಿಸಿದ್ದ ವನಮಹೋತ್ಸವ ದಿನಾಚರಣೆಯ ಅಂಗವಾಗಿ ಸಸಿಗಳನ್ನು ನೆಡುವ ಮೂಲಕಕಾರ್ಯಕ್ರಮಉದ್ಘಾಟಿಸಿಮಾತನಾಡಿ, ಸಸಿಗಳನ್ನು ನೆಡುವಾಗಿನ ಸಂಭ್ರಮವು ಕೇವಲ ಫೋಟೊಕ್ಕೆ ಸೀಮಿತವಾಗದೇ, ನೆಟ್ಟ ಪ್ರತಿ ಸಸಿಗಳನ್ನು ಜತನದಿಂದ ಪೋಷಿಸಿ ಮರಗಳಾಗಿ ಬೆಳೆಯುವವರೆಗೂ ಕಾಳಜಿವಹಿಸಬೇಕು ಅಂದಾಗ ಮಾತ್ರ ವನಮಹೋತ್ಸವ ಆಚರಿಸಿದ್ದು ಸಾರ್ಥಕವಾಗುತ್ತದೆ ಎಂದರು.

ಸಹಮತ ಸಂಸ್ಥೆ ಅಧ್ಯಕ್ಷ ಬಸವರಾಜ ಪೂಜಾರ ಮಾತನಾಡಿ, ಮರ ಗಿಡಗಳನ್ನು ಕಡಿಯುತ್ತಿರುವುದರಿಂದ ಪರಿಸರ ನಾಶ ಸಂಭವಿಸುತ್ತದೆ. ಇದರಿಂದಾಗಿ ಹವಾಮಾನ ವೈಪರಿತ್ಯಗಳು ಹಾಗೂ ಪ್ರಕೃತಿ ವಿಕೋಪಗಳು ಸಂಭವಿಸುತ್ತಿವೆ. ನೈಸರ್ಗಿಕ ಪರಿಸರ ಸಮತೋಲನಕ್ಕಾಗಿ ನಾವು ಕನಿಷ್ಠ ನಮ್ಮ ಮನೆಗಳು ಹಾಗೂ ನಾವು ವಾಸಿಸುವ ಪ್ರದೇಶದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಗಿಡ ಮರಗಳನ್ನು ಬೆಳೆಸಬೇಕು ಎಂದು ಹೇಳಿದರು.

ಎರಡೂ ಸಂಸ್ಥೆಗಳ ಪದಾಧಿಕಾರಿಗಳು, ಸದಸ್ಯರು ಹಾಗೂ ನಿವಾಸಿಗಳು ಸಕ್ರಿಯವಾಗಿ ಭಾಗವಹಿಸಿ ಸಸಿ ನೆಡುವ ಕಾರ್ಯದಲ್ಲಿ ತೊಡಗಿಸಿಕೊಂಡರು. ಬಡಾವಣೆಯಲ್ಲಿರುವ ಎರಡು ಮುಖ್ಯ ರಸ್ತೆಯ ಮಧ್ಯೆ ಖಾಲಿ ಇರುವ ಪ್ರದೇಶದಲ್ಲಿ ವಿವಿಧ ಸಸಿಗಳನ್ನು ನೆಡಲಾಯಿತು.

ಈ ಸಂದರ್ಭದಲ್ಲಿ ಕೊಟ್ರಗೌಡ ಸಿ, ಎಸ್. ಕೆ. ಹುಲ್ಲೂರ, ರವೀಂದ್ರ ಕರಡಿ ಚಾಮರಾಜ ಕುಲಮಿ, ಎಚ್.ಎ. ಮುಲ್ಲಾ, ರೇಣುಕಾ ಕಹಾರ, ಲಕ್ಷ್ಮೀ ಪ್ರಭ ಹುಲ್ಲೂರ, ಕವಿತಾ ಗುಬ್ಬೇರ, ಅನಿತಾ ಸೂರಣಗಿ, ಮಾಲಾ ಪೂಜಾರ, ಪೂಜಾ ವಾಲಿ, ಬಿ.ಬಿ ಆರಳಿ, ಶಂಕ್ರಪ್ಪ ಮಾಳಮ್ಮನವರ, ಮಾಲತೇಶ ಕತ್ತಿ, ಐ.ಎಂ. ಶೇತಸನದಿ, ಶಿವಕುಮಾರ ವಾಲಿ, ನಾರಾಯಣ ಕಾಳೆ, ಶ್ರೀನಿವಾಸ ಕಲಾಲ ಸೇರಿದಂತೆ ಬಡಾವಣೆಯ ನಿವಾಸಿಗಳು ಉಪಸ್ಥಿತರಿದ್ದರು.



ಪ್ರತಿದಿನ ಸ್ವಚ್ಛ ಪರಿಸರದ ಕುರಿತು ಯೋಚನೆ ಮಾಡಿ: ಶ್ರೀಶೈಲಜಾ



ಹಾವೇರಿ: ನಾವು ಪರಿಸರ ದಿನದಂದು ಮಾತ್ರ ಆಚರಣೆ ಮಾಡದೇ ಪ್ರತಿ ದಿನವೂ ಸ್ವಚ್ಛ ಪರಿಸರದ ಕುರಿತು ಯೋಚನೆ ಮಾಡಬೇಕು ಎಂದು ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳಾದ ಶ್ರೀಶೈಲಜಾ ಎಚ್.ವಿ. ಅವರು ಹೇಳಿದರು.

ಕಳ್ಳಿಹಾಳ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ವಸತಿಯುತ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಶುಕ್ರವಾರ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಹಾಗೂ ಮಕ್ಕಳ ರಕ್ಷಣಾ ಘಟಕದ ಸಹಯೋಗದಲ್ಲಿ ಆಯೋಜಿಸಲಾದ ವಿಶ್ವ ಪರಿಸರ ದಿನದ ಅಂಗವಾಗಿ ಅರಣ್ಯೀಕರಣ ಹಾಗೂ ಸರೋವರ ಪುನರುಜ್ಜೀವನ, ಬಾಲ್ಯ ವಿವಾಹ, ಪೋಕ್ಸೋ ಕಾಯ್ದೆ, ವರದಕ್ಷಿಣೆ ನಿಷೇಧ ಕುರಿತು ಕಾನೂನು ಅರಿವು ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಕಾಲೇಜಿನ ವತಿಯಿಂದ 250 ಸಸಿಗಳನ್ನು ಕಾಲೇಜಿನ ಸುತ್ತಮುತ್ತಲೂ ನೆಡಲಾಗುತ್ತಿದೆ. ಎಲ್ಲರೂ ತಮ್ಮ ತಮ್ಮ ಮನೆಯ ಮುಂದೆ ಗಿಡ-ಮರಗಳನ್ನು ಬೆಳಸಬೇಕು. ಕರ್ನಾಟಕ ರಾಜ್ಯದಾದ್ಯಂತ ಐದು ಕೋಟಿಗೂ ಅಧಿಕ ಸಸಿಗಳನ್ನು ನಡೆಬೇಕು ಎಂದು ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ನಿರ್ದೇಶನವಿದೆ. ಜಿಲ್ಲೆಯಲ್ಲಿ 10 ಲಕ್ಷ ಸಸಿಗಳನ್ನು ನೆಡುವ ಗುರಿಯನ್ನು ಹೊಂದಲಾಗಿದೆ. ಹಾಗಾಗಿ ಪ್ರತಿಯೊಬ್ಬರ ಸಹಕಾರ ಅಗತ್ಯ ಎಂದು ಹೇಳಿದರು.

ಬಾಲ್ಯ ವಿವಾಹ ನಿಷೇಧ, ಪೋಕ್ಸೋ ಕಾಯ್ದೆ ಹಾಗೂ ವರದಕ್ಷಿಣೆ ನಿಷೇಧ ಕಾಯ್ದೆ ಕುರಿತು ಪ್ರತಿಯೊಬ್ಬರು ತಿಳಿದುಕೊಳ್ಳಬೇಕು ಹಾಗೂ ಇತರರಿಗೆ ಜಾಗೃತಿ ಮೂಡಿಸಬೇಕು. ಕಳ್ಳಿಹಾಳ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ವಸತಿಯುತ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಉಪನ್ಯಾಸಕ ಡಾ.ಡಿ.ಟಿ. ಪಾಟೀಲ ಅಧ್ಯಕ್ಷತೆ ವಹಿಸಿದ್ದರು.

ಪರಿಸರವಾದಿ ಮಾಧುರಿ ದೇವಧರ, ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಜಯಶ್ರೀ ಪಾಟೀಲ ಇತರರು ಉಪಸ್ಥಿತರಿದ್ದರು.

ತ್ರಿಭಾಷಾ ಸೂತ್ರ ಸರ್ವರೂ ಅನ್ವಯಿಸಿಕೊಳ್ಳಿ: ಡಾ.ವಿ.ವೈ.ತೊಂಡಿಹಾಳ



ಹಾನಗಲ್ಲ: ಯಾವ ಭಾಷೆಯೂ ಕೀಳಲ್ಲ, ಭಾಷೆಗಳನ್ನು ಕಲಿಯುವ ಮೂಲಕ ಅಲ್ಲಿನ ಯೋಚನೆ ಹೊಸ ಸಂವೇದನೆಗಳನ್ನು ಅರಿಯಲು ಸಾಧ್ಯ, ತ್ರಿಭಾಷಾ ಸೂತ್ರವನ್ನು ಎಲ್ಲರೂ ಅನ್ವಯಿಸಿಕೊಳ್ಳಬೇಕು ಎಂದು ಹಾವೇರಿ ವಿಶ್ವವಿದ್ಯಾಲಯದ ಡೀನ್ ಡಾ.ವಿ.ವೈ.ತೊಂಡಿಹಾಳ ತಿಳಿಸಿದರು.

ಇತ್ತಿಚೇಗೆ ಹಾನಗಲ್ಲಿನ ಕುಮಾರೇಶ್ವರ ಶಿಕ್ಷಣ ಮಹಾವಿದ್ಯಾಲಯದಲ್ಲಿ ಆಯೋಜಿಸಿದ ತ್ರಿಭಾಷಾ ಸೂತ್ರ ಹಾಗೂ ಅದರಲ್ಲಿ ಹಾಗೂ ಅದರಲ್ಲಿ ಭಾಷೆಯ ಸಮಾನತೆ ವಿಷಯದ ವಿಚಾರ ಸಂಕಿರಣದಲ್ಲಿ ಮಾತನಾಡಿದ ಅವರು, ನಮ್ಮ ಮಾತೃಭಾಷೆಯ ಬಗೆಗೆ ರಾಜಿ ಇಲ್ಲದಂತೆ ಸ್ವಾಭಿಮಾನವಿರಲಿ. ನಾವು ಕನ್ನಡಿಗರು ಎಂಬ ಹೆಮ್ಮೆಯೂ ಇರಲಿ. ಯಾವುದೇ ಭಾಷೆಯನ್ನು ವಿರೋಧಿಸುವ ತಿರಸ್ಕರಿಸುವ ಅಗತ್ಯವಿಲ್ಲ, ಅಗತ್ಯವಾದ ಭಾಷೆಗಳನ್ನು ಅರಿಯುವುದರಲ್ಲಿ ಏನೂ ಅಪರಾಧವಿಲ್ಲ ಎಂದರು.

ಹಿಂದಿ ವಿಭಾಗದ ಸಹಾಯಕ ಪ್ರಾಧ್ಯಾಪಕಿ ಪ್ರೊ. ಶಿಲ್ಪಾ ಟಿ. ಮಾತನಾಡಿ, ತ್ರಿಭಾಷಾ ಸೂತ್ರ ಇಡೀ ಭಾರತವನ್ನು ಭಾಷಿಕವಾಗಿ ಒಂದುಗೂಡಿಸುವ ವಿಶೇಷ ಸೂತ್ರವಾಗಿದೆ. ವಿದ್ಯಾರ್ಥಿಗಳಿಗೆ ಸಾಮಾಜಿಕ, ಶೈಕ್ಷಣಿಕ ಔದ್ಯೋಗಿಕ ಕ್ಷೇತ್ರಗಳಲ್ಲಿ ಈ ಸೂತ್ರ ಅತ್ಯಂತ ಸಹಕಾರಿ ಎಂದರು.

ಪ್ರಾ.ಡಾ.ಎಂ.ಎಚ್. ಹೊಳಣ್ಣನವರ ಅಧ್ಯಕ್ಷತೆವಹಿಸಿ ಮಾತನಾಡಿದರು. ಡಾ. ಎಂ.ಬಿ. ನಾಯಕ್, ಪ್ರೊ.ಶಾದಿಕ ಬಡಗಿ, ಪ್ರೊ.ಜವಳಿ, ಡಾ. ಸತ್ಯ ಸಾವಿತ್ರಿ, ಪ್ರೊ. ಹಾಜಿರಾ, ಪ್ರೊ. ಭೀಮಾವತಿ ಇದ್ದರು. ಸಂಗೀತಾ ಹಾಗೂ ಶಬೀರಾ ಸ್ವಾಗತಿಸಿದರು. ಸುಪ್ರಿಯಾ ಕೋಣನಕೇರಿ ಹಾಗೂ ರೋಷನಿ ಶಿರಬಡಗಿ ನಿರೂಪಿಸಿದರು. ಸೂರಯ್ಯ ವಂದಿಸಿದರು.

ನಾಡು ಕಂಡ ಧೀಮಂತ ನಾಯಕ ಕೃಷ್ಣರಾಜ ಒಡೆಯರ



ಹಾವೇರಿ: ರಾಜನಾಗಿದ್ದರೂ ಯಾವುದೇ ಯುದ್ಧ ಮಾಡದೇ ಸಂಸ್ಥಾನದಲ್ಲಿ ಸಾಮಾಜಿಕ, ಶೈಕ್ಷಣಿಕ, ನೀರಾವರಿ, ಹಿಂದುಳಿದವರ ಏಳಿಗೆ ಮತ್ತು ಮಹಿಳಾಸಬಲೀಕರಣದಂತಹಕ್ರಾಂತಿಕಾರಿ ಕಾರ್ಯಗಳನ್ನು ಮಾಡಿದ ಮೈಸೂರಿನ ಯದುವಂಶದ ನಾಲ್ವಡಿ ಕೃಷ್ಣರಾಜ ಒಡೆಯರ ನಾಡು ಕಂಡ ಧೀಮಂತ ವ್ಯಕ್ತಿಯಾಗಿದ್ದರು ಎಂದು ಸಾಹಿತಿ ಸಿ.ಎಸ್. ಮರಳಿಹಳ್ಳಿ ಹೇಳಿದರು.

ಇಲ್ಲಿನ ವಿನಾಯಕ ನಗರದ ದಿ. ಗಂಗಾಧರ ನಂದಿ ಸಾಹಿತ್ಯ ಭವನದಲ್ಲಿ ಜಿಲ್ಲಾ ಮತ್ತು ತಾಲೂಕು ಕನ್ನಡ ಸಾಹಿತ್ಯ ಪರಿಷತ್ತು ವತಿಯಿಂದ ಹಮ್ಮಿಕೊಂಡಿದ್ದ ಮೈಸೂರು ಒಡೆಯ ನಾಲ್ವಡಿ ಕೃಷ್ಣರಾಜ ಒಡೆಯರ ಅವರ 142ನೇ ಜಯಂತಿಯಲ್ಲಿ ಅವರು ಮಾತನಾಡಿ, ಶಿಕ್ಷಣ ಮತ್ತು ಔದ್ಯೋಗಿಕರಣದ ಮಹತ್ವ ಅರಿತಿದ್ದರು. ಪ್ರಜಾಪ್ರತಿನಿಧಿ ಸಭೆ, ಮೀಸಲಾತಿ ಮತ್ತು ಮಹಿಳಾ ಸಬಲೀಕರಣದ ಕಾನೂನುಗಳ ಮೂಲಕ ಜನಹಿತ ಕಾಪಾಡಿದ ನಾಲ್ವಡಿ ಕೃಷ್ಣರಾಜರು ಮೈಸೂರು ರಾಜ್ಯವನ್ನು ಮಾದರಿ ರಾಜ್ಯವನ್ನಾಗಿಸಿದರು. ಮೀಸಲಾತಿ ಮೂಲಕ ಸಮ ಸಮಾಜದ ಕನಸನ್ನು ನನಸು ಮಾಡಿ, ಭಾರತದ ಮೀಸಲಾತಿ ಜನಕ ಎನಿಸಿಕೊಂಡಿದ್ದಾರೆ ಎಂದು ಹೇಳಿದರು.

ತಾಲೂಕು ಕಸಾಪ ಅಧ್ಯಕ್ಷ ವೈ.ಬಿ. ಆಲದಕಟ್ಟಿ, ಸಾಹಿತಿ ಹನುಮಂತಗೌಡ ಗೊಲ್ಲರ, ಜಿಲ್ಲಾ ಕಸಾಪ ಅಧ್ಯಕ್ಷ ಎಚ್.ಬಿ. ಲಿಂಗಯ್ಯ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಸಮಾರಂಭದಲ್ಲಿ ಹಿರಿಯ ಸಾಹಿತಿ ಸತೀಶ ಕುಲಕರ್ಣಿ, ಎಸ್.ಎನ್. ದೊಡ್ಡಗೌಡರ, ಶಂಕರ ಸುತಾರ, ಎನ್.ಬಿ. ಕಾಳೆ, ಶಿವಬಸವ ಮರಳಿಹಳ್ಳಿ, ಪ್ರೋ. ಪಿ.ಸಿ. ಹಿರೇಮಠ, ಎ.ಬಿ. ಗುಡ್ಡಳ್ಳಿ ಇತರರಿದ್ದರು. ಪೃಥ್ವೀರಾಜ ಬೆಟಗೇರಿ ಸ್ವಾಗತಿಸಿದರು. ಪರಶುರಾಮ ಕರ್ಜಗಿ ನಿರೂಪಿಸಿದರು.

ಜಿಲ್ಲೆಯಲ್ಲಿ ಮೋಡ ಕವಿದ ವಾತಾವರಣ, ಅಲ್ಪ ಮಳೆ

ಹಾವೇರಿ: ಜಿಲ್ಲೆಯಲ್ಲಿ ಭಾನುವಾರ ಮೋಡಕವಿದ ವಾತಾವರಣದೊಂದಿಗೆ ಕೆಲ ಭಾಗಗಳಲ್ಲಿ ಸಾಧಾರಣ ಮಳೆಯಾಗಿದೆ.

ಹಾವೇರಿ ನಗರದಲ್ಲಿ ಮಧ್ಯಾಹ್ನ ಅರ್ಧ ಗಂಟೆ ಕಾಲ ಜಿಟಿಜಿಟಿ ಮಳೆಯಾಗಿದೆ. ಬೆಳಗ್ಗೆಯಿಂದಲೇ ಮೋಡ ಕವಿದ ವಾತಾವರಣವಿದ್ದು, ಬ್ಯಾಡಗಿ, ಶಿಗ್ಗಾಂವಿ, ಹಾನಗಲ್ಲ ಭಾಗದಲ್ಲಿ ಸಾಧಾರಣ ಮಳೆಯಾಗಿದೆ. ಹದವಾದಮಳೆಯಿಂದಮುಂಗಾರು ಹಂಗಾಮಿನ ಕೃಷಿ ಕಾರ್ಯಕ್ಕೆ ಅನುಕೂಲವಾಗಿದೆ. ರೈತರು ಹೊಲ ಸಿದ್ಧಪಡಿಸುವುದು, ಬಿತ್ತನೆ ಮಾಡುವುದರಲ್ಲಿ ನಿರತರಾಗಿದ್ದಾರೆ.

ಶನಿವಾರಸಂಜೆಸುರಿದಮಳೆಗೆತಾಲೂಕಿನ ಅಗಡಿ ಹಳ್ಳ ತುಂಬಿ ಹರಿದಿದ್ದು, ಸಂಚಾರ ಸ್ಥಗಿತಗೊಂಡಿತ್ತು. ರಾಣೆಬೆನ್ನೂರಿನಲ್ಲಿ ಸುರಿದ ಭರ್ಜರಿ ಮಳೆಗೆ ಆಸ್ತಿಪಾಸ್ತಿ ಹಾನಿಯಾಗಿದೆ. ಹಲಗೇರಿ ಇಟಗಿ ಗ್ರಾಮಗಳ ಮಧ್ಯೆ ಹರಿಹರ ಸಮ್ಮಸಗಿ ರಾಜ್ಯ ಹೆದ್ದಾರಿ ಕೊಚ್ಚಿ ಹೋಗಿದೆ. ಎರಡು ತಿಂಗಳ ಹಿಂದಷ್ಟೇ ನಿರ್ಮಿಸಿದ್ದ ರಸ್ತೆ ಕೊಚ್ಚಿ ಹೋಗಿರುವುದರಿಂದ ವಾಹನ ಸವಾರರು ಪರದಾಡುವಂತಾಯಿತು.

ಅಲ್ಪಸಂಖ್ಯಾತರ ಹಾಸ್ಟೆಲ್‌ಗೆ ಅರ್ಜಿ ಆಹ್ವಾನ

ಹಾವೇರಿ: ಪ್ರಸಕ್ತ 2026-27ನೇ ಶೈಕ್ಷಣಿಕ ಸಾಲಿಗೆ ಹಾವೇರಿ ಜಿಲ್ಲೆಯ ಅಲ್ಪಸಂಖ್ಯಾತರ ಮೆಟ್ರಿಕ್ ನಂತರದ ಬಾಲಕ ಮತ್ತು ಬಾಲಕಿಯರ ವಿದ್ಯಾರ್ಥಿ ನಿಲಯಗಳ ಪ್ರವೇಶಕ್ಕೆ ಪಿಯುಸಿ, ಡಿಪ್ಲೋಮಾ ಹಾಗೂ ಐಟಿಐ ಕೋರ್ಸ್ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಂದ ಆನ್ ಲೈನ್ ಅರ್ಜಿ ಆಹ್ವಾನಿಸಲಾಗಿದೆ. ರಾಜ್ಯ ವಿದ್ಯಾರ್ಥಿ ನಿಲಯ ತಂತ್ರಾಂಶ hhttps://shp.karnataka.gov.inದಲ್ಲಿ ಜೂ.30ರೊಳಗಾಗಿ ಅರ್ಜಿ ಸಲ್ಲಿಸಬೇಕು ಎಂದು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬದುಕು ಉಳಿಯಲು ಪರಿಸರ ಸಂರಕ್ಷಿಸಿ: ನಿಜಲಿಂಗಪ್ಪ



ಹಾವೇರಿ: ಜಗತ್ತು ಬೆಂಕಿ ಉಂಡಿಯಂತೆ ಆಗಿದೆ, ಜಾಗತಿಕ ತಾಪಮಾನ ಏರುಪೇರಾಗಿದೆ. ಬದುಕು ಉಳಿಯಬೇಕಾದರೆ ಪರಿಸರ ಉಳಿಯಬೇಕು ಎನ್ನುವ ನೆನಪು ಪ್ರತಿಯೊಬ್ಬರಿಗೂ ಬರಬೇಕು ಎಂದು ಶಿಕ್ಷಣ ಚಿಂತಕ ನಿಜಲಿಂಗಪ್ಪ ಬಸೇಗಣ್ಣಿ ಹೇಳಿದರು.

ತಾಲೂಕಿನ ಅಗಡಿ ಗ್ರಾಮದ ಶ್ರೀ ಶೇಷಾಚಲಸದ್ಗುರುಪ್ರೌಢಶಾಲೆಯಲ್ಲಿ ನಡೆದ ವಿಶ್ವ ಪರಿಸರ ದಿನ, ಎಂಟನೇ ವರ್ಗದ ವಿದ್ಯಾರ್ಥಿಗಳ ಸ್ವಾಗತ ಹಾಗೂ ಎಸ್ಸೆಸ್ಸೆಲ್ಸಿ ವಿದ್ಯಾರ್ಥಿಗಳ ಸನ್ಮಾನ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು.

ಪ್ರಕೃತಿಯ ಕೊಡುಗೆಯ ಮೇಲೆ ನಮ್ಮ ಬದುಕು ಭವಿಷ್ಯ ನಿಂತಿದೆ. ಈ ಭೂಮಿಯ ಮೇಲೆ ಬದುಕು ಸಾಗಿಸುವ ಹಕ್ಕು ಮಾನವರಿಗಷ್ಟೇ ಅಲ್ಲ, ಸಕಲ ಸಸ್ಯಗಳಿಗೂ ಪ್ರಾಣಿಗಳಿಗೂ ಇದೆ ಎಂಬುದನ್ನು ಮರೆಯುವಂತಿಲ್ಲ. ಹುಟ್ಟುಹಬ್ಬ ಆಚರಣೆ ಕೇಕ್ ಕತ್ತರಿಸಿ ಹಚ್ಚಿದ ದೀಪ ಆರಿಸುವುದಲ್ಲ, ಗಿಡಗಳನ್ನು ನೆಡುವುದರ ಮೂಲಕ ಆಚರಿಸಿ ಎಂದು ನಿಜಲಿಂಗಪ್ಪ ತಿಳಿಸಿದರು.

ಸಾಹಿತಿ ಹನುಮಂತಗೌಡ ಗೊಲ್ಲರ, ಮುಖ್ಯೋಪಾಧ್ಯಾಯ ರಾಘವೇಂದ್ರ ನಾಡಿಗೇರ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಗುರುಮಾತೆ ಸೌಮ್ಯಾ ಬಸೆಗಣ್ಣಿ, ವಿದ್ಯಾರ್ಥಿಗಳ ಪರವಾಗಿ ಸ್ನೇಹ ರಾಮನಗೌಡ್ರು, ಸಪ್ನಾ ಮಠಪತಿ ಹಾಗೂ ಶಿವಲಿಂಗೇಗೌಡ ಮಾತನಾಡಿದರು. ಚಿತ್ರಕಲೆ ಸ್ಪರ್ಧೆಯಲ್ಲಿ ವಿಜೇತರಾದ ಸಂಜನಾಗೌಡ್ರು, ವಿಜಯಲಕ್ಷ್ಮೀ ದೇಸೂರ, ಶ್ರವಣ ದಳವಿ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಲಾಯಿತು.

ಈ ಸಂದರ್ಭದಲ್ಲಿ ಎಸ್ಸೆಸ್ಸೆಲ್ಸಿ ಅತಿ ಹೆಚ್ಚು ಅಂಕಗಳನ್ನು ಪಡೆದ ಸಾಧಕ ವಿದ್ಯಾರ್ಥಿಗಳನ್ನು ಗೌರವಿಸಲಾಯಿತು. ಎಂಟನೇ ವರ್ಗದ ವಿದ್ಯಾರ್ಥಿಗಳನ್ನು ಬೀಜದ ಉಂಡೆ ನೀಡುವುದರ ಮೂಲಕ ಸ್ವಾಗತಿಸಲಾಯಿತು. ರೇಣುಕಾ, ಹೇಮಾ, ಸೌಮ್ಯ, ರವಿರಾಜ್, ಮಲ್ಲಪ್ಪ, ಶಿಲ್ಪಾ ಗುರುಗಳು ಉಪಸ್ಥಿತರಿದ್ದರು. ಭೂಮಿಕಾ ಹೊಸಮನಿ ಸ್ವಾಗತಿಸಿದರು. ಸೌಂದರ್ಯ ತಳ್ಳಳ್ಳಿ ನಿರೂಪಿಸಿದರು. ಸಾಹಿಲ್ ರಾಟೀಮನಿ ವಂದಿಸಿದರು.

ಕಿರುಸುದ್ದಿ

ಜು.15ರವರೆಗೆ ತೇವಾಂಶ

ಬೆಳಗಾವಿ: ಸೋಯಾ, ಅವರೆ ಬೆಳೆಯ ಬಿತ್ತನೆ ಕಾರ್ಯಕ್ಕೆ ರೈತರು ಸಿದ್ಧತೆ ಮಾಡಿಕೊಳ್ಳುತ್ತಿದ್ದು, ಈಗಾಗಲೇ ಮುಂಗಾರು ಹಂಗಾಮಿನಲ್ಲಿ ಬೀಜ ವಿತರಣೆಯನ್ನು ತಾಲೂಕಿನ ನಾಲ್ಕು ರೈತ ಸಂಪರ್ಕ ಕೇಂದ್ರಗಳಲ್ಲಿ ಚಾಲನೆಯಿದ್ದು, ರೈತರ ಅನುಕೂಲಕ್ಕಾಗಿ 6 ಹೆಚ್ಚುವರಿ ಬೀಜ ವಿತರಣೆ ಕೇಂದ್ರಗಳನ್ನು ಸ್ಥಾಪಿಸಲಾಗಿರುತ್ತದೆ. ಸೋಯಾಬಿನ ಬಿತ್ತನೆಗೆ ಮಣ್ಣಿನಲ್ಲಿ ಸಾಕಷ್ಟು ತೇವಾಂಶ ಮತ್ತು ತಂಪಾದ ವಾತಾವರಣದ ಅವಶ್ಯಕವಿದ್ದ ಕಾರಣ ಸಾಕಷ್ಟು ಮಳೆಯಾದ ನಂತರದ ಬಿತ್ತನೆ ಮಾಡಲು ಸೂಚಿಸಲಾಗಿದೆ. ಬಿತ್ತನೆಗೆ ಭೂಮಿ ಹದ ಮಾಡಿದ ನಂತರ 30 ಸೆಂ.ಮೀ. ಅಂತರದ ಸಾಲುಗಳಲ್ಲಿ ಬೀಜದಿಂದ ಬೀಜಕ್ಕೆ 8–10 ಸೆಂ.ಮೀ., ಇರುವಂತೆ ಬಿತ್ತನೆ ಮಾಡಬೇಕು. ಜೂನ್ ನಿಂದ ಜುಲೈ 15ನೇ ತಾರಿಖಿನ ವರೆಗೆ ಹದವರಿತ ತೇವಾಂಶ ಮತ್ತು ತಂಪಾದ ವಾತಾವರಣ ಇದ್ದಾಗ ಮಾತ್ರ ಬಿತ್ತನೆ ಮಾಡುವುದು ಸೂಕ್ತ. ಹೆಚ್ಚಿನ ಮಾಹಿತಿಗಾಗಿ ರೈತ ಭಾಂದವರು ಹತ್ತಿರದ ರೈತ ಸಂಪರ್ಕ ಕೇಂದ್ರ ಅಥವಾ ಸಹಾಯಕ ಕೃಷಿ ನಿರ್ದೇಶಕರ ಕಚೇರಿಯನ್ನು ಸಂಪರ್ಕಿಸಬಹುದಾಗಿದೆ ಎಂದು ಬೆಳಗಾವಿ ತಾಲೂಕಿನ ಸಹಾಯಕ ಕೃಷಿ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಇಂದು ಚಾಲನೆ



ಹುಕ್ಕೇರಿ: ಉತ್ತರ ಕರ್ನಾಟಕದ ಪ್ರಮುಖ ಪ್ರವಾಸಿ ತಾಣವನ್ನಾಗಿ ಮಾಡುವ ನಿಟ್ಟಿನಲ್ಲಿ ತಾಲೂಕಿನ ಹಿಡಕಲ್ ಜಲಾಶಯ ಬಳಿ ನಿರ್ಮಾಣಗೊಳ್ಳುತ್ತಿರುವ ಬೃಹತ್ ಉದ್ಯಾನ ಕಾಶಿ ಕಾಮಗಾರಿಯ 2ನೇ ಹಂತದ ಯೋಜನೆಗಳಿಗೆ ಜೂ.8ರಂದು ಬೆಳಿಗ್ಗೆ 11 ಗಂಟೆಗೆ ಚಾಲನೆ ನೀಡಲಾಗುವುದು ಎಂದು ಶಾಸಕ ನಿಖಿಲ ಕತ್ತಿ ತಿಳಿಸಿದರು. ಸ್ಥಳೀಯ ಪಿಕಾರ್ಡ ಬ್ಯಾಂಕ ಆವರಣದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮೊದಲ ಹಂತದಲ್ಲಿ ರಸ್ತೆ, ಚರಂಡಿ ಕಾಮಗಾರಿಗಳನ್ನು ಪೂರ್ಣಗೊಳಿಸಿದ್ದು, ಇದೀಗ 20 ಕೋಟಿ ರೂ ವೆಚ್ಚದ 2ನೇ ಹಂತದ ಕಾಮಗಾರಿಯಲ್ಲಿ ಮಕ್ಕಳ ಆಕರ್ಷಿಸುವ ರೈಲು ಮತ್ತು ಅದರ ಟ್ರ್ಯಾಕ್ ನಿರ್ಮಾಣ, ಪ್ರವಾಸಿಗರಿಗೆ ಕುಳಿತುಕೊಳ್ಳಲು ಆಸನಗಳ ವ್ಯವಸ್ಥೆ, ಆಹಾರ ತಯಾರಿಕಾ ಕಟ್ಟೆಗಳು, ಆವರಣ ಗೋಡೆ ಸೇರಿದಂತೆ ವಿವಿಧ ಅಭಿವೃದ್ಧಿ ಕಾರ್ಯಗಳಿಗೆ ಚಾಲನೆ ನೀಡಲಾಗುವುದು ಎಂದರು. ನಮ್ಮ ತಂದೆ ಮಾಜಿ ಶಾಸಕ ದಿ.ಉಮೇಶ ಕತ್ತಿ ಹಾಗೂ ಚಿಕ್ಕಪ್ಪ ಮಾಜಿ ಸಂಸದ ರಮೇಶ ಕತ್ತಿ ಅವರ ಕನಸಾಗಿರುವ ಉತ್ತರ ಕರ್ನಾಟಕದ ಅಭಿವೃದ್ಧಿಗೆ ಇಂತಹ ಯೋಜನೆ ಪೂರಕ ಆಗಿವೆ. ಮುಂಬರುವ ದಿನಗಳಲ್ಲಿ ದೇಶದ ಜನರ ಚಿತ್ತ ಹುಕ್ಕೇರಿಯತ್ತ ಎನ್ನುವಂತೆ ಹಿಡಕಲ್ ಜಲಾಶಯದ ಬಳಿ ನಿರ್ಮಿಸುತ್ತಿರುವ ಬೃಹತ್ ಉದ್ಯಾನ ಕಾಶಿ ಯೋಜನೆ ಪ್ರಮುಖ ಆಕರ್ಷಣೆಯ ಕೇಂದ್ರವಾಗಿ ಮಾಡುವ ಸಂಕಲ್ಪ ನನ್ನದಾಗಿದೆ ಎಂದರು.

ಪ್ರತಿಯೊಬ್ಬರೂ ಸಸಿ ನೆಟ್ಟು ಪೋಷಿಸಿ: ಬೆಲ್ಲದ



ನೇಸರಗಿ: ಅರಣ್ಯ ರಕ್ಷಣೆ ಮತ್ತು ಪರಿಸರ ರಕ್ಷಣೆಗೆ ಎಲ್ಲ ಕಡೆಗಳಲ್ಲಿ ಸಸಿ ನೆಡುವ ಯೋಜನೆಗೆ ಕೇಂದ್ರ ಮತ್ತು ರಾಜ್ಯ ಸರ್ಕಾರ ಸಾಕಷ್ಟು ಸಹಕಾರ ನೀಡುತ್ತಿದ್ದು, ಇದರ ಸದುಪಯೋಗ ಸಾರ್ವಜನಿಕರು ಉಚಿತ ಸಸಿಗಳನ್ನು ಪಡೆದು ನೆಟ್ಟು ಪೋಷಿಸುವ ಕಾರ್ಯ ಮಾಡಬೇಕು ಎಂದು ನೇಸರಗಿ ವಲಯ ಅರಣ್ಯ ಅಧಿಕಾರಿ ಪ್ರಸನ್ನ ಬೆಲ್ಲದ ಮನವಿ ಮಾಡಿದರು. ಅವರು ವಿಶ್ವ ಪರಿಸರ ದಿನಾಚರಣೆಯ ಅಂಗವಾಗಿ ನೇಸರಗಿ ಗ್ರಾಮದ ಕುವೆಂಪು ಮಾದರಿ ಪ್ರಾಥಮಿಕ ಶಾಲೆ, ದೇಶನೂರ ಸರ್ಕಾರಿ ಪ್ರಾಥಮಿಕ ಶಾಲೆ, ಮಲ್ಲಾಪೂರ ಕೆ ಎನ್ ಗ್ರಾಮದ ಸರ್ಕಾರಿ ಶಾಲೆಗಳಲ್ಲಿ ವಿಶ್ವ ಪರಿಸರ ದಿನಾಚರಣೆ ಪ್ರಯುಕ್ತ ಶಾಲೆಗಳಲ್ಲಿ ಸಸಿ ನೆಡುವ ಕಾರ್ಯಕ್ರಮದಲ್ಲಿ ಮಾತನಾಡಿದರು. ಈ ಸಂದರ್ಭದಲ್ಲಿ ಉಪ ಅರಣ್ಯ ಅಧಿಕಾರಿ ಸುರೇಶ ನಾಯ್ಕ, ಅಶೋಕ ಬಿಜಗಟ್ಟಿ, ಅನೇಕ ಗ್ರಾಮಗಳ ಮುಖಂಡರು, ನೇಸರಗಿ ವಲಯ ಅರಣ್ಯ ಇಲಾಖೆಯ ಅಧಿಕಾರಿಗಳು, ಸಿಬ್ಬಂದಿ, ಶಾಲಾ ಮುಖ್ಯ ಶಿಕ್ಷಕರು, ಶಿಕ್ಷಕರು, ಎಸ್ ಡಿ ಎಂ ಸಿ ಅಧ್ಯಕ್ಷ, ಸದಸ್ಯರು, ವಿದ್ಯಾರ್ಥಿಗಳು, ನೇಸರಗಿ ಭಾಗದ ಮುಖಂಡರು ಭಾಗವಹಿಸಿದ್ದರು.



ಯರಗಟ್ಟಿ: ಪಟ್ಟಣ್ಣ ಬಸವೇಶ್ವರ ಪ್ರೌಢ ಶಾಲಾ ಆವರಣದಲ್ಲಿ ಎನ್‌ಸಿಯಿಂದ ಸಸಿ ನೆಡುವುದರ ಮೂಲಕ ವಿಶ್ವ ಪರಿಸರ ದಿನ ಕಾರ್ಯಕ್ರಮ ಆಚರಿಸಲಾಯಿತು. ಈ ವೇಳೆ ಸಂಸ್ಥೆಯ ಕಾರ್ಯದರ್ಶಿ ಎಸ್. ವ್ಹಿ. ಸಿದ್ನಾಳ, ಶಿಕ್ಷಕರಾದ ಎನ್. ಎಸ್. ಕಾಂಬಳೆ, ಎಸ್. ಜಿ. ಸತ್ತಿಗೇರಿ, ವ್ಹಿ. ಆರ್. ಅಂತಾಪೂರ, ಎಲ್. ಎಸ್. ಹೊನ್ನಪ್ಪಗೋಳ, ಜಿ. ಐ. ಡಮ್ಮಣಗಿ, ಡಿ. ಎಂ. ಪಾಟೀಲ, ಎಮ್. ಎಸ್. ಗುಗ್ಗರನಟ್ಟಿ, ಆರ್. ಬಿ. ಗಾಣಿಗೇರ, ಎನ್‌ಸಿಸಿ ಟ್ರೂಪ್ ಕಮಾಂಡರ್ ಡಾ. ಕುಮಾರ ದಾಸರ ಸೇರಿದಂತೆ ಎನ್‌ಸಿಸಿ ವಿದ್ಯಾರ್ಥಿಗಳು ಇದ್ದರು.

ನ್ಯಾಯಾಂಗ ವ್ಯವಸ್ಥೆ ಗೌರವ ಕಾಪಾಡಿ

ಚನ್ನಮ್ಮನ ಕಿತ್ತೂರು: ನ್ಯಾಯಾಂಗ ವ್ಯವಸ್ಥೆಯ ಮೇಲೆ ಸಮಾಜದ ಅಪಾರ ನಂಬಿಕೆ ಇದ್ದು ಈ ನಂಬಿಕೆಗೆ ಯಾವುದೇ ಚ್ಯುತಿ ಬರದಂತೆ ನಡೆದುಕೊಳ್ಳಬೇಕೆಂದು ನೂತನವಾಗಿ ಆಗಮಿಸಿದ ಜೆ ಎಂ ಎಫ್ ಸಿ ನ್ಯಾಯಾಧೀಶ ಮೊಹಮ್ಮದ ಅಲಿ ನಾಯ್ಕ ಹೇಳಿದರು.

ಪಟ್ಟಣದ ನ್ಯಾಯವಾದಿಗಳ ಸಂಘದ ಕಚೇರಿಯಲ್ಲಿ ನಡೆದ ಸ್ವಾಗತ ಕಾರ್ಯಕ್ರಮದಲ್ಲಿ ಸನ್ಮಾನ ಸ್ವೀಕರಿಸಿ ಮಾತನಾಡಿ, ನ್ಯಾಯವಾದಿಗಳು ಪ್ರತಿ ಪ್ರಕರಣದಲ್ಲಿ ಅಥವಾ ಕಲಾಪದಲ್ಲಿ ಸರಿಯಾದ ಮಾರ್ಗವನ್ನು ಅನುಸರಿಸಬೇಕು, ನೂತನವಾಗಿ ನ್ಯಾಯವಾದಿ ವೃತ್ತಿ ಆರಂಭಿಸಿದ ಕಿರಿಯರಿಗೆ ಒಳ್ಳೆಯ ಮಾರ್ಗದರ್ಶನ ನೀಡಿದರು.

ಹಿರಿಯ ನ್ಯಾಯವಾದಿ ಹಾಗೂ ಕಿತ್ತೂರು ನ್ಯಾಯವಾದಿಗಳ ಸಂಘದ ಅಧ್ಯಕ್ಷ ವಿಶ್ವನಾಥ ಬಿಕ್ಕಣ್ಣವರ ಮಾತನಾಡಿದರು. ನ್ಯಾಯವಾದಿಗಳ ಸಂಘದ ಉಪಾಧ್ಯಕ್ಷ ಮೋಹನ ಸಾಣಿಕೊಪ್ಪ, ಪ್ರ.ಕಾರ್ಯದರ್ಶಿ ಎಂ ಎಸ್ ಹಂಚಿನಮನಿ, ಸೋಮೇಶ ಮುತ್ತೇಣ್ಣವರ ಮಾತನಾಡಿದರು. ಇದಕ್ಕೂ ಮೊದಲು ನೂತನವಾಗಿ ಆಗಮಿಸಿದ ನ್ಯಾಯಾಧೀಶ ಮೊಹಮ್ಮದ ಅಲಿ ನಾಯ್ಕ ಅವರನ್ನು ಸಂಘದ ವತಿಯಿಂದ ಸನ್ಮಾನಿಸಲಾಯಿತು. ನ್ಯಾಯವಾದಿಗಳಾದ ಎ.ಬಿ.ಇನಾಂದಾರ, ಬಿ.ಎಮ್. ಬುಡಸೆಟ್ಟಿ, ಲಕ್ಷ್ಮೀ ಹೈಬತ್ತಿ, ವಾಣಿ ತುರಮರಿ, ಆರ್.ಜಿ. ಹಿರೇಮಠ, ಎಸ್.ಎಮ್ ಹಳೇಮನಿ, ಆರ್.ಎಸ್. ಚಿಂಚಕಂಡಿ, ಬಿ.ಕೆ.ಸವದತ್ತಿ, ಎನ್.ಬಿ.ಚೌಡಣ್ಣವರ, ಎ.ಬಿ. ಲದ್ದಿಗಟ್ಟಿ, ಬಿ.ಕೆ.ಹೈಬತ್ತಿ, ಕೆ.ಎನ್. ಸರ್ದಾರ, ಎನ್.ಎ. ಮರೆದ, ಸೇರಿದಂತೆ ಇತರರು ಇದ್ದರು.



ಚನ್ನಮ್ಮನ ಕಿತ್ತೂರು : ಪಟ್ಟಣದ ನ್ಯಾಯವಾದಿಗಳ ಸಂಘದ ಕಚೇರಿಯಲ್ಲಿ ನೂತನವಾಗಿ ಆಗಮಿಸಿದ ಜೆ ಎಂ ಎಫ್ ಸಿ ನ್ಯಾಯಾಧೀಶ ಮೊಹಮ್ಮದ ಅಲಿ ನಾಯ್ಕ ಅವರನ್ನು ಸನ್ಮಾನಿಸಲಾಯಿತು.

ಜಾಗೃತಿಗಾಗಿ ಸೈಕಲ್ ಜಾಥಾ | ಬಸವರಾಜ ಹೆಗ್ಗನಾಯಕ್ ಭಾಗಿ

ಸ್ವಚ್ಛತೆ ಪ್ರತಿದಿನದ ಆಚರಣೆಯಾಗಲಿ

ಬೆಳಗಾವಿ : ಆರೋಗ್ಯಕರ ಜೀವನಶೈಲಿಯನ್ನು ಉತ್ತೇಜಿಸಲು ಹಾಗೂ ಸಾರ್ವಜನಿಕರಲ್ಲಿ ಸ್ವಚ್ಛತೆಯ ಅರಿವು ಮೂಡಿಸುವ ಉದ್ದೇಶದಿಂದ ಸೈಕಲ್ ಜಾಥಾ ಹಮ್ಮಿಕೊಳ್ಳಲಾಗಿದೆ. ಸ್ವಚ್ಛತೆಯೆಂಬುದು ಪ್ರತಿದಿನದ ಆಚರಣೆಯಾಗಬೇಕು ಎಂದು ಜಿಲ್ಲಾ ಪಂಚಾಯತ ಉಪ ಕಾರ್ಯದರ್ಶಿ (ಆಡಳಿತ) ಬಸವರಾಜ ಹೆಗ್ಗನಾಯಕ್ ಹೇಳಿದರು.

ಭಾನುವಾರ ನಗರದ ಚನ್ನಮ್ಮ ವೃತ್ತದಲ್ಲಿ ಬೈಸಿಕಲ್ ದಿನಾಚರಣೆ ಹಾಗೂ ಫಿಟ್ ಇಂಡಿಯಾ ಆಂದೋಲನದ ಅಂಗವಾಗಿ ಜಿಲ್ಲಾಡಳಿತ ಮತ್ತು ಜಿಲ್ಲಾ ಪಂಚಾಯತ ಸಹಯೋಗದಲ್ಲಿ ಏರ್ಪಡಿಸಿದ್ದ ಸೈಕಲ್ ಜಾಥಾ (ಸಂಡೇಸ್ ಆನ್ ಸೈಕಲ್–ಸ್ವಚ್ಛತಾ ರೈಡ್) ಗೆ ಚಾಲನೆ ನೀಡಿದರು.

ಸೈಕಲ್ ಜಾಥಾ ಮೂಲಕ ದೈನಂದಿನ ಜೀವನದಲ್ಲಿ ಸೈಕಲ್ ಬಳಕೆಯನ್ನು ಪ್ರೋತ್ಸಾಹಿಸಿ ಪರಿಸರ ಮಾಲಿನ್ಯವನ್ನು ತಗ್ಗಿಸುವ ಕುರಿತು, ದೈಹಿಕವಾಗಿ ಸದೃಢತೆ ಮತ್ತು ಸಾರ್ವಜನಿಕ ಸ್ಥಳಗಳಲ್ಲಿ ಸ್ವಚ್ಛತೆಯನ್ನು ಕಾಪಾಡಿಕೊಳ್ಳಲು ಜಾಗೃತಿ ಮೂಡಿಸಲಾಗುತ್ತಿದೆ ಎಂದರು.

ಸೈಕಲ್ ಜಾಥಾ: ಚನ್ನಮ್ಮ ವೃತ್ತದಿಂದ ಆರಂಭವಾದ ಸೈಕಲ್ ಜಾಥಾ ಜಿಲ್ಲಾಸ್ಪತ್ರೆ, ಶ್ರೀಕೃಷ್ಣದೇವರಾಯ ವೃತ್ತದ ಮಾರ್ಗವಾಗಿ ಜಿಲ್ಲಾ ಕ್ರೀಡಾಂಗಣ ತಲುಪಿತು.

ಈ ವೇಳೆ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಉಪನಿರ್ದೇಶಕ ಬಿ.ಶ್ರೀನಿವಾಸ್, ಜಿಲ್ಲಾ ಆಯುಷ್ ಅಧಿಕಾರಿ ಡಾ.ಶ್ರೀಕಾಂತ ಸುಣದೋಳಿ, ಜಿಪಂ ಸಹಾಯಕ ಕಾರ್ಯದರ್ಶಿ ರಾಹುಲ್ ಕಾಂಬಳೆ, ಲೆಕ್ಕಾಧಿಕಾರಿ ಶೇಖರ ಪೂಜೇರಿ, ನಿವೃತ್ತ ಸೈಕ್ಲಿಂಗ್ ಹಿರಿಯ ತರಬೇತುದಾರ ಎಂ.ಪಿ. ಮರನೂರ, ಸೈಕ್ಲಿಂಗ್ ತರಬೇತುದಾರ ಯಲ್ಲಪ್ಪ ಹಿರೇಕುರಬರ, ಬಸವರಾಜ ಜಕ್ಕನ್ನವರ, ಸಮೀರ ಚೌಗಲಾ ಸೇರಿ ಜಿಲ್ಲಾ ಪಂಚಾಯತ, ಯುವಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಆಯುಷ್ ಇಲಾಖೆ ಸೇರಿದಂತೆ ವಿವಿಧ ಇಲಾಖೆಯ ಸಿಬ್ಬಂದಿ ಇದ್ದರು.



- ಯುವಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ವಸತಿ ನಿಲಯದ 30ಕ್ಕೂ ಹೆಚ್ಚು ವಿದ್ಯಾರ್ಥಿಗಳು ಹಾಗೂ ಅಧಿಕಾರಿಗಳು ಜಾಥಾದಲ್ಲಿ ಭಾಗವಹಿಸಿದ್ದರು.
- ಜಿಲ್ಲಾ ಕ್ರೀಡಾಂಗಣದಲ್ಲಿ ಯೋಗ, ವ್ಯಾಯಾಮ ಹಾಗೂ ಸ್ಕಿಪ್ಪಿಂಗ್ ಚಟುವಟಿಕೆಗಳನ್ನು ಕೈಗೊಳ್ಳಲಾಯಿತು.

ಅಹವಾಲು ಆಲಿಸಿದ ಲಕ್ಷ್ಮೀ ಹೆಬ್ಬಾಳ್ಕರ್

ಬೆಳಗಾವಿ: ಲಕ್ಷ್ಮೀ ಹೆಬ್ಬಾಳ್ಕರ್ ಅವರು ಭಾನುವಾರ ಬೆಳಗಾವಿಯ ತಮ್ಮ ಗೃಹ ಕಚೇರಿಯಲ್ಲಿ ಸಾರ್ವಜನಿಕರನ್ನು ಭೇಟಿ ಮಾಡಿ, ಅವರ ಅಹವಾಲುಗಳು ಮತ್ತು ಸಮಸ್ಯೆಗಳನ್ನು ಆಲಿಸಿದರು.

ವಿವಿಧ ಗ್ರಾಮಗಳು ಹಾಗೂ ನಗರದ ವಿವಿಧ ಭಾಗಗಳಿಂದ ಆಗಮಿಸಿದ್ದ ನೂರಾರು ಜನರು ತಮ್ಮ ವೈಯಕ್ತಿಕ, ಸಾಮಾಜಿಕ ಮತ್ತು ಆಡಳಿತಾತ್ಮಕ ಸಮಸ್ಯೆಗಳನ್ನು ಗಮನಕ್ಕೆ ತಂದರು.

ಜನರು ಸಲ್ಲಿಸಿದ ಅಹವಾಲುಗಳನ್ನು ಆಲಿಸಿದ ಶಾಸಕಿ ಲಕ್ಷ್ಮೀ ಹೆಬ್ಬಾಳ್ಕರ್ ಅವರು, ಕೇವಲ ಸಾಂತ್ವನ ಹೇಳುವುದಕ್ಕಷ್ಟೇ ಸೀಮಿತವಾಗದೆ, ಹಲವು ಪ್ರಕರಣಗಳಲ್ಲಿ ಸಂಬಂಧಿಸಿದ ಅಧಿಕಾರಿಗಳೊಂದಿಗೆ ಸ್ಥಳದಲ್ಲೇ ದೂರವಾಣಿ ಮೂಲಕ ಮಾತನಾಡಿ ಸಮಸ್ಯೆಗಳ ಶೀಘ್ರ ಪರಿಹಾರಕ್ಕೆ ಅಗತ್ಯ ಕ್ರಮ ಕೈಗೊಳ್ಳುವಂತೆ ಸೂಚಿಸಿದರು.

ಗೃಹ ಕಚೇರಿಯಲ್ಲಿ ನಡೆದ ಜನಸಂಪರ್ಕ ಕಾರ್ಯಕ್ರಮದಲ್ಲಿ ನೂರಾರು ಜನರು ಭಾಗವಹಿಸಿ ತಮ್ಮ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ಮನವಿ ಸಲ್ಲಿಸಿದರು.

ಹಲವಾರು ಪ್ರಕರಣಗಳಲ್ಲಿ ತಕ್ಷಣವೇ ಸಂಬಂಧಪಟ್ಟ ಇಲಾಖೆಗಳೊಂದಿಗೆ ಸಮನ್ವಯ ಸಾಧಿಸಿ ಕ್ರಮ ಕೈಗೊಳ್ಳಲಾಯಿತು.

ಈ ವೇಳೆ ಬೆಳಗಾವಿ ಗ್ರಾಮೀಣ ವಿಧಾನ ಸಭಾ ಕ್ಷೇತ್ರದ ಜನರು, ವಿಧಾನ ಪರಿಷತ್ ಸದಸ್ಯ ಚನ್ನರಾಜ ಹಟ್ಟಿಹೊಳಿ ಸೇರಿದಂತೆ ಇತರರು ಇದ್ದರು.



ಬಿತ್ತನೆ ಬೀಜ ವಿತರಣೆ

ಅಡಹಳ್ಳಿ: ಗ್ರಾಮದಲ್ಲಿ ಪಿಕೆಪಿಎಸ್ ಹಾಗೂ ಕೃಷಿ ಇಲಾಖೆ ವತಿಯಿಂದ ಸರ್ಕಾರದ ಸಹಾಯ ಧನದಲ್ಲಿ ಬಿತ್ತನೆ ಬೀಜ ವಿತರಣೆಗೆ ಚಾಲನೆ ನೀಡಲಾಯಿತು. ಕೃಷಿ ಇಲಾಖೆ ಅಧಿಕಾರಿ ಯಂಕಪ್ಪ ಉಪ್ಪಾರ, ಪಿಕೆಪಿಎಸ್ ಅಧ್ಯಕ್ಷ ಮಹಾದೇವ ಹಿಪ್ಪರಗಿ, ಪರಸಪ್ಪ ಅಥಣಿ, ಸುನೀಲ ಕೆಂಚಣ್ಣವರ, ಚಿದಾನಂದ ಮಠಪತಿ, ವಿಜಯ ಕೋಹಳ್ಳಿ, ಜಯವಂತ ನಾಟೇಕಾರ, ಅಣ್ಣಪ್ಪ ಸನದಿ, ವಿರೇಶ ಮಹಾಜನ, ಅಣ್ಣಪ್ಪ ಹಾಲ್ಳಿ, ಬಾಹುರಾಜ ತಾಂವಶಿ, ಶೇಖರ ಪಾಟೀಲ, ನಾರಾಯಣ ಪೂಜಾರಿ, ಪ್ರಶಾಂತ ಮಾಳಿ, ರಮೇಶ ಖೋಬ್ರಿ, ಭೀಮು ಕೋಹಳ್ಳಿ, ಮಹಾದೇವ ಸನದಿ, ಮಂಡಲಿಕ ನಾಟಿಕಾರ ಸೇರಿದಂತೆ ಅನೇಕರು ಇದ್ದರು.



ಅಡಹಳ್ಳಿ: ಗ್ರಾಮದಲ್ಲಿ ಪಿಕೆಪಿಎಸ್ ಹಾಗೂ ಕೃಷಿ ಇಲಾಖೆ ವತಿಯಿಂದ ಸರ್ಕಾರದ ಸಹಾಯ ಧನದಲ್ಲಿ ಬಿತ್ತನೆ ಬೀಜ ವಿತರಣೆಗೆ ಚಾಲನೆ ನೀಡಲಾಯಿತು.

ಪೊಲೀಸ್ ಚೌಕಿಗಳ ಉದ್ಘಾಟನೆ



ಬೆಳಗಾವಿ: ನಗರದ ಖಡೆಬಜಾರ ಪೊಲೀಸ್ ಠಾಣೆ ವ್ಯಾಪ್ತಿಯ ಕಂಬಳಿಕೂಟದ ಕಾವೇರಿ ಕೊಡ್ರಿಂಕ್ಸ್ ಸಮೀಪ ನಿರ್ಮಿಸಲಾದ 2 ಹೊಸ ಪೊಲೀಸ್ ಚೌಕಿಗಳನ್ನು ಉದ್ಘಾಟಿಸಲಾಯಿತು.

ಬಳಿಕ ಕಾರ್ಯಕ್ರಮ ವನ್ನು ಉದ್ದೇಶಿಸಿ ಮಾತನಾಡಿದ ಡಿಸಿಪಿ ನಾರಾಯಣ ಬರಮನಿ ಅವರು, ಮಳೆ, ಬಿಸಿಲು ಹಾಗೂ ಹಬ್ಬ–ಹರಿದಿನಗಳ ಬಂದೋಬಸ್ತ್ ಕರ್ತವ್ಯಗಳಲ್ಲಿ ನಿರಂತರವಾಗಿ ಸೇವೆ ಸಲ್ಲಿಸುವ ಪೊಲೀಸ್ ಸಿಬ್ಬಂದಿಗೆ ಈ ಚೌಕಿಗಳು ವಿಶ್ರಾಂತಿ ಮತ್ತು ಕಾರ್ಯನಿರ್ವಹಣೆಗೆ ಅನುಕೂಲವಾಗಲಿವೆ ಎಂದು ಹೇಳಿದರು.

ಸಮರ್ಥ ಅರ್ಬನ್ ಕೋ–ಆಪ್ ಕ್ರೆಡಿಟ್ ಸೊಸೈಟಿ ನಿರ್ಮಿಸಿರುವ ಈ ಚೌಕಿಗಳಿಗಾಗಿ ಪೊಲೀಸ್ ಇಲಾಖೆ ಕೃತಜ್ಞತೆ ಸಲ್ಲಿಸಲಾಯಿತು. ಇತರ ಸಂಘ–ಸಂಸ್ಥೆಗಳೂ ಇಂತಹ ಕಾರ್ಯಗಳಿಗೆ ಕೈಜೋಡಿಸಿದರೆ ಜನಪರ ಸೇವೆಯನ್ನು ಇನ್ನಷ್ಟು ಸಮರ್ಥವಾಗಿ ನಿರ್ವಹಿಸಲು ಸಾಧ್ಯವಾಗುತ್ತದೆ ಎಂದು ಡಿಸಿಪಿ ಅಭಿಪ್ರಾಯಪಟ್ಟರು.


ಮಾಜಿ ಶಾಸಕ ಅನಿಲ ಬೆನಕೆ, ನಗರ ಸೇವಕ ಜಯತೀರ್ಥ ಸವದತ್ತಿ ಹಾಗೂ ಸೊಸೈಟಿ ಮುಖ್ಯಸ್ಥ ಅಜಯ ಸೊನವಾಲ್ಕರ ಇದ್ದರು.



ರಾಯಬಾಗ: ಶ್ರೀ ಮಹಾಕಾಳಿ ಶಿಕ್ಷಣ ಸಂಸ್ಥೆಯ ವಿವೇಕಾನಂದ ಅನುದಾನಿತ ಕನ್ನಡ ಪ್ರಾಥಮಿಕ ಶಾಲೆ ಹಾಗೂ ಫ್ರೀಡಮ್ ಫೈಟರ್ ಶ್ರೀ ವಿ.ಎಲ್. ಪಾಟೀಲ ಆಂಗ್ಲ ಮಾಧ್ಯಮ ಶಾಲೆ ಜಲಾಲಪುರದಲ್ಲಿ ಎಸ್‌ಡಿಎಂಸಿ ಅಧ್ಯಕ್ಷರಾದ ಸಂಜಯ ವಸಂತ ಜಾಧವ ಅವರಿಂದ ಸಸಿಯನ್ನು ನೆಡುವುದರೊಂದಿಗೆ ವಿಶ್ವ ಪರಿಸರ ದಿನ ಆಚರಣೆ ಮಾಡಲಾಯಿತು. ಈ ಸಂದರ್ಭದಲ್ಲಿ ಗ್ರಾಮ ಪಂಚಾಯತಿ ಸದಸ್ಯರಾದ ವಸಂತ ಕಾಂಬಳೆ, ಶಾಲೆಯ ಮುಖ್ಯೋಪಾಧ್ಯಾಯರು ಶಿಕ್ಷಕ ಸಿಬ್ಬಂದಿ ವರ್ಗ ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಕಾಲಕ್ಕೆ ತಕ್ಕಂತೆ ವೈದ್ಯರು ಹೊಸ ತಂತ್ರಜ್ಞಾನ ಅಳವಡಿಸಿಕೊಳ್ಳಲಿ

ಬೆಳಗಾವಿ ಐಎಂಎ ಸಮಾವೇಶ



ಬೆಳಗಾವಿ: ಬೆಳಗಾವಿಯ ಖಾಸಗಿ ಹೋಟೆಲ್ ನಲ್ಲಿ Bridging Knowledge and Practice" ಧೇಯವಾಕ್ಯದ ಐಎಂಎ ವಾರ್ಷಿಕ ಸಿಎಂಇ 2025–26 ಸಮಾವೇಶವನ್ನು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಕೆಎಲ್‌ಇ ಸ್ವಾಯತ್ತ ಕೆಎಲ್‌ಇ ವಿಶ್ವವಿದ್ಯಾಲಯದ ಗೌರವಾನ್ವಿತ ಕುಲಾಧಿಪತಿಗಳಾದ ಪದ್ಮಶ್ರೀ ಡಾ. ಪ್ರಭಾಕರ ಕೋರೆ ಅವರು ಉದ್ಘಾಟಿಸಿದರು.

ನಂತರ ಮಾತನಾಡಿದ ಅವರು, ವೈದ್ಯಕೀಯ ಕ್ಷೇತ್ರದಲ್ಲಿ ಆಗುತ್ತಿರುವ ಆಧುನಿಕ ತಂತ್ರಜ್ಞಾನ ಹಾಗೂ ಕೃತಕ ಅಳವಡಿಕೆಯ ಅನಿವಾರ್ಯತೆಯನ್ನು ಪ್ರತಿಪಾದಿಸಿದರು.

ಮಹಾನಗರ ಪಾಲಿಕೆಯ ಉಪ ಆಯುಕ್ತರಾದ ಡಾ. ಸಿದ್ದು ಹುಲ್ಲೋಳ್ಳಿ ಮಾತನಾಡಿ, ಎಐ ತಂತ್ರಜ್ಞಾನವು ಮಾನವಸಂಪನ್ಮೂಲವನ್ನು ತಗ್ಗಿಸುತ್ತಿರುವ ಈ ಹಿನ್ನೆಲೆಯಲ್ಲಿ ಬದಲಾವಣೆಯನ್ನು ರೂಢಿಸಿಕೊಳ್ಳಬೇಕು ಎಂದರಲ್ಲದೆ, ಹಲವಾರು ಕೆಲಸ ಕಾರ್ಯಗಳು ಎಐ ಕೃತಕ ಬುದ್ಧಿಮತ್ತೆ ಮೂಲಕವೇ ನಡೆಯುತ್ತಿವೆ. ಮಾನವ ಸಂಪನ್ಮೂಲವನ್ನು ಇದು ತಗ್ಗಿಸುತ್ತಿದೆ. ಸಮಾಜಕ್ಕೆ ಗುಣಮಟ್ಟದ ವೈದ್ಯರ ಆವಶ್ಯಕತೆಯಿದೆ. ವೈದ್ಯರು ರೋಗಿಗಳಿಗೆ ಸ್ಪಂದನೆ ನೀಡುವಂತಾಗಬೇಕು ಎಂದರು.

ಕೆಎಲ್‌ಇ ಇಆರ್ ಗೌರವಾನ್ವಿತ ಉಪಕುಲಪತಿಗಳಾದ ಡಾ. ಸಂದೀಪ್ ಶ್ರೀವಾಸ್ತವ ಅವರು ಅತಿಥಿಗಳಾಗಿ ಉಪಸ್ಥಿತರಿದ್ದರು.

ಸಂಸ್ಥೆಯ ಅಧ್ಯಕ್ಷರಾದ ಡಾ. ಹೇಮಂತ್ ಕೌಜಲಗಿ, ಕಾರ್ಯದರ್ಶಿ ಡಾ. ರಾಘವೇಂದ್ರ ಡಿ. ಸಾಗರ್, ಖಜಾಂಚಿ ಡಾ. ಕೇದಾರೇಶ್ವರ ಕೆ.ಎಸ್., ಸಿಎಂಇ ಚೇರ್ಮನ್ ಡಾ. ವಿಕ್ರಾಂತ್ ಘಟನಟ್ಟಿ, ಸಂಘಟನಾ ಚೇರ್ಮನ್ ಡಾ.ಸಂತೋಷ್ ಡಿ. ಹಜಾರೆ ಹಾಗೂ ಸಿಎಂಇ ಸಹ–ಚೇರ್ಮನ್ ಡಾ. ವಾಣಿಶ್ರೀ ಗಾನಕುಮಾರ್ ಅವರು ಕಾರ್ಯಕ್ರಮದ ಮುಂಚೂಣಿಯಲ್ಲಿದ್ದರು. ಡಾ. ಸೌಮ್ಯಾ ಮಾಸ್ತ ನಿರೂಪಿಸಿದರು. ಡಾ.ಶ್ರೀದೇವಿ ಎಣ್ಣಿ, ಡಾ. ಆಯಿಷಾ ಪರಾಂಡೆ ಮತ್ತು ಡಾ. ರೂಪಾಲಿ ಶಿಂಧೆ ಅವರು ಅತ್ಯಂತ ಯಶಸ್ವಿಯಾಗಿ ನಡೆಸಿಕೊಟ್ಟರು.

ಮುಂಗಾರು: ಸಬ್ಸಿಡಿ ಬಿತ್ತನೆ ಬೀಜ ವಿತರಣೆ

ಐಗಳಿ: ಗ್ರಾಮದ ಶ್ರೀ ಬಸವೇಶ್ವರ ಗ್ರಾಮೀಣ ಕೃಷಿ ಪತ್ತಿನ ಸಹಕಾರ ಸಂಘ ಹಾಗೂ ಕೃಷಿ ಇಲಾಖೆ ಆಶ್ರಯದಲ್ಲಿ ಮುಂಗಾರು ಹಂಗಮಿನ ಸಬ್ಸಿಡಿ ಬಿತ್ತನೆ ಬೀಜ ವಿತರಿಸಲಾಯಿತು. ಗ್ರಾಮದ ಹಿರಿಯರಾದ ಸಿ.ಎಸ್. ನೇಮಗೌಡ, ಕೃಷಿ ಅಧಿಕಾರಿ ಯಂಕಪ್ಪ ಉಪ್ಪಾರ, ಸಿದ್ದಪ್ಪ ಬಳ್ಳೊಳ್ಳಿ ಬಿ.ಎಸ್. ಬಿರಾದರ, ಆರ್. ಆರ್. ತೆಲಸಂಗ, ಮೌಳೇಶ್ವರ ನೇಮಗೌಡ, ಗುರಪ್ಪಾ ಬಿರದಾರ, ಚಂದ್ರಕಾಂತ ಪಾಟೀಲ, ಅಂಬಣ್ಣ ಬಿರಾದರ , ಬಸವೇಶ್ವರ ಸಹಕಾರ ಸಂಘದ ಅಧ್ಯಕ್ಷ ಬಸವರಾಜ ಬಿರಾದರ, ಪ್ರಲ್ಹಾದ ಪಾಟೀಲ, ಯಲ್ಲಪ್ಪ ಮಿರ್ಜಿ, ಸುರೇಶ ಬಿಜ್ಜರಗಿ, ಅಪ್ಪಸಾಬ ತೆಲಸಂಗ, ಸುನೀಲ ತೆಲಸಂಗ ದುಂಡಪ್ಪ, ದೊಡ್ಡಮನಿ ಪ್ರಭು ಬಿರಾದರ, ಪ್ರಶಾಂತ ಹುಣಸಿಕಟ್ಟಿ ಸೇರಿದಂತೆ ಸಂಘದ ಕಾರ್ಯದರ್ಶಿ ಸದಾಶಿವ ಪಡಸಲಗಿ ಸಿಬ್ಬಂದಿ ವರ್ಗದವರು ಉಪಸ್ಥಿತಿ ಇದ್ದರು.



ಸಮುದಾಯ ಭವನಕ್ಕೆ ಚೆಕ್ ಹಸ್ತಾಂತರ



ಬೆಳಗಾವಿ: ಗ್ರಾಮೀಣ ವಿಧಾನಸಭಾ ಕ್ಷೇತ್ರದ ಸುಕ್ಷೇತ್ರ ದತ್ತ ಮಹಾರಾಜರ ಪಂತ ಬಾಳೇಕುಂದ್ರಿ ಗ್ರಾಮದಲ್ಲಿ ಸುಮಾರು 2 ಕೋಟಿ ರೂ. ವೆಚ್ಚದಲ್ಲಿ ನಿರ್ಮಾಣಗೊಳ್ಳಲಿರುವ ಸುಸಜ್ಜಿತ ಸಮುದಾಯ ಭವನ (ಕಮ್ಯುನಿಟಿ ಹಾಲ್) ನಿರ್ಮಾಣಕ್ಕೆ ಚಾಲನೆ ದೊರೆತಿದ್ದು, ಯೋಜನೆಯ ಮೊದಲ ಹಂತವಾಗಿ 15 ಲಕ್ಷರೂ.ಗಳ ಅನುದಾನದ ಚೆಕ್ ವಿಧಾನಪರಿಷತ್ ಸದಸ್ಯ ಚನ್ನರಾಜ ಹಟ್ಟಿಹೊಳಿ ಅವರು ಹಸ್ತಾಂತರಿಸಿದರು. ಈ ವೇಳೆ ಉದ್ಯಮಿಗಳಾದ ಗಂಗಣ್ಣ ಕಲ್ಲೂರ, ಗ್ರಾಮದ ಹಿರಿಯರು, ವಿವಿಧ ಸಂಘ–ಸಂಸ್ಥೆಗಳ ಪದಾಧಿಕಾರಿಗಳು, ಪಕ್ಷದ ಮುಖಂಡರು ಕಮ್ಯುನಿಟಿ ಸದಸ್ಯರು ಸೇರಿದಂತೆ ಹಲವರು ಇದ್ದರು.

ಕಠಿಣ ಶ್ರಮದಿಂದ ಉನ್ನತ ಹುದ್ದೆ ಅಲಂಕರಿಸಿ



ವಿದ್ಯಾರ್ಥಿಗಳ ಪ್ರತಿಭಾ ಪುರಸ್ಕಾರ

ಗೋಕಾಕ: ವಿದ್ಯಾರ್ಥಿಗಳು ಕಠಿಣ ಶ್ರಮದಿಂದ ಹೆಚ್ಚಿನ ಸಾಧನೆ ಮಾಡಿ ಉನ್ನತ ಹುದ್ದೆ ಅಲಂಕರಿಸುವಂತೆ ಲಕ್ಷ್ಮೀ ಎಜ್ಯುಕೇಷನ ಟ್ರಸ್ಟನ ನಿರ್ದೇಶಕ ಸರ್ವೋತ್ತಮ ಜಾರಕಿಹೊಳಿ ಹೇಳಿದರು.

ನಗರದ ಹೆಮರೆಡ್ಡಿ ಕಲ್ಯಾಣ ಮಂಟಪದಲ್ಲಿ ಭಾನುವಾರ ಇಲ್ಲಿಯ ಜೆಸಿಐ ಸಂಸ್ಥೆಯ ವರು ಚಿಕ್ಕೋಡಿ ಹಾಗೂ ಬೆಳಗಾವಿ ಶೈಕ್ಷಣಿಕ ಜಿಲ್ಲೆಯ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳ ಪ್ರತಿಭಾ ಪುರಸ್ಕಾರ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡು ಮಾತನಾಡಿದರು.

ತಹಶೀಲ್ದಾರ್ ಡಾ.ಮೋಹನ ಭಸ್ಮೆ, ಮಲ್ಲಿಕಾರ್ಜುನ ಕರಜಗಿಮಠ, ಅರುಣ ದುಧಾಳಿ ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಮಾರ್ಗದರ್ಶನ ನೀಡಿದರು.

ವೇದಿಕೆಯ ಮೇಲೆ ಶೂನ್ಯ ಸಂಪಾದನ ಮಠದ ಶ್ರೀ ಬಸವಪ್ರಭು ಸ್ವಾಮಿಜಿ, ತಾಪಂ ಕಾರ್ಯನಿರ್ವಾಹಕ ಅಧಿಕಾರಿ ಪರಶುರಾಮ ಘಸ್ತೆ, ಎನ್ ಆರ್ ಲಾತೂರ, ಅಶೋಕ ಪೂಜಾರಿ, ಬಸವರಾಜ ಕಲ್ಯಾಣಶೆಟ್ಟಿ, ಜೆಸಿಐ ಸಂಸ್ಥೆಯ ರಾಷ್ಟ್ರೀಯ ಸಂಯೋಜಕ ವಿಷ್ಣು ಲಾತೂರ, ಅಧ್ಯಕ್ಷರುಗಳಾದ ಕಿರಣ ಗಂಗರೆಡ್ಡಿ, ಮೀನಾಕ್ಷಿ ಸವದಿ, ಪದಾಧಿಕಾರಿಗಳಾದ ಸುಷ್ಮಿತಾ ಶೆಟ್ಟಿ, ಶೇಖರ ಉಳ್ಳಾಗಡ್ಡಿ, ರಾಜೇಶ್ವರಿ ಕಿತ್ತೂರ, ಸಂತೋಷ ಹವಾಲ್ದಾರ, ಸಂದೀಪ ಅನಿಗೋಳ ಹಾಗೂ ಜೆಸಿಐ ಇತರ ಪದಾಧಿಕಾರಿಗಳು ಇದ್ದರು.

ಸಸಿ ನೆಟ್ಟು ಪೋಷಿಸುವುದು ಅಗತ್ಯ


ಅಥಣಿ: ಮುಂದೊಂದು ದಿನ ಆಕ್ಸಿಜನ್ (ಶುದ್ಧ ಗಾಳಿ) ಕೊರತೆ ಆಗಬಹುದು, ಆದ್ದರಿಂದ ನಾವೆಲ್ಲ ಎಚ್ಚೆತ್ತುಕೊಂಡು ಈಗಿನಿಂದಲೇ ಗಿಡಮರಗಳನ್ನು ನೆಟ್ಟು ಸಂರಕ್ಷಣೆ ಮಾಡುವುದು ಅಗತ್ಯ ಎಂದು ಕರವೇ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಅಣ್ಣಾಸಾಬ ತೆಲಸಂಗ ಹೇಳಿದರು.

ಅವರು ಪಟ್ಟಣದ ಸರ್ಕಾರಿ ಕನ್ನಡ ಹಿರಿಯ ಪ್ರಾಥಮಿಕ ಶಾಲೆ ನಂ.01 ರಲ್ಲಿ ವಿಶ್ವ ಪರಿಸರ ದಿನಾಚರಣೆಯ ಅಂಗವಾಗಿ ಶಾಲೆಯ ಆವರಣದಲ್ಲಿ ಗಿಡ ನೆಡುವ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು. ಶಾಲಾ ಹಂತದಲ್ಲಿ ಮಕ್ಕಳಿಗೆ ಪರಿಸರ ಸಂರಕ್ಷಣೆಯ ಮಹತ್ವವನ್ನ ತಿಳಿಸುವುದು ಇಂದಿನ ಅಗತ್ಯವಾಗಿದೆ ಎಂದರು.

ಅಥಣಿ ತಾಲೂಕು ನಿವೃತ್ತ ನೌಕರರ ಸಂಘದ ಅಧ್ಯಕ್ಷ ಎಸ್.ಎಸ್.ಹೂಟಿ ಮಾತನಾಡಿದರು. ಅಧ್ಯಕ್ಷತೆ ವಹಿಸಿದ್ದ ಶಾಲೆಯ ಮುಖ್ಯೋಪಾಧ್ಯಾಯ ಎಸ್ ಬಿ ಕಟಗೇರಿ ಮಾತನಾಡಿ ಪರಿಸರ ದಿನಾಚರಣೆಯ ಮಹತ್ವವನ್ನ ತಿಳಿಸಿದರು. ಈ ಸಂದರ್ಭದಲ್ಲಿ ಕೆ ಬಿ ಶಿರಗೂರ, ವೈ ಎಂ ನಡುವಿನಮನಿ, ಎಸ್ ಬಿ ಕೆಮ್ಮನ್ನವರ, ಬಿ ಎಂ ಅನಂತಪುರ, ಪಿ ಆರ್ ಬಸಗೌಡರ, ಎ ಪಿ ಬಡಕಂಬಿ ಸೇರಿದಂತೆ ಇನ್ನೇತರರು ಉಪಸ್ಥಿತರಿದ್ದರು.



ಯುವಕರು ದುಶ್ಚಟದಿಂದ ದೂರವಿರಲಿ



ರಾಯಬಾಗ: ವಿಶೇಷವಾಗಿ ಯುವ ಸಮೂಹ ತಂಬಾಕು ಮತ್ತು ತಂಬಾಕು ಉತ್ಪನ್ನಗಳಾದ ಗುಟ್ಕಾ, ಬೀಡಿ, ಸಿಗರೇಟ್ ಗಳಂತಹ ಪದಾರ್ಥಗಳಿಂದ ದೂರವಿದ್ದು ತಮ್ಮ ಆರೋಗ್ಯವನ್ನು ಕಾಪಾಡಿಕೊಳ್ಳಬೇಕೆಂದು ಗ್ರೇಡ್ 2 ತಹಶೀಲ್ದಾರ್ ಪರಮಾನಂದ ಮಂಗಸೂಳಿ ಹೇಳಿದರು.

ಶನಿವಾರ ಪಟ್ಟಣದ ಸಾರ್ವಜನಿಕ ಆಸ್ಪತ್ರೆಯಲ್ಲಿ ಹಮ್ಮಿಕೊಂಡಿದ್ದ ವಿಶ್ವ ತಂಬಾಕು ರಹಿತ ದಿನಾಚರಣೆ ಕಾರ್ಯಕ್ರಮ ಸಸಿಗೆ ನೀರು ಹಾಕುವುದರ ಮೂಲಕ ಉದ್ಘಾಟಿಸಿ ಮಾತನಾಡಿದರು. ದಂತ ವೈದ್ಯಾಧಿಕಾರಿ ಡಾ. ಸಿದ್ಧಾರ್ಥ್ ಮಗದುಮ್ಮ ತಂಬಾಕು ಸೇವನೆಯಿಂದ ಬಾಯಿ, ಗಂಟಲು, ಉದರ ಹೀಗೆ ವಿವಿಧ ಅಂಗಗಳಿಗೆ ತಂಬಾಕು ಸೇವನೆಯಿಂದ ಹಾನಿ ಉಂಟಾಗುವುದುನ್ನು ಪ್ರಾತ್ಯಕ್ಷಿಕೆ ಮೂಲಕ ವಿವರಿಸಿದರು.

ಅಧ್ಯಕ್ಷತೆಯನ್ನು ತಾಲೂಕು ವೈದ್ಯಾಧಿಕಾರಿ ಡಾ. ಎಸ್. ಎಮ್. ಪಾಟೀಲ ವಹಿಸಿದ್ದರು. ಸಾರ್ವಜನಿಕ ಆಸ್ಪತ್ರೆ ಮುಖ್ಯ ವೈದ್ಯಾಧಿಕಾರಿ ಡಾ. ವಿನೋದ ಗಸ್ತಿ, ಪೊಲಿಸ್ ಇಲಾಖೆಯ ಎಸ್. ವಿ. ಭೋಸಲೆ, ಹಿರಿಯ ಆರೋಗ್ಯ ಮೇಲ್ವಿಚಾರಕ ಡಿ. ಎನ್. ಹಳ್ಳಿ, ಕುಮಾರ ಮಗದುಮ್ಮ, ನಂದಕುಮಾರ ಪಾಟೀಲ, ಶ್ರೀಶೈಲ ಹೊಸೂರ ಹಾಗೂ ಆಸ್ಪತ್ರೆ ಸಿಬ್ಬಂದಿ ಇದ್ದರು. ಸರಕಾರಿ ಕೈಗಾರಿಕಾ ತರಬೇತಿ ವಿದ್ಯಾರ್ಥಿಗಳಿಗೆ ಪ್ರತಿಜ್ಞಾ ವಿಧಿಯನ್ನು ಆಪ್ತ ಸಮಾಲೋಚಕಿ ಗೀತಾ ಮಾನಕಪ್ಪಗೋಳ ಬೋಧಿಸಿದರು.

ರಸ್ತೆ ನಿರ್ಮಾಣಕ್ಕೆ ಸಂಸದರಿಗೆ ಮನವಿ

ಹಲ್ಯಾಳ: ಸಮೀಪ ಹುಲಗಬಾಳ ಗ್ರಾಮದಿಂದ ಸಂಗಮೇಶ್ವರ ದೇವಸ್ಥಾನಕ್ಕೆ ಸಂಪರ್ಕ ಕಲ್ಪಿಸುವ ರಸ್ತೆ ಸಂಪೂರ್ಣ ಹದಗೆಟ್ಟಿದ್ದು, ರಸ್ತೆ ಅಭಿವೃದ್ಧಿಪಡಿಸುವಂತೆ ಗ್ರಾಮಸ್ಥರು ಸಂಸದೆ ಪ್ರಿಯಾಂಕಾ ಜಾರಕಿಹೊಳಿ ಅವರಿಗೆ ಮನವಿ ಸಲ್ಲಿಸಿದರು. ಸಂಗಮೇಶ್ವರ ದೇವಸ್ಥಾನಕ್ಕೆ ಪ್ರತಿದಿನ ಭಕ್ತರು ಹಾಗೂ ಗ್ರಾಮಸ್ಥರು ಸಂಚರಿಸುತ್ತಿದ್ದು, ರಸ್ತೆ ಹದಗೆಟ್ಟಿರುವುದರಿಂದ ವಾಹನ ಸವಾರರು ಮತ್ತು ಪಾದಚಾರಿಗಳು ತೊಂದರೆ ಅನುಭವಿಸುತ್ತಿದ್ದಾರೆ. ವಿಶೇಷವಾಗಿ ಮಳೆಗಾಲದಲ್ಲಿ ರಸ್ತೆಯಲ್ಲಿ ಕೆಸರು ಮತ್ತು ಗುಂಡಿಗಳು ಉಂಟಾಗಿ ಸಂಚಾರ ದುಸ್ತರವಾಗುತ್ತಿದೆ ಎಂದು ಗ್ರಾಮಸ್ಥರು ತಿಳಿಸಿದರು. ಈ ಹಿನ್ನೆಲೆಯಲ್ಲಿ ಹುಲಗಬಾಳ ಗ್ರಾಮದ ಪ್ರಮುಖರು ಹಾಗೂ ಸಾರ್ವಜನಿಕರು ರಸ್ತೆ ಕಾಮಗಾರಿಗೆ ಅಗತ್ಯ ಅನುದಾನ ಒದಗಿಸಿ ಶೀಘ್ರವಾಗಿ ರಸ್ತೆ ನಿರ್ಮಾಣ ಕಾರ್ಯ ಕೈಗೊಳ್ಳುವಂತೆ ಸಂಸದರಿಗೆ ಮನವಿ ಮಾಡಿದರು. ಮನವಿಗೆ ಸ್ಪಂದಿಸಿದ ಸಂಸದೆ ಪ್ರಿಯಾಂಕಾ ಜಾರಕಿಹೊಳಿ ಅವರು ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಚರ್ಚಿಸಿ ರಸ್ತೆ ಸಮಸ್ಯೆ ಪರಿಹಾರಕ್ಕೆ ಅಗತ್ಯ ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದರು. ಈ ಸಂದರ್ಭದಲ್ಲಿ ಗ್ರಾಮದ ಮುಖಂಡರು, ದೇವಸ್ಥಾನ ಸಮಿತಿಯ ಸದಸ್ಯರು ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು.



ಕಿರುಸುದ್ದಿ

ಇಂದು ಸಭೆ

ಖಾನಾಪುರ: ಪಟ್ಟಣದ ಜ್ಞಾನೇಶ್ವರ ದೇವಾಲಯದ ಸಭಾಂಗಣದಲ್ಲಿ ಸೋಮವಾರ ಜೂ.8ರಂದು ಬೆಳಿಗ್ಗೆ 11 ಗಂಟೆಗೆ ಹಿರಿಯ ನಾಗರಿಕರ ಸಂಘದ ಸಭೆಯನ್ನು ಏರ್ಪಡಿಸಲಾಗಿದೆ. ಸಭೆಯಲ್ಲಿ ಸಂಘದ ಜಿಲ್ಲಾ ಸಮಿತಿಯ ಪದಾಧಿಕಾರಿಗಳು ಭಾಗವಹಿಸಿ ಸಂಘದ ಮುಂದಿನ ಚಟುವಟಿಕೆಗಳ ಬಗ್ಗೆ ಮಾರ್ಗದರ್ಶನ ಮಾಡಲಿದ್ದಾರೆ ಎಂದು ಸಂಘದ ಪ್ರಕಟಣೆ ತಿಳಿಸಿದೆ.

ಪರಿಸರ ರಕ್ಷಣೆ ನಮ್ಮ ಆಂತರಿಕ ಅಭ್ಯಾಸಗಳಾಗಲಿ

ಬೆಳಗಾವಿ: ನಿಜವಾದ ಪರಿಸರ ರಕ್ಷಣೆ ಎಂದರೆ ಕೇವಲ ಬಾಹ್ಯ ಬದಲಾವಣೆ ಅಲ್ಲ, ಅದು ನಮ್ಮ ಆಂತರಿಕ ಅಭ್ಯಾಸಗಳ ಪ್ರತಿಬಿಂಬ ಎಂದು ರಾಜಯೋಗಿನಿ ಬ್ರಹ್ಮಕುಮಾರಿ ವಿಧ್ಯಾ ದೀದಿ ತಿಳಿಸಿದರು.ನಗರದ ಅನಗೋಳ ಬಾಬಲೆ ಗಲ್ಲಿ ಬ್ರಹ್ಮಕುಮಾರಿ ಕೇಂದ್ರದ ಬಳಿ ವಿಶ್ವಪರಿಸರ ದಿನಾಚರಣೆ ಅಂಗವಾಗಿ ಆಯೋಜಿಸಲಾಗಿದ್ದ ಸಸಿ ನೆಡುವ ಕಾರ್ಯಕ್ರಮದಲ್ಲಿ ಮಾತನಾಡಿ, ನಮ್ಮ ಆಲೋಚನೆಗಳನ್ನು ಕಸ ಮತ್ತು ನಕಾರಾತ್ಮಕತೆಯಿಂದ ಸ್ವಚ್ಛಗೊಳಿಸಿದಾಗ ನಾವು ಭೌತಿಕ ಜಗತ್ತಿನಲ್ಲಿ ಕಸ ಮತ್ತು ಮಾಲಿನ್ಯವನ್ನು ಸೃಷ್ಟಿಸುವುದನ್ನು ಸಹಜವಾಗಿಯೇ ನಿಲ್ಲಿಸಬಹುದು ಎಂದರು.ಪಾಲಿಕೆ ಮುಖ್ಯ ಪರಿಸರ ಅಭಿಯಂತರ ಹನುಮಂತ ಕಲಾದಗಿ, ಬೀಟ್ ಫಾರೆಸ್ಟರ್ ಬಸವರಾಜ ಅಥಣಿ, ಆರೋಗ್ಯ ನಿರೀಕ್ಷಕ ಬಸವರಾಜ್ ಹೊಸಮನಿ, ಅಶೋಕ್ ಸನದಿ, ಶೋಭಾ ಸನದಿ ಹಾಗೂ ಬೆಳಗಾವಿಯ ಎಲ್ಲಾ 58 ವಾರ್ಡಗಳ 30 ಇತರ ಸಮುದಾಯ ಸಂಘಟಕರು ಉಪಸ್ಥಿತರಿದ್ದರು.ಕಾರ್ಯಕ್ರಮದ ಕೊನೆಯಲ್ಲಿ ಪರಿಸರ ಸ್ವಚ್ಛತೆಗಾಗಿ ಪ್ರತಿಜ್ಞೆ ಮಾಡಲಾಯಿತು.ಬಿಕೆ ಮಹೇಶ್ ಪಾಟೀಲ್ ಸ್ವಾಗತಿಸಿದರು, ಬಿಕೆ ವಿದ್ಯಾ ಅಕ್ಕನವರು ನಿರೂಪಿಸಿದರು, ಬಿಕೆ ಸಂತೋಷ್ ವಂದಿಸಿದರು.

ಪರಿಸರ ದಿನಾಚರಣೆ

ಬೆಳಗಾವಿ : ಬೆಳಗಾವಿ ಶುಗರ್ಸ್ ಕಾರ್ಖಾನೆಯ ಆವರಣದಲ್ಲಿ, ಆಯೋಜಿಸಲಾಗಿರುವ ವಿಶ್ವ ಪರಿಸರ ದಿನಾಚರಣೆಯ ಕಾರ್ಯಕ್ರಮದಲ್ಲಿ ಚೇರ್ಮನ್ ಹಾಗೂ ಮುಖ್ಯ ಹಣಕಾಸು ಅಧಿಕಾರಿ ಪ್ರದೀಪಕುಮಾರ ಇಂಡಿ ಅವರು ಸಸಿ ನೆಡುವ ಮೂಲಕ ಚಾಲನೆ ನೀಡಿದರು. ಕಂಪನಿಯು ಈ ವರ್ಷ ಸುಮಾರು 1500 ಸಸಿಗಳನ್ನು ನೆಡುವ ಗುರಿ ಹೊಂದಿದ್ದು, ಈಗಾಗಲೇ ಆವರಣದಲ್ಲಿ ಸುಮಾರು 4500 ಸಸಿಗಳನ್ನು ಬೆಳೆಸಲಾಗಿದೆ ಎಂದು ತಿಳಿಸಿದರು. ಈ ವೇಳೆ ಬೆಳಗಾವಿ ಶುಗರ್ಸ್ ಸಂಘದ ಹಿರಿಯ ಉಪಾಧ್ಯಕ್ಷರು, ಉಪಾಧ್ಯಕ್ಷರು, ಪ್ರಧಾನ ವ್ಯವಸ್ಥಾಪಕರು, ಅಧಿಕಾರಿಗಳು, ಸಿಬ್ಬಂದಿಗಳು, ಕಾರ್ಮಿಕರು ಸೇರಿದಂತೆ ಹಲವರು ಪಾಲ್ಗೊಂಡಿದ್ದರು.

ಅರ್ಜಿ ಆಹ್ವಾನ

ಬೆಳಗಾವಿ : ಕೇಂದ್ರ ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆಯಾದ ದೀನದಯಾಳ್ ಉಪಾಧ್ಯಾಯ ಗ್ರಾಮೀಣ ಕೌಶಲ್ಯ ಯೋಜನೆ ಅಡಿಯಲ್ಲಿ ಬೆಳಗಾವಿ ಜಿಲ್ಲೆಯ ಗ್ರಾಮೀಣ ಯುವಕ, ಯುವತಿಯರಿಗೆ ಉಚಿತ 3 ತಿಂಗಳ ವೃತ್ತಿಪರ ಕೌಶಲ್ಯ ತರಬೇತಿ ನೀಡಲಾಗುತ್ತಿದ್ದು, ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. 18 ರಿಂದ 40 ವರ್ಷದೊಳಗಿನ ಕನಿಷ್ಠ 10ನೇ ತರಗತಿ ಉತ್ತೀರ್ಣರಾಗಿರುವ ಅಭ್ಯರ್ಥಿಗಳು ತರಬೇತಿಗೆ ಅರ್ಜಿ ಸಲ್ಲಿಸಬಹುದು. ತರಬೇತಿ ಅವಧಿಯಲ್ಲಿ ಸಂಪೂರ್ಣ ಉಚಿತ ಊಟ ಹಾಗೂ ವಸತಿ ಸೌಲಭ್ಯ ಒದಗಿಸಲಾಗುತ್ತದೆ.ತರಬೇತಿ ಪೂರ್ಣಗೊಂಡ ನಂತರ ಪ್ರತಿಷ್ಠಿತ ಕಂಪನಿಗಳಲ್ಲಿ ಉದ್ಯೋಗಾವಕಾಶ ಕಲ್ಪಿಸಿಕೊಡಲಾಗುವುದು. ಬೆಳಗಾವಿ ಜಿಲ್ಲೆಯ ಗ್ರಾಮೀಣ ಯುವಕ, ಯುವತಿಯರು ಈ ಅವಕಾಶವನ್ನು ಸದುಪಯೋಗ ಪಡೆದುಕೊಳ್ಳಬೇಕು. ಹೆಚ್ಚಿನ ಮಾಹಿತಿಗಾಗಿ ಆದರ್ಶ ಪ್ರೈವೇಟ್ ಐಟಿಐ ಪ್ಲಾಟ್ ನಂ.508 ಆಟೋನಗರ ಬೆಳಗಾವಿಗೆ ಸಂಪರ್ಕಿಸಬಹುದು ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ವಿದ್ಯುತ್ ವ್ಯತ್ಯಯ ಇಂದು

ಬೆಳಗಾವಿ : ಕ.ವಿ.ಪ್ರ.ನಿ.ನಿ. ವತಿಯಿಂದ ಮೊದಲನೇಯ ತ್ರೈಮಾಸಿಕ ಹಾಗೂ ತುರ್ತು ನಿರ್ವಹಣಾ ಕಾರ್ಯಗಳನ್ನು ಕೈಗೊಳ್ಳುತ್ತಿರುವುದರಿಂದ ಜೂನ್ 8 ರಂದು ಬೆಳಿಗ್ಗೆ 9 ಗಂಟೆಯಿಂದ ಸಂಜೆ 5 ಗಂಟೆಯವರೆಗೆ 110 ಕೆ.ವ್ಹಿ. ಕೊಡಚವಾಡ ಉಪಕೇಂದ್ರದಿಂದ ಸರಬರಾಜು ಆಗುವ ಪಾರಿಶ್ವಾಡ, ಹಿರೇಮುನವಳ್ಳಿ, ಜಿಕನೂರ, ಚಿಕ್ಕಹಟ್ಟಿಹೊಳಿ, ಗಾಡಿಕೊಪ್ಪ, ಹಿರೇಹಟ್ಟಿಹೊಳಿ, ಚಿಕ್ಕದಿನಕೊಪ್ಪ, ಕಗ್ಗಣಗಿ, ಬಿಳಕಿ, ಅವರೊಳ್ಳಿ, ದೇಮಿನಕೊಪ್ಪ, ವಡ್ಡೆಬೈಲ, ತೋಪಿನಕಟ್ಟಿ, ಬಿದರಭಾವಿ, ಲೋಕೊಳ್ಳಿ, ದೊಡ್ಡಹೊಸೂರ, ನೇಬೈಲ, ದೇವಲತ್ತಿ ಕಮಶಿನಕೊಪ್ಪ, ಜೈನಕೊಪ್ಪ, ಕೊಡಚವಾಡ, ಕಾರಲಗಾ, ಹೆಬ್ಬಾಳಹಟ್ಟಿ, ಕೌಂದಲ, ಝಾಡನಾವಗಾ, ಕೊಂಕಣ ನಾವಗಾ, ಕರಂಬಳ, ಲಾಲವಾಡಿ, ಹೆಬ್ಬಾಳ, ನಂದಗಡ, ಕಸಬಾ ನಂದಗಡ, ಕಾರಲಗಾ, ಶಿವೊಳ್ಳಿ ಹಾಗೂ ಚಾಪಗಾಂವ ಗ್ರಾಮಗಳಿಗೆ ಹಾಗೂ ಸದರಿ ಗ್ರಾಮಗಳ ನೀರಾವರಿ ಪಂಪ್‌ಸೆಟ್‌ಗಳ ಪ್ರದೇಶಗಳಿಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ ಎಂದು ಕ.ವಿ.ಪ್ರ.ನಿ.ನಿ. ಕಾ ಮತ್ತು ಪಾ ಬೆಳಗಾವಿ ಗ್ರಾಮೀಣ ವಿಭಾಗದ ಕಾರ್ಯನಿರ್ವಾಹಕ ಇಂಜಿನೀಯರರು(ವಿ) ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಬೆಳಗಾವಿ : ಬೆಳಗಾವಿಯ ಖಾಸಗಿ ಹೋಟೆಲ್‌ನಲ್ಲಿ ಇಐಎಂಎ ವಾರ್ಷಿಕ ಸಿಎಂಇ 2025-26 ಸಮಾವೇಶದಲ್ಲಿ ಕೆಎಲ್ಇ ಇಆರ್ ವಿಶ್ವವಿದ್ಯಾಲಯದ ಗೌರವಾನ್ವಿತ ಕುಲಾಧಿಪತಿಗಳಾದ ಪದ್ಮಶ್ರೀ ಡಾ. ಪ್ರಭಾಕರ ಕೋರೆ ಅವರನ್ನು ಸನ್ಮಾನಿಸಲಾಯಿತು.

ಪಿಯು ಕಾಲೇಜಿನಲ್ಲಿ ವನಮಹೋತ್ಸವ

ಬೆಳಗಾವಿ : ನಗರದ ಕೆ.ಎಲ್.ಇ. ಸಂಸ್ಥೆಯ ರಾಜಾ ಲಖಮಗೌಡ ಪದವಿಪೂರ್ವ ವಿಜ್ಞಾನ ಮಹಾವಿದ್ಯಾಲಯದಲ್ಲಿ ವಿಶ್ವ ಪರಿಸರ ದಿನಾಚರಣೆಯ ಅಂಗವಾಗಿ ವನಮಹೋತ್ಸವ ಕಾರ್ಯಕ್ರಮ ಆಯೋಜಿಸಲಾಯಿತು. ಮಹಾವಿದ್ಯಾಲಯದ ಪ್ರಾಚಾರ್ಯ ವಿಶ್ವನಾಥ ಚ. ಕಾಮಗೋಳ ಅವರು ಸಸಿ ನೆಡುವ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು, ಬಳಿಕ ಮಾತನಾಡಿದ ಅವರು, ಮಾನವನು ತನ್ನ ಅತಿಯಾದ ದುರಾಸೆಯಿಂದ ಅರಣ್ಯಗಳನ್ನು ನಾಶಮಾಡಿ ಪರಿಸರವನ್ನು ಮಲೀನಗೊಳಿಸುತ್ತಿದ್ದಾನೆ ಎಂದು ಹೇಳಿದರು.ಮುಂದಿನ ಪೀಳಿಗೆಗಾಗಿ ಭೂಮಿ ಹಾಗೂ ಪರಿಸರ ಸಂರಕ್ಷಣೆ ಅತ್ಯಗತ್ಯವಾಗಿದೆ ಎಂದರು. ಅರಣ್ಯ ನಾಶದಿಂದ ವಿವಿಧ ಜೀವಸಂಕುಲಗಳು ವಿನಾಶದ ಅಂಚಿಗೆ ತಲುಪಿವೆ. ಪರಿಸರ ಸಮತೋಲನ ಕಾಪಾಡಲು ಎಲ್ಲ ಜೀವಿಗಳ ಸಹಅಸ್ತಿತ್ವ ಅಗತ್ಯವಾಗಿದೆ ಎಂದು ಅವರು ಅಭಿಪ್ರಾಯಪಟ್ಟರು. ಪ್ರತಿಯೊಬ್ಬ ನಾಗರಿಕನು ಮನೆಗೊಂದು ಸಸಿ ನೆಟ್ಟು ಪರಿಸರವನ್ನು ಉಳಿಸಿ ಬೆಳೆಸಬೇಕು ಎಂದು ಅವರು ಕರೆ ನೀಡಿದರು. ಪ್ರಸ್ತುತ ಯುವಜನತೆ ಜಾಗೃತರಾಗುವಂತಹ ಪರಿಣಾಮಕಾರಿ ಕಾರ್ಯಕ್ರಮಗಳನ್ನು ಆಯೋಜಿಸುವ ಅಗತ್ಯವಿದೆ ಎಂದು ಅವರು ಹೇಳಿದರು.ಈ ವೇಳೆ ಕೆ.ಎಲ್.ಇ. ಸಂಸ್ಥೆಯ ಆಜೀವ ಸದಸ್ಯ ಎಸ್. ಜಿ. ನಂಜಪ್ಪನವರ, ನಾಗರತ್ನ ಚಮಕೇರಿ, ಮಹಾವಿದ್ಯಾಲಯದ ಬೋಧಕ, ಬೋಧಕೇತರ ಸಿಬ್ಬಂದಿ ಸೇರಿದಂತೆ ವಿದ್ಯಾರ್ಥಿ ಇದ್ದರು.


ಖಾನಾಪುರ: ತಾಲೂಕಿನ ಹಂದೂರ-ಹುಲಿಕೊತ್ತಲ ಗ್ರಾಮದ ಸರ್ಕಾರಿ ಪ್ರೌಢಶಾಲೆಯಲ್ಲಿ ಶನಿವಾರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ, ಕೇರವಾಡ ಗ್ರಾಮ ಪಂಚಾಯತಿ ಮತ್ತು ಶಾಲೆಯ ಇಕೋ ಕ್ಲಬ್ ಸಹಯೋಗದಲ್ಲಿ ವಿಶ್ವ ಪರಿಸರ ದಿನದ ಪ್ರಯುಕ್ತ ಶಾಲೆಯ ಆವರಣದಲ್ಲಿ ವಿವಿಧ ಪ್ರಜಾತಿಯ 25 ಸಸಿಗಳ ನಾಟಿ ಕಾರ್ಯಕ್ರಮ ಜರುಗಿತು.ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಯೋಜನಾಧಿಕಾರಿ ಗಣಪತಿ ನಾಯ್ಕ ಇದ್ದರು. ದೈಹಿಕ ಶಿಕ್ಷಕ ಎಲ್ ಎನ್ ಕುರೇರ ನಿರೂಪಿಸಿದರು. ಎಲ್.ಎಫ್ ನದಾಫ ಸ್ವಾಗತಿಸಿದರು. ಪಿ.ಟಿ. ಮೂಲಿಮನಿ ಪ್ರಾಸ್ತಾವಿಕವಾಗಿ ಮಾತನಾಡಿದರು, ಪಿ.ಎಸ್. ಮಾದಾರ ಅಧ್ಯಕ್ಷತೆ ವಹಿಸಿದ್ದರು. ಐ.ಟಿ. ದುರ್ಗದ ವಂದಿಸಿದರು.

ಕಿತ್ತೂರಿನ ನೂತನ ಪಶು ಆಸ್ಪತ್ರೆ ಕಟ್ಟಡಕ್ಕಿಲ್ಲ ಉದ್ಘಾಟನಾ ಭಾಗ್ಯ

ಉಳವಯ್ಯ ಹಿರೇಮಠ

ದಿಗಂತ ವಿಶೇಷ

ಚನ್ನಮ್ಮನ ಕಿತ್ತೂರು: ಸದ್ಯ ಇಕ್ಕಟ್ಟಿನ ಕೊಠಡಿಯಲ್ಲಿ ಪಶು ಆಸ್ಪತ್ರೆ ಕಾರ್ಯ ನಿರ್ವಹಿಸುತ್ತಿದ್ದರೂ ನೂತನ ಕಟ್ಟಡ ನಿರ್ಮಾಣವಾಗಿ ವರ್ಷಗಳು ಉರುಳಿದರೂ ಉದ್ಘಾಟನೆ ಭಾಗ್ಯವಿಲ್ಲದೇ ಬಳಕೆಯ ಮುಂಚೆ ಹಳೆಯದಾಗುತ್ತಿದೆ.

ಐತಿಹಾಸಿಕ ಚನ್ನಮ್ಮಾಜಿಯ ಪಟ್ಟಣದಲ್ಲಿ ನೂತನವಾಗಿ ನಿರ್ಮಿಸಿರುವ ಪಶು ಆಸ್ಪತ್ರೆ ಕಟ್ಟಡ ತಾಲೂಕಿನ ಜಾನುವಾರುಗಳು ಸೇರಿದಂತೆ ಎಲ್ಲ ಸಾಕು ಪ್ರಾಣಿಗಳಿಗೆ ಸುಸಜ್ಜಿತವಾದ ಕಟ್ಟಡದ ಮೂಲಕ ಉತ್ತಮ ಚಿಕಿತ್ಸೆ ದೊರಕಲೆಂದು ಸರ್ಕಾರವು ಆರ್‌ಐಎಫ್ ಟ್ರೆಂಚ್ -28 ಯೋಜನೆಯಡಿಯಲ್ಲಿ ಸುಮಾರು 50.00 ಲಕ್ಷ ರೂ. ವೆಚ್ಚದಲ್ಲಿ ಪಶು ಆಸ್ಪತ್ರೆ ಕಟ್ಟಡವನ್ನು ನಿರ್ಮಿಸಿದರೂ ಉದ್ಘಾಟನೆಗೊಂಡಿಲ್ಲ.

ತಾಲೂಕಿನ ಪಶು ಆಸ್ಪತ್ರೆಗೊಳಪಡುವ ಪಶು ಚಿಕಿತ್ಸಾಲಯಗಳು ಎಂ ಕೆ ಹುಬ್ಬಳ್ಳಿ, ಹುಣಶೀಕಟ್ಟಿ, ಕತ್ರಿದಡ್ಡಿ ಮತ್ತು ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರಗಳಾದ ಅಂಬಡಗಟ್ಟಿ, ಹಿರೇನಂದಿಹಳ್ಳಿ, ಕಾದ್ರೊಳ್ಳಿ, ಕಲಭಾವಿ, ಖೋದಾನಪೂರ, ತುರಮರಿ, ದೇವರಶೀಗಿಹಳ್ಳಿ, ತಿಗಡೋಳ್ಳಿ, ದೇಗಾವ, ಬೈಲೂರ ಮುಂತಾದ ಗ್ರಾಮಗಳಲ್ಲಿರುವ ಚಿಕಿತ್ಸಾ ಕೇಂದ್ರಗಳು ಹೆಚ್ಚಿನ ಚಿಕಿತ್ಸೆಗೆ ತಾಲೂಕಾಸ್ಪತ್ರೆಯನ್ನು ಅವಲಂಬಿಸಬೇಕು. ಇಲ್ಲಿ ಚಿಕಿತ್ಸೆಗೆ ಬೇಕಾಗುವ ಎಲ್ಲ ಔಷಧೋಪಚಾರಗಳನ್ನು ಸಂಗ್ರಹಿಸಲು ಮತ್ತು ವೈದ್ಯರ ಕೊಠಡಿ, ಸಿಬ್ಬಂದಿ ಕೊಠಡಿ, ಪ್ರಯೋಗಾಲಯ ಮುಂತಾದವುಗಳಿಗೆ ವಿಸ್ತಾರವಾದ ಕಟ್ಟಡದ ಅತೀ ಅವಶ್ಯವಾಗಿದ್ದು, ಪಶು ಪಾಲನಾ ಇಲಾಖೆಯವರು ಈ ಕಟ್ಟಡವನ್ನು ಉದ್ಘಾಟಿಸಲು ಮೀನಮೇಷ ಎಣಿಸುತ್ತಿದ್ದಾರೆಂದು ರೈತರಿಂದ ಆಕ್ರೋಶ ವ್ಯಕ್ತವಾಗುತ್ತಿದೆ. ಆದ್ದರಿಂದ ಅಧಿಕಾರಿಗಳು ಈ ಪಶು ಆಸ್ಪತ್ರೆಯನ್ನು ಬೇಗನೆ ಉದ್ಘಾಟಿಸುವ ಕಾರ್ಯ ಕೈಗೊಂಡು ರೈತರಿಗೆ ಅನುಕೂಲ ಒದಗಿಸಬೇಕಾಗಿದೆ.

ಈಗಿರುವ ಹಳೇ ಕಟ್ಟಡದಲ್ಲಿ ಔಷಧೋಪಚಾರ ಸಂಗ್ರಹಿಸಿಕೊಳ್ಳಲು ಮತ್ತು ಸಿಬ್ಬಂದಿಗಳು ಕೂಡ್ರಲು ಸ್ಥಳವೇ ಇಲ್ಲದಂತಾಗಿದೆ ಇಲ್ಲಿ ಹೊರಗಿನಿಂದ ರೈತರು ಆಸ್ಪತ್ರೆಗೆ ಬಂದರೂ ಕಾಲಿಡಲು ಸ್ಥಳವಿಲ್ಲದಾಗಿದೆ. ಇಷ್ಟು ಇಕ್ಕಟ್ಟಿನ ಸ್ಥಿತಿಯಲ್ಲಿ ಪಶು ಆಸ್ಪತ್ರೆಯು ಕಾರ್ಯ ನಿರ್ವಹಿಸುತ್ತಿದ್ದರೂ ಅಧಿಕಾರಿಗಳು ಮೌನಕ್ಕೆ ಜಾರಿದ್ದಾರೆ. ಈ ಸುಸಜ್ಜಿತವಾದ ಕಟ್ಟಡವು ಉತ್ತಮ ಸ್ಥಿತಿಯಲ್ಲಿರುವಾಗ ಜನರಿಗೆ ತಲುಪಿಸುವ ಕಾರ್ಯ ಮಾಡಬೇಕು.


» 50 ಲಕ್ಷ ವೆಚ್ಚದಲ್ಲಿ ನಿರ್ಮಾಣವಾದ ಪಶು ಆಸ್ಪತ್ರೆ ಕಟ್ಟಡ

> ಈ ಪಶು ಆಸ್ಪತ್ರೆಯ ಕಟ್ಟಡದ ಯೋಜನೆ ಪೂರ್ಣಗೊಂಡ ಬಗ್ಗೆ ಪ್ರಮಾಣ ಪತ್ರ ಹಾಗೂ ಗುಣಮಟ್ಟದ ಪರಿಶೀಲನಾ ವರದಿ ಬಂದ ನಂತರ ಶಾಸಕರ ಮೂಲಕ ಉದ್ಘಾಟಿಸಲಾಗುವುದು.
> ■ **ರವಿ ಸಾಲಿಗೌಡರ,** ಉಪ ನಿರ್ದೇಶಕರು ಪಶುಪಾಲನಾ ಇಲಾಖೆ ಬೆಳಗಾವಿ

ಎಂಎಸ್‌ಎಸ್‌ಆರ್ ಪ್ರೌಢ ಶಾಲೆ ಅಭಿವೃದ್ಧಿಗೆ ಶ್ರಮಿಸುವೆ: ಶಾಸಕ

ಬೈಲಹೊಂಗಲ: ಗುಣಮಟ್ಟದ ಶಿಕ್ಷಣದಿಂದ ನಗರಸಭೆ ಸಂಚಾಲಿತ ಶೂರ ಸಂಗೊಳ್ಳಿ ರಾಯಣ್ಣ ಪ್ರೌಢಶಾಲೆ ಮತ್ತು ಎಂಕೆಸಿಆರ್ ಪ್ರೌಢಶಾಲೆ ನಾಡಿನಲ್ಲಿ ಸಂಚಲನ ಮೂಡಿಸಿವೆ ಎಂದು ಶಾಸಕ ಮಹಾಂತೇಶ ಕೌಜಲಗಿ ಹೇಳಿದರು.

ಶೇ.100 ಸಾಧನೆ ಮಾಡಿದ ಪ್ರಯುಕ್ತ ನಗರಸಭೆಯಿಂದ ಶಾಲಾ ಶಿಕ್ಷಕರಿಗೆ ಮತ್ತು ಸಾಧಕ ಮಕ್ಕಳಿಗೆ ಶುಕ್ರವಾರ ಏರ್ಪಡಿಸಿದ್ದ ಸನ್ಮಾನ ಸಮಾರಂಭದ ಅಧ್ಯಕ್ಷತೆವಹಿಸಿ ಅವರು ಮಾತನಾಡಿದರು. ನಾನು ಕಲಿತ ಈ ಶಾಲೆಯಲ್ಲಿ ಮಕ್ಕಳ ಕಲರವ ನೋಡಿ ಸಂತೋಷವಾಗಿದೆ ಎಂದರು.

ಪೌರಾಯುಕ್ತೆ ಭಾಗ್ಯಶ್ರೀ ಹುಗ್ಗಿ ಪ್ರಾಸ್ತಾವಿಕವಾಗಿ ಮಾತನಾಡಿದರು.

ಮುಖ್ಯ ಅತಿಥಿಗಳಾಗಿ ಪುರಸಭೆ ಮಾಜಿ ಅಧ್ಯಕ್ಷ ಬಸವರಾಜ ಜನ್ಮಟ್ಟಿ, ಮಾಜಿ ಉಪಾಧ್ಯಕ್ಷ ಬುಡ್ಡೇಸಾಬ ಶಿರಸಂಗಿ, ಅರ್ಜುನ ಕಲಕುಟಕರ, ಉಳವಪ್ಪ ಬಡ್ಡಿಮನಿ, ಹೇಮಲತಾ ಹಿರೇಮಠ, ಲಕ್ಷ್ಮೀ ಬಡ್ಲಿ, ವಾಣಿಶ್ರೀ ಪತ್ತಾರ, ಜಗದೀಶ ಜಂಬಗಿ, ಪ್ರಕಾಶ ಕಲ್ಲೋಳ್ಳಿ, ಅಂಬಿಕಾ ಕೋಟಬಾಗಿ, ದಿಲಶಾದಬಿ ನದಾಫ, ಶ್ರೀದೇವಿ ದೇವಲಾಪೂರ ಆಗಮಿಸಿದ್ದರು.

ಇದೇ ಸಂದರ್ಭದಲ್ಲಿ ಶಾಲೆಯಿಂದ ಶಾಸಕ ಮಹಾಂತೇಶ ಕೌಜಲಗಿ ಹಾಗೂ ಪೌರಾಯುಕ್ತೆ ಭಾಗ್ಯಶ್ರೀ ಹುಗ್ಗಿ ಅವರನ್ನು ಸನ್ಮಾನಿಸಲಾಯಿತು.

ಸಂದೀಪ ಅಗಸಿಮುಂದಿನ (ಪ್ರಥಮ), ಸಂದೇಶ ಅಸುಂಡಿ (ದ್ವಿತೀಯ), ಅಶ್ವಿನಿ ಸುಣಗಾರ ಮತ್ತು ಪ್ರೀತಿ ಬಡಿಗೇರ (ತೃತೀಯ) ಇವರನ್ನು ನಗರಸಭೆಯಿಂದ ಸನ್ಮಾನಿಸಲಾಯಿತು.

ರಾಯಣ್ಣ ಪ್ರೌಢಶಾಲೆ ಮುಖ್ಯಾಧ್ಯಾಪಕ ಎಂ.ಸಿ.ಹಂಗರಕಿ, ಎಂಕೆಸಿಆರ್ ಪ್ರೌಢಶಾಲೆ ಮುಖ್ಯಾಧ್ಯಾಪಕ ತಮ್ಮಣ್ಣ ಬಾಗೇವಾಡಿ, ನಗರಸಭೆ ಸಿಬ್ಬಂದಿಗಳಾದ ಬಿ.ಐ.ಗುಡಿಮನಿ, ಬಸನಗೌಡ ಪಾಟೀಲ, ಆರ್.ಎಸ್.ಹಿಟ್ಟಣಗಿ, ಇಂಜನೀಯರ್ ಗೌರಿಶಂಕರ ಮಹಾಳಂಕ, ಸುಪ್ರೀಮ್ ಪಾಟೀಲ, ಶಿಕ್ಷಕರಾದ ಬಾಳೇಶ ಬೋರಗಲ್, ಮಹಾದೇವಿ ಅಂಗಡಿ, ಪ್ರಕಾಶ ಹಸರಂಗಿ, ಗೀತಾ ಸೊಲಬನ್ನವರ, ಮಂಜು ಗರಗದ ಹಾಗೂ ಶಿಕ್ಷಕರು ಉಪಸ್ಥಿತರಿದ್ದರು. ನಗರಸಭೆ ಮ್ಯಾನೇಜರ್ ಎಂ.ಐ.ಕುಟ್ರಿ ನಿರೂಪಿಸಿದರು.



ಶೀಘ್ರದಲ್ಲಿಯೇ ಪುರವಾಸಿಗಳ ಸಭೆ ಕರೆದು ಚರ್ಚೆ:ರಮೇಶ ಕತ್ತಿ


» ಐತಿಹಾಸಿಕ ಗತ ವೈಭವ ಮರಳಿ ತರಲು ಕ್ರಮ

ಹುಕ್ಕೇರಿ: ಪಟ್ಟಣದ ಐತಿಹಾಸಿಕ ಗತ ವೈಭವ ಮರಳಿ ತರುವ ನಿಟ್ಟಿನಲ್ಲಿ ಎಲ್ಲರ ಸಹಕಾರ ಅವಶ್ಯ. ಸಾರ್ವಜನಿಕರ ಸಹಕಾರದ ಜತೆಗೆ ಅಧಿಕಾರಿಗಳ ಇಚ್ಛಾಶಕ್ತಿಯು ಅಗತ್ಯ ಆ ನಿಟ್ಟಿನಲ್ಲಿ ಶ್ರಮಿಸಲು ಶೀಘ್ರದಲ್ಲಿ ಪುರವಾಸಿಗಳ ಸಭೆ ಕರೆದು ಚರ್ಚಿಸುವುದಾಗಿ ಮಾಜಿ ಸಂಸದರು, ಡಿಸಿಸಿ ಬ್ಯಾಂಕ್ ನಿರ್ದೇಶಕ ರಮೇಶ ಕತ್ತಿ ಹೇಳಿದರು.

ಶನಿವಾರ ತಾಲೂಕಿನ ಬೆಲ್ಲದ ಬಾಗೇವಾಡಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮನೆ ಮತ್ತು ನಿವೇಶನಗಳ ಉತಾರಗಳನ್ನು ಪಡೆಯಲು ಹಾಗೂ ತಮ್ಮ ತೆರಿಗೆ ತುಂಬಲು ಮಾಹಿತಿ

ಕೇಳಲು ಬಂದಾಗ ಸರಿಯಾಗಿ ಅವರಿಗೆ ಸ್ಪಂದಿಸದೆ ಉಡಾಫೆ ಉತ್ತರ ನೀಡುವ ಪ್ರವೃತ್ತಿ ಪುರಸಭೆ ಅಧಿಕಾರಿಗಳು ಸಿಬ್ಬಂದಿಗಳು ಮಾಡುತ್ತಿದ್ದಾರೆಂದು ಮುಖಂಡರು ಮತ್ತು ಸಾರ್ವಜನಿಕರು ನನ್ನ ಬಳಿ ಹೇಳಿಕೊಂಡಿದ್ದರು. ಇದರಿಂದ ಅಧಿಕಾರಿಗಳಿಗೆ ಇಲ್ಲಿಯವರೆಗೆ ಬಂದ ಅರ್ಜಿಗಳ ಮಾಹಿತಿ ಅವರಿಗೆ ನೀಡಿದ ಉತ್ತರದ ವಿವರಣೆ ಹಾಗೂ ಪಟ್ಟಣದಲ್ಲಿ ಇರುವ ಸಮಸ್ಯೆಗಳ ಮಾಹಿತಿ ಒದಗಿಸುವಂತೆ ಹಲವಾರು ಬಾರಿ ತಿಳಿಸಿದರು. ಅದಕ್ಕೆ ಸರಿಯಾದ ಪ್ರತಿಕ್ರಿಯೆ ನೀಡಿರಲಿಲ್ಲ

ಇದರಿಂದ ಬೇಸತ್ತು ಸಂಬಂಧಿಸಿದ ಕೆಲ ಅಧಿಕಾರಿಗಳನ್ನು ಕರೆಸಿ ಎಚ್ಚರಿಕೆ ನೀಡಲಾಗಿದೆ ಇನ್ನು ಮುಂದೆ ಇಂತಹ ಘಟನೆಗಳು ನಡೆದರೆ ನಿಮ್ಮನ್ನು ಅಮಾನತ್ತುಗೊಳಿಸಲು ಶಿಫಾರಸು

ಮಾಡಬೇಕಾಗುತ್ತದೆ ಹಾಗೂ ಅಧಿಕಾರ ಇರುವುದು ಜನರ ಸೇವೆಗಾಗಿ ಎಂಬುದು

ಅರಿತು ಕೊಂಡಿರಬೇಕೆಂದು ಎಚ್ಚರಿಸಲಾಗಿದೆ. ಆದಾಗ್ಯೂ ಕೆಲವರು ತಮ್ಮ ತಪ್ಪುಗಳನ್ನು ತಿದ್ದಿಕೊಳ್ಳುತ್ತಿಲ್ಲ ಎಂಬ ಸಂಗತಿ ನನ್ನ ಗಮನಕ್ಕೆ ಬಂದಿದೆ. ಈ ವಿಷಯವನ್ನು ಶಾಸಕ ನಿಖಿಲ ಕತ್ತಿ ಅವರ ಗಮನಕ್ಕೆ ತಂದಿದ್ದು ಅವರುಈಗಾಗಲೇ ಎರಡು ಬಾರಿ ಅಧಿಕಾರಿಗಳಿಗೆ ಎಚ್ಚರಿಕೆ ನೀಡಿದ್ದಾರೆ. ಮುಂಬರುವ ದಿನಗಳಲ್ಲಿ ಜಿಲ್ಲಾಡಳಿತದ ಗಮನಕ್ಕೂ ತಂದು ಪುರಸಭೆ ಆಡಳಿತವನ್ನು ಸರಿದಾರಿಗೆ ತರಲು ಶ್ರಮಿಸುತ್ತೇನೆ ಎಂದರು.

ಬೀದಿ ವ್ಯಾಪಾರಸ್ಥರ ಸಂಪೂರ್ಣ ವಿವರವನ್ನು ಸಂಗ್ರಹಿಸಿ ಅವರಿಗೆ ಜನ ಸಂಚಾರಕ್ಕೆ ತೊಂದರೆ ಆಗದಂತೆ ವ್ಯಾಪಾರ ನಿರ್ವಹಿಸಲು ಅನುಕೂಲ ಕಲ್ಪಿಸಬೇಕು. ಹೊಸ ಬಸ್ ನಿಲ್ದಾಣದ ಬಳಿಯ ಅಂಗಡಿಕಾರರು ಫುಟಪಾತ್ ಅತ್ರಮಿಸಿಕೊಂಡು ವಾಹನ ಸಂಚಾರ ಮತ್ತು ಜನಸಂಚಾರಕ್ಕೆ ತೊಂದರೆ ಮಾಡುತ್ತಿದ್ದಾರೆ. ಈ ಸಂಗತಿಯನ್ನು ಪುರಸಭೆ ಮತ್ತು ಪೊಲೀಸ್ ಇಲಾಖೆ ಜಂಟಿಯಾಗಿ ಪರಿಹರಿಸಬೇಕು. ವಾಹನ ನಿಲುಗಡೆಗೆ ಸ್ಥಳಗಳನ್ನು ಗುರುತಿಸಿ ವಾಹನ ದಟ್ಟಣೆಗೆ ಪರಿಹಾರ ಕಲ್ಪಿಸಬೇಕು ಎಂದರು.

ವಿದ್ಯುತ್ ಶಕ್ತಿ ಖಾಸಗೀಕರಣಗೊಳಿಸದಿರಲು ಒತ್ತಾಯಿಸಿ ಮನವಿ



ಅಥಣಿ: ವಿದ್ಯುತ್ ಶಕ್ತಿಯನ್ನು ಖಾಸಗಿಕರಣ ಮಾಡಬಾರದು. ಇದರಿಂದ ರೈತರ ಮತ್ತು ಅನೇಕ ಕಾರ್ಮಿಕರ ಬದುಕು ಅತಂತ್ರವಾಗುತ್ತದೆ. ಯಾವುದೇ ಕಾರಣಕ್ಕೂ ಇದನ್ನ ಖಾಸಗಿಕರಣಗೊಳಿಸಬಾರದು ಎಂದು ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆಯ ಅಧ್ಯಕ್ಷ ಮಹಾದೇವ ಮಡಿವಾಳ ರಾಜ್ಯ ಸರ್ಕಾರವನ್ನ ಆಗ್ರಹಿಸಿದರು.

ಅವರು ಇಲ್ಲಿನ ಮಿನಿ ವಿಧಾನಸೌಧ ಕಾರ್ಯಾಲಯದ ಮುಂದೆ ಪ್ರತಿಭಟನೆ ನಡೆಸಿ ತಹಶೀಲ್ದಾರ್ ಮೂಲಕ ರಾಜ್ಯ ಸರ್ಕಾರಕ್ಕೆ ಮನವಿ ಪತ್ರ ಸಲ್ಲಿಸಿದರು. ಈ ವೇಳೆ ಮಾತನಾಡಿದ ಅವರು, ಸಂಕಷ್ಟದಲ್ಲಿರುವ ರೈತರಿಗೆ ಸರ್ಕಾರ ಉಚಿತ ವಿದ್ಯುತ್ ನೀಡುವ ಬದಲು ಖಾಸಗಿಕರಣ ಮಾಡುತ್ತಿರುವುದು ಗಾಯದ ಮೇಲೆ ಬರೆ ಎಳೆದಂತೆ. ಸಿಎಂ ಡಿಕೆ ಶಿವಕುಮಾರ್ ಹಾಗೂ ಇಂಧನ ಸಚಿವರಾದ ಕೆ ಜಿ ಜಾರ್ಜ್ ಅವರು ಹೆಸ್ಕಾಂ ಸಂಸ್ಥೆಯನ್ನು ಟಾಟಾ ಪವರ್ ಕಂಪನಿಗೆ ವಹಿಸುವ ಮೂಲಕ ಖಾಸಗಿಕರಣ ಗೊಳಿಸುತ್ತಿರುವಕ್ಕೆ ನಮ್ಮದು ವಿರೋಧವಿದೆ. ರಾಜ್ಯ ಸರ್ಕಾರ ಈ ರೈತ ವಿರೋಧಿ ನೀತಿಯನ್ನ ಕೂಡಲೇ ಕೈಬಿಡಬೇಕು ಎಂದು ಆಗ್ರಹಿಸಿದರು.

ಈ ಸಂದರ್ಭದಲ್ಲಿ ರೈತ ಸಂಘದ ಮುಖಂಡರಾದ ಸಂಗಪ್ಪ ಕರಿಗಾರ, ರಮೇಶ ಕುಂಬಾರ, ಬಾಹುಬಲಿ ಸಂಕಣ್ಣವರ, ಕಿರಣ್ ಮೀಸಾಳ, ದುಂಡಪ್ಪ ತನಂಗಿ, ಮಹದೇವ ಕುಚುನೂರ, ಲಕ್ಕಪ್ಪ ಪೂಜಾರಿ, ಜಗದೀಶ ಮರೆಗುದ್ದಿ, ಶಿವಾನಂದ ಮಗದುಮ್ಮ, ನಿಂಗಪ್ಪ ಉದ್ದಾನಗೋಳ, ಹನುಮಂತ ಮಹೇಶವಾಡಗಿ, ಮಹದೇವ್ ಹೊಸಮನಿ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಯುವಕರಲ್ಲಿ ಪರಿಸರ ಜಾಗೃತಿ ಮೂಡಿಸಿ: ಕಲ್ಮಠದ ಶ್ರೀ

ಚನ್ನಮ್ಮನ ಕಿತ್ತೂರು: ಪರಿಸರ ರಕ್ಷಣೆಯೇ ಸುಸ್ಥಿರ ಅಭಿವೃದ್ಧಿಗೆ ಅಡಿಗಲ್ಲಾಗಿದ್ದು, ಇದನ್ನು ಉಳಿಸಿ ಯುವಕರಲ್ಲಿ ಜಾಗೃತಿ ಮೂಡಿಸುವದು ಅವಶ್ಯಕವಾಗಿದೆ ಎಂದು ರಾಜಗುರು ಸಂಸ್ಥಾನ ಕಲ್ಮಠದ ಮಡಿವಾಳ ರಾಜಯೋಗೀಂದ್ರ ಸ್ವಾಮೀಜಿ ಹೇಳಿದರು.

ರಾಜಗುರು ಸಂಸ್ಥಾನ ಕಲ್ಮಠದಲ್ಲಿ ನಡೆದ ತಾಲೂಕು ಕನ್ನಡ ಸಾಹಿತ್ಯ ಪರಿಷತ್ತು , ರಾಜಗುರು ಶಿಕ್ಷಣ ಸಂಸ್ಥೆ ಮತ್ತು ಧಾರವಾಡದ ಕರಕುಶಲ ಸೇವಾಕೇಂದ್ರಗಳ ಸಂಯುಕ್ತ ಆಶ್ರಯದಲ್ಲಿ ವಿಶ್ವ ಪರಿಸರ ದಿನಾಚರಣೆಯ ಕಾರ್ಯಕ್ರಮದ ಸಾನಿಧ್ಯ ವಹಿಸಿ ಮಾತನಾಡಿ ಪರಿಸರ ರಕ್ಷಣೆ ಕೇವಲ ಒಂದು ದಿನಕ್ಕೆ ಸೀಮಿತವಾಗಿರದೆ ನಿರಂತರವಾಗಿ ಆದ್ಯತೆ ನೀಡುವದಾಗಬೇಕೆಂದು ಆಶೀರ್ವದಿಸಿದರು. ಕಸಾಪ ಅಧ್ಯಕ್ಷ ಡಾ.ಎಸ್.ಬಿ.ದಳವಾಯಿ, ಧಾರವಾಡದ ಕರಕುಶಲ ಸೇವಾಕೇಂದ್ರದ ಅಧಿಕಾರಿ ಕಿರಣ, ಮುಖ್ಯ ಶಿಕ್ಷಕಿ ರಾಜೇಶ್ವರಿ ಕಳಸಣ್ಣವರ ಮಾತನಾಡಿದರು. ಕರಕುಶಲ ಸೇವಾಕೇಂದ್ರದವರು ವಿದ್ಯಾರ್ಥಿಗಳಿಗೆ ಪರಿಸರ ರಕ್ಷಣೆ ಕುರಿತು ಪ್ರಬಂಧ ಸ್ಪರ್ಧೆಯನ್ನು ಏರ್ಪಡಿಸಿ ವಿಜೇತರಿಗೆ ಪ್ರಮಾಣ ಪತ್ರಗಳ ಜೊತೆಗೆ ಸಸಿಗಳನ್ನು ವಿತರಿಸಿದರು. ಶಿಕ್ಷಕರು, ವಿದ್ಯಾರ್ಥಿಗಳು ಮತ್ತು ಕರಕುಶಲ ಸೇವಾ ಕೇಂದ್ರದವರು ಉಪಸ್ಥಿತರಿದ್ದರು. ಕರಕುಶಲ ಸೇವಾಕೇಂದ್ರದ ಸುಶಾಂತ ಸ್ವಾಗತಿಸಿ ನಿರೂಪಿಸಿದರು, ರಾಜು ಬೋಗುರ ವಂದಿಸಿದರು.



ದಿ.ಬಿ.ಆರ್. ಸಂಗಪ್ಪಗೋಳ ಕೊಡುಗೆ ಅಪಾರ

ಚಿಕ್ಕೋಡಿ: ರಾಜ್ಯಕ್ಕೆ ಮಾದರಿಯಾದ ಮಜಲಟ್ಟಿಯ ಸರ್ಕಾರಿ ಪಿಯು ಕಾಲೇಜಿನ ಸರ್ವಾಂಗೀಣ ಅಭಿವೃದ್ಧಿಗೆ ದಿ.ಬಿ ಆರ್ ಸಂಗಪ್ಪಗೋಳ ಕೊಡುಗೆ ಸಾಕಷ್ಟಿದೆ. ಅವರು ನೆಟ್ಟ ಸಸಿಗೆ ನೀರು, ಗೊಬ್ಬರ ಹಾಕಿ ಬೆಳೆಸುವ ಹೊಣೆಗಾರಿಕೆಯನ್ನು ತಾನೂ ಹಾಗೂ ನಿವೃತ್ತ ಪ್ರಾಚಾರ್ಯ ಆನಂದ ಕೋಳಿ ಸಮರ್ಥವಾಗಿ ನಿಭಾಯಿಸಿದ ಹೆಮ್ಮೆ ಇದೆ ಎಂದು ಶಾಸಕ ದುರ್ಯೋಧನ ಐಹೊಳೆ ಹೇಳಿದರು.

ತಾಲೂಕಿನ ಮಜಲಟ್ಟಿ ಗ್ರಾಮದ ಸರ್ಕಾರಿ ಪಿಯು ಕಾಲೇಜಿನ ಆವರಣದಲ್ಲಿ ಶನಿವಾರ ಹಮ್ಮಿಕೊಂಡಿದ್ದ ನಿವೃತ್ತ ಪ್ರಾಚಾರ್ಯರ ಸತ್ಕಾರ, ಪ್ರಥಮ ಪಿಯುಸಿ ವಿದ್ಯಾರ್ಥಿಗಳ ಸ್ವಾಗತ, ಸಾಧಕ ವಿದ್ಯಾರ್ಥಿಗಳಿಗೆ ಲ್ಯಾಪಟಾಪ್ ವಿತರಣಾ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಕಳೆದ 8 ವರ್ಷಗಳಲ್ಲಿ ಮಜಲಟ್ಟಿಯ ಸರ್ಕಾರಿ ಪಿಯು ಕಾಲೇಜಿನಲ್ಲಿ ಆನಂದ ಕೋಳಿ ಅವರು ಪ್ರಾಚಾರ್ಯರಾಗಿ ಅನನ್ಯ ಕೊಡುಗೆ ನೀಡಿದ್ದಾರೆ. ಇವರ ಅವಧಿಯ ಮೂರು ವರ್ಷಗಳಲ್ಲಿ ರಾಜ್ಯ ಮಟ್ಟದಲ್ಲಿ ವಿದ್ಯಾರ್ಥಿಗಳು ರ್‍ಯಾಂಕ್ ಪಡೆದುಕೊಂಡು ಕಾಲೇಜಿನ ಕೀರ್ತಿ ಹೆಚ್ಚಿಸಿದ್ದಾರೆ ಎಂದು ಶಾಸಕ ದುರ್ಯೋಧನ ಐಹೊಳೆ ಹರ್ಷ ವ್ಯಕ್ತಪಡಿಸಿದರು.

ನಿವೃತ್ತ ಪ್ರಾಚಾರ್ಯ ಆನಂದ ಕೋಳಿ ಅವರು ಸತ್ಕಾರವನ್ನು ಸ್ವೀಕರಿಸಿ ಮಾತನಾಡುತ್ತಾ, ತಾಯಿ ತನಗೆ ನೀಡಿದ ಸಂಸ್ಕಾರವೇ ನನ್ನ ಏಳ್ಗೆಗೆ ಕಾರಣವಾಗಿದೆ. 33 ವರ್ಷಗಳ ಸೇವಾವಧಿಯಲ್ಲಿ ಯಾರ ವಿಶ್ವಾಸಕ್ಕೂ ಧಕ್ಕೆ ತಂದಿಲ್ಲ. ವಿದ್ಯಾರ್ಥಿಗಳು, ಉಪನ್ಯಾಸಕರು, ಪಾಲಕರು ತನ್ನ ಮೇಲೆ ಇಟ್ಟಿರುವ ಪ್ರೀತಿ, ವಿಶ್ವಾಸದ ಋಣ ತೀರಿಸಲು ಸಾಧ್ಯವೇ ಇಲ್ಲ. ಶಾಸಕ ದುರ್ಯೋಧನ ಐಹೊಳೆ ಅವರ ಅಪೇಕ್ಷೆಯಂತೆ ನಿವೃತ್ತಿಯಾದರೂ ಸಂಬಳ ರಹಿತವಾಗಿ ಕಾಲೇಜಿನಲ್ಲಿ ಸೇವೆ ಸಲ್ಲಿಸುವೆ ಎಂದರು.

ನಿವೃತ್ತ ಡಿಡಿಪಿಐ ಪಾಂಡುರಂಗ ಭಂಡಾರಿ, ಪ್ರಭಾರ ಪ್ರಾಚಾರ್ಯ ವಿಶ್ವನಾಥ ಚೌಗಲಾ, ಜಿಲ್ಲಾ ಪಂಚಾಯಿತಿ ಸದಸ್ಯ ಮಹೇಶ ಭಾತೆ, ಉಪನ್ಯಾಸಕಿ ಸುಜಾತಾ ಪಾಟೀಲ ಮುಂತಾದವರು ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದರು.

ಕಾರ್ಯಕ್ರಮದಲ್ಲಿ ನಿವೃತ್ತ ಪ್ರಾಚಾರ್ಯ ಆನಂದ ಕೋಳಿ ಹಾಗೂ ಕಲಾವತಿ ಕೋಳಿ ದಂಪತಿಯನ್ನು ಉಪನ್ಯಾಸಕರು, ವಿದ್ಯಾರ್ಥಿಗಳು ಹಾಗೂ ಅಭಿಮಾನಿಗಳ ಬಳಗದಿಂದ ವಿಶೇಷವಾಗಿ ಸತ್ಕರಿಸಿ ಅಭಿನಂದಿಸಲಾಯಿತು.

ಈ ಸಂದರ್ಭದಲ್ಲಿ ಪ್ರಭಾರ ಡಿಡಿಪಿಯು ಬಸವರಾಜ ಹಾದಿಮನಿ, ಎನ್ ವಿ ಶಿರಗಾಂವಕರ, ಸದಾಶಿವ ಘೋರ್ಪಡೆ, ವಿಜಯ ಕೋತಿವಾಲೆ, ರುದ್ರಪ್ಪ ಸಂಗಪ್ಪಗೋಳ, ವೀಣಾ ಮನಗೂಳಿ, ಚಿಕ್ಕೋಡಿ ಜಿಲ್ಲಾ ಸರ್ಕಾರಿ ನೌಕರರ ಅಧ್ಯಕ್ಷ ಬಿ ಎ ಕುಂಬಾರ, ಉಪ ಪ್ರಾಚಾರ್ಯ ಜೆ ಪಿ ತಂಗಡಿ, ದುಂಡಪ್ಪ ಬೆಂಡವಾಡೆ, ರಾಜು ನಾಯಿಕ, ವಿ ಬಿ ಕೋಳದೂರ, ಪಿ ಕೆ ಅದೂಕೆ, ರವೀಂದ್ರ ಕಾಗಲೆ, ಶಂಕರ ಪವಾರ, ಎಂ ಎಲ್ ನಾಯಕ, ಸಂತ್ರಾಮ ಕುಂಡ್ರೂಕ ಮುಂತಾದವರು ಇದ್ದರು.



ತಾಯಿ ಹೆಸರಿನಲ್ಲಿ ಒಂದು ಸಸಿ ಅಭಿಯಾನ

ಯರಗಟ್ಟಿ: ವಿಶ್ವ ಪರಿಸರ ದಿನಾಚರಣೆಯ ಅಂಗವಾಗಿ ಪ್ರಧಾನಿ ನರೇಂದ್ರ ಮೋದಿ ಅವರ ಒಂದು ಸಸಿ ತಾಯಿ ಹೆಸರಿನಲ್ಲಿ (ಏಕ್ ಪೇಡ್ ಮಾಕೆ ನಾಮ್) ಅಭಿಯಾನದಡಿ ಸಮೀಪದ ರೈನಾಪೂರ ಗ್ರಾಮದಲ್ಲಿ ಬಿಜೆಪಿ ಯುವ ಮೋರ್ಚಾ ಸಹಭಾಗಿತ್ವದಲ್ಲಿ ಮೌನೇಶ್ವರ ಮಠದ ಆವರಣದಲ್ಲಿ ಸಸಿ ನೆಡುವ ಕಾರ್ಯಕ್ರಮವನ್ನು ಅರ್ಥಪೂರ್ಣವಾಗಿ ಜರುಗಿತು.

ತಾಲೂಕು ಬಿಜೆಪಿ ಯುವ ಮೋರ್ಚಾ ಅಧ್ಯಕ್ಷ ಕೃಷ್ಣಮೂರ್ತಿ ತೋರಗಲ್ಲ ಅವರು ಮಾತನಾಡಿ, ಪರಿಸರವು ಮಾನವ ಜೀವನದ ಅವಿಭಾಜ್ಯ ಅಂಗವಾಗಿದ್ದು, ಪ್ರಕೃತಿಯ ಸಂರಕ್ಷಣೆ ಪ್ರತಿಯೊಬ್ಬ ನಾಗರಿಕನ ಕರ್ತವ್ಯವಾಗಿದೆ ಎಂದು ಹೇಳಿದರು.

ಮರ, ನೀರು, ಗಾಳಿ ಹಾಗೂ ಜೀವಜಗತ್ತಿನ ರಕ್ಷಣೆ ಮೂಲಕವೇ ಮುಂದಿನ ಪೀಳಿಗೆಗೆ ಉತ್ತಮ ಪರಿಸರವನ್ನು ನೀಡಲು ಸಾಧ್ಯವಾಗುತ್ತದೆ ಎಂದು ತಿಳಿಸಿದರು.

ಇಂದು ಜಗತ್ತು ಅರಣ್ಯ ನಾಶ, ಪ್ಲಾಸ್ಟಿಕ್ ಮಾಲಿನ್ಯ, ವಾಯು ಮಾಲಿನ್ಯ ಹಾಗೂ ಹವಾಮಾನ ವೈಪರಿತ್ಯದಂತಹ ಗಂಭೀರ ಸವಾಲುಗಳನ್ನು ಎದುರಿಸುತ್ತಿದೆ. ಇಂತಹ ಸಂದರ್ಭದಲ್ಲಿ ಪ್ರತಿಯೊಬ್ಬರೂ ಕನಿಷ್ಠ ಒಂದು ಸಸಿಯನ್ನು ನೆಟ್ಟು ಅದರ ಪೋಷಣೆ ಮಾಡುವ ಸಂಕಲ್ಪ ಕೈಗೊಳ್ಳಬೇಕು. ಜೊತೆಗೆ ಪ್ಲಾಸ್ಟಿಕ್ ಬಳಕೆಯನ್ನು ಕಡಿಮೆ ಮಾಡುವುದು, ಪರಿಸರ ಸ್ವಚ್ಛತೆಯನ್ನು ಕಾಪಾಡುವುದು ಹಾಗೂ ಪ್ರಕೃತಿ ಸಂಪನ್ಮೂಲಗಳ ಸಂರಕ್ಷಣೆಗೆ ಮುಂದಾಗಬೇಕು ಎಂದರು.

ವಿಶ್ವ ಪರಿಸರ ದಿನಾಚರಣೆಯ ಅಂಗವಾಗಿ ನಡೆದ ಈ ಕಾರ್ಯಕ್ರಮದಲ್ಲಿ ಗ್ರಾಮದಲ್ಲಿ ಪರಿಸರ ಜಾಗೃತಿ ಮೂಡಿಸುವ ಉದ್ದೇಶದಿಂದ ಸಸಿ ನೆಡುವಿಕೆ ಹಾಗೂ ಪರಿಸರ ಸಂರಕ್ಷಣೆಯ ಮಹತ್ವದ ಕುರಿತು ವಿಶೇಷ ಅರಿವು ಮೂಡಿಸಲಾಯಿತು.

ಈ ಸಂದರ್ಭದಲ್ಲಿ ಶ್ರದ್ಧಾನಂದ ಆಶ್ರಮದ ಮಾತೋಶ್ರೀ ಮುದ್ದಮ್ಮತಾಯಿ, ಮಾತೋಶ್ರೀ ಪಾರ್ವತೆಮ್ಮತಾಯಿ, ಬಿಜೆಪಿ ಹಿರಿಯ ಮುಖಂಡ ವೆಂಕಟೇಶ ದೇವರಡ್ಡಿ, ತಾಲೂಕಾ ಬಿಜೆಪಿ ಮಹಾಶಕ್ತಿ ಕೇಂದ್ರ ಅಧ್ಯಕ್ಷ ಚೇತನ ಜಕಾತಿ, ಬಿಜೆಪಿ ಜಿಲ್ಲಾ ಯುವ ಮೋರ್ಚಾ ಜಿಲ್ಲಾಪಾಧ್ಯಕ್ಷ ಆನಂದ ಬಾಗೋಡಿ, ಸದಾನಂದ ಪಾಟೀಲ, ಗೋಪಾಲ ಕಡೇಮನಿ, ಚಂದ್ರು ಅಳಗೋಡಿ, ಗೋವಿಂದ ಕಡೇಮನಿ, ಮಹಾಂತೇಶ ಹೂಗಾರ, ಮುದಕಪ್ಪ ಜೂಗನವರ, ಫಕ್ಕೀರಪ್ಪ ಹೊಸಮನಿ, ಈರಣ್ಣಾ ತೋರಣಗಟ್ಟಿ, ಸುಭಾಷ ಜೂಗನವರ, ಸಂಜುಕುಮಾರ ಸಿದ್ನಾಳ, ವಿಠ್ಠಲ ರೋಗಿ ಸೇರಿದಂತ ಅನೇಕರು ಇದ್ದರು.



ಕಿರುಸುದ್ದಿ

ಉಮಾಶ್ರೀಗೆ ಸಚಿವ ಸ್ಥಾನ ನೀಡಲು ಒತ್ತಾಯ



ಕಮತಗಿ: ಮಾಜಿ ಸಚಿವೆ ಮತ್ತು ಹಿರಿಯ ನಟಿ, ಎಂಎಲ್ ಸಿ ಉಮಾಶ್ರೀ ಅವರಿಗೆ ಸಚಿವ ಸ್ಥಾನ ನೀಡಬೇಕು ಎಂದು ನೇಕಾರ ಸಮುದಾಯವು ಸರ್ಕಾರವನ್ನು ಒತ್ತಾಯಿಸಿದೆ. ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಸಮುದಾಯದ ರಾಜ್ಯ ಯುವ ಮುಖಂಡ ವಿಜಯಕುಮಾರ ಭಾಪ್ರಿ, ನೇಕಾರ ಸಮುದಾಯವು ರಾಜ್ಯದಲ್ಲಿ ಗಣನೀಯ ಜನಸಂಖ್ಯೆ ಹೊಂದಿದ್ದು, ತಮಗೆ ರಾಜಕೀಯವಾಗಿ ಸೂಕ್ತ ಪ್ರಾತಿನಿಧ್ಯ ಸಿಗಬೇಕು ಎಂಬುದು ಅವರ ಪ್ರಮುಖ ಬೇಡಿಕೆಯಾಗಿದೆ. ಹೀಗಾಗಿ ಹಿಂದುಳಿದ ನೇಕಾರ ಸಮುದಾಯದ ಉಮಾಶ್ರೀ ಅವರು ಈ ಹಿಂದೆ ಸಚಿವರಾಗಿ ಯಶಸ್ವಿಯಾಗಿ ಕಾರ್ಯನಿರ್ವಹಿಸಿದ ಅನುಭವ ಹೊಂದಿದ್ದಾರೆ. ಉಮಾಶ್ರೀ ಅವರ ಹೆಸರನ್ನು ಎರಡನೇ ಪಟ್ಟಿಯಲ್ಲಿ ಪ್ರಮುಖ ಇಲಾಖೆ ಸಚಿವ ಸ್ಥಾನಕ್ಕೆ ಎಐಸಿಸಿ ಸೇರಿದಂತೆ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ ಅವರು ಪರಿಗಣಿಸಬೇಕೇಂದು ವಿಜಯಕುಮಾರ ಭಾಪ್ರಿ ಒತ್ತಾಯಿಸಿದ್ದಾರೆ.

ಎಂ.ಐ.ಮುಜಾವರಗೆ ಸನ್ಮಾನ



ಮಹಾಲಿಂಗಪುರ: ಸಮೀಪದ ಸೈದಾಪುರ ಕ್ರಾಸ್‌ನ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ನಂ1 ಶಾಲೆಯ ಮುಖ್ಯೋಪಾಧ್ಯಾಯ ಐ.ಎ.ಮುಜಾವರ ನಿವೃತ್ತಿ ಹೊಂದಿದ ಪ್ರಯುಕ್ತ ಬೀಳ್ಕೊಡುಗೆ ಸಮಾರಂಭ ಜರುಗಿತು. ನಿವೃತ್ತ ಶಿಕ್ಷಕ ಎ.ಐ.ಮುಜಾವರ ಇವರನ್ನು ಸನ್ಮಾನಿಸಲಾಯಿತು. ಪ್ರಕಾಶ ಕುರಿ, ಮಲಗೌಡ ಪಾಟೀಲ, ಪಿಡಿಒ ಸಿ.ಎಸ್.ಹಿರೇಕುರುಬರ, ವಾಲಿಕಾರ, ಮಹೇಶ, ಬಂದೇನವಾಜ್ ಕುಡಚಿ, ಮಹಾಲಿಂಗಪ್ಪ ಬಿಸನಾಳ ಹಾಗೂ ಗುರುವೃಂದ, ಅಡಿಗೆ ಸಿಬ್ಬಂದಿ ಇದ್ದರು.

ಗಿಡಗಳಿಗೆ ನೀರೆರೆದು ಗಮನಸೆಳೆದ ಕಂದಮ್ಮಗಳು



ಇಳಕಲ್: ಪರಿಸರ ರಕ್ಷಣೆ ಎನ್ನುವುದು ಕೇವಲ ಭಾಷಣಕ್ಕೆ ಸೀಮಿತವಾಗಬಾರದು. ಅದು ನಮ್ಮ ದೈನಂದಿನ ಬದುಕಿನ ಭಾಗವಾಗಬೇಕು ಎಂಬುದನ್ನು ಈ ಪುಟ್ಟ ಮುಗ್ಧ ಜೀವಿಗಳು ತೋರಿಸಿಕೊಟ್ಟಿದ್ದಾರೆ. ಪರಿಸರ ದಿನದಂದು ಗಿಡಗಳ ಆರೈಕೆ ಮಾಡುತ್ತಾ ಹಸಿರಿನ ಮಹತ್ವ ಸಾರಿದ ರೇಯಂಶಿ ಅಮರೇಶ ಪಮ್ಮಾರ ಹಾಗೂ ಪ್ರಿಶಾ ಪರಶುರಾಮ ಪಮ್ಮಾರ. ಇಂದಿನ ಡಿಜಿಟಲ್ ಯುಗದಲ್ಲಿ ಮಕ್ಕಳಿಗೆ ಮೊಬೈಲ್ ಕೊಟ್ಟು ಕೂರಿಸುವ ಪೋಷಕರ ಮಧ್ಯೆ, ಈ ಇಬ್ಬರು ಚಿಣ್ಣರಿಗೆ ಬಾಲ್ಯದಲ್ಲೇ ಪರಿಸರ ಪ್ರೇಮದ ಪಾಠ ಹೇಳಿಕೊಟ್ಟಿರುವುದು ನಿಜಕ್ಕೂ ಶ್ಲಾಘನೀಯ. ಕುಂಡದಲ್ಲಿ ಬೆಳೆಯುತ್ತಿರುವ ಪುಟ್ಟ ಗಿಡಗಳಿಗೆ ತಾವೂ ಅಷ್ಟೇ ಪುಟ್ಟ ಕೈಗಳಿಂದ ನೀರುಣಿಸುತ್ತಾ, ಪ್ರಕೃತಿಯನ್ನು ಹೇಗೆ ಪ್ರೀತಿಸಬೇಕು ಎಂಬುದನ್ನು ಈ ಇಬ್ಬರು ಕಂದಮ್ಮಗಳು ಜಗತ್ತಿಗೆ ಸಾರುತ್ತಿದ್ದಾರೆ. ಇಳಕಲ್ ತಾಲೂಕಿನ ತಹಶೀಲ್ದಾರ್ ಅವರ ಮಗಳು ರೇಯಂಶಿ ಅಮರೇಶ ಪಮ್ಮಾರ ಮತ್ತು ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಪರಶುರಾಮ ಪಮ್ಮಾರ ಮಗಳಾದ ಪ್ರಿಶಾ ಪರಶುರಾಮ ಪಮ್ಮಾರ ಅವರ ಈ ಪುಟ್ಟ ಹೆಜ್ಜೆ, ಮುಂದೊಂದು ದಿನ ದೊಡ್ಡ ಹಸಿರು ಕ್ರಾಂತಿಗೆ ನಾಂದಿ ಹಾಡಲಿ ಎಂಬುದೇ ನಮ್ಮ ಆಶಯ.

ಅಗ್ನಿವೀರರಾಗಿ ಆಯ್ಕೆ



ಕಲಾದಗಿ: ಭಾರತೀಯ ಸೇನಾಪಡೆಯ ಅಗ್ನಿವೀರ ನೇಮಕಾತಿಯಲ್ಲಿ ನೂತನವಾಗಿ ಆಯ್ಕೆಯಾಗಿರುವ ಕಲಾದಗಿ ಗ್ರಾಮದ ವಿಕೆ ಸ್ಟಡಿ ಸರ್ಕಲ್ ಕೋಚಿಂಗ ಕ್ಲಾಸನ ವಿದ್ಯಾರ್ಥಿಗಳಾದ ರಾಜಕುಮಾರ ಹಂಜಿ, ಕಾಡಪ್ಪ ಕೋಲಾರ, ಸಚೀನ ಮಾದರ, ಕಾರ್ತಿಕ ಪಾಣಿಶೆಟ್ಟಿ ಸೇರಿದಂತೆ ಕಲಾದಗಿ ಸುತ್ತಮುತ್ತಲಿನ ಗ್ರಾಮಗಳು ಸೇರಿ ಒಟ್ಟು 10ಕ್ಕೂ ಹೆಚ್ಚು ಯುವಕರು ಆಯ್ಕೆಯಾಗಿದ್ದಾರೆ



ಬಾದಾಮಿ: ತಾಲೂಕಿನ ಜಾಲಿಹಾಳ ಗ್ರಾಮದ ಜ್ಞಾನಯೋಗಿ ಶ್ರೀ ಸಿದ್ದೇಶ್ವರ ಪ್ರಾಥಮಿಕ ಶಾಲೆಯಲ್ಲಿ ಸಸಿ ನೆಡುವ ಮೂಲಕ ವಿಶ್ವಪರಿಸರ ದಿನಾಚರಣೆ ಆಚರಿಸಲಾಯಿತು. ಮುಖ್ಯಶಿಕ್ಷಕಿ ಮಂಜುಳಾ ಹಿರೇಮಠ, ಶೈಕ್ಷಣಿಕ ಸಲಹೆಗಾರ ವಿ.ಎಸ್.ಮಠಪತಿ, ಗ್ರಾಮದ ಹಿರಿಯರು, ಮಕ್ಕಳು ಹಾಜರಿದ್ದರು.

17ನೇ ಪದವಿ ಪ್ರದಾನ ಸಮಾರಂಭ ಇಂದು

ಬಾಗಲಕೋಟೆ: ನಗರದ ಬಿವಿವಿ ಸಂಘದ ಎಸ್. ನಿಜಲಿಂಗಪ್ಪ ವೈದ್ಯಕೀಯ ಮಹಾವಿದ್ಯಾಲಯದಲ್ಲಿ 17ನೇ ಪದವಿ ಪ್ರದಾನ ಸಮಾರಂಭವನ್ನು ಜೂ.8ರಂದು ಬೆಳಗ್ಗೆ 10 ಗಂಟೆಗೆ ಆಯೋಜಿಸಲಾಗಿದೆ.

ಸಮಾರಂಭದಲ್ಲಿ ಇಂಧನ ಸಚಿವ ಪ್ರಲ್ಹಾದ್ ಜೋಶಿ ಮುಖ್ಯ ಅತಿಥಿಗಳಾಗಿ ಆಗಮಿಸಿ ಪದವೀಧರರಿಗೆ ಪದವಿ ಪ್ರಮಾಣಪತ್ರ ವಿತರಿಸಲಿದ್ದಾರೆ. ಬೆಂಗಳೂರು ಖ್ಯಾತ ಹಿರಿಯ ಹೃದ್ರೋಗ ತಜ್ಞ ಡಾ.ಗಿರೀಶ ಬಿ.ನವಸುಂದಿ ಪದವಿ ಪ್ರದಾನ ಭಾಷಣ ಮಾಡಲಿದ್ದಾರೆ. ಬಿವಿವಿ ಸಂಘದ ಕಾರ್ಯಾಧ್ಯಕ್ಷ ವೀರಣ್ಣ ಚರಂತಿಮಠ ಅಧ್ಯಕ್ಷತೆ ವಹಿಸಲಿದ್ದಾರೆ. ಸಂಘದ ಗೌರವ ಕಾರ್ಯದರ್ಶಿ ಮಹೇಶ ಎಂ.ಅಥಣಿ, ವೈದ್ಯಕೀಯ ಮಂಡಳಿ ಕಾರ್ಯಾಧ್ಯಕ್ಷ ಅಶೋಕ ಎಂ.ಸಜ್ಜನ (ಬೇವೂರ) ಉಪಸ್ಥಿತರಿರಲಿದ್ದಾರೆ.

2020-21ನೇ ಶೈಕ್ಷಣಿಕ ವರ್ಷದಲ್ಲಿ 250 ವಿದ್ಯಾರ್ಥಿಗಳಿಗೆ ಹೆಚ್ಚಳಗೊಂಡ ದಾಖಲಾತಿಯಡಿ ಪ್ರವೇಶ ಪಡೆದ ಎಂಬಿಬಿಎಸ್ ವಿದ್ಯಾರ್ಥಿಗಳ ಮೊದಲ ಪದವಿ ಪ್ರದಾನ ಸಮಾರಂಭ ಇದಾಗಿದ್ದು, ಗರಿಷ್ಠ ದಾಖಲಾತಿ ಬ್ಯಾಚ್‌ನ ಪ್ರಥಮ ಪದವಿ ಪ್ರದಾನ ಸಮಾರಂಭ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಇದೇ ವೇಳೆ 66 ವೈದ್ಯಕೀಯ ಸ್ನಾತಕೋತ್ತರ (ಪಿಜಿ) ಪದವೀಧರರೂ ಪದವಿ ಪ್ರಮಾಣಪತ್ರ ಸ್ವೀಕರಿಸಲಿದ್ದಾರೆ. ಪದವಿ ಪಡೆದ ವಿದ್ಯಾರ್ಥಿಗಳು, ಅವರ ಪಾಲಕರು, ಮಹಾವಿದ್ಯಾಲಯದ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಸಮಾರಂಭದಲ್ಲಿ ಭಾಗವಹಿಸಲಿದ್ದಾರೆ ಎಂದು ಮಹಾವಿದ್ಯಾಲಯದ ಪ್ರಾಚಾರ್ಯೆ ಡಾ. ಭುವನೇಶ್ವರಿ ಯಳಮಲಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಕಮತಗಿ: ಹುನಗುಂದ ತಾಲೂಕಿನ ಚಿಕ್ಕಮಾಗಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಆವರಣದಲ್ಲಿ ವಿಶ್ವಪರಿಸರ ದಿನಾಚರಣೆ ಆಚರಿಸಿದರು. ಪ್ರಭಾರಿ ಮುಖ್ಯಗುರು ಎಸ್.ಎಂ.ಬೆಲ್ಲದ, ಶಿಕ್ಷಕರಾದ ಎಸ್.ಪಿ.ಹಳಕಟ್ಟಿ, ಎಸ್.ಬಿ.ಹಳ್ಳೂರ, ವಿ.ಬಿ.ಬೀಳಗಿ, ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

ಪ್ರಶಿಕ್ಷಣ ವರ್ಗ ಶಿಬಿರ ಸಮಾರೋಪ | ಡಾ.ವೀರಣ್ಣ ಚರಂತಿಮಠ ಅಭಿಮತ

ಪ್ರತಿ ವ್ಯಕ್ತಿಗೂ ಅಭಿವೃದ್ಧಿ ಫಲ ತಲುಪಲಿ

ಬಾಗಲಕೋಟೆ: ಪಂಡಿತ್ ದೀನದಯಾಳ ಉಪಾಧ್ಯಾಯರ ಅಂತ್ಯೋದಯ ತತ್ವದ ಆಧಾರದ ಮೇಲೆ ಸಮಾಜದ ಕಟ್ಟಕಡೆಯ ವ್ಯಕ್ತಿಗೂ ಅಭಿವೃದ್ಧಿಯ ಫಲ ತಲುಪಿಸುವ ಗುರಿಯೊಂದಿಗೆ ಕಾರ್ಯಕರ್ತರು ಕಾರ್ಯನಿರ್ವಹಿಸಬೇಕು ಎಂದು ಮಾಜಿ ಶಾಸಕ ವೀರಣ್ಣ ಚರಂತಿಮಠ ಹೇಳಿದರು.



ಭಾರತೀಯ ಜನತಾ ಪಾರ್ಟಿ ಬಾಗಲಕೋಟೆ ಮತಕೇತ್ರದಿಂದ ಮುಚಖಂಡಿಯಲ್ಲಿ ಎರಡು ದಿನಗಳಿಂದ ನಡೆದ ಪ್ರಶಿಕ್ಷಣ ವರ್ಗದ ಶಿಬಿರದ ಸಮಾರೋಪ ಸಮಾರಂಭದಲ್ಲಿ ಮಾತನಾಡಿ, ಪಕ್ಷದ ತತ್ವಸಿದ್ಧಾಂತಗಳು, ಸಂಘಟನೆ ಬಲವರ್ಧನೆ ಮತ್ತು ಕಾರ್ಯಕರ್ತರ ಜವಾಬ್ದಾರಿಗಳ ಬಗ್ಗೆ ತರಬೇತಿ ನೀಡಲು ಪ್ರಶಿಕ್ಷಣ ವರ್ಗವನ್ನು ಆಯೋಜಿಸಲಾಗಿತ್ತು. ಕಾರ್ಯಕರ್ತರು ಪಕ್ಷದ ತತ್ವ ಹಾಗೂ ಸಂಘಟನಾ ಬಲ ಹೆಚ್ಚಿಸುವ ಮೂಲಕ ಪಕ್ಷದ ಸಿದ್ಧಾಂತಗಳು, ಅಂತ್ಯೋದಯ ಚಿಂತನೆ ಮತ್ತು ರಾಷ್ಟ್ರ ಪ್ರಥಮ ತತ್ವಗಳನ್ನು ಬೋಧಿಸುವುದು ಇದರ ಮುಖ್ಯ ಗುರಿಯಾಗಿದೆ ಎಂದರು.

ಪಕ್ಷದ ತತ್ವ ಸಂಘಟನೆ ಮತ್ತು ರಾಷ್ಟ್ರಸೇವೆಯ ಧ್ಯೇಯಗಳನ್ನು ಕಾರ್ಯಕರ್ತರು ಜನರಿಗೆ ತಲುಪಿಸುವ ಜವಾಬ್ದಾರಿ ಹೊತ್ತು ಕೆಲಸ ಮಾಡಬೇಕು. ಸಂಘಟಿತ ಕಾರ್ಯ ಪದ್ಧತಿ ಮತ್ತು ಸಮರ್ಪಿತ ಸೇವಾಭಾವದಿಂದ ಮಾತ್ರ ಪಕ್ಷ ಇನ್ನಷ್ಟು ಬಲಿಷ್ಠವಾಗಲು ಸಾಧ್ಯ ಎಂದರು.

ಪ್ರಶಿಕ್ಷಣ ವರ್ಗದ ಸಂಚಾಲಕ ಶಂಕರ ಹುನ್ನೂರ, ಜಿಲ್ಲಾ ಉಪಾಧ್ಯಕ್ಷ ಲಕ್ಷ್ಮೀ ನಾರಾಯಣ ಕಾಸಟ್, ಭಾಗೀರಥಿ ಪಾಟೀಲ, ರಾಜು ನಾಯ್ಕರ, ಜಿಲ್ಲಾ ಎಸ್ಸಿ ಮೋರ್ಚಾ ಅಧ್ಯಕ್ಷ ಮುತ್ತಣ್ಣ ಬೆಣ್ಣೂರ, ಬಸವರಾಜ ಯಂಕಂಚಿ, ಸತ್ಯನಾರಾಯಣ ಹೇಮಾದ್ರಿ, ಶಶಿ ಗುತ್ತನ್ನವರ, ನಗರ ಮಂಡಲ ಅಧ್ಯಕ್ಷ ಬಸವರಾಜ ಕಟಗೇರಿ, ಗ್ರಾಮೀಣ ಮಂಡಲ ಅಧ್ಯಕ್ಷ ಸುರೇಶ ಕೋಣ್ಣೂರ, ರಾಜು ಮುದೆನೂರ, ರಾಜು ರೇವಣಕರ್, ಕಲ್ಲಪ್ಪ ಭಗವತಿ, ಮಲ್ಲಯ್ಯ ವಿಜಾಪುರ, ಉಮೇಶ ಹಂಚಿನಾಳ, ನಗರ ಹಾಗೂ ಗ್ರಾಮೀಣ ಮಂಡಲ ಪದಾಧಿಕಾರಿಗಳು, ಕಾರ್ಯಕರ್ತರು ಭಾಗವಹಿಸಿದ್ದರು.

ಕೊಟ್ಟ ಮಾತಿನಂತೆ ಸಿಎಂ ಡಿಕೆಶಿ ನಡೆದುಕೊಳ್ಳಲಿ: ಚೊಳಚಗುಡ್ಡ

ಬಾಗಲಕೋಟೆ: ಡಿ.ಕೆ.ಶಿವಕುಮಾರ ಅವರ ಸಚಿವ ಸಂಪುಟದಲ್ಲಿ ಸಮಾಜದ ಲಕ್ಷ್ಮಣಸವದಿಗೆಸಚಿವಸ್ಥಾನನೀಡಬೇಕೆಂದು ಅಖಿಲ ಕರ್ನಾಟಕ ಗಾಣಿಗ ಸಮೂಹ ಸಂಘದ ರಾಜ್ಯಾಧ್ಯಕ್ಷ ಮಹಾಂತೇಶ ಚೊಳಚಗುಡ್ಡ ಆಗ್ರಹಿಸಿದರು.

ನವನಗರದ ಪತ್ರಿಕಾಭವನದಲ್ಲಿ ಇತ್ತೀಚಿಗೆ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, 2023ರ ಸಾರ್ವತ್ರಿಕ ಚುನಾವಣೆ ಬಿಜೆಪಿ ತೊರೆದು ಕಾಂಗ್ರೆಸ ಪಕ್ಷ ಸೇರಿ ಅಥಣಿ ಮತಕ್ಷೇತ್ರದಿಂದ ಹೆಚ್ಚು ಮತ ಪಡೆದು ಗೆದ್ದಿದ್ದಾರೆ. ರಾಜ್ಯದಲ್ಲಿ ಕಾಂಗ್ರೆಸ್ ಅಕಾರಕ್ಕೆ ಬರಲು ಲಕ್ಷ್ಮಣ ಸವದಿ ಗಾಣಿಗರ ಮತ ಹಾಕಿಸಿ ಗೆಲ್ಲಿಸಲು ಯಶಸ್ವಿಯಾಗಿದ್ದಾರೆ ಎಂದರು.

ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ ನೀಡಿದ ಮಾತಿಗೆ ಬದ್ಧರಾಗಿ ಸವದಿಗೆ 2ನೇ ಪಟ್ಟಿಯಲ್ಲಾದರೂ ಸಚಿವ ಸ್ಥಾನ ನೀಡಬೇಕು. ಇಲ್ಲವಾದಲ್ಲಿ ಗಾಣಿಗ ಸಮಾಜದ ವತಿಯಿಂದ ರಾಜ್ಯಾದ್ಯಂತ ಉಗ್ರ ಪ್ರತಿಭಟನೆ ಮಾಡುವದಾಗಿ ಎಚ್ಚರಿಸಿದರು.

ಈ ಹಿಂದೆ ಕಾಂಗ್ರೆಸ್ ಸರ್ಕಾರ ಸಮಾಜದ ಸಿದ್ದು ನ್ಯಾಮಗೌಡರಿಗೆ ಕೇಂದ್ರ ಸಚಿವ ಸ್ಥಾನ ಕೊಟ್ಟಿದ್ದು ಬಿಟ್ಟರೇ ಯಾರಿಗೂ ನೀಡಿರುವುದಿಲ್ಲ. ಲಕ್ಷ್ಮಣ ಸವದಿಯವರಿಗೆ ಸಂಪುಟ ದರ್ಜೆಯಲ್ಲಿ ಸಚಿವ ಸ್ಥಾನ ನೀಡಬೇಕೆಂದು ಗಾಣಿಗ ನೌಕರರ ಸಂಘದ ರಾಜ್ಯಾಧ್ಯಕ್ಷ ಆರ್.ಜಿ.ಪಾಟೀಲ ಒತ್ತಾಯಿಸಿದರು.





ಪ್ರತಿಯೊಬ್ಬರೂ ಮರ ಬೆಳೆಸಿ:ಕೋರಿ

ಬಾದಾಮಿ: ಇಂದು ಪ್ರತಿಯೊಬ್ಬರು ಗಿಡ ಮರಗಳನ್ನು ಬೆಳೆಸುವ ಮೂಲಕ ಇರುವ ಸಸ್ಯ ಸಂಪತ್ತನ್ನು ಉಳಿಸಬೇಕಾಗಿದೆ ಎಂದು ಘಟಕ ವ್ಯವಸ್ಥಾಪಕ ಅಶೋಕ ಕೋರಿ ಹೇಳಿದರು.

ಅವರು ತಾಲೂಕಿನ ಯಂಕಂಚಿ ಮಣಿನಾಗರ ಗ್ರಾಮದ ಕಸ್ತೂರಬಾ ಗಾಂಧಿ ಬಾಲಕೀಯರ ವಸತಿ ಶಾಲೆಯಲ್ಲಿ ಹಮ್ಮಿಕೊಂಡಿದ್ದ ವಿಶ್ವಪರಿಸರ ದಿನಾಚರಣೆ ಕಾರ್ಯಕ್ರಮವನ್ನು ಸಸಿ ನೆಡುವ ಮೂಲಕ ಉದ್ಘಾಟಿಸಿ ಮಾತನಾಡಿದರು.

ಕ್ಷೇತ್ರ ಶಿಕ್ಷಣಾಧಿಕಾರಿ ಕೇಶವ ಪೆಟ್ಲೂರ ಮಾತನಾಡಿ, ಪ್ರತಿಯೊಬ್ಬರು ಪರಿಸರ ಕಾಳಜಿ, ಪ್ರೇಮ ತೋರಿ ಸಸ್ಯ ಸಂಪತ್ತು ಉಳಿಸಬೇಕು. ಕನಿಷ್ಟ ಒಂದು ಗಿಡ ನೆಡುವ ಮೂಲಕ ಪರಿಸರ ಸಮತೋಲನ ಕಾಪಾಡಬೇಕು ಎಂದರು.

ಮುಖ್ಯಶಿಕ್ಷಕಿ ಬಸಮ್ಮಾ ನರಸಾಪೂರ ಮಾತನಾಡಿದರು. ಸಹಶಿಕ್ಷಕಿ ಅನಿತಾ ಜಲಗೇರಿ, ಗ್ರಾಮದ ಹಿರಿಯರು, ಸಹಶಿಕ್ಷಕರು, ಸಿಬ್ಬಂದಿಗಳು ಹಾಜರಿದ್ದರು.

ವಿಜಯಾನಂದಗೆ ಸಚಿವ ಸ್ಥಾನ ನೀಡಿ

ಇಳಕಲ್: ರಾಜ್ಯದಲ್ಲಿ ನೂತನವಾಗಿ ಅಸ್ತಿತ್ವಕ್ಕೆ ಬಂದಿರುವ ಕಾಂಗ್ರೆಸ್ ಸರ್ಕಾರದ ಸಚಿವ ಸಂಪುಟದಲ್ಲಿ ರಾಜ್ಯ ವೀರಶೈವ ಲಿಂಗಾಯತ ಅಭಿವೃದ್ಧಿ ನಿಗಮದ ಅಧ್ಯಕ್ಷರು,ಶಾಸಕ ವಿಜಯಾನಂದ ಎಸ್. ಕಾಶಪ್ಪನವರಿಗೆ ಸಚಿವ ಸ್ಥಾನವನ್ನು ನೀಡಬೇಕು ಎಂದು ಇಳಕಲ್ ತಾಲೂಕಾ ವಿಶ್ವಕರ್ಮ ಸಮಾಜದ ಮುಖಂಡರು ಹಾಗೂ ಪದಾಧಿಕಾರಿಗಳು ಆಗ್ರಿಸಿದರು.

ಇಳಕಲ್ ನಗರದ ಅನುಭವ ಮಂಟಪದದಲ್ಲಿನ ಕಾನಿಪ

ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ನೂತನ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ ಅವರಿಗೆ ಹಾಗೂ ಕಾಂಗ್ರೆಸ್ ಪಕ್ಷದ ವರಿಷ್ಠರಾದ ಸೋನಿಯಾ ಗಾಂಧಿ, ಮಲ್ಲಿಕಾರ್ಜುನ ಖರ್ಗೆ ಮತ್ತು ರಾಹುಲ್ ಗಾಂಧಿ ಅವರಿಗೆ ವಿಶ್ವಕರ್ಮ ಸಮಾಜದ ಪರವಾಗಿ ಹಾರ್ದಿಕ ಅಭಿನಂದನೆಗಳನ್ನು ಸಲ್ಲಿಸಿ ಮಾತನಾಡಿದ ವಿಶ್ವಕರ್ಮ ಸಮಾಜದ ಹಿರಿಯ ಮುಖಂಡ ಚಿನ್ನಪ್ಪ ಹೂಲಗೇರಿ ಶಾಸಕ ವಿಜಯಾನಂದ ಎಸ್. ಕಾಶಪ್ಪನವರು ಉತ್ತರ ಕರ್ನಾಟಕ ಭಾಗದ ಅತ್ಯಂತ ಪ್ರಭಾವಶಾಲಿಯಾಗಿರುವ ಅವರು ವಿಧಾನಸೌಧದಲ್ಲಿ ಜನರ ಮತ್ತು ಈ ಭಾಗದ ಸಮಸ್ಯೆಗಳ ಪರವಾಗಿ ಧ್ವನಿ ಎತ್ತುವ ಶ್ರೀಮಂತ ನಾಯಕರಾಗಿದ್ದಾರೆ. ಇಂತಹ ನಾಯಕರನ್ನು ಗುರುತಿಸಿ ಅವರಿಗೆ ಸಚಿವ ಸ್ಥಾನ ನೀಡ ಬೇಕು ಎಂದರು.

ಸಮಾಜದ ಯುವ ಮುಖಂಡರ ವಿಶ್ವ ಬಡಿಗೇರ ಹಾಗೂ ವಿಶ್ವಕರ್ಮ ಸಮಾಜದ ಹಿರಿಯ ಮುಖಂಡರಾದ ನಾರಾಯಣ ಹೂಲಗೇರಿ ಮಾತನಾಡಿದರು.

ನಮ್ಮ ಹುನಗುಂದ ಮತಕ್ಷೇತ್ರಗಳಲ್ಲಿ ನೂತನ ಇಂದಿರಾ ಕ್ಯಾಂಟಿನ್, ಸರ್ಕಾರಿ ಸಾರ್ವಜನಿಕ ಈಜುಕೊಳ, ರಸ್ತೆಗಳು ನಿರ್ಮಾಣ ಹೀಗೆ ಹಲವಾರು ಅಭಿವೃದ್ಧಿ ಕಾರ್ಯಗಳು ನಡೆಯುತ್ತಿದ್ದು, ಇದು ಶಾಸಕ ವಿಜಯಾನಂದ ಎಸ್.ಕಾಶಪ್ಪನವರ ಅಭಿವೃದ್ಧಿ ಕೆಲಸಗಳಾಗಿದ್ದು, ಇಂತಹ ದೂರ ದೃಷ್ಠಿ ನಾಯಕನಿಗೆ ಕಾಂಗ್ರೆಸ್ ಪಕ್ಷದ ವರಿಷ್ಠರು ಸಚಿವ ಸ್ಥಾನ ನೀಡಲಿ ಎಂದು ಮನೋಹರ ಕಟಗೂರ ಆಗ್ರಹಿಸಿದರು.

ವಿಶ್ವಕರ್ಮ ಸಮಾಜದ ಅಧ್ಯಕ್ಷ ರಾಮಣ್ಣ ಮರೋಳ, ವಿಶ್ವಕರ್ಮ ವಿಕಾಸ ಸಂಸ್ಥೆ ಅಧ್ಯಕ್ಷ ವೀರಭದ್ರಪ್ಪ ಪತ್ತಾರ (ಹಿಪ್ಪರಗಿ), ಆನಂದ ಅರ್ಕಸಾಲಿ, ಅಶೋಕ ಬೆನ್ನೂರ, ಪ್ರಭು ಮರೋಳ, ಮಂಜು ಕಡಿವಾಲ, ಕೃಷ್ಣಾ ಡವಳಗಿ, ಶ್ರೀಧರ ಜನಮುನಿ, ಪದ್ಮನಾಭ ಗುರುವಿನ, ರವಿ ಗಚ್ಚಿನಮನಿ, ಮೌನೇಶ ತಾವರಗೇರಿ,ಮಲ್ಲಪ್ಪ ತಾವರಗೇರಿ,ಜೀತೇಂದ್ರ ಮಳಗಾವಿ,ಶಿವು ಬೆನ್ನೂರು ಮತ್ತಿತರರು ಸುದ್ದಿಗೋಷ್ಠಿಯಲ್ಲಿದ್ದರು.



ಪ್ರತಿಯೊಬ್ಬರೂ ಗಿಡ ನೆಟ್ಟು ಆರೈಕೆ ಮಾಡಿ: ರಾಯನಗೌಡ

ಇಂಗಳಗಿ: ನಗರಕ್ಕೆ ಸಮೀಪದಲ್ಲಿರುವ ಇಂಗಳಗಿಯಲ್ಲಿ ಸರ್ಕಾರಿ ಪ್ರೌಢಶಾಲೆ ಆವರಣದಲ್ಲಿ ವಿಶ್ವಪರಿಸರ ದಿನಾಚರಣೆಯ ನಿಮಿತ್ತ ಪರಿಸರ ಜಾಗೃತಿ ಜಾಥಾ ಹಾಗೂ ಸಸಿ ನೆಡುವಿಕೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು.



ವಿದ್ಯಾರ್ಥಿಗಳು ಹಸಿರು ಟೋಪಿಗಳನ್ನು ಧರಿಸಿ, ಪರಿಸರ ಸಂರಕ್ಷಣೆಯ ಕುರಿತು ಘೋಷಣೆಗಳನ್ನು ಕೂಗುತ್ತಾ ಗ್ರಾಮದ ಪ್ರಮುಖ ಬೀದಿಗಳಲ್ಲಿ ಜಾಥಾ ನಡೆಸಿದರು.

ಎಸ್‌ಡಿಎಂಸಿ ಅಧ್ಯಕ್ಷರಾಯನಗೌಡ ಗೌಡರ ಸಸಿ ನೆಟ್ಟು, ಪರಿಸರ ಸಂರಕ್ಷಣೆ ಇಂದಿನ ಅಗತ್ಯವಾಗಿದ್ದು, ಪ್ರತಿಯೊಬ್ಬ ವಿದ್ಯಾರ್ಥಿಯೂ ಕನಿಷ್ಠ ಒಂದು ಗಿಡವನ್ನು ನೆಟ್ಟು ಅದರ ಆರೈಕೆ ಮಾಡಬೇಕು ಎಂದು ಹೇಳಿದರು.

ಎಸ್‌ಡಿಎಂಸಿ ಉಪಾಧ್ಯಕ್ಷ ನಾಗರಾಜ ಅಲಕುಂಟಿ ಮಾತನಾಡಿ, ಪರಿಸರವೇ ನಮ್ಮ ಜೀವನಾಡಿ. ಹಸಿರು ಉಳಿದರೆ ಮಾತ್ರ ಭವಿಷ್ಯ ಸುರಕ್ಷಿತವಾಗಿರುತ್ತದೆ. ಆದ್ದರಿಂದ ಪ್ರತಿಯೊಬ್ಬರೂ ಮರಗಳನ್ನು ಬೆಳೆಸಿ ಪರಿಸರ ಸಂರಕ್ಷಣೆಗೆ ಕೈಜೋಡಿಸಬೇಕು ಎಂದರು.

ಶಾಲೆ ಮುಖ್ಯೋಪಾಧ್ಯಾಯಿನಿ ದಾನೇಶ್ವರಿ ಬಿ.ಸಾರಂಗಮಠ ಅವರು ವಿದ್ಯಾರ್ಥಿಗಳಿಗೆ ಪರಿಸರದ ಮಹತ್ವವನ್ನು ತಿಳಿಸಿ, ಶಾಲಾ ಆವರಣ ಹಾಗೂ ಮನೆಗಳ ಸುತ್ತಮುತ್ತ ಹೆಚ್ಚಿನ ಸಂಖ್ಯೆಯಲ್ಲಿ ಗಿಡಗಳನ್ನು ನೆಟ್ಟು ಪೋಷಿಸುವಂತೆ ತಿಳಿಸಿದರು.

ಶಿಕ್ಷಕರಾದ ಕೆ.ಪಿ.ಬೇನಾಳ, ಎ.ಎಚ್.ಜಕ್ಲಿ, ವಿ.ಬಿ.ರಾಂಪೂರ, ಎಸ್.ವಾಯ್.ಬಾಗಿ, ಬಿ.ಎನ್. ಎಮ್ಮೆಟ್ಟಿ, ಇಕೋ ಕ್ಲಬ್ ಸಂಚಾಲಕ ಉಮಾ ಪಾಡಮುಖಿ ಹಾಗೂ ತೇಜೇಶ್ವರಿ ಲಗಟಗೇರಿ, ಬೋಧಕೇತರ ವರ್ಗದ ಮಲಿಕ್ ವಾಲೀ ಕಾರ, ವೀರನಗೌಡ ಪಾಟೀಲ, ರಾಘವೇಂದ್ರ ಸೇರಿದಂತೆ ಹಲವರಿದ್ದರು.

ಪರಿಸರ ನಮ್ಮ ಜೀವನದ ಮೂಲಾಧಾರ: ಮೇರಿ ಜಾಕೋಬ

ಬಾಗಲಕೋಟೆ: ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ವಿದ್ಯಾಗಿರಿಯ ಸೆಂಟ್ ಆನ್ಸ ಕಾನ್ವೆಂಟ್ ಪ್ರೌಢ ಶಾಲೆ ಹಾಗೂ ಪದವಿ ಪೂರ್ವ ಮಹಾವಿದ್ಯಾಲಯದಲ್ಲಿ ವಿಶ್ವ ಪರಿಸರ ದಿನಾಚರಣೆಯನ್ನು ವಿದ್ಯಾರ್ಥಿಗಳು, ಮುಖ್ಯಸ್ಥರು, ಶಿಕ್ಷಕರು, ಸಿಬ್ಬಂದಿ, ಸಂಭ್ರಮದಿಂದ ಆಚರಿಸುವ ಮೂಲಕ ಮಕ್ಕಳಿಂದ ಶಾಲಾ ಆವರಣದಲ್ಲಿ ಸಸಿಗಳನ್ನು ನೆಡುವ ಮೂಲಕ ಪರಿಸರ ಬೆಳೆಸಲು ಸಂದೇಶ ಸಾರಲಾಯಿತು.



ಮಹಾವಿದ್ಯಾಲಯದ ಪ್ರಾಚಾರ್ಯ ಸಿಸ್ಟರ್ ಮೇರಿ ಜಾಕೋಬರವರು ಸಸಿಗಳನ್ನು ನೆಡುವ ಮೂಲಕ ಪರಿಸರ ದಿನಾಚರಣೆ ಉದ್ಘಾಟಿಸಿ ಅವರು ಮಾತನಾಡಿದರು. ಭೂಮಿಯ ಮೇಲಿನ ಪ್ರತಿಯೊಂದು ಜೀವಿಗೂ ಗಾಳಿ, ನೀರು, ಮತ್ತು ಆಹಾರ ಸಿಗಲು ಪರಿಸರವೇ ಆಧಾರವಾಗಿದೆ. ನೀರು ಉಳಿಸಿ ಜೀವ ಉಳಿಸಿ, ಹಸಿರು ಭೂಮಿ ಸ್ವಚ್ಛ ಭೂಮಿ. ಪರಿಸರವು ನಮ್ಮ ಜೀವನದ ಮೂಲಾಧಾರವಾಗಿದೆ. ಆರೋಗ್ಯಕರ ಜೀವನಕ್ಕೆ ಹಸಿರು ವಾತಾವರಣ ಆವಶ್ಯಕವಾಗಿದ್ದು ಪ್ರಕೃತಿ ಉಳಿಸಿದರೆ ಪ್ರಕೃತಿ ನಮ್ಮನ್ನು ಉಳಿಸುತ್ತದೆ. ಅರಣ್ಯ ನಾಶವನ್ನು ತಡೆಯಿರಿ ಇಂಧನಗಳ ಬಳಕೆ ಕಡಿಮೆ ಮಾಡಬೇಕು ಎಂದು ವಿದ್ಯಾರ್ಥಿಗಳಿಗೆ ಕಿವಿ ಮಾತು ಹೇಳಿದರು.

ವಿಶ್ವ ಪರಿಸರ ದಿನಾಚರಣೆಯ ಅಂಗವಾಗಿ ಮಕ್ಕಳಿಂದ ಪ್ರಬಂಧ, ನಾಟಕ ಹಾಗೂ ಭಾಷಣ ಸ್ಪರ್ಧೆ ನಡೆಯಿತು. ಶೀಲಾ ಲೋಕರೆ, ಶೀಲಾ ಹದ್ಲಿ, ಶ್ವೇತಾ ಮಿರ್ಜಿ ಸಿದ್ದಯ್ಯ ಹೀರೆಮಠ ಉಪಸ್ಥಿತರಿದ್ದರು.

ಸಮಾಜಮುಖಿ ಕಾರ್ಯ ಮಾಡಿ




ಗುಳೇದಗುಡ್ಡ: ಸರ್ಕಾರಿ ನೌಕರರು ನಿವೃತ್ತಿ ಬಳಿಕ ಸಮಾಜಮುಖಿಯಾಗಿ ಕಾರ್ಯ ಮಾಡಬೇಕು. ಹಾಗೆ ಮಾಡುವುದರಿಂದ ಮಾನಸಿಕ ಮತ್ತು ದೈಹಿಕ ಆರೋಗ್ಯ ಕಾಪಾಡಿಕೊಳ್ಳಬಹುದೆಂದು ಶಿರೂರಿನ ವಿಶ್ರಾಂತ ಕೆಎಸ್‌ಆರ್‌ಟಿಸಿ ಚಾಲಕ ಮಲ್ಲಣ್ಣ ಆಡಿನ ಹೇಳಿದರು.

ಅವರು ಭಾನುವಾರ ಗುಳೇದಗುಡ್ಡ ಪಟ್ಟಣದಲ್ಲಿ ಹಮ್ಮಿಕೊಂಡಿದ್ದ ಐಹೊಳೆ ಸರ್ಕಾರಿ ಬಾಲಕಿಯರ ಹಿರಿಯ ಪ್ರಾಥಮಿಕ ಶಾಲೆಯಲ್ಲಿ 36 ವರ್ಷ ಶಿಕ್ಷಕರಾಗಿ ಸೇವೆ ಸಲ್ಲಿಸಿ ನಿವೃತ್ತರಾದ ಶಿವಯ್ಯ ಜಿ.ಮಠ ಅವರಿಗೆ ಸನ್ಮಾನಿಸಿ ಮಾತನಾಡಿ, ವಿಶ್ರಾಂತಿ ಬದುಕು ಸಮಜಕ್ಕೆ ಮೀಸಲಾಗಿಡಬೇಕು. ಅಂದಾಗ ಮನುಷ್ಯನ ಜೀವನ ಸಾರ್ಥಕವಾಗುತ್ತದೆ. ಕೌಟುಂಬಿಕ ಸಂಬಂಧಗಳು, ಸ್ನೇಹಿತರೊಂದಿಗಿನ ಸ್ನೇಹ, ವಿಶ್ವಾಸಗಳನ್ನು ಬೆಳೆಸಿಕೊಂಡು ಸಂತೋಷ, ಸದಾ ನಗು ನಮ್ಮದಾಗಿಸಿಕೊಳ್ಳಬೇಕು ಎಂದರು.

ಸನ್ಮಾನ ಸ್ವೀಕರಿಸಿ ಶಿವಯ್ಯ ಜಿ. ಮಠ ಮಾತನಾಡಿದರು. ಡಾ.ಸಿ.ಎಂ.ಜೋಶಿ, ಆನಂದ ಸುರಪೂರ, ಲಕ್ಷ್ಮಣ ಅಚನೂರ, ಚಂದ್ರು ಹೆಬ್ಬಳ್ಳಿ, ಬಾಬು ಮೀರಜಕರ ಹಾಗೂ ಇತರರು ಇದ್ದರು.

ನೋಡುಗರನ್ನು ಮಂತ್ರಮುಗ್ಧಗೊಳಿಸುವ ಅದ್ಭುತ ಚಿತ್ರಕಲೆ

ಬೀಳಗಿ: ಭಾವಚಿತ್ರ, ನಿಸರ್ಗ ಚಿತ್ರ, ಚಿತ್ರ ಸಂಯೋಜನೆ,ಕ್ಲಾಥ್ ಪೇಂಟಿಂಗ್, ಆಧುನಿಕ ಕಲೆ, ದೃಶ್ಯ ಮಾಧ್ಯಮ ಕಲೆ, ರೇಖಾ ಚಿತ್ರಣ ಹೀಗೆ ಹೇಳಿದ ಯಾವ ಚಿತ್ರವನ್ನಾದರೂ ಸರಿ ಶ್ರದ್ಧೆ, ನಯ ನಾಜೂಕಿನಿಂದ ಉತ್ತಮ ಚಿತ್ರಕಲಾಕೃತಿ ರಚಿಸಿ ನೋಡುಗರನ್ನು ಮಂತ್ರಮುಗ್ಧಗೊಳಿಸುವ ಕಲೆ ಶಿವು ಹೂಗಾರ ಅವರಿಗೆ ಸಿದ್ಧಿಸಿದೆ.







ತಾಲೂಕಿನ ಅರಕೇರಿ ಗ್ರಾಮದ ಶಿವಲಿಂಗಪ್ಪ ವಿಠ್ಠಲಪ್ಪ ಹೂಗಾರ ಇವರ ಚಿತ್ರಗಳನ್ನು ನೋಡಿದವರು ಮನ ತುಂಬಿ ಎಂಥಾ ಕಲಾಕೃತಿ ಇದು ಎಂದು ಸಂತಸ ಪಡುವಂತೆ ಮಾಡಿ ಬೆರಗುಗೊಳಿಸುವ ಆ ಶಕ್ತಿ ಹೂಗಾರರ ಕುಂಚದಲ್ಲಿ ಅಡಗಿದೆ ಎಂದು ಹೇಳಿದರೂ ತಪ್ಪಾಗಲಿಕ್ಕಿಲ್ಲ.

ಆಧುನಿಕ ಜೀವನ ಶೈಲಿ, ಅಭಿವೃದ್ಧಿ ನೆಪದಲ್ಲಿ ನಡೆಯುವ ಪರಿಸರ ನಾಶ, ಆಲಮಟ್ಟಿ ಜಲಾಶಯದ ಹಿನ್ನೀರಿನಲ್ಲಿ ಮನೆ-ಮಠ, ಆಸ್ತಿ-ಪಾಸ್ತಿಯನ್ನು ಕಳೆದುಕೊಂಡ ಸಂತ್ರಸ್ತರ ಆರ್ತನಾದ, ಗೋ ವಧೆ, ಮಾದಕ ವಸ್ತುಗಳು ಮಾನವನ ಮೇಲೆ ಬೀರುವ ದುಷ್ಪರಿಣಾಮ, ಮಹಿಳೆಯರ ಹೀನಾಯ ಬದುಕು, ದಿನನಿತ್ಯವು ಅಮಾಯಕರನ್ನು ಬಲಿ ತೆಗೆದುಕೊಳ್ಳುತ್ತಿರುವ ಭಯೋತ್ಪಾದನೆ ಪಿಡುಗಿನ ಕುರಿತಾದ ಚಿತ್ರಗಳಂತೂ ವೀಕ್ಷಕರನ್ನು ಬೆರಗುಗೊಳಿಸುವುದುರ ಜೊತೆಗೆ, ಪ್ರಸ್ತುತ ಸಮಾಜದಲ್ಲಿ ಘಟಿಸುವ ವಿಷಯಗಳ ಪ್ರತಿಕ್ರಿಯೆ ಎಂಬಂತಹ ಕೃತಿಗಳ ರಚನೆ ಮನುಷ್ಯನಲ್ಲಿ ಚಿಂತನೆಗೆ ಹಚ್ಚುತ್ತವೆ. ಅಲ್ಲದೇ, ಆಧುನಿಕ ಶಿಲ್ಪಕೃತಿಗಳನ್ನು ರಚಿಸಿದ್ದಾರೆ.

ಬೆಂಗಳೂರಿನ ಕೆನ್ ಕಲಾಶಾಲೆಯಲ್ಲಿ ಡಿಎಫ್‌ಎ (ಡಿಪ್ಲೋಮಾ ಇನ್ ಫೈನ್ ಆರ್ಟ್) ಪದವಿ ಪಡೆದು, ಚಿತ್ರಕಲಾ ಮಹಾವಿದ್ಯಾಲಯದಲ್ಲಿ ಉಪನ್ಯಾಸಕರಾಗಿ ಸೇವೆ ಸಲ್ಲಿಸಿದ್ದು, ವಿವಿಧ ಪತ್ರಿಕೆಯಲ್ಲಿ ಕಲಾವಿದರಾಗಿ ಸೇವೆ ಸಲ್ಲಿಸಿದ್ದು ಶಿವು ಹೂಗಾರ ಕಾರ್ಯಕ್ಷಮತೆಗೆ ಸಾಕ್ಷಿ.

ರೇಖಾಚಿತ್ರ, ಜಲವರ್ಣ, ಫ್ರೋಸ್ಟರ್ ಕಲರ್, ಅಕ್ರೇಲಿಕ್ ಕಲರ್, ತೈಲವರ್ಣ, ಫೆಬ್ರಿಕ್ ಕಲರ್, ಭಾರತೀಯ ಪಾರದರ್ಶಕ, ಅಪಾರದರ್ಶಕ ಬಣ್ಣವನ್ನು ಬಳಸಿ ಡ್ರಾಯಿಂಗ್ ಪೇಪರ್ (ಅನೇಕ ಬಗೆಯ ಕಾಗದಗಳ) ಮೇಲೆ, ಗಾಜಿನ ಮೇಲೆ ತೈಲವರ್ಣ, ಕಟ್ಟಿಗೆಯ ಹಲಗೆ ಮೇಲೆ (ಗ್ರಾಫಿಕ್ಸ್), ಬಟ್ಟೆ ಮೇಲೆ ತೈಲವರ್ಣ (ಕ್ಯಾನ್ವಾಸ್ ಪೇಂಟಿಂಗ್ಸ್), ಪೋಸ್ಟರ್ ವರ್ಣ, ಜಲವರ್ಣ (ಕ್ಯಾನವಾಸ್), ವಾಟಮನ್ ಪೇಪರ್(ತಗ್ಗುದಿಣ್ಣೆ ಕಾಗದ) ಮೇಲೆ ಸೇರಿದಂತೆ ಮುಂತಾದವುಗಳ ಮೇಲೆಯೂ ಸುಂದರ ಚಿತ್ರಗಳನ್ನು ರಚಿಸಿದ್ದಾರೆ. ಮಲಗಿರುವ ಮತ್ತು ವೇಗವಾಗಿ ಓಡುತ್ತಿರುವ ಬಯಲುಸೀಮೆಯ ಬಲಿಷ್ಠ ಹೋರಿಗಳು ಇವರ ಚಿತ್ರಗಳಲ್ಲಿ ಜೀವಂತಿಕೆ ಪಡೆದಿವೆ. ತುಂಬಾ ಕಲಾತ್ಮಕವಾದ ಚಿತ್ರಗಳನ್ನು ತಮ್ಮ ಕುಂಚದ ಮೂಲಕ ಬಿಂಬಿಸಿ, ನೋಡುಗರ ಮನ ಸೂರೆಗೊಳ್ಳುವ ಉತ್ತಮ ಕಲಾಕೃತಿಗಳು ಹೊರಹೊಮ್ಮಿವೆ. ಏಕವ್ಯಕ್ತಿ ಕಲಾಪ್ರದರ್ಶನ, ರಾಜ್ಯ, ರಾಷ್ಟ್ರಮಟ್ಟದ ಅನೇಕ ಕಲಾ ಶಿಬಿರ ಹಾಗೂ ಸಮೂಹ ಕಲಾ ಪ್ರದರ್ಶನಗಳಲ್ಲಿ ಇವರ ಕಲಾಕೃಗಳು ಪ್ರದರ್ಶನಗೊಂಡಿವೆ. ದೇಶ-ವಿದೇಶಗಳಲ್ಲಿಯೂ ಕಲಾಕೃತಿಗಳು ಮಾರಾಟಗೊಂಡಿವೆ. ಹಲವಾರು ಪ್ರಶಸ್ತಿಗಳು ಶಿವು ಹೂಗಾರ ಮುಡಿಗೇರಿವೆ.

ವಿಜಯಾನಂದಗೆ ಸಚಿವ ಸ್ಥಾನ ನೀಡಲು ಒತ್ತಾಯ

ಇಳಕಲ್ಲ: ಹುನಗುಂದ ಮತಕ್ಷೇತ್ರದ ಶಾಸಕ ವಿಜಯಾನಂದ ಕಾಶಪ್ಪನವರ ಅವರಿಗೆ ಡಿ.ಕೆ. ಶಿವಕುಮಾರ ನೇತೃತ್ವದ ಸರ್ಕಾರದಲ್ಲಿ ಸಚಿವ ಸ್ಥಾನ ನೀಡಬೇಕು ಎಂದು ಕೆಪಿಸಿಸಿ ನೇಕಾರ ವಿಭಾಗದ ರಾಜ್ಯಾಧ್ಯಕ್ಷ ವೆಂಕಟೇಶ ಸಾಕಾ ಅವರು ಪಕ್ಷದ ಹೈಕಮಾಂಡ್‌ಗೆ ಒತ್ತಾಯಿಸಿದ್ದಾರೆ. ಈ ಕುರಿತು ಪ್ರಕಟಣೆ ನೀಡಿರುವ ಅವರು, ಶಾಸಕ ವಿಜಯಾನಂದ ಕಾಶಪ್ಪನವರ ಅವರು ಯುವ ಹಾಗೂ ಅತ್ಯಂತ ಕ್ರಿಯಾಶೀಲ ಶಾಸಕರಾಗಿದ್ದಾರೆ. ಅವರಿಗೆ ಸಚಿವ ಸ್ಥಾನ ನೀಡಿದರೆ ಬಾಗಲಕೋಟೆ ಜಿಲ್ಲೆ ಸೇರಿದಂತೆ ಅವರ ಮತಕ್ಷೇತ್ರದಲ್ಲಿ ಹೆಚ್ಚಿನ ಅಭಿವೃದ್ಧಿ ಕೆಲಸಗಳು ಸಾಧ್ಯವಾಗಲಿವೆ ಎಂದರು. ಪಂಚಮಸಾಲಿ ಸಮಾಜದ ಪ್ರಭಾವಿ ನಾಯಕರಾಗಿರುವ ಕಾಶಪ್ಪನವರ ಕುಟುಂಬವು ಕಳೆದ 50 ವರ್ಷಗಳಿಂದಲೂ ಕಾಂಗ್ರೆಸ್ ಪಕ್ಷಕ್ಕಾಗಿ ನಿರಂತರವಾಗಿ ಶ್ರಮಿಸುತ್ತಾ ಬಂದಿದೆ. ಈ ಎಲ್ಲಾ ಅಂಶಗಳನ್ನು ಪರಿಗಣಿಸಿ ಅವರಿಗೆ ತಕ್ಷಣವೇ ಸಚಿವ ಸಂಪುಟದಲ್ಲಿ ಸ್ಥಾನ ನೀಡಬೇಕು ಎಂದು ಆಗ್ರಹಿಸಿದ್ದಾರೆ.



ಕಿರುಸುದ್ದಿ

ಸಿದ್ಧೇಶ್ವರ ದೇವಸ್ಥಾನಕ್ಕೆ ಸಚಿವರ ಭೇಟಿ



ವಿಜಯಪುರ: ನಗರಕ್ಕೆ ಮೊದಲನೆ ಬಾರಿಗೆ ಸಚಿವರಾಗಿ ಆಗಮಿಸಿದ, ಬೃಹತ್ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲರು, ನಗರದ ಆರಾಧ್ಯ ದೈವ ಶಿವಯೋಗಿ ಸಿದ್ಧೇಶ್ವರ ದೇವಸ್ಥಾನಕ್ಕೆ ದರ್ಶನಕ್ಕೆ ಬಂದಿದ್ದರು. ದೇವಸ್ಥಾನದಲ್ಲಿ ವಿಶೇಷ ಪೂಜೆ ಸಲ್ಲಿಸಿ ಆಶೀರ್ವಾದ ಪಡೆದರು.ಸಿದ್ಧೇಶ್ವರ ಸಂಸ್ಥೆಯ ಆಡಳಿತ ಮಂಡಳಿಯಿಂದ ರಾಮನಗೌಡ ಬಾ. ಪಾಟೀಲ(ಯತ್ನಾಳ) ಗೋರಕ್ಷಾ ಕೇಂದ್ರದಲ್ಲಿ ತಯಾರಿಸಿದ ಗೋ ಉತ್ಪನ್ನಗಳ ಕಿಟ್ ಮತ್ತು ಪುಸ್ತಕಗಳನ್ನು ಕೊಟ್ಟು ಅಭಿನಂದಿಸಿದರು. ಸಿದ್ಧೇಶ್ವರ ಸಂಸ್ಥೆಯ ಉಪಾಧ್ಯಕ್ಷ ಸಂಗನಬಸಪ್ಪ ಸಜ್ಜನ, ಚೇರಮನ್ ಬಸಯ್ಯ ಎಸ್.ಹಿರೇಮಠ, ಕಾರ್ಯದರ್ಶಿ ಎಸ್.ಎಚ್.ದೇಸಾಯಿ, ಬಿ.ಎಸ್.ಸುಗೂರ, ಎಂ.ಎಂ ಸಜ್ಜನ, ಶಿವಾನಂದ ನೀಲಾ, ಮಹಾನಗರ ಪಾಲಿಕೆಯ ಮಹಾಪೌರರಾದ ಎಂ.ಎಸ್.ಕರಡಿ, ಎನ್.ಎಂ.ಗೋಲಾಯಿ, ಸುಧೀರ ಚಿಂಚಲಿ, ಮಲಕಪ್ಪ ಗಾಣಿಗೇರ, ಸದಾಶಿವ ಗುಡ್ಡೋಡಗಿ, ನಾಗಪ್ಪ ಗುಗ್ಗರಿ, ಮಲ್ಲಿಕಾರ್ಜುನ ಹಕ್ಕಾಪಕ್ಕಿ, ರಮೇಶ ಹಳ್ಳದ, ಪ್ರೇಮಾನಂದ ಬಿರಾದಾರ, ಎಸ್ ಸಿ ಉಪ್ಪಿನ, ಈರಣ್ಣ ಹಿಪ್ಪರಗಿ, ಮಲ್ಲಿಕಾರ್ಜುನ ಹಿಟ್ನಳ್ಳಿ, ಬಸವರಾಜ ಬೆಲ್ಲದ ಇದ್ದರು.

ನಿಂಗಪ್ಪ, ದಸ್ತಗಿರ್‌ಗೆ ಸನ್ಮಾನ



ಕೊಲ್ಹಾರ: ಜಿಲ್ಲಾ ಯೋಜನೆ ಸಮಿತಿ ಸದಸ್ಯರಾಗಿ ಆಯ್ಕೆಯಾದ ಪಪಂ ಸದಸ್ಯರಾದ ನಿಂಗಪ್ಪ ಗಣಿ ಹಾಗೂ ದಸ್ತಗಿರ್ ಕಲಾದಗಿ ಅವರನ್ನು ಕೊಲ್ಹಾರ ಪಪಂ ಕಾರ್ಯಾಲಯದಲ್ಲಿ ಸನ್ಮಾನಿಸಲಾಯಿತು. ಪಪಂ ಅಧ್ಯಕ್ಷ ಸಿ.ಎಸ್.ಗಿಡ್ಡಪ್ಪಗೋಳ, ಉಪಾಧ್ಯಕ್ಷ ರಾಜಮಾ ನದಾಫ್, ಪಪಂ ಮುಖ್ಯಾಧಿಕಾರಿ ವಿರೇಶ ಹಟ್ಟಿ ಹಾಗೂ ಪಪಂ ಸದಸ್ಯರು ಮತ್ತು ಸಿಬ್ಬಂದಿ ಇದ್ದರು.

ರಥ ನಿರ್ಮಾಣಕ್ಕೆ ಪೂರ್ವ ಸಿದ್ಧತಾ ಸಭೆ ನಾಳೆ

ಮುದ್ದೇಬಿಹಾಳ: ನಗರದ ಕಿಲ್ಲಾ ಪ್ರದೇಶದಲ್ಲಿರುವ ಗುಗ್ಗುಳ ಬಸವೇಶ್ವರ ಮತ್ತು ವೀರಭದ್ರೇಶ್ವರ ದೇವಸ್ಥಾನದ ಸಾಗುವಾನಿ ರಥ ನಿರ್ಮಾಣ ಮಾಡುವ ಸಂಬಂಧ ಭಕ್ತರ ಪೂರ್ವಭಾವಿ ಸಿದ್ಧತಾ ಸಭೆಯನ್ನು ಜೂ.9ರಂದು ನಗರದ ಗ್ರಾಮ ದೇವತಾ ದೇವಸ್ಥಾನದಲ್ಲಿ ಮಧ್ಯಾಹ್ನ 4:30ಕ್ಕೆ ಕರೆಯಲಾಗಿದೆ. ಸಭೆಯಲ್ಲಿ ರಥ ನಿರ್ಮಾಣದ ಜವಾಬ್ದಾರಿ ವಹಿಸುವ ಮತ್ತು ಗಾತ್ರ, ವಿನ್ಯಾಸದ ಕುರಿತು ಚರ್ಚಿಸಿ ಅಂತಿಮ ತೀರ್ಮಾನ ಕೈಗೊಳ್ಳಲಾಗುವುದು. ಕಾರಣ ಊರಿನ ಗಣ್ಯರು ವ್ಯಾಪಾರಸ್ಥರು ಹಾಗೂ ಭಕ್ತರು ಪಾಲ್ಗೊಳ್ಳಬೇಕು ಎಂದು ದೇವಸ್ಥಾನ ಸಮಿತಿ ಅಪ್ಪಣ್ಣ ಸಿದ್ಧಾಪುರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಹೆಚ್ಚಿನ ಬಸ್ ವ್ಯವಸ್ಥೆ ಕಲ್ಪಿಸಲು ಮನವಿ



ದೇವರಹಿಪ್ಪರಗಿ: ಇಂಡಿ–ದೇವರಹಿಪ್ಪರಗಿ ಮಾರ್ಗವಾಗಿ ಹೆಚ್ಚುವರಿ ಮತ್ತು ಸರಿಯಾದ ಸಮಯಕ್ಕೆ ಬಸ್ ಓಡಿಸಲು ವಿಜಯಪುರ ಸಾರಿಗೆ ಇಲಾಖೆ ಡಿ.ಎ.ಬಿರಾದಾರ ಅವರಿಗೆ ಕರವೇ(ಪ್ರವೀಣಶೆಟ್ಟಿ ಬಣ) ಜಿಲ್ಲಾಧ್ಯಕ್ಷ ಶ್ರೀಶೈಲ ಮುಳಜಿ ಮನವಿ ಪತ್ರ ಸಲ್ಲಿಸಿ ಆಗ್ರಹಿಸಿದ್ದಾರೆ. ನಂತರ ಮಾತನಾಡಿ, ಇಂಡಿ–ದೇವರ ಹಿಪ್ಪರಗಿ ಎರಡು ತಾಲೂಕ ಕೇಂದ್ರಗಳಾಗಿದ್ದು, ಈ ರಸ್ತೆಯು ರಾಜ್ಯ ಹೆದ್ದಾರಿವಾಗಿದ್ದು, ಈ ಮಾರ್ಗದಲ್ಲಿ ದಿನ ನಿತ್ಯ ಸುಮಾರು ಸಾವಿರಾರು ಪ್ರಯಾಣಿಕರು ಪ್ರಯಾಣಿಸುತ್ತಾರೆ. ಸಾರ್ವಜನಿಕರು, ಶಿಕ್ಷಕರು, ಸರ್ಕಾರಿ ಅಧಿಕಾರಿಗಳು ಹಾಗೂ ಶಾಲಾ ಮಕ್ಕಳು ಹೆಚ್ಚಿನ ಸಂಖ್ಯೆಯಲ್ಲಿ ಪ್ರಯಾಣಿಸುತ್ತಾರೆ. ಹೀಗಾಗಿ ಈ ಮಾರ್ಗದಲ್ಲಿ ಬಸ್ ಸಂಖ್ಯೆ ಕಡಿಮೆ ಆಗಿದ್ದು, ಸರಿಯಾದ ಸಮಯಕ್ಕೆ ಓಡುವುದಿಲ್ಲ. ಇಲ್ಲಿನ ಪ್ರಯಾಣಿಕರಿಗೆ ಮತ್ತು ಸಾರ್ವಜನಿಕರಿಗೆ ತೊಂದರೆ ಆಗುತ್ತಿದ್ದು, ಕೂಡಲೇ ಹೆಚ್ಚಿನ ಬಸ್ ವ್ಯವಸ್ಥೆ ಮಾಡಬೇಕು. ಎಂದು ಮನವಿ ಮಾಡಲಾಯಿತು ಎಂದರು.ಈ ವೇಳೆ ಮಲಕಾಜಪ್ಪ ಸಾಹುಕಾರ ಚಂಡಕಿ, ಕರವೇ ತಾಲೂಕು ಅಧ್ಯಕ್ಷ ರಹಿಮಾನ್ ಕನಕಲ್, ಜಾವೀದ್ ಕೊಲ್ಹಾರ ಇದ್ದರು.



ದೇವರಹಿಪ್ಪರಗಿ: ಪಟ್ಟಣದ ಬಿಎಲ್‌ಡಿಇ ಸಂಸ್ಥೆಯ ಎ.ಬಿ.ಸಾಲಕ್ಕಿ ಪಪೂ ಕಾಲೇಜ ಹಾಗೂ ಸಿಂದಗಿ ಪ್ರಾದೇಶಿಕ ಮತ್ತು ಸಾಮಾಜಿಕ ಅರಣ್ಯ ವಲಯದ ಸಂಯೋಗದ ಕಾಲೇಜಿನ ಆವರಣದಲ್ಲಿ ಸಸಿ ನೆಟ್ಟು ಪರಿಸರ ದಿನಾಚರಣೆ ಆಚರಿಸಲಾಯಿತು. ತಹಶೀಲ್ದಾರ್ ನಿಂಗಪ್ಪ ಬಿರಾದಾರ, ಪ್ರಾಂಶುಪಾಲ ವಿ.ಜಿ.ಹೂನಳ್ಳಿ, ಸಿಬ್ಬಂದಿಗಳಾದ ವಿ.ಆರ್. ಹಿರೇಮಠ, ಕೆ.ವಿ.ಒಡೆಯರ್, ಅರಣ್ಯ ಇಲಾಖೆ ಸಿಬ್ಬಂದಿ, ಸಂಸ್ಥೆ ಸಿಬ್ಬಂದಿ, ವಿದ್ಯಾರ್ಥಿಗಳು ಇದ್ದರು.

ಗ್ಯಾಸ್ ಬೆಲೆ ಏರಿಕೆ ಕೇಂದ್ರ ಸರ್ಕಾರದ ಕೊಡುಗೆ

ವಿಜಯಪುರ: ಗ್ಯಾಸ್ ಬೆಲೆ ಏರಿಕೆಯಾಗುತ್ತಿರುವುದು ನೋಡಿದರೆ ಇದು ಬಹುತ್ ಅಚ್ಛೇ ದಿನ, ಒಳ್ಳೆಯ ದಿನಗಳ ಬರುತ್ತಿವೆ ಎಂದು ಸಚಿವ ಎಂ.ಬಿ.ಪಾಟೀಲ ಲೇವಡಿ ಮಾಡಿದರು.

ನಗರದಲ್ಲಿ ಗ್ಯಾಸ್ ದರ ಏರಿಕೆ ವಿಚಾರಕ್ಕೆ ಪ್ರತಿಕ್ರಿಯಿಸಿದ ಅವರು, ನರೇಂದ್ರ ಮೋದಿ ಪ್ರಧಾನಿಯಾಗುವ ಮುಂಚೆ, ಯುಪಿಎ ಸರ್ಕಾರದ ಮನಮೋಹನ ಸಿಂಗ್ ಅವರು ಇದ್ದಾಗ. ಪೆಟ್ರೋಲ್ ಬೆಲೆ 65 ಇತ್ತು ಡಿಸೆಲ್ ಬೆಲೆ 58, ಗ್ಯಾಸ್ ಸಿಲಿಂಡರ್ ಬೆಲೆ 415 ಇತ್ತು. ಡಾಲರ್ ಬೆಲೆ 58, 60 ರೂಪಾಯಿ ಇತ್ತು. ಈಗ ಡಾಲರ ಬೆಲೆ 96 ಆಗಿದೆ ಇದೆಲ್ಲವೂ ಅಚ್ಚೆ ದಿನದ ಭಾಗ ಎಂದರು. ಸಬ್ ಕಾ ಸಾಥ್ ಸಬ್ ಕಾ ವಿಶ್ವಾಸ, ರೈತರ ಆದಾಯ ದ್ವಿಗುಣ ಮಾಡುತ್ತೇವೆ ಎಂದರು. 2 ಕೋಟಿ ಉದ್ಯೋಗ ಸೃಷ್ಟಿ ಮಾಡುತ್ತೇನೆ ಎಂದರು, ರಸಗೊಬ್ಬರ ಸಿಗುತ್ತಿಲ್ಲ, ಬೆಲೆ ತ್ರಿಬಲ್ ಆಗಿದೆ. ಪ್ರತಿ ವರ್ಷ 2 ಕೋಟಿ ಉದ್ಯೋಗ ಸೃಷ್ಟಿ ಮಾಡುತ್ತೇವೆ ಎಂದಿದ್ದರು, 12 ವರ್ಷದಲ್ಲಿ 24 ಕೋಟಿ ಉದ್ಯೋಗ ಸೃಷ್ಟಿ ಆಗಬೇಕಿತ್ತು. ಪಕೋಡಾ ಮಾರಲು ಹೋಗು ಎಂದರು. ಈಗ ಅದೂ ಕೂಡ ಕಷ್ಟವಾಗಿದೆ ಗ್ಯಾಸ್ ಇಲ್ಲ. ಅಡುಗೆ ಎಣ್ಣೆ ಬೆಲೆ ಎರಡನೂರು ತಲುಪಿದೆ. ಇದೆಲ್ಲವೂ ನರೇಂದ್ರ ಮೋದಿ ವಿಶ್ವಗುರುವಿನ ಕೊಡುಗೆ ಎಂದು ದೂರಿದರು. ಬಿಡದಿ ಟೌನ್‌ಶಿಪ್‌ಗೆ ವಿರೋಧ ವಿಚಾರ ಬಗ್ಗೆ, ಹಿಂದೆ ಇದೇ ಎಚ್. ಡಿ. ಕುಮಾರಸ್ವಾಮಿ ಇದ್ದಾಗ ಬಿಡದಿ ಟೌನ್ ಶಿಪ್ ಮಾಡಲು ಹೊರಟಿದ್ದರು. ಈಗ ವಿರೋಧ ಪಕ್ಷದಲ್ಲಿ ವಿರೋಧ ಮಾಡ್ತಾರೆ. ಮುಖ್ಯಮಂತ್ರಿಗಳು ಅಲ್ಲಿನ ರೈತರು ಜನರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಕೆಲಸ ಮಾಡುತ್ತಾರೆ ಎಂದರು.



ವಿಜಯಪುರ: ವಿಜಯಪುರದಿಂದ ಹುಬ್ಬಳ್ಳಿಗೆ ತೆರಳುತ್ತಿರುವ ಸಂದರ್ಭದಲ್ಲಿ ಮಾರ್ಗ ಮಧ್ಯದಲ್ಲಿ ಪಟ್ಟಣದ ಕಾಂಗ್ರೆಸ್ ಕಾರ್ಯಕರ್ತರು ಪ್ರವಾಸಿ ಮಂದಿರದಲ್ಲಿ ಸಚಿವ ಯತೀಂದ್ರ, ಆತ್ಮೀಯವಾಗಿ ಸನ್ಮಾನಿಸಿದರು. ಈ ವೇಳೆ ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯ ಡಾ.ಎಂಸ.ಜಿ.ಕಿತ್ತಲಿ, ಸಂತೋಷ ಕ್ಷತ್ರಿ, ದೇವರಾಜ ಚೂರಿ, ಅಯ್ಯಪ್ಪ ಪವಾರ ಇತರರು ಇದ್ದರು.

ಪ್ರತಿಭಾ ಪುರಸ್ಕಾರ, ಅಹಲ್ಯಾಬಾಯಿ ಹೊಳ್ಕರ್ ಜಯಂತಿ | ಡಾ.ಯತೀಂದ್ರ ಅಭಿಮತ

ಮಕ್ಕಳಿಗೆ ಉತ್ತಮ ಶಿಕ್ಷಣ ನೀಡಿ

ವಿಜಯಪುರ: ಶೋಷಿತ ಸಮಾಜಗಳಿಗೆ ಸಾಮಾಜಿಕ ನ್ಯಾಯ ಕೊಡಬೇಕು ಎನ್ನುವ ಸಂವಿಧಾನದ ಆಶಯಗಳ ಕನಸುಗಾರ. ಸಿದ್ದರಾಮಯ್ಯನವರ ಸ್ಥಾನ ಯಾರಿಂದಲೂ ತುಂಬಲು ಸಾಧ್ಯವಿಲ್ಲ ಎಂದು ನಗರಾಭಿವೃದ್ಧಿ ಸಚಿವ ಡಾ.ಯತೀಂದ್ರ ಸಿದ್ದರಾಮಯ್ಯ ಹೇಳಿದರು.



ನಗರದ ಕಂದಗಲ್ ಹಣಮಂತರಾಯ ರಂಗಮಂದಿರದಲ್ಲಿ ಜರುಗಿದ ಜಿಲ್ಲಾ ಕುರುಬ ಸಮಾಜದ ಪ್ರತಿಭಾ ಪುರಸ್ಕಾರ ಹಾಗೂ ಲೋಕ ಮಾತೆ ಅಹಲ್ಯಾಬಾಯಿ ಹೊಳ್ಕರ್ ಜಯಂತಿ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿ, ಸಿದ್ದರಾಮಯ್ಯ ಅವರ ಸ್ಥಾನ ತುಂಬುದು ಅಷ್ಟು ಸುಲಭದ ಕೆಲಸವಲ್ಲ, ಆದರೂ ನಾನು ಆ ಪ್ರಯತ್ನ ಮಾಡುತ್ತೇನೆ. ಎಲ್ಲ ಶೋಷಿತ ಸಮುದಾಯಗಳನ್ನು ಒಟ್ಟಿಗೆ ತೆಗೆದುಕೊಂಡು ಹೋಗುವ ಕೆಲಸವನ್ನು ಮಾಡುತ್ತೇನೆ ಎಂದು ಭರವಸೆ ನೀಡಿದರು.

ಅಹಲ್ಯಾಬಾಯಿ ಹೊಳ್ಕರ್ ಅವರನ್ನು ರಾಜಮಾತೆ ಎಂದು ಕರೆಯುತ್ತೇವೆ. ಅವರು ಸಾಮಾನ್ಯರಲ್ಲ ಅಪ್ರತಿಮ ಹೋರಾಟಗಾರ್ತಿ, ಶ್ರೇಷ್ಠ ಮಹಿಳೆ. ನಮ್ಮ ಸಮಾಜದ ಭವಿಷ್ಯ ಭದ್ರವಾಗಿರಬೇಕಾದರೆ, ನಾವು ನಮ್ಮ ಮಕ್ಕಳಿಗೆ ಉತ್ತಮ ಶಿಕ್ಷಣ ನೀಡಿ ಅವರ ಭವಿಷ್ಯ ರೂಪಿಸಬೇಕು. ಯಾವುದೇ ಸಮಾಜ ಬೆಳೆಯಬೇಕಾದರೆ ಶಿಕ್ಷಣ, ಸಂಘಟನೆ ಹಾಗೂ ಹೋರಾಟ ಮೂರನ್ನು ಅವಶ್ಯವಾಗಿ ಮಾಡಬೇಕು. ಕಷ್ಟವಾದರೂ ಪರವಾಗಿಲ್ಲ, ನಮ್ಮ ಮಕ್ಕಳಿಗೆ ಉನ್ನತ ಶಿಕ್ಷಣ ನೀಡಬೇಕು. ಆ ಮಕ್ಕಳು ಉನ್ನತ ಹುದ್ದೆ ಪಡೆದು ತನ್ನ ಕುಟುಂಬ ಜೊತೆಗೆ ಇಡೀ ಸಮಾಜವನ್ನೇ ಅಭಿವೃದ್ಧಿಪಡಿಸಲು ಸಾಧ್ಯವಾಗುತ್ತದೆ ಎಂದರು.

ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ನಾಗಲಕ್ಷ್ಮಿ ಚೌದರಿ ಮಾತನಾಡಿ, ಹೆಣ್ಣುಮಕ್ಕಳಿಗೆ ಬಹಳಷ್ಟು ಜವಾಬ್ದಾರಿ ಇರುತ್ತೆ.ಯಾವುದೇ ಸಮಾಜ ಮುಂದೆ ಸಾಗಬೇಕಾದರೆ, ಆ ಸಮಾಜದ ಹೆಣ್ಣುಮಕ್ಕಳು ಬೆಳೆಬೇಕು. ಹೆಣ್ಣುಮಕ್ಕಳಿಗೆ ಎಲ್ಲರೂ ಶಿಕ್ಷಣ ಕೊಡಿಸಿ, ವಿದ್ಯಾರ್ಥಿ–ವಿದ್ಯಾರ್ಥಿನಿಯರು ಓದಿನಲ್ಲಿ ಹೆಚ್ಚಿನ ಆಸಕ್ತಿ ತೋರಿಸಬೇಕು. ಓದುವ ಸಮಯದಲ್ಲಿ ಪ್ರೀತಿ–ಪ್ರೇಮಾ ಅಂತಾ ಬದುಕು ಹಾಳು ಮಾಡಿಕೊಳ್ಳಬೇಡಿ. ನಿಮ್ಮ ಗುರಿ ಸಾಧನೆ ಹಾದಿಯಲ್ಲಿ ತಂದೆ–ತಾಯಿಗಳ ಶ್ರಮವನ್ನು ನೆನಪಿನಲ್ಲಿ ಇಟ್ಟುಕೊಳ್ಳಬೇಕು. ಸಾಧನೆಗೆ ಮುಂದಿಟ್ಟ ಹೆಜ್ಜೆಯನ್ನು ಎಂದಿಗೂ ಹಿಂಡಿದಬಾರದು ಎಂದರು.

ಗೋಳಸಾರದ ಅಭಿನವ ಪುಂಡಲಿಂಗ ಶ್ರೀಗಳು ದಿವ್ಯ ಸಾನ್ನಿಧ್ಯ ವಹಿಸಿದ್ದರು.

ಮಹಾನಗರ ಪಾಲಿಕೆ ಮಹಾಪೌರ ಎಂ.ಎಸ್.ಕರಡಿ, ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಗಂಗಾಧರ ಸಂಬಣ್ಣಿ, ಆಯುಕ್ತ ವಿಜಯ ಮೆಕ್ಕಳಕ್ಕಿ, ಶಾಸಕ ಉಮೇಶ ಮೇಟಿ, ಜಿಪಂ ಮಾಜಿ ಅಧ್ಯಕ್ಷೆ ಸುಜಾತ ಕಳ್ಳಿಮನಿ, ಪ್ರೊ.ಸುನಿಲ ತೊಂಟಾಪುರ, ರವಿ ಕಿತ್ತೂರ, ಸೋಮನಾಥ ಕಳ್ಳಿಮನಿ, ಮೋಹನ ಮೇಟಿ, ಮೋಹನ ದಳವಾಯಿ, ರಾಜು ಕಂಬಾಗಿ, ರಾಜು ಕಂಕಣವಾಡಿ, ಜಿ.ವಿ.ವಿನಾಯಕುಮಾರ, ಚಂದ್ರಶೇಖರ ನುಗ್ಗಲಿ, ಹಿಂದುಳಿದ ವರ್ಗಗಳ ಕಲ್ಯಾಣಧಿಕಾರಿ ಪುಂಡಲೀಕ ಮಾನವರ, ಈರಣ್ಣ ಆಶಾಪುರ, ಸಿದ್ದಪ್ಪ ಬೆಂಜಗೇರಿ, ಸಚಿವಲಯದ ಅಧಿಕಾರಿ ಮಹಾದೇವ, ಜಿಲ್ಲಾ ಶಸ್ತ್ರಚಿಕಿತ್ಸಕ ಸಂಗಮೇಶ ಲಕ್ಕಣ್ಣವರ, ಹಾರ್ಟ್ ತಜ್ಞ ಗೌತಮ್ ವಗ್ಗರ, ಖ್ಯಾತ ವೈದ್ಯ ಡಾ.ರವೀಂದ್ರ ಮದ್ದರಕಿ ಇದ್ದರು.

ವೈದರ ಕಾರ್ಯ ಶ್ಲಾಘನೀಯ: ಡಾ.ಸಾರ್ವಭೌಮ

ಇಂಡಿ: ಸಮಾಜದ ಏಳ್ಗೆಗಾಗಿ ಬಡವ ಬಲಿದ ಎಂಬ ಭೇದವಿಲ್ಲದೆ ಬಡವರಿಗೆ ಚಿಕಿತ್ಸೆ ನೀಡಿ ಅವರ ಆರೋಗ್ಯ ಕಾಪಾಡಿ ಗುಣಮುಖ ವಾಗುವಂತೆ ಮಾಡುವವವರು ವೈದ್ಯರು. ಇಂದು ವೈದ್ಯ ಸೇವೆ ಸಲ್ಲಿಸಿ ನಿವೃತ್ತರಾಗುತ್ತಿರುವ ಡಾ.ರಾಜೇಶ ಕೋಳೆಕರ ಅವರ ಸೇವೆ ಶ್ಲಾಘನೀಯ ಎಂದು ಜಿಲ್ಲಾ ಮಾಜಿ ಆರೋಗ್ಯ ವೈದ್ಯಾಧಿಕಾರಿ ಮತ್ತು ಮಾಜಿ ಶಾಸಕ ಡಾ.ಸಾರ್ವಭೌಮ ಬಗಲಿ ಹೇಳಿದರು.

ನಗರದ ಶಂಕರ ಪಾರ್ವತಿ ಮಂಗಲ ಕಾರ್ಯಾಲಯದಲ್ಲಿ ಆರೋಗ್ಯ ಇಲಾಖೆಯಲ್ಲಿ ತಾಲೂಕಾ ಆರೋಗ್ಯ ಅಧಿಕಾರಿಯಾಗಿ ಸೇವೆ ಸಲ್ಲಿಸಿ ನಿವೃತ್ತರಾದ ಡಾ.ರಾಜೇಶ ಕೋಳೆಕರ ಇವರ ನಿವೃತ್ತಿ ಬಿಳ್ಕೊಡುವ ಸಮಾರಂಭದಲ್ಲಿ ಮಾತನಾಡಿದರು.

ತಾಪಂ ಇಒ ಮಹಾದೇವಪ್ಪ ಏವೂರ ಮಾತನಾಡಿ, ಕೋವಿಡ್ ಸಮಯದಲ್ಲಿ ಆಸ್ಪತ್ರೆ ಮುಖ್ಯ ವೈದ್ಯಾಧಿಕಾರಿಯಾಗಿ ತಮ್ಮ ತಂಡದ ಜೊತೆಗೆ ಕೋವಿಡ್ ಚಿಕಿತ್ಸೆ ನೀಡಿ ನೂರಾರು ಜನರ ಆರೋಗ್ಯ ಕಾಪಾಡಿರುವದು ಡಾ.ರಾಜೇಶ ಕೋಳೆಕರ ಇವರ ಕಾರ್ಯ ಪ್ರಶಂಸನೀಯ ಎಂದರು.

ನಿವೃತ್ತ ಡಾ.ರಾಜೇಶ ಕೋಳೆಕರ ನನ್ನ ವೈದ್ಯ ವೃತ್ತಿ ಜೀವನದಲ್ಲಿ ಎಲ್ಲರು ಸಹಕಾರ ನೀಡಿದ್ದರಿಂದ 30 ವರ್ಷಗಳ ಕಾಲ ಸುದಿರ್ಘವಾಗಿ ಸೇವೆ ಮಾಡಲು ಸಾಧ್ಯವಾಗಿದೆ ಎಂದರು.

ಕೃಷಿ ಉಪ ನಿರ್ದೇಶಕರ ಚಂದ್ರಕಾಂತ ಪವಾರ, ಆರೋಗ್ಯ ಅಧಿಕಾರಿ ಡಾ.ಸಂಪತಕುಮಾರ ಗುಣಾರಿ, ಡಾ.ಅನೀಲ ವಾಲಿ, ಡಾ.ಸಂತೋಷ ಪವಾರ, ಪ್ರೀತಿ ಕೋಳೆಕರ, ಲಲಿತಾ ಅಂಗಡಿ ಮತ್ತು ಧನರಾಜ ಮುಜಗೊಂಡ ನಿವೃತ್ತ ಡಾ.ರಾಜೇಶ ಕೋಳೆಕರ ಮಾತನಾಡಿದರು.

ಈ ವೇಳೆ ಕೃಷ್ಣ ಕುಮಾರ ಜಾಧವ, ಡಾ.ಮಲ್ಲನಗೌಡ ಬಿರಾದಾರ, ಸಂತೋಷ ಶೆಟ್ಟಿ, ಹಿರಿಯ ವೈದ್ಯ ಡಾ.ಎಂ.ಜೆ.ಪಾಟೀಲ, ಸಿಪಿಐ ಪ್ರದೀಪ ಬಿಸೆ, ಡಾ.ವಿಜಯಕುಮಾರ ಕಟಕದೊಂಡ, ಡಾ.ಎಸ್.ಐ ಮೇತ್ರಿ, ಜಗದೀಶ ಕ್ಷತ್ರಿ, ವಿಜಯಕುಮಾರ ಪಾಟೀಲ, ಸಿ.ಎಂ.ತಾಳಿಕೋಟಿ, ಆಸ್ಪತ್ರೆ ವೈದ್ಯಾಧಿಕಾರಿ ಆರ್.ಎಸ್.ಇಂಗಳೆ ನಜಿಮಾ ಕಾಖಂಡಕಿ, ಗುರುಬಾಯಿ ಹಿರೇಪಟ್ಟ ಮತ್ತಿತರಿದ್ದರು.

ವೈದ್ಯ ಪ್ರದೀಪ ಗಜಾಕೋಶ, ಮನೋಜ ಗಿಡಗಂಟಿ, ವಿಪುಲ ಕೋಳೆಕರ, ಅಮಿತ ಕೋಳೆಕರ, ರವಿ ಅಂಬೇವಾಡಿ, ವಿಕಾಸ ಸಿಂದಗಿ, ವಿಜಯಾದೇವಿ ಹಾದಿಮನಿ ಮತ್ತಿತರಿದ್ದರು.



ಪರಿಸರ ಸಂರಕ್ಷಣೆ ಮೊದಲ ಆದ್ಯತೆಯಾಗಲಿ: ವಿದ್ಯಾಧರ

ತಾಳಿಕೋಟೆ: ಇರುವುದೊಂದೇ ಭೂಮಿಯನ್ನು ನಮಗಾಗಿ ಅಲ್ಲದಿದ್ದರೂ ಮುಂದಿನ ಪೀಳಿಗೆಗೆ ಉಳಿಸಲು ಪರಿಸರ ಸಂರಕ್ಷಣೆ ನಮ್ಮ ಮೊದಲ ಆದ್ಯತೆಯಾಗಬೇಕಿದೆ ಎಂದು ಆಲೂರ ಸರ್ಕಾರಿ ಪ್ರೌಢಶಾಲೆ ಮುಖ್ಯಶಿಕ್ಷಕ ವಿದ್ಯಾಧರ ಯಾತಗಿರಿ ಹೇಳಿದರು.

ಇಲ್ಲಿನ ಕರ್ನಾಟಕ ಪಬ್ಲಿಕ್ ಸ್ಕೂಲ್ ಆವರಣದಲ್ಲಿ ಹಸಿರು ಸಂಪದ ಬಳಗ, ಅರಣ್ಯ ಇಲಾಖೆ ಹಾಗೂ ಪುರಸಭೆ ಸಹಯೋಗದಲ್ಲಿ ಆಯೋಜಿಸಿದ್ದ ವಿಶ್ವ ಪರಿಸರ ದಿನಾಚರಣೆಯಲ್ಲಿ ಅವರು ಉಪನ್ಯಾಸ ನೀಡಿದರು. ಮಾನವನು ಐಷಾರಾಮಿ ಜೀವನಕ್ಕಾಗಿ ಸಂಪನ್ಮೂಲ ನಾಶ ಮಾಡುತ್ತಿದ್ದಾನೆ. ನಿಸರ್ಗದ ಜೀವಿಗಳ ನಡುವಿನ ಅವಲಂಬನೆ ಕೊಂಡಿ ಕಳಚಿದರೆ ಪರಿಸರ ಅಸಮತೋಲನಗೊಳ್ಳುತ್ತದೆ. ಪ್ರಕೃತಿಯಲ್ಲಿ ಪರ್ಯಾಯ ಶಕ್ತಿಮೂಲಗಳ ಬಳಕೆಯಾಗಬೇಕು ಎಂದರು.

ಅರಣ್ಯ ಇಲಾಖೆ ವೃಕ್ಷ ರಕ್ಷಕ ಮಹಾಂತೇಶ ಹಾದಿಮನಿ ಮಾತನಾಡಿ,ಅರಣ್ಯ ಇಲಾಖೆಯಿಂದ ರೈತರಿಗೆ ಕೃಷಿ ಅರಣ್ಯ ಯೋಜನೆ' ಅಡಿ ಕಡಿಮೆ ದರದಲ್ಲಿ ಸಸಿಗಳು ಲಭ್ಯವಿದ್ದು, ಇದರ ಸದುಪಯೋಗ ಪಡಿಸಿಕೊಳ್ಳಿ ಎಂದರು.

ಪುರಸಭೆ ಹಿರಿಯ ಆರೋಗ್ಯ ನಿರೀಕ್ಷಕ ಫಿರೋಜ ಮುಲ್ಲಾ, ಕ್ಷೇತ್ರ ಸಮನ್ವಯಾಧಿಕಾರಿ ಆರ್.ಬಿ.ದಮ್ಮೂರಮಠ, ಹಸಿರು ಸಂಪದ ಬಳಗದ ಅಧ್ಯಕ್ಷ ಡಾ.ವಿ.ಎಸ್.ಕಾರ್ಚಿ,ಮಹಿಳಾ ಘಟಕದ ಅಧ್ಯಕ್ಷೆ ಸುಮಂಗಲಾ ಕೋಳೂರ ಮಾತನಾಡಿದರು. ಸಭಾ ಕಾರ್ಯಕ್ರಮದ ಬಳಿಕ ಶಾಲಾ ಆವರಣದಲ್ಲಿ ಸಸಿ ನೆಡಲಾಯಿತು. ಅಪ್ಪಾಸಾಹೇಬಗೌಡ ಮೂಲಿಮನಿ ಪ್ರಾಸ್ತಾವಿಕವಾಗಿ ಮಾತನಾಡಿದರು.

ಬಳಗದ ಪದಾಧಿಕಾರಿಗಳಾದ ಆರ್.ಎಸ್.ಪಾಟೀಲ, ಕಾಶಿನಾಥ ಮುರಾಳ, ಪ್ರಭುಗೌಡ ಮದರಕಲ್ಲ, ಅಲ್ಲಾಭಕ್ಷ ನಮಾಜಕಟ್ಟಿ, ಡಾ.ಆನಂದ ಭಟ್ಟ, ಡಾ.ಶ್ರೀಶೈಲ ಹುಕ್ಕೇರಿ, ಡಾ.ನಜೀರ ಕೊಳ್ಯಾಳ, ರಾಜು ಸೊಂಡೂರ, ಡಾ.ಗುರು ಚಿತ್ತರಗಿ, ಸಿ.ಎಂ.ಹಿರೇಮಠ, ಅನಿತಾ ಸಜ್ಜನ, ದ್ಯಾಮನಗೌಡ ಪಾಟೀಲ, ಸಂಗನಗೌಡ ಅಸ್ಕಿ, ರುದ್ರಮ್ಮ ದೇಸಾಯಿ, ದಿನಕರ ಜೋಶಿ, ಶಫೀಕ ಇನಾಮದಾರ, ಪ್ರಕಾಶ ಸುರಪುರ, ಟಿ.ಸಿ.ಸಜ್ಜನ, ಬಸವರಾಜ ಬಲಕಲ್ಲ, ಪ್ರವೀಣ ಸರ್, ಸಾಹಿಲ ಮುರಾಳ, ಹುಸೇನ್ ಪಟೇಲ, ರಾಜು ವಿಜಾಪುರ, ಪ್ರಶಾಂತ ಜನಾದ್ರಿ, ಪ್ರಶಾಂತ ಅಂಬಿಗೇರ, ರಾಜು ಅಲ್ಲಾಪುರ, ಬಾಬುಸಾಬ ವಠಾರ, ಎಂ.ಎಂ.ಅತ್ತಾರ, ಶರಣು ಕಸ್ತೂರಿ, ಗೋಪಾಲ ಕಟ್ಟಿಮನಿ, ಸಂಚಾಲಕ ಎಸ್.ಎಸ್.ಗಡೇದ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಗುಂಡೂರಾವ್ ಧನಪಾಲ ಸ್ವಾಗತಿಸಿದರು. ಸಿದ್ದು ಕರಡಿ ನಿರ್ವಹಿಸಿದರು. ಕಾಶಿನಾಥ ಸಜ್ಜನ ವಂದಿಸಿದರು.



ಪ್ರತಿಯೊಬ್ಬರೂ ಸಸಿ ನೆಟ್ಟು ಸಂರಕ್ಷಣೆ ಮಾಡಿ: ವಿನೂತ ಕಲ್ಲೂರ

ಬಸವನಬಾಗೇವಾಡಿ: ಪ್ರತಿಯೊಬ್ಬರು ಮನೆ ಅಂಗಳ, ಜಮೀನು ಬದಿಗಳು ಸೇರಿ ಖಾಲಿ ಇರುವ ಜಾಗಗಳಲ್ಲಿ ಸಸಿಗಳನ್ನು ನಟ್ಟು ಅವುಗಳನ್ನು ಸಂರಕ್ಷಣೆ ಮಾಡಿದಲ್ಲಿ ಶುದ್ಧ ಗಾಳಿ ಪಡೆಯಲು ಸಾಧ್ಯ ಎಂದು ವಿವೇಕ ಬ್ರಿಗೇಡ್ ಮುಖ್ಯಸ್ಥ ವಿನೂತ ಕಲ್ಲೂರ ಹೇಳಿದರು.



ತಾಲೂಕಿನ ಹಂಗರಗಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಹಾಗೂ ವಿವೇಕ ಬ್ರಿಗೇಡ್ ಸಂಸ್ಥೆ ಸಹಯೋಗದೊಂದಿಗೆ ವಿಶ್ವ ಪರಿಸರ ದಿನಾಚರಣೆ ನಿಮಿತ್ತ ಜಾಗೃತಿ ಜಾಥಾ ಕಾರ್ಯಕ್ರಮದಲ್ಲಿ ಮಾತನಾಡಿದರು.

ರವಿಗೌಡ ಚಿಕ್ಕೊಂಡ ಮಾತನಾಡಿ, ನಮ್ಮಲ್ಲಿರಲ್ಲಿ ಪರಿಸರ ಕುರಿತು ಕಾಳಜಿ ಇರಬೇಕು. ಪರಿಸರ ಸಂರಕ್ಷಣೆ ಮನೆಗೊಂದು ಮರ ಊರಿಗೊಂದು ವನ ಇರಬೇಕೆಂದು ಹೇಳಿದರು.

ವಿರಕ್ತಮಠದ ಸಿದ್ದಲಿಂಗಶ್ರೀಗಳು ಮಾತನಾಡಿ ಪರಿಸರವನ್ನು ನೈರ್ಮಲ್ಯವಾಗಿ ಇಟ್ಟುಕೊಳ್ಳಬೇಕಾದರೆ ಸಸಿಗಳನ್ನು ನಟ್ಟು ಬೆಳಸಬೇಕು. ಮೊಬೈಲ್ ಹೆಚ್ಚು ಬಳಸುವುದ್ದರಿಂದ ನಮ್ಮ ಆರೋಗ್ಯ ದುಷ್ಪರಿಣಾಮ ಬೀರುತ್ತದೆ. ಆದ್ದರಿಂದ ಮೊಬೈಲ್‌ನ್ನು ಬಿಟ್ಟು ಮಕ್ಕಳಿಗೆ ಪುಸ್ತಕ ಹಿಡಿಯಬೇಕು ಎಂದರು.

ಎಸ್.ಎಸ್.ಬಶೆಟ್ಟಿ ಮಾತನಾಡಿ, ಮಕ್ಕಳಲ್ಲಿ ಪರಿಸರದ ಪ್ರಜ್ಞೆ ಮೂಡಬೇಕು ಜ್ಞಾನ ಇದ್ದರೆ ಸಾಲದು ಅದನ್ನು ಸದುಪಯೋಗ ಪಡಿಸಿಕೊಳ್ಳುವ ಗುಣ ಇರಬೇಕು ಎಂದರು. ಈ ವೇಳೆ ಬಸವರಾಜ ಕೋಟಿ, ಶಿವಾನಂದ ತೋಳನೂರ, ಡಾ.ಮಲ್ಲಿಕಾರ್ಜುನ ಹಳ್ಳಿ ಸೇರಿ ಇತರರು ಇದ್ದರು. ಶಿಕ್ಷಕ ಪಿ.ಎಸ್. ಬಾಗೇವಾಡಿ ನಿರೂಪಿಸಿದರು. ಮುಖ್ಯಗುರು ಎಸ್.ಎಸ್.ಮುತ್ತಗಿ ವಂದಿಸಿದರು. ಪ್ರಾಥಮಿಕ ಶಾಲೆಯ ಸಿಬ್ಬಂದಿ ವರ್ಗ ಹಾಗೂ ಎಸ್ಡಿಎಂಸಿ ಸದಸ್ಯರೊಂದಿಗೆ ವಿದ್ಯಾರ್ಥಿಗಳು ಗ್ರಾಮದ ಪ್ರಮುಖ ಬೀದಿಗಳಲ್ಲಿ ಜಾಗೃತಿ ಜಾಥಾ ಕೈಗೊಂಡು ವಿಶ್ವ ಪರಿಸರ ದಿನಾಚರಣೆಯ ಆಚರಿಸಿದರು.

ಯೋಧರ ತ್ಯಾಗ ನಮಗೆಲ್ಲರಿಗೂ ಮಾದರಿಯಾಗಲಿ: ಪಾಟೀಲ

ವಿಜಯಪುರ: ಇವತ್ತು ದೇಶದ 140 ಕೋಟಿ ಜನರು ಸುರಕ್ಷಿತವಾಗಿದ್ದು ನೆಮ್ಮದಿಯ ಬದುಕನ್ನು ನಡೆಸುತ್ತಿದ್ದಾರೆ ಎಂದರೆ ಆದಕ್ಕೆ ಭಾರತೀಯ ಸೇನೆಯಲ್ಲಿ ಸೇವೆ ಸಲ್ಲಿಸುತ್ತಿರುವ ನಮ್ಮ ಯೋಧರೇ ಕಾರಣ ಎಂದು ಬಿಜೆಪಿ ಜಿಲ್ಲಾ ಮಾಜಿ ಅಧ್ಯಕ್ಷ ಆರ್.ಎಸ್.ಪಾಟೀಲ ಕೂಚಬಾಳ ಹೇಳಿದರು.



ಮುದ್ದೇಬಿಹಾಳ ಪಟ್ಟಣದ ಇದ್ಗಾ ಶಾದಿ ಮಹಲ್‌ನಲ್ಲಿ ಸಿಐಎಸ್‌ಎಫ್‌ನಲ್ಲಿ ಸೇವೆ ಸಲ್ಲಿಸಿ ತಾಯ್ನಾಡಿಗೆ ಮರಳಿದ ಅಧಿಕಾರಿ ಮೊಹಮ್ಮದ್ ಯೂಸಫ ಅಬ್ದುಲಸಾಬ ಹಾದಿಮನಿ ಅವರಿಗೆ ಹಮ್ಮಿಕೊಳ್ಳಲಾಗಿದ್ದ ಸ್ವಾಗತ ಹಾಗೂ ಸನ್ಮಾನ ಕಾರ್ಯಕ್ರಮದಲ್ಲಿ ಮಾತನಾಡಿದರು.

ಬಿಎಸ್‌ಎಫ್ ನಿವೃತ್ತ ಅಧಿಕಾರಿ ಡಾ.ಬಿ.ಎಸ್.ಯಾಳವಾರ ಮಾತನಾಡಿ, ಭಾರತೀಯ ಸೇನೆಯಲ್ಲಿ ಹಲವಾರು ಶಾಖೆಗಳಿವೆ ಇವು ದೇಶದ ರಕ್ಷಣೆಯಲ್ಲಿ ಪ್ರಮುಖ ಪಾತ್ರವಹಿಸುತ್ತವೆ. ಸಿಐಎಸ್‌ಫ್ ಕೂಡ ಒಂದು ಪ್ರಮುಖ ಶಾಖೆಯಾಗಿದೆ. ಹಾದಿಮನಿ ಇಲ್ಲಿ ಸೇವೆ ಸಲ್ಲಿಸಿ ನಿವೃತ್ತರಾಗಿದ್ದಾರೆ. ಅವರ ವಿಶ್ರಾಂತ ಬದುಕು ನೆಮ್ಮದಿಯಿಂದ ಕೂಡಿರಲೆಂದು ಹಾರೈಸುತ್ತೇನೆ ಎಂದರು.

ಸನ್ಮಾನ ಸ್ವೀಕರಿಸಿ ಮಾತನಾಡಿದ ಮೊಹಮ್ಮದ್ ಯೂಸೂಫ್ ಹಾದಿಮನಿ ಅವರು, ಇವತ್ತು ತಾವೆಲ್ಲರೂ ಸೇರಿ ನನ್ನನ್ನು ಗೌರವಿಸಿದ್ದೀರಿ ನಾನು ನಿಮ್ಮೆಲ್ಲರಿಗೆ ಚಿರಋಣಿಯಾಗಿದ್ದೇನೆ ಎಂದರು.

ಸಮಾರಂಭದ ಸಾನ್ನಿಧ್ಯ ವಹಿಸಿ ಮುಸ್ಲಿಂ ಧಾರ್ಮಿಕ ಮುಖಂಡ ಸಯ್ಯದ್ ಶಕೀಲ ಅಹ್ಮದ್ ಖಾಜಿ ಮಾತನಾಡಿ, ನಾವೆಲ್ಲರೂ ದೇಶಪ್ರೇಮನ್ನು ಬೆಳಸಿಕೊಂಡು ದೇಶದ ರಕ್ಷಣೆ ವಿಷಯ ಬಂದಾಗ ಒಂದಾಗಿ ಕೆಲಸ ಮಾಡಬೇಕಾಗಿದೆ. ಹಾದಿಮನಿ ಅವರಿಗೆ ಅಭಿನಂದಿಸುತ್ತೇನೆ ಎಂದರು.

ಬಸನಗೌಡ ಹಡಲಗೇರಿ ಕೊಣ್ಣೂರ, ಪಿಎಸ್‌ಐ ಎಸ್.ಎಂ.ಪಡಶೆಟ್ಟಿ, ಎಂ.ಎ.ಮೇತ್ರಿ, ಖಾಸೀಮಪಟೇಲ ಪಾಟೀಲ, ಎನ್.ಆರ್.ಮೊಕಾಶಿ, ರೋಶನ ಡೋಣಿ, ಸಾಹೇಬಗೌಡ ಅಸ್ಕಿ, ಮುಜಾಹಿದ್ ನಮಾಜಕಟ್ಟಿ, ಪಿ.ಕೆ.ಜಾಧವ, ಬಿ.ಬಿ.ಚೋಕಾವಿ, ನಿಂಗನಗೌಡ, ಮೊಹಮ್ಮದ್ ಹನೀಫ್ ಮಾಗಿ, ಮೆಹಬೂಬಸಾಬ ಮುಲ್ಲಾ, ಉಸ್ಮಾನಸಾಬ ಸಿಪಾಯಿ, ರೇಖಾ ಕೊಂಡಗೂಳಿ, ರೆಹ್ಮತಬಿ ಮೊಹಮ್ಮದ್ ಯೂಸೂಫ ಹಾದಿಮನಿ, ಕುಲಸೂಮಬೇಗಂ ಹಾದಿಮನಿ ಇದ್ದರು.

ಪೂರ್ವಾಗ್ರಹಿತರಾಗದೆ ವಂದೇ ಮಾತರಂ ಹಾಡಿ: ಬಸವರಾಜ

ಮುದ್ದೇಬಿಹಾಳ: ದೇಶದ ಸ್ವಾತಂತ್ರ್ಯ, ಸಮಾನತೆ, ಪರಂಪರೆ ಹಾಗೂ ಜನಮತದ ಬಿಂಬಿತವಾದ ವಂದೇ ಮಾತರಂ ಗೀತೆಯನ್ನು ಇಂದಿನ ಸಮಾಜ ಸರಿಯಾಗಿ ಅರ್ಥ ಮಾಡಿಕೊಳ್ಳಬೇಕಿದೆ. ದೇಶದ ಪ್ರಕೃತಿ, ಭೂಗೋಳ, ಏಕತ್ಮವಾದ, ಜ್ಞಾನದ ಆರಾಧನೆ ಹಾಗೂ ಶಕ್ತಿ ಪರಂಪರೆ ಆರಾಧಿಸುವ ಗೀತೆ, ದೇಶದ ಜನರ ಅಸ್ಮಿತೆಯನ್ನು ಬಿಂಬಿಸುತ್ತದೆ ಎಂದು ಶಿಕ್ಷಕ, ವಾಗ್ಮಿ ಬಸವರಾಜ ಹಂಚಲಿ ಹೇಳಿದರು.

ನಗರದ ಜ್ಞಾನಭಾರತಿ ವಿದ್ಯಾಮಂದಿರ ಶಾಲೆಯಲ್ಲಿ ನಡೆದ ಅಖಿಲ ಭಾರತ ಸಾಹಿತ್ಯ ಪರಿಷತ್ ತಾಲೂಕ ಘಟಕ ಉದ್ಘಾಟನೆ, ವಂದೇ ಮಾತರಂ ಗೀತ ಗಾಯನ ಹಾಗೂ ಉಪನ್ಯಾಸ ಕಾರ್ಯಕ್ರಮದಲ್ಲಿ ಮಾತನಾಡಿ, ಜಗತ್ತಿನಲ್ಲಿ ಕೂಡಿ ಬಾಳುವ, ಮಾನವ ಎಲ್ಲರೂ ಭಗವಂತನ ಸಂತಾನ ಎಂದು ಹೇಳುವ ಭಾರತದ ಮೇಲೆ ಸಾವಿರಾರು ದಾಳಿಗಳು ಆಗಿವೆ. ಆದರೆ ಅವರೆಲ್ಲ ಚಿಂತನೆಗಳು ಭೂಪಟದಿಂದ ಮಾಯವಾಗುವ ಪ್ರಶ್ನೆ ಎದುರಿಸುತ್ತಿವೆ. ಕಿರಣ ಪಾಟೀಲ್‌ದೇಶದಲ್ಲಿ ಧರ್ಮಗಳು ಬೇರೆ ಆಗಿರಬಹುದು. ಆದರೆ ಸ್ವತಂತ್ರ ಹೋರಾಟದಲ್ಲಿ ದೇಶವನ್ನು ಒಗ್ಗೂಡಿಸಿದ ವಂದೇ ಮಾತರಂ ಗೀತೆ ಭಾವ ದೊಡ್ಡದು. ಹೀಗಾಗಿ ಒಡೆದು ಆಳುವ ಜನರ ಮಾತಿಗೆ ಕಿವಿ ಕೊಡಬಾರದು. ಒಕ್ಕೂರಲಿನಿಂದ ವಂದೇ ಮಾತರಂ ಗೀತೆ ಹಾಡಬೇಕು ಎಂದರು.

ಜ್ಞಾನಭಾರತಿ ಶಾಲೆ ಅಧ್ಯಕ್ಷ ಬಿ.ಪಿ.ಕುಲಕರ್ಣಿ ಅಧ್ಯಕ್ಷತೆ ವಹಿಸಿ ಮಾತನಾಡಿ, ಸೈನಿಕರು, ಕೃಷಿಕರು, ವಿದ್ಯಾರ್ಥಿಗಳು, ಬೇರೆ ಬೇರೆ ಧರ್ಮೀಯರು ಹಾಗೂ ಸಾಹಿತಿಗಳಲ್ಲಿ ದೇಶ ಕಟ್ಟುವ ವಿಚಾರಗಳು ಸದಾ ಕಾಲ ಬರಬೇಕು. ವಂದೇ ಮಾತರಂ ಗೀತೆ, ದೇಶ ಕಟ್ಟುವ ವಿಚಾರದಲ್ಲಿ ಎಲ್ಲರನ್ನೂ ಒಗ್ಗೂಡಿಸುತ್ತದೆ. ನಿರಂತರವಾಗಿ ಸಮಾಜ ಕಟ್ಟುವ ಕೆಲಸ ನಡೆಯಬೇಕು ಎಂದರು.



ಬಸಯ್ಯ ನಂದಿಕೇಶ್ವರಮಠ ಅವರು ವಂದೇ ಮಾತರಂ ಗೀತೆ ಗಾಯನ ಮಾಡಿದರು, ಅಭಾಸಾಪ ಜಿಲ್ಲಾ ಘಟಕದ ಉಪಾಧ್ಯಕ್ಷ ಆನಂದ ಗೋಡ್ಸೆ, ಕಾರ್ಯದರ್ಶಿ ಸುಖಾಂತ ಕುಲಕರ್ಣಿ, ಸದಸ್ಯರಾದ ಶಿವಾನಂದ ಸಾಲಿಮಠ, ಸಾಹಿತಿ ನಾಗಪ್ಪ ಬಡಿಗೇರ, ವಿ.ವಿ.ಪಾಟೀಲ, ಶ್ರೀಶೈಲ ಹಟ್ಟಿ, ಮಹಾಂತೇಶ ಹುಣಶ್ಯಾಳ, ಮಹಾಂತೇಶ ಪಡದಾಳಿ, ಕಿರಣ ಪಾಟೀಲ್, ಕಾಶಿನಾಥ ಹುಗ್ಗಿ, ಶಿವಪುತ್ರ ಅಜಮನಿ, ಪ್ರಭುಗೌಡ ರಾರೆಡ್ಡಿ, ದೀಪರತ್ನಶ್ರೀ, ಅರುಣಾ ಡೋರನಹಳ್ಳಿ, ಹೇಮಾ ಬಿರಾದಾರ, ದಾನಮ್ಮ ಹಾದಿಮನಿ, ಸುಮಲತಾ ಗದಿಗೆಪ್ಪನವರ ಉಪಸ್ಥಿತರಿದ್ದರು, ತಾಲೂಕು ಘಟಕದ ಕಾರ್ಯದರ್ಶಿ, ಗಂಗಾಧರ ಪವಾಡಶೆಟ್ಟಿ ಕಾರ್ಯಕ್ರಮ ನಡೆಸಿಕೊಟ್ಟರು.

ಗೌರವಧನ ನೀಡಲು ಸಂಘದಿಂದ ಮನವಿ

ದೇವರಹಿಪ್ಪರಗಿ: ಮೊದಲ ಹಂತದ ರಾಷ್ಟ್ರೀಯ ಜನಗಣತಿಯ ಕಾರ್ಯವನ್ನು ನಿರ್ವಹಿಸಿದ ತಾಲ್ಲೂಕಿನ ಮೇಲ್ವಿಚಾರಕರು ಹಾಗೂ ಗಣತಿದಾರರಿಗೆ ಗೌರವಧನವನ್ನು ಜಮಾ ಮಾಡಬೇಕು ಹಾಗೂ ಕಳೆದ ವರ್ಷದಲ್ಲಿ ಒಳಮೀಸಲಾತಿ ಗಣತಿ ಹಾಗೂ ಸಾಮಾಜಿಕ ಹಾಗೂ ಶೈಕ್ಷಣಿಕ ಸಮೀಕ್ಷಾ ಕಾರ್ಯವನ್ನು ನಿರ್ವಹಿಸಿದ ತಾಲೂಕಿನ ಮೇಲ್ವಿಚಾರಕರು ಹಾಗೂ ಗಣತಿದಾರರಿಗೆ ಹಾಜರಾತಿ ಆದೇಶವನ್ನು ನೀಡಬೇಕು ಎಂದು ತಾಲ್ಲೂಕಿನ ತಹಶೀಲದಾರ ಆಗಿರುವ ನಿಂಗಣ್ಣ ಬಿರಾದಾರ ಅವರಿಗೆ ತಾಲೂಕಿನ ರಾಜ್ಯ ಸರ್ಕಾರಿ ನೌಕರರ ಸಂಘದಿಂದ ಮನವಿ ಸಲ್ಲಿಸಲಾಯಿತು.

ಪಟ್ಟಣದ ತಹಶೀಲ್ದಾರ ಕಚೇರಿ ಸಭಾಭವನದಲ್ಲಿ ತಹಶೀಲ್ದಾರ್ ನಿಂಗಪ್ಪ ಬಿರಾದಾರ ಅವರಿಗೆ ಮನವಿ ಪತ್ರ ಸಲ್ಲಿಸಿ ತಿಳಿಸಿದರು. ತಾಲೂಕಿನ ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಸಿ.ಬಿ.ಗಡಗಿ, ಶಿಕ್ಷಕರ ಸಂಘದ ಅಧ್ಯಕ್ಷ ಸದಾಶಿವ ಗುಡಿಮನಿ, ತಾಲೂಕು ಕಸಾಪ ಮಾಜಿ ಅಧ್ಯಕ್ಷ ಜಿ.ಪಿ.ಬಿರಾದಾರ, ಗಣತಿದಾರರಾದ ಮಲ್ಲಿಕಾರ್ಜುನ ಅಂಕಲಗಿ, ದಸ್ತಗೀರ ಬಗಲಿ, ಮಹ್ಮದ ಯೂನುಸ್ ಇದ್ದರು.



ಸಚಿವ ಡಾ.ಯತೀಂದ್ರಗೆ ಸನ್ಮಾನ



ದೇವರಹಿಪ್ಪರಗಿ: ಕರ್ನಾಟಕ ಸರ್ಕಾರದ ನೂತನ ಸಚಿವರಾಗಿ ಪ್ರಮಾಣವಚನ ಸ್ವೀಕರಿಸಿದ ಬಳಿಕ ಮೊದಲ ಬಾರಿಗೆ ವಿಜಯಪುರ ಜಿಲ್ಲೆಗೆ ಹಾಗೂ ಜಿಲ್ಲಾ ಕಾಂಗ್ರೆಸ್ ಕಚೇರಿಗೆ ಆಗಮಿಸಿದ ಸಚಿವ ಡಾ.ಯತೀಂದ್ರ ಸಿದ್ದರಾಮಯ್ಯ ಅವರಿಗೆ ದೇವರಹಿಪ್ಪರಗಿ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಮುಖಂಡ ಮಲ್ಲನಗೌಡ ಬಿರಾದಾರ(ಕೆಸರಟ್ಟಿ) ಪುಷ್ಪಗುಚ್ಛ ನೀಡಿ ಆತ್ಮೀಯವಾಗಿ ಸ್ವಾಗತಿಸಿ ಗೌರವಿಸಿದರು.

ಸಚಿವ ಎಂ.ಬಿ.ಪಾಟೀಲ ಅವರ ಉಪಸ್ಥಿತಿಯಲ್ಲಿ ಕಾರ್ಯಕ್ರಮ ನಡೆಯಿತು. ನಂತರ ಮಾತನಾಡಿ, ನೂತನ ಸಚಿವರಾದ ಡಾ. ಯತೀಂದ್ರ ಸಿದ್ದರಾಮಯ್ಯ ಅವರ ಜನಪರ ಆಡಳಿತ ಹಾಗೂ ಅಭಿವೃದ್ಧಿ ಕಾರ್ಯಗಳಿಗೆ ಶುಭ ಹಾರೈಸಲಾಯಿತು. ಈ ವೇಳೆ ಕಾಂಗ್ರೆಸ್ ಪಕ್ಷದ, ಸಮುದಾಯದ ಮುಖಂಡರು, ಕಾರ್ಯಕರ್ತರು ಉಪಸ್ಥಿತರಿದ್ದರು.

ಪ್ಲಾಸ್ಟಿಕ್ ಮುಕ್ತ ಸಮಾಜ ನಿರ್ಮಿಸೋಣ

ಬಸವನಬಾಗೇವಾಡಿ: ಉತ್ತಮ ಪರಿಸರ, ಸುಸ್ಥಿರ ಆರೋಗ್ಯಕ್ಕಾಗಿ ಪ್ರತೀ ಮನೆಯಲ್ಲಿ ಗಿಡ ನೆಟ್ಟು ಬೆಳೆಸೋಣ, ಪ್ಲಾಸ್ಟಿಕ್ ಮುಕ್ತ ಸಮಾಜ ನಿರ್ಮಿಸೋಣ ಎಂದು ನಂದಿ ಶಿಕ್ಷಣ ಸಂಸ್ಥೆ ಅಧ್ಯಕ್ಷ ಬಸವರಾಜ ಪೂಜಾರಿ ಹೇಳಿದರು.

ಪಟ್ಟಣದ ಮಸಬಿನಾಳ ರಸ್ತೆಯಲ್ಲಿನ ನಂದಿ ಶಿಕ್ಷಣ ಸಂಸ್ಥೆ ಅಡಿಯಲ್ಲಿ ನಡೆಯುತ್ತಿರುವ ನಂದಿ ಪ್ರಾಥಮಿಕ ಪ್ರೌಢ ಶಾಲೆಯಲ್ಲಿ ವಿಶ್ವ ಪರಿಸರ ದಿನಾಚರಣೆ ಆಚರಿಸಿ ಮಾತನಾಡಿ, ಪ್ರಕೃತಿಯಿಂದ ಪ್ರೇರಣೆ ಪಡೆದು ಹವಾಮಾನಕ್ಕಾಗಿ, ನಮ್ಮ ಭವಿಷ್ಯಕ್ಕಾಗಿ ಇಂದೇ ಕಾರ್ಯಪ್ರವೃತ್ತರಾಗೋಣ ಎಂದರು.

ಮುಖ್ಯ ಶಿಕ್ಷಕಿ ವೀಣಾ ಪೂಜಾರಿ ಮಾತನಾಡಿ, ಭೂಮಾತೆಗೆ ಹಸಿರು ತೊಡಿಸುವುದರಿಂದ ಕಾಲಕಾಲಕ್ಕೆ ಮಳೆ ಬೆಳೆಯಾಗುತ್ತದೆ. ಇದರಿಂದ ಭವ್ಯ ಭವಿಷ್ಯವನ್ನು ನಿರ್ಮಿಸಬಹುದು ಎಂದರು.

ಶಿಕ್ಷಕರಾದ ಸಾವಿತ್ರಿ ರಾಠೋಡ, ಕುಮಾರಿ ನೇತ್ರಾವತಿ, ಸವಿತಾ ಹಿರೇಮಠ, ಭೀಮರಾಯ ಹೊಗೋಡಿ ಮಾತನಾಡಿದರು. ಗೀತಾ ಬಿಸ್ಗಣ್ಣವರ ಪ್ರಾರ್ಥಿಸಿದರು. ಚಂದನಾ ನಾಯ್ಕ ನಿರೂಪಿಸಿ, ವಂದಿಸಿದರು.



ಕಿರುಸುದ್ದಿ

ಡಾ.ಸಿದ್ದಲಿಂಗಯ್ಯಗೆ 'ಪ್ರೈಡ್ ಆಫ್ ಕರ್ನಾಟಕ ಪ್ರಶಸ್ತಿ'

ಕುಷ್ಟಗಿ: ತಾಲೂಕಿನ ಹಿರಿಯ ಪಶುವೈದ್ಯಾಧಿಕಾರಿ ಡಾ.ಸಿದ್ದಲಿಂಗಯ್ಯ ಶಂಕೀನ್ ಅವರಿಗೆ ಬೆಂಗಳೂರಿನ ವಿಶ್ವವಿದ್ಯಾಲಯ ಆವರಣದ ಕಲಾಗ್ರಾಮದಲ್ಲಿ ಕರ್ನಾಟಕ ಮೀಡಿಯಾಕ್ಲಬ್ ಹಾಗೂ ಕನ್ನಡ ಮತ್ತು ಸಂಸ್ಕೃತಿಕ ಇಲಾಖೆ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ಸಮಾರಂಭದಲ್ಲಿ 'ಪ್ರೈಡ್ ಆಫ್ ಕರ್ನಾಟಕ ಪ್ರಶಸ್ತಿ' ನೀಡಿ ಗೌರವಿಸಲಾಯಿತು. ಡಾ.ಸಿದ್ದಲಿಂಗಯ್ಯ ಶಂಕೀನ್, ಪಶುವೈದ್ಯಕೀಯ ಸೇವೆಯಲಿ ಕಾರ್ಯನಿರ್ವಹಿಸುವುದರ ಜತೆಗೆ ಅನಾಥಾಶ್ರಮ ಮತ್ತು ವೃದ್ಧಾಶ್ರಮಗಳಿಗೆ ನೆರವಾಗುವ ಸಾಮಾಜಿಕ ಸೇವೆಯಲ್ಲಿ ತೊಡಗಿಸಿಕೊಂಡಿರುವುದರಿಂದ ಇವರ ಸಾಮಾಜಿಕ ಸೇವೆ ಗುರುತಿಸಿ 'ಕರ್ನಾಟಕ ಮೀಡಿಯಾ ಕ್ಲಬ್' ವತಿಯಿಂದ ಬೆಂಗಳೂರಿನ ವಿಶ್ವವಿದ್ಯಾಲಯ ಆವರಣದ ಕಲಾಗ್ರಾಮದಲ್ಲಿ ಕರ್ನಾಟಕ ಮೀಡಿಯಾಕ್ಲಬ್ ಹಾಗೂ ಕನ್ನಡ ಮತ್ತು ಸಂಸ್ಕೃತಿಕ ಇಲಾಖೆ, ಬೆಂಗಳೂರು ಸಹಯೋಗದಲ್ಲಿ ಹಮ್ಮಿಕೊಂಡಿದ್ದ ಸಮಾರಂಭದಲ್ಲಿ 'ಪ್ರೈಡ್ ಆಫ್ ಕರ್ನಾಟಕ ಪ್ರಶಸ್ತಿ' ನೀಡಿ ಗೌರವಿಸಲಾಯಿತು. ಹೊನ್ನಮಗವಿಮಠ ಶಿವಗಂಗೆ ಕ್ಷೇತ್ರದ ರುದ್ರಮುನಿ ಶಿವಾಚಾರ್ಯಸ್ವಾಮಿಜಿ, ಪಾಲನಹಳ್ಳಿಮಠದ ಡಾ.ಸಿದ್ದರಾಜು ಸ್ವಾಮಿಜಿ, ವಿರೋಧಪಕ್ಷದ ನಾಯಕ ಹಾಗೂ ಶಾಸಕ ಆರ್.ಅಶೋಕ, ಶಾಸಕರಾದ ಕೃಷ್ಣಪ್ಪ, ಚಲನಚಿತ್ರ ನಟ ಚೇತನ್ ಅಹಿಂಸಾ, ಅಂತರಾಷ್ಟಿಯ ಖ್ಯಾತ ವೈದ್ಯರಾದ ಡಾ.ಪದ್ಮ ಪ್ರಕಾಶ, ಕರ್ನಾಟಕ ಮೀಡಿಯಾ ಕ್ಲಬ್ ಅಧ್ಯಕ್ಷ ರಮೇಶ ಎಸ್.ಜಿ. ಇತರರಿದ್ದರು.

ವಿಶ್ವ ಪರಿಸರ ದಿನಾಚರಣೆ



ಕೊಪ್ಪಳ: ಜಿಲಾಡಳಿತ, ಜಿಲ್ಲಾ ನಗರಾಭಿವೃದ್ಧಿ ಕೋಶ, ಜಿಲ್ಲಾ ಕೌಶಲ್ಯ ಮಿಷನ್, ನಗರಸಭೆ ಕೊಪ್ಪಳ, ಪಟ್ಟಣ ಪಂಚಾಯತ್ ಭಾಗ್ಯನಗರ ಮತ್ತು ಡಾ.ಬಿ.ಆರ್. ಅಂಬೇಡ್ಕರ್ ಶಿಕ್ಷಣ ಮತ್ತು ಮಾನವ ಸಂಪನ್ಮೂಲ ಅಭಿವೃದ್ಧಿ ಸಂಸ್ಥೆ ಕೊಪ್ಪಳ ಇವರ ಸಂಯುಕ್ತಾಶ್ರಯದಲ್ಲಿ ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ರಾಷ್ಟ್ರೀಯ ನಗರ ಜೀವನೋಪಾಯ ಅಭಿಯಾನ (ಡೇ-ನಲ್ಮ್) ಯೋಜನೆಯ ನಗರ ವಸತಿ ರಹಿತರ ಆಶ್ರಯ ಕೇಂದ್ರದ ಆವರಣದಲ್ಲಿ ಶನಿವಾರ ಸಸಿ ನೆಡುವ ಮೂಲಕ 2026ರ ವಿಶ್ವ ಪರಿಸರ ದಿನಾಚರಣೆಯನ್ನು ಆಚರಿಸಲಾಯಿತು.ಈ ಕಾರ್ಯಕ್ರಮಕ್ಕೆ ಕೊಪ್ಪಳ ನಗರಸಭೆಯ ಪ್ರಭಾರಿ ಪೌರಾಯುಕ್ತರು ಆಗಿರುವ ಜಿಲ್ಲಾ ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕರಾದ ಮಂಜುನಾಥ ಎಂ.ಗುಂಡೂರು ಅವರು ಚಾಲನೆ ನೀಡಿದರು.

ಭಾಗ್ಯನಗರ ಪಪಂ ಮುಖ್ಯಾಧಿಕಾರಿ ಸುರೇಶ್ ಬಬ್ಲಾದಿ, ಕೊಪ್ಪಳ ನಗರಸಭೆ ಸಹಾಯಕ ಕಾರ್ಯಪಾಲಕ ಅಭಿಯಂತರರದ ಎಚ್.ಎ.ಬಂಡಿವಡ್ಡರ್, ಸಹಾಯಕ ನಿರ್ದೇಶಕ ಮಂಜುನಾಥ ಬೆಲ್ಲದ, ಜಿಲ್ಲಾ ಕೌಶಲ್ಯ ಮಿಷನ್ ಅಭಿಯಾನ ವ್ಯವಸ್ಥಾಪಕರಾದ ಅಹ್ಮದ್ ಹುಸೇನ್, ಸಿಬ್ಬಂದಿ ವಿಶ್ವನಾಥ ಬಿ., ಹಿರಿಯ ಆರೋಗ್ಯ ನಿರೀಕ್ಷಕರಾದ ಜಯಶೀಲಾ ಮತ್ತು ರಾಜೇಶ್ವರಿ, ಡಾ.ಅಂಬೇಡ್ಕರ್ ಶಿಕ್ಷಣ ಮತ್ತು ಮಾನವ ಸಂಪನ್ಮೂಲ ಅಭಿವೃದ್ಧಿ ಸಂಸ್ಥೆಯ ಮುಖ್ಯಸ್ಥರಾದ ಗಿರೀಶ್ ಸೇರಿದಂತೆ ಕೊಪ್ಪಳ ನಗರಸಭೆ ಸಿಬ್ಬಂದಿ, ವಸತಿ ರಹಿತರ ಆಶ್ರಯ ಕೇಂದ್ರದಲ್ಲಿ ಆಶ್ರಯ ಪಡೆದ ಶಿಬಿರಾರ್ಥಿಗಳು, ಕೇಂದ್ರದ ಸಿಬ್ಬಂದಿ ಇತರರಿದ್ದರು.

ಡಾ.ಬಾಬೂಜಿ ನಾಮಫಲಕ ತೆರವು: ಕ್ರಮಕ್ಕೆ ಆಗ್ರಹ

ಕಲಬುರಗಿ: ನಗರದ ಫಿಲ್ಟರ್ ಬೆಡ್ ಆಶ್ರಯ ಕಾಲೋನಿಯಲ್ಲಿರುವ ಹಸಿರು ಕ್ರಾಂತಿಯ ಹರಿಕಾರ ಹಾಗೂ ಮಾಜಿ ಉಪ ಪ್ರಧಾನಿ ಡಾ. ಬಾಬು ಜಗಜೀವನರಾಮ ಅವರ ನಾಮಫಲಕವನ್ನು ಕಿಡಿಗೇಡಿಗಳು ತೆರವುಗೊಳಿಸಿರುವುದನ್ನು ಖಂಡಿಸಿ, ಆರೋಪಿಗಳನ್ನು ತಕ್ಷಣ ಬಂಧಿಸುವಂತೆ ಡಾ.ಬಾಬು ಜಗಜೀವನರಾಮ ಜಿಲ್ಲಾ ಜಯಂತ್ಯುತ್ಸವ ಸಮಿತಿ ಒತ್ತಾಯಿಸಿದೆ.ಈ ಕುರಿತು ಸಮಿತಿಯ ಪದಾಧಿಕಾರಿಗಳು ಸಹಾಯಕ ಪೊಲೀಸ್ ಆಯುಕ್ತರಿಗೆ ಮನವಿ ಸಲ್ಲಿಸಿ, ಕಿಡಿಗೇಡಿಗಳ ವಿರುದ್ಧ ಕಾನೂನು ಕ್ರಮ ಜರುಗಿಸುವಂತೆ ಆಗ್ರಹಿಸಿದರು. ಫಿಲ್ಟರ್ ಬೆಡ್ ಆಶ್ರಯ ಕಾಲೋನಿಯಲ್ಲಿ ಹಲವು ವರ್ಷಗಳಿಂದ ಡಾ.ಬಾಬು ಜಗಜೀವನರಾಮರ ನಾಮಫಲಕ ಸ್ಥಾಪಿಸಲಾಗಿದ್ದು, ಪ್ರತಿವರ್ಷ ಏ.5ರಂದು ಅವರ ಜನ್ಮದಿನದ ಅಂಗವಾಗಿ ನಾಮಫಲಕಕ್ಕೆ ಮಾಲಾರ್ಪಣೆ ಮಾಡಿ ಜಯಂತಿಯನ್ನು ಆಚರಿಸಲಾಗುತ್ತಿದೆ. ಆದರೆ ಶನಿವಾರ ರಾತ್ರಿ ಕೆಲ ಕಿಡಿಗೇಡಿಗಳು ಮದ್ಯ ಸೇವಿಸಿ ನಾಮಫಲಕವನ್ನು ತೆರವುಗೊಳಿಸಿದ್ದು, ಸ್ಥಳದಲ್ಲೇ ಮದ್ಯದ ಬಾಟಲಿಗಳನ್ನು ಒಡೆದು ಬಡಾವಣೆಯಲ್ಲಿ ಅಶಾಂತಿ ಸೃಷ್ಟಿಸಿದ್ದಾರೆ ಎಂದು ಸಮಿತಿಯವರು ಆರೋಪಿಸಿದ್ದಾರೆ. ಜಿಲ್ಲಾ ಜಯಂತೋತ್ಸವ ಸಮಿತಿ ಅಧ್ಯಕ್ಷ ಮಲ್ಲಿಕಾರ್ಜುನ ದೊಡ್ಡಮನಿ, ಅನೀಲಕುಮಾರ ಬೆಳಕೇರಿ, ಮಂಜುನಾಥ ನಾಲವಾರಕರ್, ಮಲ್ಲಿಕಾರ್ಜುನ ಜಿನಕೇರಿ, ಗೋಪಾಲ ನಾಟೀಕಾರ, ಅರವಿಂದ ನಾಟೀಕಾರ, ಪ್ರಕಾಶ ಮಾಳಗೆ, ರಂಜೀತ ಮೂಲಿಮನಿ, ಪ್ರದೀಪ ಬಾಚನಳ್ಳಿ, ಅರ್ಜುನ ಕಾಳನೂರ, ಧರ್ಮರಾಜ ಶಾಹಪೂರಕರ್, ಲಖನ ಗುಲ್ಲಾಬಡಿ ಇತರರಿದ್ದರು.



ಕುಷ್ಟಗಿ: ತಾಲೂಕಿನ ಹಿರಿಯ ಪಶುವೈದ್ಯಾಧಿಕಾರಿ ಡಾ.ಸಿದ್ದಲಿಂಗಯ್ಯ ಶಂಕೀನ್ ಅವರಿಗೆ ಬೆಂಗಳೂರಿನ ವಿಶ್ವವಿದ್ಯಾಲಯ ಆವರಣದ ಕಲಾಗ್ರಾಮದಲ್ಲಿ ಕರ್ನಾಟಕ ಮೀಡಿಯಾಕ್ಲಬ್ ಹಾಗೂ ಕನ್ನಡ ಮತ್ತು ಸಂಸ್ಕೃತಿಕ ಇಲಾಖೆ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ಸಮಾರಂಭದಲ್ಲಿ 'ಪ್ರೈಡ್ ಆಫ್ ಕರ್ನಾಟಕ ಪ್ರಶಸ್ತಿ' ನೀಡಿ ಗೌರವಿಸಲಾಯಿತು.

ಮಕ್ಕಳ ಸ್ನೇಹಿ ಪೊಲೀಸ್ ಕೇಂದ್ರ ಉದ್ಘಾಟನೆ

ಕಲಬುರಗಿ: ಬಾಲ ನ್ಯಾಯ (ಮಕ್ಕಳ ಆರೈಕೆ ಮತ್ತು ರಕ್ಷಣೆ) ಕಾಯ್ದೆ-2015ರ ಅನ್ವಯ ಮಕ್ಕಳಿಗೆ ಸುರಕ್ಷಿತ ಹಾಗೂ ಸ್ನೇಹಪರ ವಾತಾವರಣ ಕಲ್ಪಿಸುವ ಉದ್ದೇಶದಿಂದ ಕಲಬುರಗಿ ಜಿಲ್ಲಾ ಪೊಲೀಸ್ ಇಲಾಖೆಯ ವತಿಯಿಂದ ನಗರದ ಡಿಐಜಿ ಕಚೇರಿ ಆವರಣದಲ್ಲಿ ಸ್ಥಾಪಿಸಲಾದ ಮಕ್ಕಳ ಸ್ನೇಹಿ ಪೊಲೀಸ್ ಕೇಂದ್ರವನ್ನು ಈಶಾನ್ಯ ವಲಯದ ಡಿಐಜಿಪಿ ಶಾಂತನು ಸಿನ್ಹಾ ಉದ್ಘಾಟಿಸಿದರು.

ಈ ಕೇಂದ್ರದಲ್ಲಿ ಗೊಂದಲಕ್ಕೊಳಗಾದ ಅಥವಾ ವಿವಿಧ ಸಮಸ್ಯೆಗಳಿಗೆ ಸಿಲುಕಿರುವ ಮಕ್ಕಳಿಗೆ ಅಗತ್ಯ ನೆರವು, ಕಾನೂನು ಸಲಹೆ, ಕೌನ್ಸೆಲಿಂಗ್ ಹಾಗೂ ರಕ್ಷಣಾತ್ಮಕ ಸೇವೆಗಳನ್ನು ಒದಗಿಸಲಾಗುವುದು.ಅಲ್ಲದೆ ಮಕ್ಕಳ ಮೇಲಿನ ಅಪರಾಧ, ದೌರ್ಜನ್ಯ, ಶೋಷಣೆ ಹಾಗೂ ಮಕ್ಕಳ ಹಕ್ಕುಗಳ ಉಲ್ಲಂಘನೆಗೆ ಸಂಬಂಧಿಸಿದ ಪ್ರಕರಣಗಳಿಗೆ ತ್ವರಿತ ಸ್ಪಂದನೆ ನೀಡುವ ವ್ಯವಸ್ಥೆಯನ್ನೂ ಕಲ್ಪಿಸಲಾಗಿದೆ ಎಂದರು.ಮಕ್ಕಳಿಗೆ ಭಯಮುಕ್ತ ಹಾಗೂ ಸ್ನೇಹಪರ ವಾತಾವರಣದಲ್ಲಿ ಸೇವೆ ದೊರೆಯುವಂತೆ ಕೇಂದ್ರವನ್ನು ರೂಪಿಸಲಾಗಿದ್ದು, ಮಕ್ಕಳೊಂದಿಗೆ ಸಂವೇದನಾಶೀಲವಾಗಿ ವರ್ತಿಸಲು ವಿಶೇಷ ವ್ಯವಸ್ಥೆ ಮಾಡಲಾಗಿದೆ. ಇದರಿಂದ ಪೊಲೀಸ್ ಠಾಣೆಗೆ ಬರುವ ಮಕ್ಕಳಲ್ಲಿ ಆತ್ಮವಿಶ್ವಾಸ ಹೆಚ್ಚುವ ಜೊತೆಗೆ ನ್ಯಾಯ ದೊರಕುವ ಪ್ರಕ್ರಿಯೆ ಇನ್ನಷ್ಟು ಸುಗಮವಾಗಲಿದೆ ಎಂದು ತಿಳಿಸಿದರು. ಉದ್ಘಾಟನಾ ಸಮಾರಂಭದಲ್ಲಿ ಎಸ್ಪಿ ಅಡ್ಡೂರು ಶ್ರೀನಿವಾಸಲು, ಶಹಾಬಾದ್ ಉಪ ವಿಭಾಗದ ಡಿವೈಎಸ್ಪಿ ಶಂಕರಗೌಡ ಪಾಟೀಲ, ಶಹಾಬಾದ್ ಪಿಐ ಪಿ.ಎಸ್.ವನಂಜಕರ್ ಸೇರಿದಂತೆ ಇತರೆ ಪೊಲೀಸ್ ಅಧಿಕಾರಿಗಳು ಹಾಗೂ ಸಿಬ್ಬಂದಿ ಉಪಸ್ಥಿತರಿದ್ದರು.



ಕಲಬುರಗಿ: ಬಾಲ ನ್ಯಾಯ (ಮಕ್ಕಳ ಆರೈಕೆ ಮತ್ತು ರಕ್ಷಣೆ) ಕಾಯ್ದೆ-2015ರ ಅನ್ವಯ ಮಕ್ಕಳಿಗೆ ಸುರಕ್ಷಿತ ಹಾಗೂ ಸ್ನೇಹಪರ ವಾತಾವರಣ ಕಲ್ಪಿಸುವ ಉದ್ದೇಶದಿಂದ ಕಲಬುರಗಿ ಜಿಲ್ಲಾ ಪೊಲೀಸ್ ಇಲಾಖೆಯ ವತಿಯಿಂದ ನಗರದ ಡಿಐಜಿ ಕಚೇರಿ ಆವರಣದಲ್ಲಿ ಸ್ಥಾಪಿಸಲಾದ ಮಕ್ಕಳ ಸ್ನೇಹಿ ಪೊಲೀಸ್ ಕೇಂದ್ರವನ್ನು ಈಶಾನ್ಯ ವಲಯದ ಡಿಐಜಿಪಿ ಶಾಂತನು ಸಿನ್ಹಾ ಉದ್ಘಾಟಿಸಿದರು.

ಸಂಗೀತ ಸಂಭ್ರಮ | ಗಾಯಕ ಹನುಮಂತಪ್ಪ ಅಭಿಮತ

ಜನಪದ ಸಾಹಿತ್ಯಕ್ಕೆ ಅಗ್ರ ಸ್ಥಾನ

ಕುಕನೂರು: ಇಂದಿನ ಯಾಂತ್ರಿಕ ಜೀವನದಲ್ಲಿ ಆಧುನಿಕ ಅಬ್ಬರದಲ್ಲಿ ಮೂಲ ಜಾನಪದ ಸಾಹಿತ್ಯ ಮತ್ತು ಸಂಗೀತವನ್ನು ಕೇಳುತ್ತಿದ್ದರೆ ಒತ್ತಡ ಕಡಿಮೆಯಾಗಿ, ಬದುಕಿಗೆ ಆಹ್ಲಾದಕರ ಅನುಭವ ಸಿಗುತ್ತದೆ. ಹೀಗಾಗಿ ಜನಪದ ಸಾಹಿತ್ಯ, ಸಂಗೀತಕ್ಕೆ ಹೆಚ್ಚಿನ ಮನ್ನಣೆ ದೊರೆತಿದೆ ಎಂದು ಮಂಗಳೂರಿನ ಮುಖ್ಯೋಪಾಧ್ಯಾಯ ಹಾಗೂ ಗಾಯಕ ಎ.ಎಚ್. ಹನುಮಂತಪ್ಪ ಅಭಿಪ್ರಾಯ ಪಟ್ಟರು .

ಅವರುಭಾನುವಾರಇಲ್ಲಿಯಶ್ರೀಅನ್ನದಾನೀಶ್ವರ ಮಠದಲ್ಲಿ ಕನ್ನಡ ಸಾಹಿತ್ಯ ಸಂಸ್ಕೃತಿ ಅಭಿವೃದ್ಧಿ ಟ್ರಸ್ಟ್ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಂಯುಕ್ತ ಆಶ್ರಯದಲ್ಲಿ 2025 26ನೆಯ ಸಾಲಿನ ಸಂಘ ಸಂಸ್ಥೆ ಧನಸಹಾಯ ಯೋಜನೆ ಅಡಿಯಲ್ಲಿ ಸಂಗೀತ ಸಂಭ್ರಮ ಸಮಾರಂಭವನ್ನು ಸಸಿಗೆ ನೀರೆ ರೆಯುವ ಮೂಲಕ ಉದ್ಘಾಟಿಸಿ ಜನಪದ ಮತ್ತು ಸಂಗೀತ ಕಲೆಗಳು ಅವಲೋಕನ ಕುರಿತು ಮಾತನಾಡಿದರು.

ಕವಿರಾಜ್ ಮಾರ್ಗ ಚರಿತ್ರೆಯಲ್ಲಿ ಕನ್ನಡ ಸಾಹಿತ್ಯ ಹಾಗೂ ಜನಪದ ಸಾಹಿತ್ಯದ ಉಲ್ಲೇಖವಿದೆ. ಹಿಂದಿನ ಹಿರಿಯರು ಓದು ಬರಹ ಇಲ್ಲದವರು, ಅವರು ಮಾತನಾಡಿದ, ಹಾಡಿದ, ಬಿಸಿದ ಕುಟ್ಟಿದ ಬದುಕಿನ ಸನ್ನಿವೇಶಗಳೇ ಜಾನಪದ ಸಾಹಿತ್ಯ ವಾಗಿ ಅನಾವರಣ ಗೊಂಡಿವೆ, ನಂತರ ವಚನ ಸಾಹಿತ್ಯ, ದಾಸ ಪರಂಪರೆಯ ಮೂಲಕ ಕನ್ನಡದ ಜನಪದ ಮತ್ತು ಸಂಗೀತ ಕ್ಷೇತ್ರದ ಪ್ರಗತಿಗೆ ಪೂರಕ ವಾಗಿವೆ, ಯುವ ಜನಾಂಗ ಹಾಗೂ ಸಂಘ ಸಂಸ್ಥೆಗಳು ಸತತ ಪರಿಶ್ರಮದಿಂದ ಜನಪದಸಂಗೀತಕ್ಷೇತ್ರದಉಳಿವಿಗೆ ಶ್ರಮಿಸಲು ಮುಂದಾಗಬೇಕಿದೆ ಎಂದರು.



ಸಂಗಡಿಗರಿಂದ ಸೋಬಾನೆ ಪದ

ಸಾಂಸ್ಕೃತಿಕ ಕಾರ್ಯಕ್ರಮಗಳ ವೈವಿಧ್ಯ ಸಮಾರಂಭದಲ್ಲಿ ಯರೇ ಹಂಚಿನಾಳ ಗ್ರಾಮದ ದಂಡೆಮ್ಮ ಮಂಡಲಗೇರಿ, ಹನುಮವ್ವ ಯರೆಹಂಚಿನಾಳ, ಕವಿತಾ ಚೋಳಿನ ಸಾ.ಮಂಡಲಗಿರಿ ಹಾಗೂ ಸಂಗಡಿಗರಿಂದ ಸೋಬಾನೆ ಜನಪದ ಗೀತೆಗಳು, ಬೇದವಟ್ಟಿಯ ವೀರಭದ್ರಪ್ಪ ಸುಂಕದ ಹಾಗೂ ಕುಕನೂರಿನ ಮುರಾರಿ ಭಜಂತ್ರಿ, ಶ್ರೀಶೈಲಪ್ಪ ಗೊಂಡಬಾಳ, ಶಂಕರಗೌಡ ವನಗೇರಿ ಸಂಗಡಿಗರಿಂದ ಸುಗಮಸಂಗೀತ, ಪಂಚಾಕ್ಷರಿ ಸಂಗೀತ ವಿದ್ಯಾಲಯದ ವಿದ್ಯಾರ್ಥಿಗಳು ಭಕ್ತಿ ಗೀತೆಗಳು ಪ್ರಸ್ತುತ ಪಡಿಸಿದರು.

ಶಿರೂರು ಗ್ರಾಮದ ರಂಗಭೂಮಿ ಕಲಾವಿದ ಶೇಖರೆಡ್ಡಿ ಮಾದಿನೂರ ಅಧ್ಯಕ್ಷತೆ ವಹಿಸಿದ್ದರು. ಶ್ರೀಮಠದ ಆಡಳಿತಾಧಿಕಾರಿ ಸಂಗಮೇಶ ಕಲ್ಮಠ ,

ಕಲ್ಯಾಣ ಕರ್ನಾಟಕ ಜಾನಪದ ಕಲಾವಿದರ ಸಂಘದ ಕುಕನೂರು ತಾಲುಕು ಅಧ್ಯಕ್ಷ ಬಸವರಾಜ್ ಕೊಡ್ಲಿ, ಚುಟುಕು ಸಾಹಿತ್ಯ ಪರಿಷತ್ ಅಧ್ಯಕ್ಷ ಬಸವರಾಜ್ ಉಪ್ಪಿನ್, ತಾಲುಕು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಕಳಕಪ್ಪ ಕುಂಬಾರ, ಮುಖಂಡರಾದ ಈರಪ್ಪ ಇಟಗಿ, ಅಂದಪ್ಪ ಭಂಡಾರಿ, ಭಜನಾ ಕಲಾವಿದ ಚಂದ್ರಪ್ಪ ಆರೇಬೆರಳಿನ, ಕವಿ ಶಶಿಕಲಾ ಕುರಗೋಡ್, ಕನಕ ಆರೋಗ್ಯ ಮತ್ತು ಶಿಕ್ಷಣ ಗ್ರಾಮೀಣಾಭಿವೃದ್ಧಿ ಸಂಸ್ಥೆ ಅಧ್ಯಕ್ಷಕನಕರಾಯ ಭಜಂತ್ರಿ, ಪತ್ರಕರ್ತ ಈರಯ್ಯ ಕುರ್ತಕೋಟಿ, ಕವಿ ರವಿ ಹಿರೇಮನಿ ಇದ್ದರು.

ಬಸವರಾಜ್ ಕೊಡ್ಲಿ ಸ್ವಾಗತಿಸಿದರು, ಟ್ರಸ್ಟ್ ಅಧ್ಯಕ್ಷ ರುದ್ರಪ್ಪ ಭಂಡಾರಿ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಕವಿ ವಸಂತ ಗುಡಿ ನಿರೂಪಿಸಿದರು. ನಂತರ ಕಲಾವಿದರಿಗೆ ಸನ್ಮಾನಿಸಿ ಗೌರವಿಸಲಾಯಿತು.

ಯೋಗ ದಿನ: ಅಗತ್ಯ ಸಿದ್ಧತೆ ಕೈಗೊಳ್ಳಿ

ಕೊಪ್ಪಳ: ಜಿಲ್ಲಾ ಕೇಂದ್ರದಲ್ಲಿ 12ನೇ ಅಂತರಾಷ್ಟ್ರೀಯ ಯೋಗ ದಿನಾಚರಣೆ ಕಾರ್ಯಕ್ರಮವನ್ನು ಅಚ್ಚುಕಟ್ಟಾಗಿ ಮತ್ತು ಅರ್ಥಪೂರ್ಣವಾಗಿ ಹಮ್ಮಿಕೊಳ್ಳಲು ಅಗತ್ಯ ಸಿದ್ಧತೆಗಳನ್ನು ಮಾಡಿಕೊಳ್ಳುವಂತೆ ಜಿಲ್ಲಾಧಿಕಾರಿಗಳಾದ ಡಾ.ಸುರೇಶ ಇಟ್ನಾಳ ಅವರು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚನೆ ನೀಡಿದರು.

12ನೇಅಂತರಾಷ್ಟ್ರೀಯಯೋಗದಿನಾಚರಣೆ ಕುರಿತಂತೆ ಶನಿವಾರ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಕರೆದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಜೂ.21ರಂದು ಕೊಪ್ಪಳದ ತಾಲೂಕು ಕ್ರೀಡಾಂಗಣದಲ್ಲಿ ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಏರ್ಪಡಿಸಲಾಗುವುದು. ಅಂದು ಬೆಳಿಗ್ಗೆ 6.30ಕ್ಕೆ ಕೊಪ್ಪಳ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆಯುಷ್ ಇಲಾಖೆ ಹಾಗೂ ವಿವಿಧ ಯೋಗ ಸಂಸ್ಥೆಗಳ ಸಹಯೋಗದೊಂದಿಗೆ ಯೋಗಭ್ಯಾಸ ನಡೆಯಲಿದೆ. ಅಂತರಾಷ್ಟ್ರೀಯ ಯೋಗ ದಿನಾಚರಣೆಯಲ್ಲಿ ಎಲ್ಲರ ಸಹಭಾಗಿತ್ವ ಬಹುಮುಖ್ಯವಾಗಿದ್ದು, ಸೂಕ್ತ ಪ್ರಚಾರ ಕೈಗೊಂಡು ಈ ಕಾರ್ಯಕ್ರಮದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಜನರು ಭಾಗಿಯಾಗುವಂತೆ ನೋಡಿಕೊಳ್ಳಬೇಕು ಎಂದರು.

ಯೋಗ ದಿನಾಚರಣೆಗೆ ಆಗಮಿಸುವ ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರಿಗೆ ಲಘು ಉಪಹಾರದ ವ್ಯವಸ್ಥೆ ಮಾಡಿ. ಕಾರ್ಯಕ್ರಮದಲ್ಲಿ ಎಲ್ಲಾ ಇಲಾಖೆಗಳ ಅಧಿಕಾರಿಗಳು ತಮ್ಮ ಸಿಬ್ಬಂದಿಯೊಂದಿಗೆ ಕಡ್ಡಾಯ ಪಾಲ್ಗೊಳ್ಳಬೇಕು. ಕಾರ್ಯಕ್ರಮ ಸ್ಥಳದಲ್ಲಿ ಅಗತ್ಯ ಕುಡಿಯುವ ನೀರು ಮತ್ತು ಯೋಗಾಸನಕ್ಕೆಸಂಬಂಧಿಸಿದಂತೆ ಅಗತ್ಯ ವ್ಯವಸ್ಥೆ ಮಾಡಬೇಕು. ಕಾರ್ಯಕ್ರಮ ದಿನದಂದು ಅಗತ್ಯ ಪಾರ್ಕಿಂಗ್ ವ್ಯವಸ್ಥೆ ಕಲ್ಪಿಸುವ ಕುರಿತಂತೆ ಪೊಲೀಸ್ ಇಲಾಖೆಗೆ ಪತ್ರ ಬರೆದು ಕ್ರಮ ಕೈಗೊಳ್ಳಬೇಕು. ಈ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಮಾಧ್ಯಮವರು, ವಕೀಲರು, ಪೊಲೀಸರು ಹಾಗೂ ಮಾಜಿ ಸೈನಿಕರಿಗೆ ಮಾಹಿತಿ ನೀಡಬೇಕು ಎಂದು ಆಯುಷ್ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಜಿಲ್ಲಾ ಆಯುಷ್ ಅಧಿಕಾರಿ ಡಾ. ಪಿ.ಬಿ.ಹಿರೇಗೌಡರ ಅವರು ಮಾತನಾಡಿ, ಅಂತರಾಷ್ಟ್ರೀಯ ಯೋಗ ದಿನಾಚರಣೆಯನ್ನು ಈ ಬಾರಿ ''ಆರೋಗ್ಯಕರ ವೃದ್ಧಾಪ್ಯಕ್ಕಾಗಿ ಯೋಗ'' ಎಂಬ ಘೋಷವಾಕ್ಯದೊಂದಿಗೆ ಆಚರಣೆ ಮಾಡಲಾಗುತ್ತಿದೆ. ಭಾರತ ಸರ್ಕಾರದ ಆಯುಷ್ ಮಂತ್ರಾಲಯದ ನಿರ್ದೇಶನದಂತೆ ಜೂನ್ 21ರಂದು ದೇಶಾದ್ಯಂತ '12ನೇ ಅಂತರಾಷ್ಟ್ರೀಯ ಯೋಗ ದಿನಾಚರಣೆ-2026'ಯನ್ನು ಆಚರಿಸಲಾಗುತ್ತಿದ್ದು, ಇದರ ಅಂಗವಾಗಿ ಸಾರ್ವಜನಿಕರುಹಾಗೂಸರ್ಕಾರಿಅಧಿಕಾರಿಗಳಿಗೆ ಅನುಕೂಲವಾಗುವಂತೆ ಉಚಿತ ಆನ್‌ಲೈನ್ ಯೋಗ ತರಬೇತಿ ಕಾರ್ಯಕ್ರಮವನ್ನು ಈಗಾಗಲೇ ಆಯೋಜಿಸಲಾಗಿದೆ.

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕ ವಿಠಲ್ ಜಾಬಗೌಡರ್, ಶಾಲಾ ಶಿಕ್ಷಣ ಇಲಾಖೆ ಜಿಲ್ಲಾ ದೈಹಿಕ ಶಿಕ್ಷಣ ಪರಿವೀಕ್ಷಕ ಎ.ಬಸವರಾಜ, ಬ್ರಹ್ಮಕುಮಾರಿ ಯೋಗಿನಿ ಅಕ್ಕನವರು,ಕೊಪ್ಪಳ ಜಿಲ್ಲೆಯ ಆಯುಷ್ ವೈದ್ಯಾಧಿಕಾರಿಗಳಾದ ಡಾ.ಯಮನಪ್ಪ ಶಿರವಾರ, ಡಾ.ಗುರುರಾಜ್ ಉಮಚಗಿ, ಡಾ.ರಾಜಶೇಖರ ನಾರಿನಾಳ, ಡಾ.ಕವಿತಾ ಎಚ್.ಎಫ್., ಡಾ.ಶರಣಪ್ಪ ಹೈದ್ರಿ ಇತರರಿದ್ದರು.

ಸಾರ್ವಜನಿಕರ ಆರೋಗ್ಯದ ಕಡೆ ಗಮನಹರಿಸಿ

ಯಲಬುರ್ಗಾ: ಕುಕನೂರು ತಾಲೂಕಿನ ಮಂಗಳೂರು ಗ್ರಾಮದಲ್ಲಿ ಒಂದು ಡೆಂಘೀ ಪ್ರಕರಣ ಕಾಣಿಸಿಕೊಂಡಿದ್ದು, ಈ ಬಗ್ಗೆ ಯಾವ ಕ್ರಮಕ್ಕೈಗೊಂಡಿದ್ದೀರಿ ಎಂದು ಜಿಪಂ ಉಪಕಾರ್ಯದರ್ಶಿ ಟಿ.ಕೃಷ್ಣಮೂರ್ತಿ ಅವರು ಆರೋಗ್ಯ ಇಲಾಖೆಯ ಅಧಿಕಾರಿಯನ್ನು ಪ್ರಶ್ನಿಸಿದರು.

ಪಟ್ಟಣದ ತಾಪಂ ಸಭಾಂಗಣದಲ್ಲಿ ಶುಕ್ರವಾರ ನಡೆದ ಸಾಮಾನ್ಯ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಗ್ರಾಮದಲ್ಲಿ ಸ್ವಚ್ಛತೆ ಕಾಪಾಡಬೇಕು ಜತೆಗೆ ಈ ಪ್ರಕರಣದಿಂದ ಬೇರೆಯವರಿಗೆ ತೊಂದರೆಯಾಗದಂತೆ ಯಾವ ಕ್ರಮ ವಹಿಸಿದ್ದೀರಿ ಎಂದು ಹೇಳುತ್ತಿದ್ದಂತೆ ಆರೋಗ್ಯ ಇಲಾಖೆ ಅಧಿಕಾರಿ ಪ್ರತಿಕ್ರಿಯಿಸಿ ಈಗಾಗಲೇ ಸೂಕ್ತ ಚಿಕಿತ್ಸೆ ಮೂಲಕ ಗುಣಮುಖರಾಗಿದ್ದಾರೆ. ಇದರ ನಿಯಂತ್ರಣಕ್ಕಾಗಿ ಇಡೀ ಗ್ರಾಮದಲ್ಲೆಡೆ ಫಾಗಿಂಗ್ ಸಿಂಪಡಿಸಲಾಗಿದೆ. ಜನರು ಯಾವುದೇ ಭಯಪಡುವ ಅಗತ್ಯವಿಲ್ಲ ಎಂದು ಹೇಳಿದರು.

ಈಗಾಗಲೇ ಮಳೆಗಾಲಯಾಗಿದ್ದರಿಂದ ತಾಲೂಕಿನಾದ್ಯಂತಹ ಎಲ್ಲ ಗ್ರಾಮಗಳಲ್ಲಿ ಸ್ವಚ್ಛತೆ, ಶುದ್ಧ ಕುಡಿವ ನೀರು ಸೇರಿದಂತೆ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಿಕೊಡುವಲ್ಲಿ ವಿವಿಧ ಇಲಾಖೆಗಳ ಅಧಿಕಾರಿಗಳು ಹೆಚ್ಚಿನ ಮುತುವರ್ಜಿಸಿ ಜನರ ಆರೋಗ್ಯದ ಕಡೆಗೆ ಅಧಿಕಾರಿಗಳು ಹೆಚ್ಚು ಜಾಗೃತಿ ವಹಿಸಬೇಕು ಎಂದು ಸೂಚನೆ ನೀಡಿದರು.

ಕೃಷಿ ಇಲಾಖೆ ತಾಂತ್ರಿಕ ಅಧಿಕಾರಿ ಮಾತನಾಡಿ, ಈ ವರ್ಷ ನಾಲ್ಕು ಹೋಬಳಿಗಳಲ್ಲಿ ಮಳೆ ವಾಡಿಕೆ ಪ್ರಮಾಣಕ್ಕಿಂತಲೂ ಕಡಿಮೆ ಆಗಿದ್ದರಿಂದ ರೈತರು ಹೆಸರು, ಮೆಕ್ಕಜೋಳ ಬಿತ್ತನೆ ಕಾರ್ಯ ಕಡಿಮೆಯಾಗಲಿದೆ. ಇನ್ನೂ ಮುಂಗಾರು ಬಿತ್ತನೆಗೆ ಬೇಕಾದ ಬೀಜಗಳು,ರಸಗೊಬ್ಬರ ದಾಸ್ತನು ಸಾಕಷ್ಟಿದೆ.ಡಿಎಪಿ ಗೊಬ್ಬರ ಕೊರತೆಯಿದ್ದರೂ ಪರ್ಯಾಯವಾಗಿ ಕಾಂಪ್ಲೆಸ್ ಹಾಗೂ ಯೂರಿಯಾ ಬದಲು ನ್ಯಾನೋ ನೀಡಲಾಗುತ್ತದೆ ಎಂದರು. ಶಿಶುಭಿವೃದ್ಧಿ ಇಲಾಖೆ ಅಧಿಕಾರಿ ಬೆಟದೇಶ ಮಾಳೆಕೊಪ್ಪ ಮಾತನಾಡಿ ತಾಲೂಕಿನ ಬೋದೂರು, ಜಿ.ವೀರಾಪೂರ,ಗಾಣದಾಳ, ಹುಣಿಸಿಹಾಳ, ಮರ್ಕಟ್, ಕೋನಸಾಗರ ಗ್ರಾಮಗಳಲ್ಲಿ ಅಂಗನವಡಿ ಕೇಂದ್ರಗಳು ಅರ್ಧಕ್ಕೆ ನಿಂತಿವೆ. ಕೂಡಲೇ ಕಾಮಗಾರಿ ಪೂರ್ಣಗೊಳಿಸಿದರೆ ಮಕ್ಕಳ ಶಿಕ್ಷಣಕ್ಕೆ ಅನುಕೂಲವಾಗುತ್ತದೆ. ಗೃಹಲಕ್ಷ್ಮೀ ಯೋಜನೆಯಡಿ ಮೃತರಾದವರನ್ನು ಪಟ್ಟಿಯಿಂದ ಕೈಬಿಡಲಾಗಿದೆ ಎಂದರು.

ತೋಟಗಾರಿಕೆ ಇಲಾಖೆ ಅಧಿಕಾರಿ ನಿಂಗನಗೌಡ ಪಾಟೀಲ ಮಾತನಾಡಿದರು. ಬಳಿಕ ಶಿಕ್ಷಣ, ಲೋಕೋಪಯೋಗಿ, ಜಿಪಂ, ಪಶುಸಂಗೋಪನೆ ಇಲಾಖೆ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು ತಮ್ಮ ಇಲಾಖೆ ಪ್ರಗತಿ ವರದಿ ಮಂಡಿಸಿದರು.



ಕನ್ನಡ ಸಾಹಿತ್ಯ ಸಮ್ಮೇಳನ ಅದ್ದೂರಿಯಾಗಿ ಆಚರಿಸಿ: ಶಾಸಕ ಪಾಟೀಲ

ಕುಷ್ಟಗಿ: ತಾಲೂಕಿನ ಹಿರೇಮನ್ನಾಪುರ ಗ್ರಾಮದಲ್ಲಿ ನಡೆಯುವ ಕೊಪ್ಪಳ ಜಿಲ್ಲಾ 14ನೇ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಅಚ್ಚುಕಟ್ಟಾಗಿ ಅದ್ದೂರಿಯಾಗಿ ಮಾಡಬೇಕು ಈ ಸಮ್ಮೇಳನಕ್ಕೆ ನನ್ನ ಸಹಕಾರ ಇರುತ್ತದೆ ಎಂದು ವಿಧಾನಸಭೆ ವಿರೋಧ ಪಕ್ಷದ ಮುಖ್ಯ ಸಚೇತಕ ಹಾಗೂ ಶಾಸಕ ದೊಡ್ಡನಗೌಡ ಪಾಟೀಲ ಹೇಳಿದರು.

ಕೊರಡಕೇರಾ ಗ್ರಾಮದಲ್ಲಿ ಕಸಾಪ ವತಿಯಿಂದ ತಾಲೂಕಿನ ಹಿರೇಮನ್ನಾಪುರ ಗ್ರಾಮದಲ್ಲಿ ನಡೆಯುವ ಕೊಪ್ಪಳ ಜಿಲ್ಲಾ 14ನೇ ಕನ್ನಡ ಸಾಹಿತ್ಯ ಸಮ್ಮೇಳನದ ಸ್ವಾಗತ ಸಮಿತಿಯ ಅಧ್ಯಕ್ಷರನ್ನಾಗಿ ನೇಮಕ ಮಾಡಿ ಕಸಾಪ ವತಿಯಿಂದ ಸನ್ಮಾನ ಸ್ವೀಕರಿಸಿ ಮಾತನಾಡಿದ ಅವರು, ಅತಿ ಶೀಘ್ರದಲ್ಲಿ ಸಭೆ ಕರೆದು ಸಮ್ಮೇಳನ ದಿನಾಂಕವನ್ನು ನಿಗದಿ ಮಾಡುವಂತೆ ಕನ್ನಡ ಸಾಹಿತ್ಯ ಪರಿಷತ್ ತಾಲೂಕ ಘಟಕದವರಿಗೆ ಸಲಹೆ ಸೂಚನೆಯನ್ನು ನೀಡಿದರು.

ಶಾಸಕ ದೊಡ್ಡನಗೌಡ ಪಾಟೀಲ ಅವರ ಸ್ವಗ್ರಾಮ ಕೊರಡಕೇರಿಯಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ತಾಲೂಕು ಘಟಕ ಕುಷ್ಟಗಿ ಮತ್ತು ಹಿರೇಮನ್ನಾಪೂರು ಹಾಗೂ ಗ್ರಾಮದ ಗಣ್ಯರು ಸನ್ಮಾನಿಸಿ ಗೌರವಿಸಿದರು.

ಕನ್ನಡ ಸಾಹಿತ್ಯ ಪರಿಷತ್ತಿನ ಜಿಲ್ಲಾಧ್ಯಕ್ಷ ಶರಣಗೌಡ ಪೊಲೀಸ್ ಪಾಟೀಲ,



ತಾಲೂಕು ಅಧ್ಯಕ್ಷ ಲೆಂಕಪ್ಪ ವಾಲಿಕಾರ, ಜಿಲ್ಲಾ ನಿಕಟ ಪೂರ್ವ ಗೌರವ ಕಾರ್ಯದರ್ಶಿ ರವೀಂದ್ರ ಬಾಕಳೆ, ದೋಟಿಹಾಳ ಕಸಾಪ ಅಧ್ಯಕ್ಷ ನಿಂಗಪ್ಪ ಸಜ್ಜನ, ಪರಶಿವಮೂರ್ತಿ ಮಾಟಲದಿನ್ನಿ, ಗೌರವ ಕಾರ್ಯದರ್ಶಿ ಶರಣಪ್ಪ ಲೈನದ್, ದೇವರಾಜ್ ವಿಶ್ವಕರ್ಮ ಹಾಗೂ ಹಿರೇಮನ್ನಾಪುರ ಗ್ರಾಮದ ಮುಖಂಡರಾದ ಎಸ್.ಜಿ.ಕಡೆಮನಿ, ವಿ.ಎಸ್.ಕಾಡಗಿಮಠ, ಶಿವಾನಂದ ಹಿರೇಮಠ, ದೇವಣ್ಣ ಬಳಿಗಾರ, ವಿರೇಶ್ ಟೆಂಗುಂಟಿ, ಶಂಕರಪ್ಪ ತೋಟದ, ಭರತೇಶ ಬೀದರಕುಂದಿ, ಶಿವಪುತ್ರಪ್ಪ ಗುರಿಕಾರ, ಪರಸಪ್ಪ ಆಳ್ಳಳ್ಳಿ, ಮಂಜುನಾಥ ಕಜ್ಜಿ, ಮರಿಯಪ್ಪ ಮುಳ್ಳೂರು ಇತರರಿದ್ದರು.

ಬಿಡಾಡಿ ಜಾನುವಾರುಗಳಿಂದ: ವಾಹನ ಸಂಚಾರಕ್ಕೆ ತೊಂದರೆ

ಸಿಂಧನೂರು: ನಗರದ 150ಎ ಹೆದ್ದಾರಿ ರಾಯಚೂರು ಮಾರ್ಗದ ರಸ್ತೆಯಲ್ಲಿ ಬಿಡಾಡಿ ದನಗಳ ಹಾವಳಿಯ ಉಪಟಳಕ್ಕೆ ವಾಹನ ಚಾಲಕರು ದಿನವೂ ಕಿರಿಕಿರಿ ಅನುಭವಿಸುತ್ತಿದ್ದಾರೆ. ಒಮ್ಮೊಮ್ಮೆ ಹಠಾತ್ತನೇ ಓಡುವ ದನಗಳು, ಮತ್ತೊಮ್ಮೆ ನಡು ರಸ್ತೆಯಲ್ಲಿ ಮಲಗುವುದರಿಂದ ಸಾರಿಗೆ ಬಸ್, ಲಾರಿ, ದ್ವಿಚಕ್ರ ವಾಹನ ಚಲಾಯಿಸಲು ಚಾಲಕರು ತೊಂದರೆ ಎದುರಿಸುತ್ತಿದ್ದಾರೆ.

ಈ ಮಾರ್ಗದ ರಸ್ತೆಯು ದಿನವೂ ಜನಸಂದಣಿಯಿಂದ ಕೂಡಿರುತ್ತದೆ.ಇದರ ನಡುವೆ ಬೀಡಾಡಿ ದನಗಳು, ವಾಲ್ಮೀಕಿ ಸರ್ಕಲ್‌ನಿಂದ ಹಳ್ಳದವರೆಗಿನ ಹೆದ್ದಾರಿಯಲ್ಲಿ ಅದರಲ್ಲೂ, ಕನಕದಾಸ ಸರ್ಕಲ್ ಇಲ್ಲವೇ ಕಿತ್ತೂರು ರಾಣಿ ಚನ್ನಮ್ಮ ಸರ್ಕಲ್, ನಗರಸಭೆ ಮುಂಭಾಗದ ರಸ್ತೆಯಲ್ಲಿ ಎಲ್ಲೆಂದರಲ್ಲಿ ಮಲಗುವುದರಿಂದ ಸುಗಮ ಸಂಚಾರಕ್ಕೆ ತೀವ್ರ ಸಮಸ್ಯೆಯಾಗುತ್ತಿದೆ.



ಇನ್ನೂ ಸಂಚಾರಿ ಠಾಣೆ ಪೊಲೀಸರು ವಾಹನ ದಟ್ಟಣೆಯ ಜೊತೆಗೆ ಈ ದಿನಗಳನ್ನು ಓಡಿಸುವ ಕೆಲಸ ಮಾಡುವಂತಾಗಿದೆ ಎಂದು ಪ್ರಯಾಣಿಕರೊಬ್ಬರು ಹೇಳುತ್ತಾರೆ. ಇದಲ್ಲದೆ ನಡು ರಸ್ತೆಯಲ್ಲಿ ಬೀಡಾಡಿ ದನಗಳು ಮಲಗುವುದರಿಂದ ವಾಹನ ಚಾಲಕರು ಪಾದಾಚಾರಿ ರಸ್ತೆಯತ್ತ ವಾಹನಗಳನ್ನು ನುಗ್ಗಿಸುತ್ತಿದ್ದು, ಪಾದಾಚಾರಿಗಳು ಜೀವಭಯ ಎದುರಿಸುತ್ತಿದ್ದಾರೆ. ಇನ್ನೂ ಬೀಡಾಡಿ ದನಗಳು ಅಡ್ಡಾದಿಡ್ಡಿಯಾಗಿ ಎದುರಿಗೆ ಬಂದು ಹಲವಾರು ದ್ವಿಚಕ್ರ ವಾಹನ ಸವಾರರು ಬಿದ್ದು ಗಾಯಗೊಂಡಿದ್ದಾರೆ ಎಂದು ಸಾರ್ವಜನಿಕರು ವಿವರಿಸಿದ್ದಾರೆ.

ಶಿರಪೂರ ಮಾದರಿ ಯೋಜನೆ ಸಂಪೂರ್ಣ ವಿಫಲ: ಗುತ್ತೇದಾರ್ ಆರೋಪ

ಸರಸಂಬಾ ಗ್ರಾಮದಲ್ಲಿ ಕುಡಿಯುವ ನೀರಿಗೆ ಹಾಹಾಕಾರ

ಕಲಬುರಗಿ: ಜಿಲ್ಲೆಯ ಆಳಂದ ತಾಲೂಕಿನ ಸರಸಂಬಾ ಗ್ರಾಮದಲ್ಲಿ ಕುಡಿಯುವ ನೀರಿನ ಸಮಸ್ಯೆ ತೀವ್ರಗೊಂಡಿದ್ದು, ಗ್ರಾಮಸ್ಥರು ನೀರಿಗಾಗಿ ದಿನಪೂರ್ತಿ ಕೊಡಗಳೊಂದಿಗೆ ಸಾಲಿನಲ್ಲಿ ನಿಲ್ಲುವ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ಮಾಜಿ ಶಾಸಕ ಸುಭಾಷ್ ಆರ್.ಗುತ್ತೇದಾರ್ ಆರೋಪಿಸಿದರು.

ಈ ಕುರಿತು ಪತ್ರಿಕಾ ಹೇಳಿಕೆ ನೀಡಿದ ಅವರು, ಆಳಂದ ತಾಲೂಕಿನ ಹಲವಾರು ಗ್ರಾಮಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಗಂಭೀರ ಸ್ವರೂಪ ಪಡೆದಿದೆ. ತಾಲೂಕಿನಲ್ಲಿ ಅನುಷ್ಠಾನಗೊಳಿಸಲಾಗಿರುವ ಶಿರಪೂರ ಮಾದರಿ ಯೋಜನೆ ಜನರ ನಿರೀಕ್ಷೆಗಳನ್ನು ಈಡೇರಿಸುವಲ್ಲಿ ಸಂಪೂರ್ಣ ವಿಫಲವಾಗಿದೆ. ಆಳಂದ ತಾಲೂಕು ಬರಪೀಡಿತ ಪ್ರದೇಶವಾಗಿರುವ ಕಾರಣ ಅಂತರ್ಜಲ ಮಟ್ಟ ಹೆಚ್ಚಿಸುವ ಉದ್ದೇಶದಿಂದ ಶಿರಪೂರ ಮಾದರಿ ಯೋಜನೆಯನ್ನು ಜಾರಿಗೊಳಿಸಲಾಗಿತ್ತು. ಆದರೆ ಯೋಜನೆಯ ಮೂಲ ಉದ್ದೇಶವೇ ಹಾಳಾಗಿದ್ದು, ಅನೇಕ ಕಡೆಗಳಲ್ಲಿ ವೈಜ್ಞಾನಿಕ ರೀತಿಯಲ್ಲಿ ಕಾಮಗಾರಿ ಕೈಗೊಳ್ಳದೇ ಕೇವಲ ಹಣ ಖರ್ಚು ಮಾಡುವ ಉದ್ದೇಶದಿಂದ ಕಾಮಗಾರಿಗಳು ನಡೆದಿವೆ ಎಂದು ಆರೋಪಿಸಿದರು.



ತಾಲೂಕಿನ ಹಲವು ಗ್ರಾಮಗಳಲ್ಲಿ ಶಿರಪೂರ ಮಾದರಿ ಕಾಮಗಾರಿಗಳಿಂದ ಅಂತರ್ಜಲ ಮಟ್ಟದಲ್ಲಿ ಯಾವುದೇ ಸುಧಾರಣೆ ಕಂಡುಬಂದಿಲ್ಲ, ರೈತರಿಗೆ ನಿರೀಕ್ಷಿತ ಪ್ರಯೋಜನ ಸಿಕ್ಕಿಲ್ಲ. ಮಳೆಗಾಲದಲ್ಲಿ ನೀರು ಸಂಗ್ರಹವಾಗಬೇಕಾದ ಸ್ಥಳಗಳಲ್ಲಿ ಸಮರ್ಪಕ ನಿರ್ವಹಣೆ ಇಲ್ಲದ ಕಾರಣ ಯೋಜನೆ ಪರಿಣಾಮಕಾರಿಯಾಗಿಲ್ಲ ಎಂದರು.

ಈ ಕುರಿತು ಮಾಹಿತಿ ಹಕ್ಕು ಕಾಯ್ದೆಯಡಿ ಅರ್ಜಿ ಸಲ್ಲಿಸಿದ್ದರೂ ಅಧಿಕಾರಿಗಳು ಉತ್ತರ ನೀಡಿಲ್ಲ, ಹೀಗಾಗಿ ಮಾಹಿತಿ ಆಯೋಗದ ಮೊರೆ ಹೋಗುವುದಾಗಿ ಅವರು ತಿಳಿಸಿದರು.ಜನರ ತೆರಿಗೆ ಹಣವನ್ನು ದುರುಪಯೋಗ ಪಡಿಸಿಕೊಂಡವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು. ತಾಲೂಕಿನಲ್ಲಿ ನೀರಿನ ಸಮಸ್ಯೆ ನಿವಾರಣೆಗೆ ವೈಜ್ಞಾನಿಕ ಹಾಗೂ ಶಾಶ್ವತ ಯೋಜನೆಗಳನ್ನು ರೂಪಿಸಬೇಕು. ಕೇವಲ ಪ್ರಚಾರಕ್ಕಾಗಿ ಯೋಜನೆಗಳನ್ನು ಜಾರಿಗೊಳಿಸುವುದರಿಂದ ರೈತರು ಮತ್ತು ಸಾರ್ವಜನಿಕರ ಸಮಸ್ಯೆಗಳಿಗೆ ಪರಿಹಾರ ಸಿಗುವುದಿಲ್ಲ ಎಂದು ಹೇಳಿದರು.

> **ಯೋಜನೆಗಾಗಿ ಕೋಟ್ಯಂತರ ರೂಪಾಯಿ ವೆಚ್ಚ ಮಾಡಿದ್ದರೂ ನಿರೀಕ್ಷಿತ ಫಲಿತಾಂಶ ದೊರೆತಿಲ್ಲ. ಶಿರಪೂರ ಮಾದರಿ ಹೆಸರಿನಲ್ಲಿ ನಡೆದ ಕಾಮಗಾರಿಗಳ ಗುಣಮಟ್ಟ ಕುರಿತು ಸಮಗ್ರ ತನಿಖೆ ನಡೆಸಬೇಕು. ಯಾವ ಯಾವ ಸ್ಥಳಗಳಲ್ಲಿ ಕಾಮಗಾರಿ ನಡೆದಿದೆ, ಎಷ್ಟು ಹಣ ವೆಚ್ಚವಾಗಿದೆ ಹಾಗೂ ಅದರ ಫಲಿತಾಂಶ ಏನು ಎಂಬ ಕುರಿತು ಶ್ವೇತಪತ್ರ ಹೊರಡಿಸಬೇಕು.**
> ■ ಸುಭಾಷ್ ಆರ್.ಗುತ್ತೇದಾರ್, ಮಾಜಿ ಶಾಸಕ

ಕಸಾಪ ಬೆಳೆಸಲು ಮಹನೀಯರ ಕೊಡುಗೆ ಅಪಾರ: ಸಾಹಿತಿ ಪಾಟೀಲ

ರಾಯಚೂರು: ಕನ್ನಡ ನಾಡು ನುಡಿ, ಸಂಸ್ಕೃತಿ ಉಳಿಸಿ ಬೆಳೆಸಬೇಕೆಂಬ ದೂರದೃಷ್ಟಿಯಿಂದ ಮೈಸೂರು ರಾಜರಾದ ನಾಲ್ವಡಿ ಕೃಷ್ಣರಾಜ ಒಡೆಯರ ಕನ್ನಡ ಸಾಹಿತ್ಯ ಪರಿಷತ್ತನ್ನು ಆರಂಭಿಸಿದರು. ಆ ನಂತರದಲ್ಲಿ ಈ ಪರಿಷತ್ತನ್ನು ಬೆಳೆಸಲು ಅನೇಕ ಮಹನೀಯರು ತಮ್ಮದೇ ತಮ್ಮದೇ ಆದಂತಹ ಕೊಡುಗೆಯನ್ನು ನೀಡಿದ್ದಾರೆಎಂದುಸಾಹಿತಿ ಗವಿಸಿದ್ದಪ್ಪ ಪಾಟೀಲ ಹೇಳಿದರು.

ಭಾನುವಾರ ನಗರದ ಕನ್ನಡ ಭವನದಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಜಿಲ್ಲಾ ಹಾಗೂ ತಾಲೂಕು ಘಟಕದ ವತಿಯಿಂದ ಆಯೋಜಿಸಿದ್ದ ಪ್ರಸಕ್ತ ಸಾಲಿನ ದತ್ತಿನಿಧಿ ಕಾರ್ಯಕ್ರಮದಲ್ಲಿ ಶಿವಬಸಯ್ಯ ನಂದಿಧ್ವಜ ಹಳೆ ಶಹಾಬಾದ್ ದತ್ತಿ ಪ್ರಶಸ್ತಿ ಪ್ರದಾನ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದರು.

ಕನ್ನಡ ಸಾಹಿತ್ಯ ಪರಿಷತ್ತಿನ ಕೇಂದ್ರ ಘಟಕವು ದತ್ತಿ ದಾನಿಗಳನ್ನು ಪ್ರೋತ್ಸಾಹಿಸಿ



ವಿವಿಧ ದತ್ತಿ ಪ್ರಶಸ್ತಿಗಳು ಹಾಗೂ ಉಪನ್ಯಾಸ ಕಾರ್ಯಕ್ರಮಗಳನ್ನು ನಡೆಸುತ್ತಿರುವುದು ಶ್ಲಾಘನೀಯ ಕಾರ್ಯವಾಗಿದೆ. ಜಿಲ್ಲೆಗೆ ಕೇಂದ್ರ ಸಾಹಿತ್ಯ ಪರಿಷತ್ತಿನಿಂದ ನೀಡಲಾಗುವ ದತ್ತಿ ಪ್ರಶಸ್ತಿಯನ್ನು ತರಲು ಪ್ರಯತ್ನಿಸಿ, ಅದನ್ನು ಯಶಸ್ವಿಯಾಗಿ ನಿರ್ವಹಿಸಿಕೊಂಡು ಬರುತ್ತಿದ್ದೇವೆ. ಪ್ರತಿವರ್ಷ ಅರ್ಹ ಸಾಧಕರಿಗೆ ಈ ಪ್ರಶಸ್ತಿ ಪ್ರದಾನ ಮಾಡಲಾಗುತ್ತಿದೆ ಎಂದರು.

ಲಕ್ಷ್ಮೀದೇವಿ ಶಾಸ್ತ್ರಿ ಅವರ 28 ಕೃತಿಗಳ ಪೈಕಿ ರಾಯಚೂರಿನ ಗೀತಾಂಜಲಿ ವಿಶೇಷ ಸ್ಥಾನ ಪಡೆದಿದ್ದು, ಜಿಲ್ಲೆಯ ಸಾಹಿತ್ಯ ಪರಂಪರೆಯನ್ನು ಪರಿಚಯಿಸುವ ಮಹತ್ವದ ಕೃತಿಯಾಗಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಸಾಹಿತಿ ರಾಮಣ್ಣ ಹವಳೆ, ಸಾಮಾಜಿಕ ಹೋರಟಗಾರ ರಾಘವೇಂದ್ರ ಕುಷ್ಟಗಿ, ಏಮ್ಸ್ ಹೋರಟಗಾರ ಬಸವರಾಜ ಕಳಸ, ದತ್ತಿ ಪ್ರಶಸ್ತಿ ಪುರಸ್ಕೃತ ಸಂಪತ್ ಕುಮಾರ, ಆದಿಕವಿ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾಲಯದ ಸಿಂಡಿಕೇಟ್ ಸದಸ್ಯೆ ಮೀನಾಕ್ಷಿ ಖಂಡಿಮಠ ಮಾತನಾಡಿದರು.

ಕನ್ನಡ ಸಾಹಿತ್ಯ ಪರಿಷತ್ತಿನ ತಾಲೂಕು ಘಟಕದ ಅಧ್ಯಕ್ಷ ಬಿ.ವಿಜಯೇಂದ್ರ, ಸಾಹಿತಿಗಳಾದ ಬಂಡೂರಾವ್ ಚಾಗಿ, ವೀರಹನುಮಾನ, ವಿಶ್ವನಾಥ ಶಾಸ್ತ್ರಿ, ನಾಗಪ್ಪ ಹೊರಪ್ಯಾಟಿ, ಕನ್ನಡ ಸಾಹಿತ್ಯ ಪರಿಷತ್ತಿನ ತಾಲೂಕು ಘಟಕದ ಗೌರವ ಕಾರ್ಯದರ್ಶಿ ರಾವುತ್ ರಾವ್ ಬರೂರ, ಪ್ರತಿಭಾ ಗೋನಾಳ, ಶರಣಪ್ಪ ಛಲವಾದಿ, ಸೈಯದ್ ಹಫೀಜುಲ್ಲಾ ಖಾದ್ರಿ, ಇನ್ಫೋಸಿಸ್ ಎಂಜಿನಿಯರ್ ವಿಶ್ವನಾಥ ಶಾಸ್ತ್ರಿ ಸೇರಿದಂತೆ ಇತರರಿದ್ದರು.

> **ಪುಸ್ತಕಗಳನ್ನು ಕೊಂಡು ಓದುವವರಿಲ್ಲದಂತಾಗಿ ಪ್ರಕಾಶಕರಿಗೆ ಬಹಳ ಹಾನಿಯಾಗುತ್ತಿದೆ. ಹೀಗಾಗಿ ಬರುವ ದಿನಗಳಲ್ಲಿ ನಾನು ಪತ್ರಿಕೆಗಳಿಗೆ ಮಾತ್ರ ಲೇಖನಗಳನ್ನು ಬರೆಯುತ್ತೇನೆ ಹೊರತು ಪುಸ್ತಕ ರೂಪದಲ್ಲಿ ಹೊರತರುವುದಿಲ್ಲ, ಪ್ರಕಟಿಸಿದ ಪುಸ್ತಕಗಳು ಮಾರಾಟವಾದೇ ಹಾಕಿದ ಹಣ ಮರಳಿ ಬಾರದಿದ್ದರೆ ಪುಸ್ತಕ ಪ್ರಕಟಿಸುವುದು ಏತಕ್ಕೆ ಎಂದು ಬೇಸರದಿಂದ ಕಣ್ಣೀರು ಹಾಕಿದರು.**
> ■ ಲಕ್ಷ್ಮೀದೇವಿ ಶಾಸ್ತ್ರೀ, ಹಿರಿಯ ಲೇಖಕಿ

ಕಿರುಸುದ್ದಿ

ಬಿ.ಕೆ.ಹರಿಪ್ರಸಾದ್‌ಗೆ ಅಭಿನಂದಿಸಿದ ಭರತ್ ರೆಡ್ಡಿ



ಬಳ್ಳಾರಿ: ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ (ಕೆಪಿಸಿಸಿ) ಅಧ್ಯಕ್ಷರಾಗಿ ನೂತನವಾಗಿ ನೇಮಕಗೊಂಡ ಬಿ.ಕೆ.ಹರಿಪ್ರಸಾದ್ ಅವರನ್ನು ಬಳ್ಳಾರಿ ನಗರ ಶಾಸಕ ನಾರಾ ಭರತ್ ರೆಡ್ಡಿ ಅವರು ಹೂಗುಚ್ಛ ನೀಡಿ ಅಭಿನಂದಿಸಿ, ಶುಭಕೋರಿದರು.ಈ ವೇಳೆ ಉಭಯ ನಾಯಕರು ಜಿಲ್ಲೆಯ ಭವಿಷ್ಯದ ರಾಜಕೀಯ ಕಾರ್ಯತಂತ್ರಗಳ ಕುರಿತು ಚರ್ಚಿಸಿದರು. ಕೆಪಿಸಿಸಿ ನೂತನ ಅಧ್ಯಕ್ಷ ಬಿ.ಕೆ.ಹರಿಪ್ರಸಾದ್ ಅವರ ನಾಯಕತ್ವದಲ್ಲಿ ಕರ್ನಾಟಕ ಕಾಂಗ್ರೆಸ್ ಪಕ್ಷ ಇನ್ನಷ್ಟು ಶಕ್ತಿಶಾಲಿಯಾಗಿ ಹೊರ ಹೊಮ್ಮಲಿದೆ. ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ, ವಿಶೇಷವಾಗಿ ಬಳ್ಳಾರಿ ಜಿಲ್ಲೆಯಲ್ಲಿ ಅಭಿವೃದ್ಧಿ ಮತ್ತು ಜನಸೇವೆಯ ಹೊಸ ಅಧ್ಯಾಯ ಆರಂಭವಾಗಲಿದೆ ಎಂಬ ವಿಶ್ವಾಸವನ್ನು ವ್ಯಕ್ತಪಡಿಸಿದರು.

ಇದಕ್ಕೂ ಮುನ್ನ ಬಳ್ಳಾರಿ ಜಿಲ್ಲೆಯ ರಾಜಕೀಯ ಪರಿಸ್ಥಿತಿ, ಪಕ್ಷದ ಸಂಘಟನಾತ್ಮಕ ಬಲವರ್ಧನೆ, ಅಭಿವೃದ್ಧಿ ಯೋಜನೆಗಳು ಮತ್ತು ಭವಿಷ್ಯದ ಕಾರ್ಯಯೋಜನೆಗಳ ಬಗ್ಗೆ ಸುದೀರ್ಘ ಚರ್ಚೆ ನಡೆಸಿದರು.

ಪರಿಸರ ದಿನಾಚರಣೆ



ವಿಜಯನಗರ: ಹೊಸಪೇಟೆಯ ಟಿಎಂಎಇಎಸ್ ಅಕಾಡೆಮಿ ಆಫ್ ಫೌಂಡೇಶನ್ ತರಗತಿಗಳ ಪ್ರಾರಂಭೋತ್ಸವ ಹಾಗೂ ಪರಿಸರ ದಿನಾಚರೆ ಕಾರ್ಯಕ್ರಮ ಇತ್ತೀಚೆಗೆ ಯಶಸ್ವಿಯಾಗಿ ಜರುಗಿತು. ಸಂಸ್ಥೆಯ ಚೇರ್ಮನ್ ಎಂ.ಕೆ.ರವೀಂದ್ರ ಮಾತನಾಡಿ, ಆಧುನಿಕ ಯುಗದ ತೀವ್ರ ಸ್ಪರ್ಧೆಯನ್ನು ಎದುರಿಸಲು ವಿದ್ಯಾರ್ಥಿಗಳು ಉನ್ನತ ಗುರಿ ಹಾಗೂ ನಿರಂತರ ಪರಿಶ್ರಮವನ್ನು ಮೈಗೂಡಿಸಿಕೊಳ್ಳಬೇಕು ಎಂದರು. ಇದೇ ಸಂದರ್ಭದಲ್ಲಿ ಪರಿಸರ ಸಂರಕ್ಷಣೆಯ ಜವಾಬ್ದಾರಿಯನ್ನು ಸಾರಲು ಕಾಲೇಜು ಆವರಣದಲ್ಲಿ 138 ಗಿಡಗಳನ್ನು ನೆಡಲಾಯಿತು.ಕಾರ್ಯಕ್ರಮದಲ್ಲಿ ಪೋಷಕರಿಗಾಗಿ ಮನರಂಜನಾ ಆಟಗಳನ್ನು ಆಯೋಜಿಸಲಾಗಿದ್ದು, ಪೋಷಕರು ಫೌಂಡೇಶನ್ ತರಗತಿಗಳ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು. ಸಂಸ್ಥೆಯ ನಿರ್ದೇಶಕ ಚಂದ್ರಶೇಖರ ಟಿ.ಎಂ., ಪ್ರಾಂಶುಪಾಲರಾದ ನರಸಿಂಗ್ ರಾಜ್ ಎಂ., ಸಂಪದ ಎಚ್., ಡಿ.ಎ.ವಿ ಶಾಲೆಯ ಪ್ರಾಂಶುಪಾಲ ಆಶುತೋಷ್ ಹಾಗೂ ಸಿಬ್ಬಂದಿ ಉಪಸ್ಥಿತರಿದ್ದರು.

ಚಿದಾನಂದ ತಾತನವರ ಪುಣ್ಯಸ್ಮರಣೆ

ಕುರುಗೋಡು: ತಾಲೂಕಿನ ಕ್ಯಾದಿಗೆಹಾಳ್ ಗ್ರಾಮದ ಬೃಹನ್ಮಠದಲ್ಲಿ ದಾಸೋಹಮೂರ್ತಿ ಚಿದಾನಂದ ತಾತನವರ 13ನೇ ವರ್ಷದ ಪುಣ್ಯಸ್ಮರಣೋತ್ಸವ ಹಾಗೂ ಧರ್ಮ ಜಾಗೃತಿ ಸಭೆ ಜೂ.8ರಂದು ಹಾಗೂ 9ರಂದು ಜರುಗಲಿದೆ ಎಂದು ಬೃಹನ್ಮಠದ ಪುಣ್ಯಾಶ್ರಮದ ಸೇವಾ ಸದ್ಭಕ್ತ ಮಂಡಳಿ ತಿಳಿಸಿದೆ. ಕಾರ್ಯಕ್ರಮದ ನಿಮಿತ್ತ ಜೂ.8ರಂದು ಬೆಳಗ್ಗೆ ಲಿಂ.ಚಿದಾನಂದಯ್ಯ ತಾತನವರ ಗದ್ದುಗೆಗೆ ಪೂಜೆ ಜರುಗುವುದು ರೊಂದಿಗೆ ಕಾರ್ಯಕ್ರಮ ಪ್ರಾರಂಭವಾಗಲಿದೆ. ದಾಸೋಹಮೂರ್ತಿ ಬಳಿಕ ಸಪ್ತ ಭಜನೆ, ಲಿಂ.ಚಿದಾನಂದ ತಾತ ರುದ್ರಾಭಿಷೇಕ, ಧ್ವಜಾರೋಹಣ, ಸಂಜೆ ತಾತನವರ ಮೂರ್ತಿಯೊಂದಿಗೆ ಗ್ರಾಮದ ಈಶ್ವರ ದೇವಸ್ಥಾನದಿಂದ ಮುತ್ತಿನ ಪಲ್ಲಕ್ಕಿ ಉತ್ಸವದೊಂದಿಗೆ ಮೆರವಣಿಗೆ ಜರುಗಲಿದೆ. ರಾತ್ರಿ ಕಲ್ಲುಕಂಭ, ಗುಂಡಿಗನೂರು, ಕ್ಯಾದಿಗೆಹಾಳ್, ಲಕ್ಷ್ಮೀಪುರ, ಮುಷ್ಟಗಟ್ಟೆ, ಕೆರೆಕೆರೆ ಗ್ರಾಮಗಳ ಭಕ್ತರಿಂದ ಭಜನೆ ಹಾಗೂ ಸಂಗೀತ ಕಾರ್ಯಕ್ರಮ ಜರುಗಲಿದೆ. ಜೂ.9ರಂದು ಬೆಳಗ್ಗೆ ಗಂಗೆ ಹಾಗೂ ಗಣಪತಿ ಪೂಜೆ, ನವಗ್ರಹ ಶಾಂತಿ ಹಾಗೂ ಧರ್ಮಸಭೆ ಜರುಗಲಿದೆ. ಬುಕ್ಕಸಾಗರದ ಕರಿಸಿದ್ದೇಶ್ವರ ವಿಶ್ವಾರಾಧ್ಯ ಶಿವಾಚಾರ್ಯರು, ಎಮ್ಮಿಗನೂರಿನ ವಾಮದೇವ ಶ್ರೀಗಳು, ರೌಡಕುಂದ ಶ್ರೀಗಳು, ಪಾಲ್ಲೂರು ಶ್ರೀಗಳು, ಸಿದ್ದರಾಂಪುರದ ಚಿದಾನಂದ ತಾತ ಸೇರಿ ಸುತ್ತಲಿನ ನಾನಾ ಮಠಗಳ ಶ್ರೀಗಳು ಭಾಗವಹಿಸಲಿದ್ದಾರೆ ಎಂದು ಬೃಹನ್ಮಠದ ಗಂಗಾಧರ ತಾತ ತಿಳಿಸಿದ್ದಾರೆ.



ಹೂವಿನಹಡಗಲಿ: ತಾಲೂಕಿನ ಹೊಳಗುಂದಿ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಶುಕ್ರವಾರ ನರೇಗಾ ಕಾಮಗಾರಿ ಸ್ಥಳದಲ್ಲೇ ಬಿಜೆಪಿ ಮುಖಂಡ ಎಂ.ಭಾಷಾ ಸಾಹೇಬ್ ಸಸಿ ನೆಟ್ಟು ವಿಶ್ವ ಪರಿಸರ ದಿನ ಆಚರಿಸಿದರು. ಪ್ರತಿದಿನ ಕೇವಲ ಶ್ರಮದಾನಕ್ಕೆ ಗ್ರಾಪಂ ಮಾಜಿ ಅಧ್ಯಕ್ಷ ದಡಾರಪ್ಪ, ಮಾಜಿ ಸದಸ್ಯ ರುದ್ರಗೌಡ, ಗ್ರಾಪಂ ಸಿಬ್ಬಂದಿ, ಕಾಯಕ ಬಂಧು, ನರೇಗಾ ಕೂಲಿಕಾರ್ಮಿಕರು ಇದ್ದರು.

ಸಸಿ ನೆಡುವ ಕಾರ್ಯಕ್ರಮಕ್ಕೆ ಡಿಸಿ ಚಾಲನೆ

ಬಳ್ಳಾರಿ: ವಿಶ್ವ ಪರಿಸರ ದಿನಾಚರಣೆಯ ಅಂಗವಾಗಿ ಜಿಲ್ಲಾಡಳಿತ, ಜಿಲ್ಲಾ ಪೊಲೀಸ್ ಇಲಾಖೆ ಹಾಗೂ ಕೆಎಂಆರ್‌ಸಿ, ಅರಣ್ಯ ಇಲಾಖೆಯ ಜಂಟಿ ಸಹಯೋಗದಲ್ಲಿ ನಗರದ ಸರ್ಕಾರಿ ಕೈಗಾರಿಕಾ ತರಬೇತಿ ಕೇಂದ್ರದ ಆವರಣದಲ್ಲಿ ಬೃಹತ್ ಸಸಿ ನೆಡುವ ಕಾರ್ಯಕ್ರಮಕ್ಕೆ ಜಿಲ್ಲಾಧಿಕಾರಿ ನಾಗೇಂದ್ರ ಪ್ರಸಾದ್.ಕೆ ಅವರು ಚಾಲನೆ ನೀಡಿದರು.

ಗಿಡ ನೆಟ್ಟು ನೀರೂಣಿಸಿದ ಬಳಿಕ ಮಾತನಾಡಿದ ಅವರು, ಪ್ರಸಕ್ತ ವರ್ಷದಲ್ಲಿ ಬಳ್ಳಾರಿ ನಗರದಲ್ಲಿ ಒಟ್ಟು 5,000 ಸಸಿಗಳನ್ನು ನೆಡುವ ಮಹತ್ತರ ಉದ್ದೇಶವನ್ನು ಹೊಂದಲಾಗಿದ್ದು, ಅಧಿಕೃತವಾಗಿ ಚಾಲನೆ ನೀಡಲಾಗಿದೆ ಎಂದರು.

ಬಳ್ಳಾರಿಯ ಪ್ರತಿಯೊಬ್ಬ ನಾಗರಿಕರು ಕನಿಷ್ಠ ಒಂದು ಗಿಡವನ್ನು ನೆಟ್ಟು, ಅದನ್ನು ಪೋಷಿಸಿ ಬೆಳೆಸಬೇಕು. ಮುಂದಿನ ಪೀಳಿಗೆಗೆ ನಾವು ನೀಡಬಹುದಾದ ಅತ್ಯಂತ ದೊಡ್ಡ ಕೊಡುಗೆ ಎಂದರೆ ಅದು ಪರಿಸರ ಸಂರಕ್ಷಣೆ ಮಾತ್ರ ಎಂದು ಕರೆ ನೀಡಿದರು.

ಇದೇ ವೇಳೆ ಗಣ್ಯರು ರೇಡಿಯೋ ಪಾರ್ಕ್ ಪ್ರದೇಶದ ಸರ್ಕಾರಿ ಕೈಗಾರಿಕಾ ತರಬೇತಿ ಕೇಂದ್ರದ ಆವರಣದಲ್ಲಿ ಗಿಡಗಳನ್ನು ನೆಟ್ಟು ನೀರೂಣಿಸಿದರು.

ಎಸ್ಪಿ ಡಾ.ಸುಮನ್ ಡಿ.ಪೆನ್ನೇಕರ್, ಬಳ್ಳಾರಿ ವಲಯ ಉಪ ಅರಣ್ಯ ಸಂರಕ್ಷಣಾಧಿಕಾರಿ ಡಾ.ಕೆ.ಎನ್ ಬಸವರಾಜ, ಹಿರಿಯರಾದ ಎಸ್.ಆರ್. ಹೀರೆಮಠ ಸೇರಿದಂತೆ ವಿವಿಧ ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿಗಳು, ಸಾರ್ವಜನಿಕರು ಇತರರಿದ್ದರು.



ಬಳ್ಳಾರಿ: ವಿಶ್ವ ಪರಿಸರ ದಿನಾಚರಣೆಯ ಅಂಗವಾಗಿ ಜಿಲ್ಲಾಡಳಿತ, ಜಿಲ್ಲಾ ಪೊಲೀಸ್ ಇಲಾಖೆ ಹಾಗೂ ಕೆಎಂಆರ್‌ಸಿ, ಅರಣ್ಯ ಇಲಾಖೆಯ ಜಂಟಿ ಸಹಯೋಗದಲ್ಲಿ ನಗರದ ಸರ್ಕಾರಿ ಕೈಗಾರಿಕಾ ತರಬೇತಿ ಕೇಂದ್ರದ ಆವರಣದಲ್ಲಿ ಬೃಹತ್ ಸಸಿ ನೆಡುವ ಕಾರ್ಯಕ್ರಮಕ್ಕೆ ಜಿಲ್ಲಾಧಿಕಾರಿ ನಾಗೇಂದ್ರ ಪ್ರಸಾದ್.ಕೆ ಅವರು ಚಾಲನೆ ನೀಡಿದರು.

ಬೃಹತ್ ಸೋಲಾರ್ ಪಾರ್ಕ್ | ಶಾಸಕ ಭೇಟಿ, ಪರಿಶೀಲನೆ

ರೈತರಿಗೆ ಅನ್ಯಾಯವಾಗದಿರಲಿ

ಬೀದರ: ಕಮಲಗರ ತಾಲ್ಲೂಕಿನಲ್ಲಿ ಬೃಹತ್ ಪವರ್ ಗ್ರಿಡ್ ಉಪ ಕೇಂದ್ರದ ಜೊತೆಗೆ ಸುಮಾರು 25 ಸಾವಿರ ಎಕರೆಯಲ್ಲಿ ಬೃಹತ್ ಸೋಲಾರ್ ಪಾರ್ಕ್ ಯೋಜನೆ ನಡೆಯುತ್ತಿದೆ. ಈ ಯೋಜನೆಗೆ ಜಮೀನು ನೀಡುತ್ತಿರುವ ರೈತರಿಗೆ ಅನ್ಯಾಯವಾಗಬಾರದು ಎಂದು ಮಾಜಿ ಸಚಿವರು ಹಾಗೂ ಔರಾದ(ಬಿ) ಶಾಸಕ ಪ್ರಭು ಬಿ.ಚವ್ಹಾಣ ತಿಳಿಸಿದರು.

ಮಾಳೆಗಾಂವ-ಚಿಮ್ಮೇಗಾಂವ ವ್ಯಾಪ್ತಿಯಲ್ಲಿ ನಿರ್ಮಾಣವಾಗುತ್ತಿರುವ ಪವರ್ ಗ್ರಿಡ್ ಸಬ್ ಸ್ಟೇಷನ್ ಕಾಮಗಾರಿ ಸ್ಥಳಕ್ಕೆ ಭೇಟಿ ನೀಡಿ ಕಾಮಗಾರಿ ವೀಕ್ಷಿಸಿ ಅವರು ಮಾತನಾಡಿದರು.

ಸೋಲಾರ್ ಪಾರ್ಕ್ ಯೋಜನೆಗಾಗಿ ಅನೇಕ ಖಾಸಗಿ ಕಂಪನಿಗಳು ನೇರವಾಗಿ ರೈತರನ್ನು ಭೇಟಿಯಾಗಿ ಜಮೀನು ಪಡೆಯುತ್ತಿವೆ. ರೈತರ ಮುಗ್ಧತೆಯನ್ನು ದುರುಪಯೋಗ ಮಾಡಿಕೊಂಡು ಕಡಿಮೆ ಹಣ ಕೊಡುತ್ತಿರುವುದು ಗಮನಕ್ಕೆ ಬಂದಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಕಮಲನಗರ ತಾಲೂಕಿನ ಮುರ್ಕಿ, ಠಾಣಾ ಕುಶನೂರ, ಚಿಕ್ಲಿ (ಯು), ಚಿಮ್ಮೇಗಾಂವ ಸೇರಿದಂತೆ ಮತ್ತಿತರೆ ಗ್ರಾಮಗಳಲ್ಲಿ ಯೋಜನೆಗಾಗಿ ಜಮೀನು ಪಡೆಯುವ ಕೆಲಸ ನಡೆಯುತ್ತಿದೆ. ಈ ಭಾಗದ ಅಭಿವೃದ್ಧಿಯ ದೃಷ್ಟಿಯಿಂದ ಈ ಯೋಜನೆ ಯಶಸ್ವಿಯಾಗಬೇಕು. ಆದರೆ ತಮ್ಮ ಬದುಕಿಗೆ ಆಸರೆಯಾದ ಜಮೀನನ್ನು ನೀಡುತ್ತಿರುವ ರೈತರಿಗೆ ಯಾವುದೇ ರೀತಿಯ ಅನ್ಯಾಯವಾಗಬಾರದು ಎಂದು ಖಾಸಗಿ ಕಂಪನಿಗಳಿಗೆ ಎಚ್ಚರಿಸಿದರು.

ಇಂತಹದ್ದೇ ಯೋಜನೆಗೆ ಮಹಾರಾಷ್ಟ್ರದಲ್ಲಿ ಜಮೀನಿಗೆ ಪ್ರತಿ ಎಕರೆಗೆ 50 ಸಾವಿರ ನಿಗದಿಪಡಿಸಲಾಗಿದ್ದು, ಆದರೆ ನಮ್ಮ ಭಾಗದಲ್ಲಿ 30 ರಿಂದ 35 ಸಾವಿರ ಮಾತ್ರ ನೀಡಲಾಗುತ್ತಿದೆ ಎಂದು ಬಹಳಷ್ಟು ರೈತರು ನನ್ನನ್ನು ಭೇಟಿಯಾಗಿ ತಮ್ಮ ಸಮಸ್ಯೆಗಳನ್ನು ಹಂಚಿಕೊಂಡಿದ್ದಾರೆ. ಕಂಪನಿಗಳು ಈ ರೀತಿಯ ತಾರತಮ್ಯ ಮಾಡದೇ, ನಮ್ಮ ರೈತರಿಗೆ ನ್ಯಾಯಯುತ ಹಾಗೂ ಸೂಕ್ತ ಬೆಲೆ ನೀಡಬೇಕು ಎಂದು ಒತ್ತಾಯಿಸಿದರು.

ಔರಾದ(ಬಿ) ಕ್ಷೇತ್ರಕ್ಕೆ ದೊಡ್ಡ ಯೋಜನೆ ತರಬೇಕೆಂಬುದು ನನ್ನ ಬಹಳಷ್ಟು ದಿನಗಳ ಕನಸಾಗಿತ್ತು. ಇದಕ್ಕಾಗಿ ಸುಮಾರು 15 ವರ್ಷಗಳ ಕಾಲ ಸತತ ಪ್ರಯತ್ನಪಟ್ಟಿದ್ದೇನೆ. ಅದರಂತೆ ಸಾಕಷ್ಟು ಪ್ರಯತ್ನ ವಹಿಸಿ ಪವರ್ ಗ್ರಿಡ್ ಉಪ ಕೇಂದ್ರವನ್ನು ತಂದಿದ್ದೇನೆ. ಕೇಂದ್ರ ಸರ್ಕಾರದ ಯೋಜನೆ ಇದಾಗಿದ್ದು, 2360 ಕೋಟಿ ಮೊತ್ತದ ಬೃಹತ್ ಯೋಜನೆ 164 ಎಕರೆಯಲ್ಲಿ ಭವ್ಯವಾಗಿ ನಿರ್ಮಾಣಗೊಳ್ಳುತ್ತಿದೆ. ಇಲ್ಲಿಂದ ಹೈದ್ರಾಬಾದ, ಕರನೂಲ, ಮಹಾರಾಷ್ಟ್ರ ರಾಜ್ಯದ ಪರಳಿಗೆ ವಿದ್ಯುತ್ ಲೈನ್ ಹೋಗುತ್ತದೆ. ಈ ಯೋಜನೆಯ ಕಾಮಗಾರಿ ಶೇ.80ರಷ್ಟು ಪೂರ್ಣಗೊಂಡಿದೆ ಎಂದರು.

ಪವರ್ ಗ್ರಿಡ್ ಕಾರ್ಪೋರೇಷನ್ ಡೆಪ್ಯೂಟಿ ಜನರಲ್ ಮ್ಯಾನೇಜರ್ ಗಣೇಶ ಮಾತನಾಡಿದರು.

ಮುಖಂಡರಾದ ಶಿವಾಜಿರಾವ ಪಾಟೀಲ ಮುಂಗನಾಳ, ಅನೀಲ ಬಿರಾದಾರ, ಮಾಧವ ಮಾಳಕಾರಿ, ಪ್ರಹ್ಲಾದ ಚಿಮ್ಮೇಗಾಂವ, ಧನಾಜಿ ರಾಠೋಡ ಸೇರಿದಂತೆ ಪವರ್ ಗ್ರಿಡ್ ಉಪ ಕೇಂದ್ರದ ಅಧಿಕಾರಿಗಳು ಮತ್ತು ಸ್ಥಳೀಯ ಮುಖಂಡರು ಉಪಸ್ಥಿತರಿದ್ದರು.



ಪವರ್ ಗ್ರಿಡ್ ಉಪ ಕೇಂದ್ರ ಪರಿಶೀಲನೆ

ಪವರ್ ಗ್ರಿಡ್ ಉಪ ಕೇಂದ್ರದಲ್ಲಿ ಸಂಚರಿಸಿ ಎಲ್ಲ ಕಾಮಗಾರಿಗಳ ಬಗ್ಗೆ ಮಾಹಿತಿ ಪಡೆದರು. ಕಾಮಗಾರಿ ಗುಣಮಟ್ಟದಿಂದ ಮತ್ತು ಕಾಲಮಿತಿಯೊಳಗಾಗಿ ಪೂರ್ಣಗೊಳಿಸಬೇಕು. ಕ್ಯೂರಿಂಗ್ ಸರಿಯಾಗಿ ಮಾಡಬೇಕು. ಗುಣಮಟ್ಟದ ಕುರಿತಂತೆ ಯಾವುದೇ ರೀತಿಯ ದೂರುಗಳು ಬಾರದಂತೆ ಕೆಲಸ ಮಾಡಬೇಕೆಂದು ಅಧಿಕಾರಿಗಳಿಗೆ ಸೂಚಿಸಿದರು.

'ಸಂಡೇಸ್ ಆನ್ ಸೈಕಲ್' ಅಭಿಯಾನ

ವಿಜಯನಗರ: ಕೇಂದ್ರ ಸರ್ಕಾರದ ಫಿಟ್ ಇಂಡಿಯಾ ಆಂದೋಲನ ಹಾಗೂ ವಿಶ್ವ ಬೈಸಿಕಲ್ ದಿನಾಚರಣೆ ಅಂಗವಾಗಿ ಹೊಸಪೇಟೆಯಲ್ಲಿ ಭಾನುವಾರ ''ಸಂಡೇಸ್ ಆನ್ ಸೈಕಲ್ ಸ್ವಚ್ಛತಾ ರೈಡ್' ಸೈಕಲ್ ಜಾಥಾ ನಡೆಯಿತು.

ವಿಜಯನಗರ ಜಿಲ್ಲಾ ಪಂಚಾಯತ್ ಹಾಗೂ ಹೊಸಪೇಟೆ ತಾಲ್ಲೂಕು ಪಂಚಾಯತ್ ಸಹಯೋಗದಲ್ಲಿ ಆಯೋಜಿಸಿದ್ದ ಜಾಗೃತಿ ಜಾಥಾಕ್ಕೆ ಜಿಪಂ ಸಹಾಯಕ ಯೋಜನಾಧಿಕಾರಿ ಉಮೇಶ್ ಎಂ., ಹೊಸಪೇಟೆ ತಾಪಂ ಕಾರ್ಯನಿರ್ವಾಹಕ ಅಧಿಕಾರಿ ಆಲಂ ಭಾಷಾ ನೇತೃತ್ವದಲ್ಲಿ ತಾ.ಪಂ. ಕಚೇರಿಯಿಂದ ಆರಂಭವಾದ ಸೈಕಲ್ ಜಾಥಾವು ಜಿ.ಪಂ. ಕಚೇರಿಯವರೆಗೆ ಸಾಗಿತು. ಬಳಿಕ ಸೈಕ್ಲಿಸ್ಟ್‌ಗಳು ಮಾನವ ಸರಪಳಿ ರಚಿಸಿ ಫಿಟ್ ಇಂಡಿಯಾ ಮತ್ತು ಸ್ವಚ್ಛತಾ ಜಾಗೃತಿ ಘೋಷಣೆಗಳನ್ನು ಕೂಗಿದರು.

ಮಾತನಾಡಿದ ಜಿಪಂ ಸಹಾಯಕ ಯೋಜನಾಧಿಕಾರಿ ಉಮೇಶ್ ಎಂ. ಮಾತನಾಡಿ, ಆರೋಗ್ಯವೇ ನಿಜವಾದ ಸಂಪತ್ತು. ಪ್ರತಿಯೊಬ್ಬರೂ ತಮ್ಮ ದಿನನಿತ್ಯದ ಬದುಕಿನಲ್ಲಿ ಕನಿಷ್ಠ ಸಮಯವನ್ನು ದೈಹಿಕ ಚಟುವಟಿಕೆಗಳಿಗೆ ಮೀಸಲಿಡಬೇಕು. ಸೈಕ್ಲಿಂಗ್ ಆರೋಗ್ಯ ವೃದ್ಧಿಸುವುದರ ಜೊತೆಗೆ ಪರಿಸರ ಸಂರಕ್ಷಣೆಯಲ್ಲಿಯೂ ಮಹತ್ವದ ಪಾತ್ರ ವಹಿಸುತ್ತದೆ. ಫಿಟ್ ಇಂಡಿಯಾ ಆಂದೋಲನವು ಆರೋಗ್ಯಕರ ಭಾರತ ನಿರ್ಮಾಣದತ್ತ ಮಹತ್ವದ ಹೆಜ್ಜೆಯಾಗಿದೆ ಎಂದು ಅಭಿಪ್ರಾಯ ಪಟ್ಟರು.

ಹೊಸಪೇಟೆ ತಾಪಂ ಇಒ ಆಲಂ ಭಾಷಾ ಮಾತನಾಡಿ, ಇಂದಿನ ಆಧುನಿಕ ಜೀವನಶೈಲಿಯಿಂದ ಆರೋಗ್ಯ ಸಮಸ್ಯೆಗಳು ಹೆಚ್ಚಾಗುತ್ತಿವೆ. ಅವುಗಳನ್ನು ತಡೆಗಟ್ಟಲು ಯೋಗ, ಕ್ರೀಡೆ, ಸೈಕ್ಲಿಂಗ್, ವಾಕಿಂಗ್ ಹಾಗೂ ಇತರೆ ದೈಹಿಕ ಚಟುವಟಿಕೆಗಳನ್ನು ಜೀವನದ ಭಾಗವಾಗಿಸಿಕೊಳ್ಳಬೇಕು. ಫಿಟ್ ಇಂಡಿಯಾ ಆಂದೋಲನವು ಆರೋಗ್ಯಕರ ಹಾಗೂ ಚೈತನ್ಯಮಯ ಸಮಾಜ ನಿರ್ಮಾಣಕ್ಕೆ ಪೂರಕವಾಗಿದೆ ಎಂದರು.

ಜಾಥಾದಲ್ಲಿ ಸ್ವಚ್ಛ ಭಾರತ ಮಿಷನ್ (ಗ್ರಾ.) ಜಿಲ್ಲಾ ಸಮಾಲೋಚಕ ಹನುಮಂತ ನಾಯಕ, ಎನ್‌ಆರ್‌ಎಲ್‌ಎಂ ಯೋಜನೆಯ ಟಿಪಿಎಂ ಕೊಟ್ರೇಶ್, ವಿವಿಧ ಇಲಾಖೆಗಳ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಭಾಗವಹಿಸಿದ್ದರು.



ಜೀವನ್ಮುಖಿ ಕರ್ತವ್ಯಶೀಲರಿಗೆ ನಿವೃತ್ತಿ ಇಲ್ಲ

ಕೊಟ್ಟೂರು: ಸದಾ ಜೀವನ್ಮುಖಿ ಕರ್ತವ್ಯದಲ್ಲಿ ತೊಡಗಿಸಿಕೊಂಡವರಿಗೆ ನಿವೃತ್ತಿ ಅನ್ವಯಿಸುವುದೇ ಇಲ್ಲ ಇದರ ಜೊತೆಗೆ ಜನಪರತೆಯನ್ನು ಮೈಗೂಡಿಸಿಕೊಂಡರೆ ಜೀವತಾವಧಿಯವರಿಗೂ ಪ್ರತಿಯೊಬ್ಬ ನೌಕರ ಯಶಸ್ವಿ ಅಧಿಕಾರಿಯಾಗಿ ಜನಮಾನಸದಲ್ಲಿ ಸದಾ ಇರುತ್ತಾರೆ ಎಂದು ನಿವೃತ್ತ ಪ್ರಾಧ್ಯಾಪಕ ಡಾ.ಚಂದ್ರಶೇಖರ ವಸ್ತ್ರದ್ ಹೇಳಿದರು.

ಪಟ್ಟಣದ ಮರುಳಸಿದ್ದೇಶ್ವರ ಕನ್ವೆಷನಲ್ ಸಭಾಂಗಣದಲ್ಲಿ ಆಯೋಜಿಸಿದ್ದ ಜೀವ ವಿಮಾ ನಿಗಮದ ಅಭಿವೃದ್ಧಿ ಅಧಿಕಾರಿ ಎಂ.ಎಸ್. ಶಿವನಗುತ್ತಿಯವರ 37 ವರ್ಷಗಳ ಸುಧೀರ್ಘ ಸೇವೆ ಸಲ್ಲಿಸಿ ಸೇವಾ ನಿವೃತ್ತಿಯ ಅಭಿನಂದನಾ ಸಮಾರಂಭದಲ್ಲಿ ಅವರು ಮಾತನಾಡಿದರು.

ಲವಲವಿಕೆಯಿಂದ ಬದುಕನ್ನು ಪ್ರತಿ ಹಂತದಲ್ಲೂ ರೂಢಿಸಿಕೊಂಡರೇ ವೃತ್ತಿ ಜೀವನ ನಿರ್ವಹಣೆ ಅಧಿಕಾರಿ ಸದಾ ಚಟುವಟಿಕೆಯ ಜೊತೆಗೆ ಆರೋಗ್ಯ ಪೂರ್ಣ ಸಂಸ್ಥೆ ಮತ್ತು ಸಮಾಜವನ್ನು ಯಶಸ್ವಿಯಾಗಿ ಕಟ್ಟಬಲ್ಲ ಎನ್ನುವುದಕ್ಕೆ ಎಂ.ಎಸ್.ಶಿವನಗುತ್ತಿ ಯವರ ಕಾರ್ಯನಿರ್ವಹಣೆ ಸಂಕೇತವಾಗಿದೆ ಎಂದರು.

ಚಾನುಕೋಟಿ ಮಠಾಧ್ಯಕ್ಷ ಡಾ.ಸಿದ್ದಲಿಂಗ ಶಿವಾಚಾರ್ಯ ಸ್ವಾಮೀಜಿ ಪ್ರತಿಯೊಬ್ಬರ ಬದುಕಿಗೊಂದು ನೆಮ್ಮದಿಯ ಆಸರೆಯಾಗುವ ಜೀವವಿಮಾ ನಿಗಮದ ಪಾಲಿಸಿದಾರರನ್ನಾಗಿ ಸಾಮಾನ್ಯ ಜನರನ್ನು ತೊಡಗಿಸಿಕೊಳ್ಳುತ್ತಿದ್ದ ಶಿವನಗುತ್ತಿಯವರ ಕಾರ್ಯವೈಖರಿ ಸಂಸ್ಥೆಯ ಹಿರಿಮೆಯನ್ನು ಹೆಚ್ಚಿಸಿದೆ ಎಂದರು.

ರಾಜ ಬೀಜ ನಿಗಮದ ನಿರ್ದೇಶಕ ಎಸ್. ರಾಜೇಂದ್ರಪ್ರಸಾದ್ ಮಾತನಾಡಿ, ಕೇವಲ ಕಾರ್ಪೋರೇಟರ್ ಮತ್ತಿತರ ಶ್ರೀಮಂತರಿಗೆ ಹೆಚ್ಚು ನೆರವಾಗುತ್ತದೆ ಎಂಬ ದೂರನ್ನು ಎಲ್ಐಸಿ ಹೋಗಲಾಡಿಸಲು ಶಿವನಗುತ್ತಿ ಯಂತವರ ಕಾರ್ಯ ತತ್ಪರಕ್ಕೆ ಪ್ರತಿಯೊಬ್ಬರ ಆಕರ್ಷಣೆಗೆ ಕಾರಣವಾಗಿತ್ತು ಎಂದರು.

ಬಿಇಒ ಮೈಲೇಶ್ ಬೇವೂರು, ಎಲ್ಐಸಿ ಹಿರಿಯ ಮ್ಯಾನೇಜರ್ ಧನುಂಜಯ, ಡಾ.ಬಿ.ಸಿ.ಮೂಗಪ್ಪ ಮಾತನಾಡಿ, ಶಿವನಗುತ್ತಿ ಯವರ ನಿವೃತ್ತಿಯ ನಂತರ ಸದಾ ಜನಮಾನಸದಲ್ಲಿ ಉಳಿದುಕೊಳ್ಳುವ ಕೆಲಸದಲ್ಲಿ ತೊಡಗಿಸಿಕೊಂಡಿರುವರು ಮಾದರಿ ಎಂದರು.

ನಿವೃತ್ತಿ ಹೊಂದಿದ ಎಂ.ಶಿವನಗುತ್ತಿ ದಂಪತಿಗಳನ್ನು ನೆರೆದಿದ್ದವರು ಮತ್ತು ಕೊಟ್ಟೂರೇಶ್ವರ ಕಲಾರಂಗದ ಬಳಗದವರು ಸನ್ಮಾನಿಸಿ ಅಭಿನಂದಿಸಿದರು.

ಹರಪನಹಳ್ಳಿಯ ಎಲ್‌ಐಸಿ ಅಧಿಕಾರಿ ರಾಜೇಶ, ಕೆ.ಪಣಿರಾಜ್, ಅಂಜಿನಪ್ಪ, ಎಂ.ಮರಿಸ್ವಾಮಿ, ಎಪಿಎಂಸಿ ಉಪಾಧ್ಯಕ್ಷ ಎಂ.ಶಿವಣ್ಣ, ಡಿ.ಶಿವಚರಣ ಮತ್ತಿತರರು ಇದ್ದರು. ಶೃತಿ ಚಂದ್ರಪ್ಪ, ಕವನ ವಾಚಿಸಿದರು, ನಿರ್ಮಲ ಶಿವನಗುತ್ತಿ ಸ್ವಾಗತಿಸಿದರು, ಪೂರ್ಣ ಪ್ರಫುಲ್ಲ ಚಂದ್ರ ನಿರೂಪಿಸಿದರು.



ಜಮೀನಿನ ಬದುವಿನಲ್ಲಿ ಗಿಡ ಮರ ಬೆಳೆಸಿ: ವಿಶ್ವನಾಥ

ಹಗರಿಬೊಮ್ಮನಹಳ್ಳಿ: ರೈತರು ತಮ್ಮ ಹೊಲಗಳ ಬದುವಿನಲ್ಲಿ ಗಿಡ ಮರಗಳನ್ನು ಬೆಳೆಸುವುದರಿಂದ ಹೊಲಗಳಿಗೆ ಗಿಡ ಮರಗಳ ಎಲೆಗಳು ಉದುರಿ ನೈಸರ್ಗಿಕ ಗೊಬ್ಬರವಾಗುತ್ತದೆ ಮಣ್ಣಿನ ಫಲವತ್ತತೆಯನ್ನು ಸಂರಕ್ಷಣೆಯ ಜೊತೆಗೆ ಮಣ್ಣಿನ ಸವಕಳಿಯನ್ನು ನಿಯಂತ್ರಿಸುತ್ತದೆ ಎಂದು ತಾಪಂ ಇಒ ಪಾಲಯ್ಯನ ಕೋಟೆ ವಿಶ್ವನಾಥ ತಿಳಿಸಿದರು.

ತಾಲೂಕಿನ ಮಾಲವಿ ಗ್ರಾಮದ ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆಯ ಆವರಣದಲ್ಲಿ ಆಯೋಜಿಸಿದ್ದ ಪರಿಸರ ದಿನಾಚರಣೆಯಲ್ಲಿ ಸಸಿಗಳಿಗೆ ನೀರು ಹಾಕುವ ಮೂಲಕ ಚಾಲನೆ ನೀಡಿದರು.

ಈ ವೇಳೆ ಮಾತನಾಡಿದ ಅವರು ಜನಸಂಖ್ಯೆ ಹೆಚ್ಚಾದಂತೆ ಗುಡ್ಡ ಬೆಟ್ಟಗಳು ಮರ ಗಿಡಗಳು ಕಡಿಮೆಯಾಗುತ್ತಿದ್ದು ಇದರಿಂದ ಬರಗಾಲ ನೆರೆ ಹಾವಳಿ ತಾಪಮಾನ ಹೆಚ್ಚಳ ಮುಂತಾದ ಪ್ರಕೃತಿ ವಿಕೋಪಗಳಿಗೆ ಕಾರಣವಾಗಿದ್ದು ಇವುಗಳನ್ನು ತಡೆಯಲು ಹೆಚ್ಚು ಹೆಚ್ಚಾಗಿ ಗಿಡಮರಗಳನ್ನು ಬೆಳೆಸಬೇಕಾದ ಅಗತ್ಯತೆ ಇದೆ. ಹೊಲದ ಬದುವಿನಲ್ಲಿ ಗಿಡ, ಮರಗಳನ್ನು ಬೆಳೆಸಲು ಉದ್ಯೋಗ ಖಾತ್ರಿಯಲ್ಲಿ ಸರ್ಕಾರಿ ಸೌಲಭ್ಯಗಳಿದ್ದು ತರು ಸದುಪಯೋಗಪಡಿಸಿಕೊಳ್ಳಿ ಎಂದರು.

ಗ್ರಾಪಂ ಪಿಡಿಒ ಶ್ರೀಕಾಂತ ನಾಯ್ಕ್ ಮಾತನಾಡಿ, ಹುಟ್ಟು ಹಬ್ಬದ ನೆಪದಲ್ಲಿ ದುಂದು ವೆಚ್ಚ ಮಾಡುವ ಬದಲಾಗಿ ಜನ್ಮದಿನದ ಉಡುಗೊರೆಯಾಗಿ ಸಸಿಯನ್ನು ನೀಡುವುದು ಹುಟ್ಟುಹಬ್ಬದ ಸ್ಮರಣೆಗಾಗಿ ವಿಶೇಷ ಸಂದರ್ಭಗಳಲ್ಲಿ ಗಿಡ ಮರಗಳನ್ನು ನೆಡುವುದನ್ನು ರೂಢಿಸಿಕೊಂಡರೆ ಪರಿಸರದ ಬಗ್ಗೆ ಕಾಳಜಿ ತೋರಿದಂತಾಗುತ್ತದೆ ಎಂದರು.

ಶಾಲೆಯ ಮುಖ್ಯ ಶಿಕ್ಷಕ ಹೊಸಹಳ್ಳಿ ಬಸಪ್ಪ ಎಸ್‌ಡಿಎಂಸಿ ಅಧ್ಯಕ್ಷ ಮಹಾಜನದಹಳ್ಳಿ ಮಂಜುನಾಥ, ಶಿಕ್ಷಕರಾದ ಭರ್ಮಪ್ಪ, ಗ್ರಾಪಂ ಡಾಟಾ ಆಪರೇಟರ್ ಪ್ರೇಮಕ್ಕ ಶಾಲೆಯ ಇತರ ಶಿಕ್ಷಕರು ಗ್ರಾಪಂ ಸಿಬ್ಬಂದಿ ಶಾಲೆಯ ವಿದ್ಯಾರ್ಥಿಗಳು ಭಾಗವಹಿಸಿದ್ದರು.



ಪಂಚಮಸಾಲಿ ಸಮಾಜ ಕಟ್ಟುವ ಕೆಲಸವಾಗಲಿ

ಹೂವಿನಹಡಗಲಿ: ಸಮಾಜವನ್ನು ಒಗ್ಗೂಡಿಸಿ ಅಭಿವೃದ್ಧಿಯತ್ತ ಕೊಂಡೊಯ್ಯುವ ಕೆಲಸವಾಗಬೇಕು ಹೊರತು ಸಮಾಜದಲ್ಲಿ ಭಿನ್ನಾಭಿಪ್ರಾಯ ವಿಭಜನೆ ಉಂಟುಮಾಡುವ ಕೆಲಸಗಳು ನಡೆಯಬಾರದು ಎಂದು ಪಂಚಮಸಾಲಿ ಸಮಾಜದ ಹಿರಿಯ ಮುಖಂಡ ಎಂ.ಬಿ.ಬಸರಾಜ ಹೇಳಿದರು.

ಹರಿಹರ ಖಾಸಗಿ ಹೋಟೆಲ್‌ನಲ್ಲಿ ನಡೆದ ಪಂಚಮಸಾಲಿ ಸಮಾಜದ ಮುಖಂಡರ ಸಭೆಯಲ್ಲಿ ಶನಿವಾರ ಮಾತನಾಡಿದ ಅವರು, ಸಮಾಜದ ಅಭಿವೃದ್ಧಿ, ಸಂಘಟನೆಯ ಬಲವರ್ಧನೆ ಹಾಗೂ ಯುವಜನರ ಸಬಲೀಕರಣಕ್ಕಾಗಿ ಎಲ್ಲರೂ ಒಗ್ಗಟ್ಟಿನಿಂದ ಕಾರ್ಯನಿರ್ವಹಿಸಬೇಕಾಗಿದೆ.

ಪಂಚಮಸಾಲಿ ಸಮಾಜದ ಟ್ರಸ್ಟ್‌ಗೆ ಸಂಬಂಧಿಸಿದಂತೆ ಕೇಳಿಬರುತ್ತಿರುವ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಬೇಕಿದ್ದು, ಈ ಕುರಿತು ಸಮಗ್ರ ತನಿಖೆ ನಡೆಸಿ ತಪ್ಪಿತಸ್ಥರ ವಿರುದ್ಧ ಕಾನೂನು ಕ್ರಮ ಜರುಗಿಸಬೇಕು. ಸಮಾಜದ ಆಸ್ತಿ, ಸಂಪತ್ತು, ನಂಬಿಕೆಗೆ ಧಕ್ಕೆ ತರುವ ಯಾವುದೇ ಬೆಳವಣಿಗೆಗಳನ್ನು ಸಹಿಸಿಕೊಳ್ಳಲಾಗುವುದಿಲ್ಲ, ಅಗತ್ಯವಿದ್ದರೆ ಸಮಾಜದ ಪರವಾಗಿ ಹೋರಾಟ ನಡೆಸಲು ಸಿದ್ಧರಾಗಿರುವುದಾಗಿ ಹೇಳಿದರು.



ಸಭೆಯಲ್ಲಿ ಸಮಾಜದ ವಿವಿಧ ವಿಷಯಗಳ ಕುರಿತು ಚರ್ಚೆ ನಡೆಸಲಾಯಿತು. ಸಮಾಜದ ಸಂಘಟನೆ ಬಲಪಡಿಸುವುದು, ಯುವ ಪೀಳಿಗೆಯನ್ನು ಸಮಾಜದ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವುದು ಹಾಗೂ ಮುಂದಿನ ದಿನಗಳಲ್ಲಿ ಹಮ್ಮಿಕೊಳ್ಳಬೇಕಾದ ಕಾರ್ಯಕ್ರಮಗಳ ಕುರಿತು ಮುಖಂಡರು ತಮ್ಮ ಅಭಿಪ್ರಾಯಗಳನ್ನು ಹಂಚಿಕೊಂಡರು. ಸಮಾಜದ ಹಿರಿಯರು, ಮಾಜಿ ಶಾಸಕ ಎಚ್.ಎಸ್.ಶಿವಶಂಕರ, ನಂದಿಹಳ್ಳಿ ಹಾಲಪ್ಪ, ಮಾಜಿ ವಿಧಾನ ಪರಿಷತ್ತ ಸದಸ್ಯ ಸೋಮಣ್ಣ ಬೇವಿನಮರ, ಬಿಡಿಸಿಸಿ ಬ್ಯಾಂಕಿನ ಅಧ್ಯಕ್ಷ ಜಿ.ತಿಪ್ಪೇಸ್ವಾಮಿ, ಮುಖಂಡರಾದ ಪರಮೇಶ್ವರ ಗೌಡ್ರು ಮತ್ತಿತರರಿದ್ದರು.

ಶರಣರ ಆದರ್ಶ ಸಮಾಜದ ಸೌಹಾರ್ದತೆಗೆ ಪೂರಕ

ಹುಣಸಗಿ: ಕಡಕೋಳ ಮಡಿವಾಳೇಶ್ವರರ ಆದರ್ಶಗಳು ಪ್ರಸ್ತುತ ಯುವ ಪೀಳಿಗೆಗೆ ಅತ್ಯಂತ ಅವಶ್ಯ, ಅವರ ತತ್ವಗಳು ಸಮಾಜದಲ್ಲಿ ಸೌಹಾರ್ದತೆ, ಮಾನವೀಯತೆ ಹಾಗೂ ಧಾರ್ಮಿಕ-ಸಾಂಸ್ಕೃತಿಕ ಮೌಲ್ಯಗಳನ್ನು ಉಳಿಸಿ, ಬೆಳೆಸುವಲ್ಲಿ ಮಹತ್ವದ ಪಾತ್ರ ವಹಿಸುತ್ತವೆ ಎಂದು ಕೊಡೇಕಲ್ ಮಹಲಿನಮಠದ ಬಸವ ಪೀಠಾಧಿಪತಿ ವೃಷಬೇಂದ್ರ ಅಪ್ಪನವರು ಹೇಳಿದರು.

ತಾಲೂಕಿನ ಬಲಶೆಟ್ಟಿಹಾಳ ಗ್ರಾಮದಲ್ಲಿ ಸಿದ್ದಲಿಂಗ ದೇವರ ನಿರಂಜನ ಪಟ್ಟಾಧಿಕಾರ ಮಹೋತ್ಸವದ ಅಂಗವಾಗಿ ಆಯೋಜಿಸಿದ್ದ ಕಡಕೋಳ ಮಡಿವಾಳೇಶ್ವರ ಪುರಾಣ ಪ್ರವಚನ ಕಾರ್ಯಕ್ರಮದಲ್ಲಿ ಸಾನ್ನಿಧ್ಯ ವಹಿಸಿ ಮಾತನಾಡಿದರು.

ಶರಣರ ಆದರ್ಶಗಳು ಮತ್ತು ತತ್ವಗಳನ್ನು ಪ್ರತಿಯೊಬ್ಬರೂ ತಮ್ಮ ಜೀವನದಲ್ಲಿ ಅಳವಡಿಸಿಕೊಂಡು ಉತ್ತಮ ಸಮಾಜ ನಿರ್ಮಾಣಕ್ಕೆ ಕೈಜೋಡಿಸಬೇಕು. ಪುರಾಣಗಳು ಹಾಗೂ ಮಹನೀಯರ ಜೀವನ ಚರಿತ್ರೆಗಳನ್ನು ಆಲಿಸುವುದರಿಂದ ವ್ಯಕ್ತಿಯ ಜೀವನದಲ್ಲಿ ಸಕಾರಾತ್ಮಕ ಪರಿವರ್ತನೆ ಉಂಟಾಗುತ್ತದೆ ಎಂದು ಅವರು ಅಭಿಪ್ರಾಯಪಟ್ಟರು.

ಗುರು-ಶರಣರ ಮಾರ್ಗದಲ್ಲಿ ಸಾಗುವುದರಿಂದ ಜೀವನದಲ್ಲಿ ನೆಮ್ಮದಿ, ಶಾಂತಿ ಹಾಗೂ ಸಾರ್ಥಕತೆ ದೊರೆಯುತ್ತದೆ. ಧಾರ್ಮಿಕ ಮತ್ತು ಆಧ್ಯಾತ್ಮಿಕ ಕಾರ್ಯಕ್ರಮಗಳು ಸಮಾಜದಲ್ಲಿ ಸದ್ಭಾವನೆ, ಸಹಬಾಳ್ವೆ ಮತ್ತು ನೈತಿಕ ಮೌಲ್ಯಗಳನ್ನು ಬಲಪಡಿಸುತ್ತವೆ ಎಂದು ತಿಳಿಸಿದರು.



ಯಡ್ರಾಮಿಯ ಪೂಜ್ಯ ಸಿದ್ದಲಿಂಗ ಸ್ವಾಮೀಜಿ ಪ್ರವಚನ ನೀಡುತ್ತಾ, ಬಸವಣ್ಣನವರ ಅನುಭವ ಮಂಟಪದ ತತ್ವಗಳಿಗೆ ಅನುಗುಣವಾಗಿ ಬದುಕಿದ ಕಡಕೋಳ ಮಡಿವಾಳೇಶ್ವರರು ತಮ್ಮ ಜೀವನದ ಮೂಲಕ ಮಾನವೀಯತೆ, ಸೇವಾಭಾವ ಮತ್ತು ಸಮಾನತೆಯ ಸಂದೇಶವನ್ನು ಸಮಾಜಕ್ಕೆ ನೀಡಿದರು. 'ಸೇವೆಯೇ ನಿಜವಾದ ಧರ್ಮ' ಎಂಬ ಸಂದೇಶವನ್ನು ಅವರು ತಮ್ಮ ಬದುಕಿನ ಮೂಲಕ ಸಾರಿದ್ದಾರೆ ಎಂದು ಹೇಳಿದರು.

ದಾಸೋಹಸೇವೆಸಲ್ಲಿಸಿದಹಣಮಂತ್ರಾಯದಂಡಗುಂಡಪ್ಪ ಕುಂಬಾರ ಅವರನ್ನು ಸನ್ಮಾನಿಸಿ ಗೌರವಿಸಲಾಯಿತು.

ಪೂಜ್ಯ ಸಿದ್ದಲಿಂಗ ದೇವರು, ಅಮಲಿಂಗಯ್ಯ ಸ್ವಾಮಿ, ಪ್ರಭುಗೌಡ ಪಾಟೀಲ, ಸಂಗನಗೌಡ ಮಾಗನೂರ, ಭೀಮನಗೌಡ ಗುಳಬಾಳ, ರಾಮನಗೌಡ ವಠಾರ, ಭೀಮನಗೌಡ ಪಾಟೀಲ ಸೇರಿದಂತೆ ಗ್ರಾಮಸ್ಥರು, ಭಕ್ತರು ಹಾಗೂ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು. ಗೆದ್ದಲಮರಿ ಸರ್ಕಾರಿ ಪ್ರೌಢಶಾಲೆಯ ಮುಖ್ಯಗುರು ವಿ.ಎಂ.ಬೆಳ್ಳುಬ್ಬಿ ನಿರೂಪಿಸಿ, ವಂದಿಸಿದರು.

ಬಿಜೆಪಿಯಿಂದ ಪರಿಸರ ದಿನಾಚರಣೆ

ಹಗರಿಬೊಮ್ಮನಹಳ್ಳಿ: ವಿಶ್ವ ಪರಿಸರ ದಿನ ಹಿನ್ನೆಲೆ ಬಿಜೆಪಿ ನಗರ ಘಟಕ ಹಾಗೂ ಮಂಡಲದ ಸಹಭಾಗಿತ್ವದಲ್ಲಿ ನಗರದ 14ನೇ ವಾರ್ಡ್‌ನಲ್ಲಿ ಗಿಡಗಳನ್ನು ನೆಡೆವುದರ ಮುಕಾಂತರ ವಿಶ್ವ ಪರಿಸರ ದಿನಾಚರಣೆ ಆಚರಿಸಲಾಯಿತು.

ಮಂಡಲ ಅಧ್ಯಕ್ಷ ಬೆಣಕಲ್ ಪ್ರಕಾಶದ ನಗರ ಘಟಕದ ಅಧ್ಯಕ್ಷ ಮಂಜುನಾಥ ಹಿರೇಮಠ ಹಾಗೂ ಜಿಲ್ಲಾ ಪ್ರದಾನ ಕಾರ್ಯದರ್ಶಿ ಕೃಷ್ಣನಾಯ್ಕ್ ಹಾಗೂ ಜಿಲ್ಲಾ ಕಾರ್ಯದರ್ಶಿ ಡಾಬ ಕನಕಪ್ಪ, ಮಂಡಲ ಪ್ರದಾನ ಕಾರ್ಯದರ್ಶಿ ಹುನುಮಂತ ದಿವಕಾರ್, ನಗರಘಟಕದ ಉಪಾಧ್ಯಕ್ಷ ಶಿವಯೋಗಿ ಸ್ವಾಮಿ, ಚಿನ್ನಪ್ಪ,ಎಚ್, ಎಮ್, ಮಲ್ಲಯ್ಯ, ಕಾಳೇಶ್, ಸುರೇಶ್, ಮಂಜುನಾಥ ಮತ್ತಿಹಳ್ಳಿ, ಗೋಣೆಪ್ಪ, ಗಜಪುರದ ಮಂಜುನಾಥ, ಮಹಿಳ ಅಧ್ಯಕ್ಷರಾದ ಶಾಂತಕ್ಕ, ಕಾರ್ಯದರ್ಶಿ ಕವಿತಾ, ಬುಡೇನ್ ಸಾಬ್, ಸುರೇಂದ್ರ ಎಂ., ಆಶೋಕ್, ಯಮುನಾ ನಾಯ್ಕ್ ಅವಿನಾಶ್ ರಡ್ಡಿ ಇತರರಿದ್ದರು.



ವಿದ್ಯಾರ್ಥಿ ನಿಲಯಗಳಲ್ಲಿ ಗುಣಮಟ್ಟಕ್ಕೆ ಆದ್ಯತೆ ನೀಡಿ

ಕೂಡ್ಲಿಗಿ: ಶಿಕ್ಷಣ ವ್ಯವಸ್ಥೆಯ ಅಡಿಪಾಯ ನೈತಿಕ ಮತ್ತು ಕಾನೂನು ಬದ್ಧ ಮೌಲ್ಯಗಳ ಮೇಲೆ ನಿಂತಿದೆ. ವಿದ್ಯಾರ್ಥಿ ನಿಲಯಗಳಲ್ಲಿ ಯಾವುದೇ ಅನೈತಿಕ ಚಟುವಟಿಕೆಗಳಿಗೆ ಆಸ್ಪದ ನೀಡದಂತೆ ಕಟ್ಟುನಿಟ್ಟಾದ ನಿಗಾ ಮತ್ತು ಶಿಸ್ತು ಪಾಲನೆ ಅತ್ಯಗತ್ಯ ಎಂದು ಕೂಡ್ಲಿಗಿ ವಿಧಾನಸಭಾ ಕ್ಷೇತ್ರದ ಶಾಸಕ ಡಾ.ಶ್ರೀನಿವಾಸ್ ಎನ್.ಟಿ. ತಿಳಿಸಿದರು.

ಶನಿವಾರ ಪಟ್ಟಣದ ಪ್ರವಾಸಿ ಮಂದಿರದಲ್ಲಿ ಜಿಲ್ಲಾ ಮತ್ತು ತಾಲೂಕು ಸಮಾಜ ಕಲ್ಯಾಣ ಹಾಗೂ ಬಿಸಿಎಂ ಅಧಿಕಾರಿಗಳು ಮತ್ತು ನಿಲಯ ಪಾಲಕರೊಂದಿಗೆ ಸಭೆ ನಡೆಸಿ ಅವರು ಮಾತನಾಡಿದರು.

ಕೂಡ್ಲಿಗಿ ಕ್ಷೇತ್ರವು ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕವಾಗಿ ಹಿಂದುಳಿದಿರುವುದರಿಂದ ಮೊರಾರ್ಜಿ ವಸತಿ ಶಾಲೆಗಳ ಪ್ರವೇಶಕ್ಕೆ ಹೆಚ್ಚಿನ ಬೇಡಿಕೆಯಿದೆ ಎಂದು ಶಾಸಕರು ಗಮನಸೆಳೆದರು. ಗ್ರಾಮೀಣ ಭಾಗದ ಬಡ ವಿದ್ಯಾರ್ಥಿಗಳಿಗೆ ಯಾವುದೇ ಆರ್ಥಿಕ ಹೊರೆಯಿಲ್ಲದೆ ಉಚಿತ ವಸತಿ ಮತ್ತು ಪೌಷ್ಟಿಕ ಆಹಾರ ಒದಗಿಸುವ ಮೂಲಕ ಎಲ್ಲ ಸಮುದಾಯದ ಮಕ್ಕಳಿಗೆ ಸಮಾನ ಅವಕಾಶ ಕಲ್ಪಿಸುವುದು ನಮ್ಮ ಉದ್ದೇಶವಾಗಿದೆ ಎಂದರು.

ವಿದ್ಯಾರ್ಥಿ ನಿಲಯಗಳಲ್ಲಿ ಸರ್ಕಾರದ ಮಾರ್ಗಸೂಚಿಯನ್ವಯ ಗುಣಮಟ್ಟದ ಊಟವನ್ನು ಪೂರೈಸಬೇಕು. ನಿಲಯಗಳ ನಿರ್ವಹಣೆಗೆ ಸಂಬಂಧಿಸಿದಂತೆ ಅಗತ್ಯವಿರುವ ಮೂಲಸೌಕರ್ಯಗಳು ಮತ್ತು ಸುಧಾರಣೆಗಳನ್ನು ಸರ್ಕಾರದ ಸಹಕಾರದೊಂದಿಗೆ, ಕೆಲವು ನಿಯಮಗಳಲ್ಲಿ ಮಾನದಂಡ ಸಡಿಲಗೊಳಿಸುವ ಮೂಲಕ ಶೀಘ್ರವಾಗಿ ಪೂರ್ಣಗೊಳಿಸಲಾಗುವುದು ಎಂದು ಭರವಸೆ ನೀಡಿದರು. ವಿದ್ಯಾರ್ಥಿಗಳ ಸುರಕ್ಷತೆ ಮತ್ತು ಶೈಕ್ಷಣಿಕ ವಾತಾವರಣದ ವಿಷಯದಲ್ಲಿ ಯಾವುದೇ ರಾಜಿಯಾಗಬಾರದು ಎಂದು ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದರು.

ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿ ಆನಂದ್ ವೈ.ಕಾಳೆ, ಜಿಲ್ಲಾ ಬಿಸಿಎಂ ಅಧಿಕಾರಿ ಶಶಿಕಲಾ, ಕ್ಷೇತ್ರ ಶಿಕ್ಷಣಾಧಿಕಾರಿ ಮೈಲೇಶ್ ಬೇವೂರ್, ತಾಲೂಕು ಸಮಾಜ ಕಲ್ಯಾಣ ಅಧಿಕಾರಿ ಜಗದೀಶ್, ಪರಿಶಿಷ್ಟ ಪಂಗಡಗಳ ಕಲ್ಯಾಣ ಅಧಿಕಾರಿ ಮೆಹೂಬ್ ಭಾಷಾ, ತಾಲೂಕು ಬಿಸಿಎಂ ಅಧಿಕಾರಿ ಶ್ಯಾಮಪ್ಪ ಹಾಗೂ ನಿಲಯ ಪಾಲಕರು ಮತ್ತು ಸಿಬ್ಬಂದಿ ಉಪಸ್ಥಿತರಿದ್ದರು.

